
# ಸರಹದ್ದುಗಳು

ಫಕೀರ್ ಮುಹಮ್ಮದ್ ಕಟ್ಪಾಡಿ



ಲಿಪಿ ಕರ್ನಾಟಕ ಪ್ರಕಾಶನ

# ಸರಕುಗಳು

ಫಕೀರ್ ಮುಹಮ್ಮದ್ ಕಟ್ಪಾಡಿ

HAMZA MALAR
MALAR ARASTANA
"NUSRATUL ISLAM" MANZIL
P.O. PAVOOR-574 182.
MANGALORE.

21761
575001

ನವಕರ್ನಾಟಕ ಪ್ರಕಾಶನ

'SARAKUGALU' a novel in Kannada by Fakir Muhammad Katpadi C/o State Bank of India, Moodabidri - 574227 Dakshina Kannada, Karnataka, India
First Edition : January-1989 Pages : XII+134 Price : Rs. 15-00

ಪ್ರಥಮ ಮುದ್ರಣ : ಜನವರಿ, 1989

**ಬೆಲೆ : ರೂ. 15-00**

© ಶ್ರೀಮತಿ ಫಾತಿಮಾ

ರಕ್ಷಾ ಕವಚ : ಕಮಲೇಶ್

ಪ್ರಕಾಶಕರು :
**ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್**
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–560 001

0101890238

Printed by R. S. Rajaram at Janashakthi Printers, 5th Main Road, Gandhinagar, Bangalore 560 009, and Published by him for Navakarnataka Publications (P) Ltd., Embassy Centre, 11, Crescent Road, Kumara Park East, Bangalore 560 001 (India)

# ಸರಕುಗಳ ಹಿನ್ನೆಲೆ

ಗೆಳೆಯ ಫಕೀರ್ ಮುಹಮದ್ ಕಟ್ಪಾಡಿಯವರ ಮೊದಲ ಕಾದಂಬರಿಗೆ, ಮೊದಲ ಮಾತಿನ ರೂಪದಲ್ಲಿ ನಾಲ್ಕು ಸಾಲು ಬರೆಯುವುದು ನನಗೆ ಸಂತಸದ ಸಂಗತಿ. ಕಥೆಗಾರರಾಗಿ ವೈವಿಧ್ಯ ಸಾಧಿಸಿರುವ ಕಟ್ಪಾಡಿ ಅವರು ತಮ್ಮ ಮೊದಲ ಕಾದಂಬರಿಗಾಗಿ ಆರಿಸಿಕೊಂಡ ವಸ್ತು ಕೂಡಾ ಕುತೂಹಲ ಹುಟ್ಟಿಸು ವಂಥದ್ದು. ಸುಮಾರು ಹತ್ತು ವರ್ಷಗಳಿಗೂ ಹಿಂದೆ ಕೇರಳದ ಕಡಲ ತಡಿಯ ಊರೊಂದರಲ್ಲಿ ವಾಸವಾಗಿದ್ದಾಗ ತಾನು ಕಂಡು – ಕೇಳಿದ ಸಂಗತಿಗಳಿಗೆ ತನ್ನ 'ಬಯಕೆ'ಗಳನ್ನು ಬೆರೆಸಿ 'ಸರಕುಗಳು' ಕಾದಂಬರಿ ನೇಯ್ದಿದ್ದಾರೆ. ಆ ಸಮಯದಲ್ಲಿ ನಾನು ಕೂಡಾ ಕೆಲವು ದಿನ ಅವರ ಜತೆಯಲ್ಲಿ ಇದ್ದುದರಿಂದ, ಈ 'ಸರಕುಗಳು' ಕಾದಂಬರಿಗೆ 'ಸರಕು' ಒದಗಿಸಿದ್ದ ಆ ಕಡಲ ಭೋರ್ಗರೆತ, ಕಪ್ಪು ಕಲ್ಲು ಬಂಡೆಗಳು, ಹಕ್ಕಿ ಗೂಡುಗಳಂತಹ ಸೋಗೆಗಳ ಗುಡಿಸಲುಗಳು, ಸಾಹುಕಾರರುಗಳ ಬಣ್ಣದ ಮನೆಗಳು – ಕಾರುಗಳು ಎಲ್ಲವೂ ಕಣ್ಣಮುಂದೆ ಕುಣಿಯುತ್ತಲಿವೆ —

ಕನ್ನಡದ ಓದುಗರಿಗೆ ತೀರಾ ಪರಿಚಿತವಲ್ಲದ ಈ 'ವಸ್ತು'ವಿನ ಬಗ್ಗೆ, ಕೆಲವಾದರೂ ಸಂಗತಿಗಳನ್ನು ಪರಿಚಯಿಸುವುದು ಕಾದಂಬರಿಯ ಓದಿಗೆ ನೆರ ವಾಗಬಹುದೆಂಬ ನಂಬಿಕೆಯಿಂದ ನಾಲ್ಕು ಸಾಲು ಬರೆಯುತ್ತಿರುವೆ.

'ಸರಕು'ಗಳು ಕಾದಂಬರಿಯ ರಂಗಸ್ಥಳವೆನಿಸಿರುವ 'ಕುಂಟ್ಟಿಚ್ಚಿರಾ'ದ ಕಡಲ ಕರೆಯಲ್ಲಿ ಕಣ್ಣಿಗೆ ಹಬ್ಬವಾಗಬಹುದಾದ ಯಾವ ಆಕರ್ಷಣೆಗಳೂ ಇಲ್ಲ. ಬೀಚ್‌ರೋಡಿನ ಎಡಕ್ಕೆ ಕುಸಿಯುವ ಮರಳ ನೆಲದ ಮೇಲೆ ನಿಂತಿರುವ ಸೋಗೆ ಗುಡಿಸಲುಗಳಷ್ಟೇ ಇವೆ. ಈ ಹಕ್ಕಿಗೂಡುಗಳಂತಹ ಮನೆಗಳ ಬೆನ್ನ ಹಿಂದೆ ಲಕ್ಷಾಂತರ ವರ್ಷಗಳಿಂದ ಒಂದೇ ಸಮನೆ ಭೋರ್ಗರೆಯುತ್ತಿರುವ ಕಡಲಿನ ಮೊನೆಗಳು, ದಂಡೆಯ ಬಂಡೆಗಳಿಗೆ ಅಪ್ಪಳಿಸಿ, ನೀರ ಹನಿಗಳನ್ನು ಗುಡಿಸಲು

ಗಳ ಮೇಲೆ ಚಿಮುಕಿಸುತ್ತಲೇ ಇರುತ್ತವೆ. ಗುಡಿಸಲ ಎದುರು ಎಣ್ಣೆಗೆಂಪು ಬಣ್ಣದ 'ಚಿಣ್ಣ – ಚಿಣ್ಣೆ'ಯರು ಗೋಲಿಯಾಡಲು ತೋಡುವ ಮರಳ ಗುಣಿ ಗಳಲ್ಲಿ ಕಸಕಡ್ಡಿಗಳು ತುಂಬಿರುತ್ತವೆ. ಬೀಚ್‌ರೋಡಿನ ಬಲಭಾಗದಲ್ಲಿ ಆ ಪರಿಸರಕ್ಕೆ ಏನೇನೂ ಹೊಂದಿಕೊಳ್ಳದಂತೆ ಭಾಸವಾಗುವ ಬಣ್ಣಬಣ್ಣದ ಸಿಮೆಂಟು ಬಂಗಲೆಗಳಿವೆ. ಅಷ್ಟೇ ಬಣ್ಣ ಬಣ್ಣದ ಕಾರುಗಳನ್ನಿಡಲು – ಕಬ್ಬಿಣದ ಕಂಬಿಗಳ ಬಾಗಿಲುಗಳಿರುವ – ಚಂದದ ಶೆಡ್ಡುಗಳಿವೆ.

ಈ ಎರಡು ಧ್ರುವಗಳ ನಡುವೆ ಕಪ್ಪಗೆ ಮಲಗಿರುವ ಸರಕಾರಿ ಟಾರು ರಸ್ತೆ ತನ್ನ ಎದೆಯ ಮೇಲೆ ಪ್ರತಿರಾತ್ರಿ ನಡೆಯುತ್ತಿರುವ 'ಧಾರ್ಮಿಕ ವ್ಯಭಿ ಚಾರ'ಕ್ಕಾಗಿ ಹೇಸಿ ಉಸಿರುಕಳಕೊಂಡಿದೆ. ರಸ್ತೆಯ ಅಂಚಿನಲ್ಲಿ ಕಾಣಸಿಗುವ ಜೋಲು ಮೋರೆಯ ಮುದುಕಿಯರು, ಗುಳಿಬಿದ್ದ ಕಣ್ಣುಗಳ ಮುದುಕರು, ಸೋಗೆ ಗುಡಿಸಲ ಬಾಗಿಲಲ್ಲ ನಿಂತು ಕಣ್ಣು ಪಿಳಿಪಿಳಿ ಮಾಡುತ್ತಿರುವ ಮಾಸಲು ಸೀರೆಯ ಯುವತಿಯರು, ಸಂಜೆಯಾಗುತ್ತಲೇ ಹೆಂಡತಿ ಮನೆಗೆ (ಅತ್ತೆ ಮನೆ) ಧಾವಿಸುತ್ತಿರುವ ದುಡಿದು ಸುಸ್ತಾದ ಯುವಕರು, ತಮ್ಮ ತಂದೆಯ ಹೆಸರೇ ನೆಂಬ ಪ್ರಶ್ನೆಯ ಬಗ್ಗೆಯೂ ತಲೆಕೆಡಿಸಿಕೊಳ್ಳದ ಪುಟ್ಟ ಮಕ್ಕಳು – ಈ ಎಲ್ಲರೂ ಮತ್ತೊಮ್ಮೆ 'ಘಟಿಸಬಹುದಾದ' ಗತ ಇತಿಹಾಸದ ನೆನಪುಗಳ ಜತೆ ಉಸಿರಾಡುತ್ತಾ ಎಂದಾದರೊಂದು ದಿನ ಕಡಲ ಹೊಟ್ಟೆಯೊಳಗಿನಿಂದ ಎದ್ದು ಬರಬಹುದಾದ ರಾಕ್ಷಸ 'ಮಚ್ವೆ'ಗಳಿಗಾಗಿ ಕಣ್ಣರಳಿಸಿ ಕಾಯುತ್ತಿದ್ದಂತೆ ಭಾಸ ವಾಗುತ್ತಾರೆ. ಇಸ್ಲಾಂ ಧರ್ಮದಂತೆ ವ್ಯಭಿಚಾರ ನಿಶಿದ್ಧ. ಅರಬ್ ರಾಷ್ಟ್ರ ಗಳಲ್ಲಂತೂ ಈ ಬಗ್ಗೆ ಬಹುಕ್ರೂರ ಕಾನೂನುಗಳುಂಟು. ಧರ್ಮಸಮ್ಮತ 'ನಿಕಾಹ್' ಆಗದೆ ಹುಡುಗಿಯ ಮೈ ಮುಟ್ಟುವಂತಿಲ್ಲ. ಆದರೆ ಆ ರಾಷ್ಟ್ರ ಗಳಲ್ಲಿ 'ನಿಕಾಹ್' ಗಂಡುಗಳಿಗೆ ಬಲು ದುಬಾರಿ ಸುಖ. ಲಕ್ಷಗಟ್ಟಲೆಯಲ್ಲಿ 'ಮಹರ್' ಸುರಿಸದೆ ಹೆಣ್ಣು ಸಿಗದು. ಈ ವಧುದಕ್ಷಿಣೆಯ ಕಾಟ ಅದೆಷ್ಟೋ ಗಂಡುಗಳ ಬದುಕನ್ನೇ ಅಸಹನೀಯವನ್ನಾಗಿ ಮಾಡಿದೆ. (ಇತ್ತೀಚೆಗೆ ಕೆಲವು ಸರಕಾರಗಳು 'ಮಹರ್' ನೀಡುವ ಸಲುವಾಗಿ ಯುವಕರಿಗಾಗಿ 'ಸಬ್ಸಿಡಿ' ಒದಗಿಸಲಾರಂಭಿಸಿದೆ.) ಅಲ್ಲಿ ಎಲ್ಲರ ಮನೆ ಹಿತ್ತಲಲ್ಲೂ ಎಣ್ಣೆಬಾವಿಗಳೇನೂ ಇಲ್ಲವಲ್ಲಾ? ಹಾಗಾದರೆ ಈ ಗಂಡುಗಳೇನು ಮಾಡಬೇಕು?

ಭಾರತದಂತಹ ರಾಷ್ಟ್ರಗಳು ಇಂತಹ ಬಡ ಅರಬಿಗಳಿಗೆ ಅಗ್ಗದ ಮಾವನ ಮನೆಗಳೇ ಆಗಿಬಿಟ್ಟಿವೆ. ಮರದ ವ್ಯಾಪಾರದ ಸೋಗಿನಲ್ಲಿ 'ಮಚ್ವೆ' ಹತ್ತಿ ಕುಟ್ಟಿಚ್ಚಿರಾದ ಕಡಲ ಕರೆ ತಲುಪಿದರಾಯಿತು. ಅವರ ತುಂದಿಗಾಲು ಭಾರ ತದ ನೆಲ ಸೋಂಕುತ್ತಿರುವಂತೆಯೇ ಆ ರಾತ್ರಿ ಅವರ ಜತೆ 'ನಿಕಾಹ್' ಆಗಲಿ

ರುವ ಹೆಣ್ಣಿನ ವಿವರಗಳು ಅವರಿಗೆ ತಲುಪಿಬಿಟ್ಟಿರುತ್ತವೆ. ಕುಟ್ಟಿಚ್ಚಿರಾದ ಮರ – ಬಿದಿರಿನ ಸಾಹುಕಾರರುಗಳಿಗೆ ಅರಬಿ ವರ್ತಕರ ನಿಜವ್ಯಾಪಾರದ ಮರ್ವ ಚೆನ್ನಾಗಿ ಗೊತ್ತು.

ಸೀಜನ್ ಬಂತು ಎಂದರೆ ಕುಟ್ಟಿಚ್ಚಿರಾದ ತಾರು ರಸ್ತೆಯಲ್ಲಿ ಕಾರುಗಳ ಓಡಾಡ ಜೋರಾಗುತ್ತದೆ. ಕಡಲ ಕರೆಯಲ್ಲಿ ಲಂಗರು ಊರುವ ಅರಬಿ ಮಚ್ವೆಗಳು ತಕಪಕ ಕುಣಿಯಲಾರಂಭಿಸಿದಂತೆ ಇಡೀ ಊರು ಗಿಜಿಗುಟ್ಟುತ್ತದೆ. ಮಿನಾರಿನೆತ್ತರ ಬೆಳೆದ ಅರಬಿವರ್ತಕರು ರಸ್ತೆಯಲ್ಲಿ ನಡೆದಾಡಿದರೆ, ಅತ್ತರ್ ಪರಿಮಳದಿಂದ ಗಂಡಿಸಲುಗಳ 'ಹಸಿವು' ಕೆರಳುತ್ತದೆ. ಮಸೀದಿಯ ಎದುರು ಫಕೀರರುಗಳ ಸಾಲು ಉದ್ದವಾಗುತ್ತದೆ. ಪಕ್ಕದ ಪೇಟೆಯ ಲಾಡ್ಜಿಂಗ್‌ಗಳು ತಿಂಗಳುಗಟ್ಟಲೆ ಬುಕ್ ಆಗುತ್ತವೆ.

ತನ್ನ ಊರಿನಲ್ಲಿ ಗಡ್ಡ ಬೋಳಿಸಲು ತಗಲುವ ವೆಚ್ಚದಷ್ಟು 'ಮಹರ್' ತೆತ್ತು ಕುಟ್ಟಿಚ್ಚಿರಾದ ಹೆಣ್ಣೊಂದರ ಜತೆ 'ನಿಕಾಹ್' ಆಗುವ ಅರಬಿ ಪಕ್ಕದ ಪೇಟೆಯ ಲಾಡ್ಜಿಂಗ್‌ನಲ್ಲಿ ಆಕೆಯ ಜತೆ 2–3 ತಿಂಗಳ ಕಾಲ ಸಂಸಾರ ನಡೆಸಿ, ತಾನು ಮರಳುವ ಮುನ್ನ ನೆನಪಿಟ್ಟು ಆಕೆಗೆ 'ತಲಾಕ್' ನೀಡುವ ಮೂಲಕ ತನ್ನ ವ್ಯಭಿಚಾರದ ಪಾಪದಿಂದ ಮುಕ್ತನಾಗುತ್ತಾನೆ. ಕಡಲ ಗುಡಿಸಲ ಮಂದಿಗಳು ಎಂದಿಗೂ ಅರ್ಥಮಾಡಿಕೊಳ್ಳಲಾಗದ 'ಅರಬಿಕ್' ಭಾಷೆಯನ್ನೇ 'ಟ್ರಂಪ್ ಕಾರ್ಡ್' ಆಗಿ ಬಳಸುವ ಇಲ್ಲಿನ 'ದಲ್ಲಾಳಿಗಳು' ಬಡ – ಮಧ್ಯಮ ವರ್ಗದ ಅರಬಿಗಳನ್ನು 'ಶೇಕ್'ಗಳೆಂದು ಕರೆದು ಹುರಿದುಂಬಿಸುತ್ತಲೇ ನಾಲ್ಕು ಕಾಸು ಸಂಪಾದಿಸಿ, ತಮ್ಮ ಹೆಣ್ಣು ಮಕ್ಕಳನ್ನು 'ಊರ ಹುಡುಗರಿಗೆ' ವರದಕ್ಷಿಣೆ ತೆತ್ತು ಮದುವೆ ಮಾಡಿಸುತ್ತಾರೆ. ಅರಬಿಗಳು ವಾರಗಟ್ಟಲೆ ಬಳಸಿ ಉಳಿಸಿ ಹೋದ 'ಸರಕುಗಳು' ಮತ್ತೆ ತಮ್ಮ ಗುಡಿಸಲುಗಳಲ್ಲಿ ಮಕ್ಕಳನ್ನು ಹೆತ್ತು ಮುಂದಿನ ಸೀಜನ್‌ನಲ್ಲಿ ಬರಬಹುದಾದ ಹೊಸ ಅರಬಿಗಳಿಗಾಗಿ ದೇಹ ಉಳಿಸಿ ಕೊಳ್ಳುತ್ತಾರೆ.

ಕಟ್ಪಾಡಿಯವರ ಕಾದಂಬರಿಯ 'ಕ್ಯಾನ್‌ವಾಸ್' ಇದಿಷ್ಟು ಸಂಗತಿಗಳಿ ಗಷ್ಟೇ ಸೀಮಿತವಲ್ಲ, ಕುಟ್ಟಿಚ್ಚಿರಾದ ವಿಶಿಷ್ಟ 'ಕುಟುಂಬ' ಪದ್ಧತಿಯ ಸುತ್ತು ಕೂಡಾ ಬೆಳೆಯುತ್ತವೆ. ಒಂದು ಬಗೆಯ ಪಿತೃಪ್ರಧಾನ ಅಧಿಕಾರವುಳ್ಳ– ಮಾತೃಪ್ರಧಾನ ಸಂಸ್ಕೃತಿಯ ಬದುಕು ಇಲ್ಲಿಯದು. ಇಲ್ಲಿ 'ಕೊಟ್ಟ ಗಂಡು ಕುಲಕ್ಕೆ ಹೊರಗೆ' ಆದರೆ ದುಡಿಮೆ – ನಿರ್ವಹಣೆ ಎಲ್ಲದರ ಜವಾಬ್ದಾರಿ ಆತ ನದು. ಈ ವ್ಯವಸ್ಥೆಯಲ್ಲಿ 'ಪ್ರೇಮ ವಿವಾಹ' ಸಾಧ್ಯವೇ ಇಲ್ಲವೇನೋ ಅನ್ನಿಸಿಬಿಡುತ್ತದೆ! ಜಗತ್ತಿನ ಮನುಷ್ಯರೆಲ್ಲರೂ ಮುಗ್ಧರಾಗಿರುತ್ತಿದ್ದರೆ ಆಗ

ಅವರಿಗೆ ಕಾನೂನು, ಪೋಲೀಸು ನ್ಯಾಯಸ್ಥಾನ – ಇವು ಯಾವುದರ ಅಗತ್ಯವೂ ಇರಲಾರದು. ಜನರು ಬುದ್ಧಿವಂತರಾದಂತೆಯೇ ತಮ್ಮೊಳಗೇ 'ವ್ಯವಸ್ಥೆ' ಯೊಂದನ್ನು ರೂಪಿಸಿಕೊಂಡು, ಬಳಿಕ ಅದರೊಳಗೇ ಸಿಲುಕಿ ಚಡಪಡಿಸು ತ್ತಾರೆ. ಈ ನಡುವೆ ಬಲಿಷ್ಠರಾದವರು ತಮಗನುಕೂಲವಾಗುವಂತೆ ನ್ಯಾಯ–ಅನ್ಯಾಯಗಳ ಪಟ್ಟಿ ಸಿದ್ಧಪಡಿಸಿ ಸಾರ್ವಜನಿಕರಿಗಾಗಿ ಬಿಡುಗಡೆಗೊಳಿಸುತ್ತಾರೆ. ಕುಟ್ಟಿಚ್ಚಿರಾದಲ್ಲಿ ಆದದ್ದೂ ಇದುವೇ. ತಮ್ಮ ಮರಬಿದಿರಿನ ವ್ಯಾಪಾರದಲ್ಲಿ ಅರಬ ಸ್ಥಾನದ ಬಂಗಾರ ಬೇಟೆ ಆರಂಭಿಸಿದ್ದ ಸಾಹುಕಾರರು ಒಂದು ಕಡೆಯಾದರೆ, ತಮ್ಮ ಹೊಟ್ಟೆಪಾಡಿಗಾಗಿ ಸಾಹುಕಾರರುಗಳ ಎದುರು ಹಲ್ಲುಗಿಂಜುತ್ತಾ, ಅವರ ಅರಬಿ ಗಿರಾಕಿಗಳ ಸಲುವಾಗಿ ಹೆಣ್ಣು ಪೂರೈಸುವ ದಲ್ಲಾಳಿಗಳು ಮತ್ತೊಂದು ಕಡೆ. ತಮ್ಮ ನಾಡಿನಲ್ಲಿ 'ಮಹರ್' ನೀಡಲಾಗದೆ ಮದುವೆಗಾಗಿ ಕಾತರಿಸುವ ಅರಬಿ ಗಂಡುಗಳು ಒಂದು ಕಡೆಯಾದರೆ, ಇಲ್ಲಿ ವರದಕ್ಷಿಣೆ ಕಾಟದಿಂದಾಗಿ ಮದುವೆ ಬಗ್ಗೆ ಕನವರಿಸಲೂ ಭಯಪಡುವ ಹೆಣ್ಣುಗಳು ಇನ್ನೊಂದು ಕಡೆ-ಈ ಹೋರಾಟದಲ್ಲಿ ಯಾರು ಗೆದ್ದರು, ಯಾರು ಸೋತರು ಎಂಬುದಾಗಲೀ, ಯಾರು ಸರಿ – ಯಾರು ತಪ್ಪು ಎಂಬುದಾಗಲೀ ಮುಖ್ಯವಲ್ಲ. ತಾವೇ ರೂಪಿ ಸಿದ 'ವ್ಯವಸ್ಥೆ'ಯ ಸೂತ್ರದಲ್ಲಿ ತಾವೇ ಬಂಧಿಯಾದವರು ಈ ಎಲ್ಲರೂ. ಗೆಳೆಯ ಕಟ್ಪಾಡಿಯವರು ತಮ್ಮ 'ಸರಕುಗಳು' ಕಾದಂಬರಿಯಲ್ಲಿ ಶೋಧಿಸ ಹೊರಟಿದ್ದು ಈ ಸಿಕ್ಕುಗಟ್ಟಿದ ಸೂತ್ರವನ್ನೇ.

ಕಟ್ಪಾಡಿಯವರು ಕಾದಂಬರಿಯುದ್ದಕ್ಕೂ ಹಕ್ಕಿಗೂಡುಗಳಂತಹ ಗುಡಿ ಸಲುಗಳ ಪಕ್ಷ ವಹಿಸಿ ಮಾತನಾಡುತ್ತಾರೆ. ಭಾವುಕ ಸೃಷ್ಟಿಕರ್ತನೊಬ್ಬ ಬೇರಾವ ಪಕ್ಷ ವಹಿಸಬಲ್ಲ? ಕಟ್ಪಾಡಿಯವರ ಬರಹ ಗೆಲ್ಲುವುದೂ ಇಂಥ ಭಾಗ ಗಳಲ್ಲಿ. ಉದಾಹರಣೆಗೆ, ದಲ್ಲಾಳಿಗಳ 'ಸಬ್ ಏಜಂಟ್' ಹಾಜಿಮಾ ಹೆಣ್ಣು ಹೆತ್ತವರು ಎರಡು ಕಾಸು ನೀಡಬಂದಾಗ ನಿರಾಕರಿಸಿಬಿಡುತ್ತಾಳೆ "ನಿಮ್ಮ ಕಣ್ಣೀರಿನ ಹಣ ತಕ್ಕೊಂಡು ನಾನ್ಯಾವ ನರಕಕ್ಕೆ ಹೋಗಲಿ?" ಎಂದು ಪ್ರಶ್ನಿ ಸುವ; ಅಥವಾ ಈ ಅನಿಷ್ಟ ಸಂಪ್ರದಾಯವನ್ನು ಅರೆಬರೆಯಾಗಿ ಪ್ರತಿಭಟಿಸ ಹೊರಟ ಯುವಕ ಮಂಡಲವನ್ನು ತರಾಟೆಗೆ ತೆಗೆದುಕೊಳ್ಳುವ ಆಕೆಯ ಬಗ್ಗೆ ಲೇಖಕರಿಗೆ ಸಹಾನುಭೂತಿಯೇ ಇದೆ. ಕಟ್ಪಾಡಿಯವರು ಹಾಜಿಮಳಲ್ಲಿ ಕಾಣುತ್ತಿರುವುದು ಆಕೆಯ ಹಸಿವೆಯನ್ನೇ ಹೊರತು, ಆಕೆಯಲ್ಲಿ ಹುದುಗಿರ ಬಹುದಾದ ವೈಚಾರಿಕ ಪ್ರಜ್ಞೆಯನ್ನಲ್ಲ. ಅಂತೆಯೇ ಸಲೀಂ ಮತ್ತು ನಫೀಸಾಳ ಪ್ರೇಮ ಪ್ರಕರಣ ಕೂಡಾ, ಕುಟ್ಟಿಚ್ಚಿರಾದ ವಿಶಿಷ್ಟ 'ಕುಟುಂಬ' ಪದ್ಧತಿ ಯೊಳಗಿನ ಒಂದು ವಿಡಂಬನೆ ಮಾತ್ರ.

'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರುತ್ತಲೇ ಓದುಗರಲ್ಲಿ ಸಾಕಷ್ಟು ಕುತೂಹಲ ಕೆರಳಿಸಿದ್ದ ಈ 'ಸರಕುಗಳು' ಕಾದಂಬರಿ, ಇದೀಗ ಪ್ರತಿಷ್ಠಿತ ಪ್ರಕಾಶನ 'ನವಕರ್ನಾಟಕ'ದವರ ಮೂಲಕ ಹೊರಬಿದ್ದು ಓದುಗರೆಲ್ಲರ ಮನ್ನಣೆಗಳಿಸುತ್ತದೆಂಬ ನಂಬಿಕೆ ನನಗುಂಟು. ಕಥನ ಕಲೆಯಲ್ಲಿ ಇದೀಗ ಬಹಳಷ್ಟು ವೈವಿಧ್ಯ ಸಾಧಿಸಿರುವ ಕಟ್ಪಾಡಿ ಅವರ ಈ ಮೊದಲ ಕಾದಂಬರಿ, ಅವರ ಮುಂದಿನ ನೂರು ಕಾದಂಬರಿಗಳಿಗೆ ಮೊದಲ ಹೆಜ್ಜೆಯಾಗಲಿ ಎಂದು ಹಾರೈಸುವೆ.

ಮಣಿಪಾಲ
ಜನವರಿ 21, 1989 **ಬೊಳುವಾರು ಮಹಮದ್ ಕುಂಞಿ**

HAMZA MALAR
MALAR ARASTANA
"NUSRATH LLAM" MANZIL
P.O. PAVOO - 574 162,
MANGALORE.

# ನನ್ನ ಎರಡು ಮಾತು

ನನ್ನ ಈ ಕಾದಂಬರಿಯ ಹಿನ್ನೆಲೆಯ ಬಗ್ಗೆ ಗೆಳೆಯ ಬೊಳುವಾರು ಈಗಾಗಲೇ ಬರೆದಿದ್ದಾರೆ. ಈ ಕಾದಂಬರಿಯ ಮೂಲಕ ಒಂದು ಹೊಸ ಬದುಕಿನ ನೋವು ನಲಿವುಗಳನ್ನು ಕನ್ನಡಿಗರಿಗೆ ಪರಿಚಯಿಸಲು ಪ್ರಯತ್ನಿಸಿದ್ದೇನೆ. ಇಲ್ಲಿನ ವಸ್ತುವಿನ ಬಗ್ಗೆ ಯೋಚನೆಗೆ ಹಚ್ಚುವ ಕೆಲಸವನ್ನಷ್ಟೇ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ. ಯಾಕೆಂದರೆ ಸಮಾಜದ ನೇರ ಸುಧಾರಣೆಯಾಗಲೀ, ಯಾರ ಬಗ್ಗೆಯೂ ವೈಯುಕ್ತಿಕ ಟೀಕೆಯಾಗಲೀ ನನ್ನ ಉದ್ದೇಶವಲ್ಲ, ನನಗೆ ಬಂದ ಬೆದರಿಕೆಯ ಪತ್ರಗಳು, ಈ ಕಾದಂಬರಿಯನ್ನು ಪ್ರಕಟಿಸಿದ ಸುಧಾಪತ್ರಿಕೆಯ ಪುಟಗಳನ್ನು ಕಿತ್ತು ತೆಗೆದು, ದುಬ್ಬಾಯಲ್ಲಿ ಸೆನ್ಸಾರ್ ಹಾಕಿದ ಪ್ರಕರಣ ಇವುಗಳ ಹಿನ್ನೆಲೆಯಲ್ಲಿ ಈ ಮಾತುಗಳನ್ನು ಹೇಳುತ್ತಿದ್ದೇನೆ.

ನನ್ನ ಈ ಪ್ರಥಮ ಕಾದಂಬರಿಯನ್ನು ಧಾರಾವಾಹಿಯಾಗಿ ಪ್ರಕಟಿಸಿದ ಸುಧಾ ವಾರಪತ್ರಿಕೆಯ ಸಂಪಾದಕ ಶ್ರೀ ಎಂ.ಬಿ. ಸಿಂಗ್‌ರವರ ಪ್ರೋತ್ಸಾಹವನ್ನು ಗೌರವಪೂರ್ವಕವಾಗಿ ನೆನೆಯುತ್ತಿದ್ದೇನೆ. ಗೆಳೆಯರಾದ ಬೊಳುವಾರು, ಜಿ.ರಾಜಶೇಖರ ಮತ್ತು ಸುಧಾದಲ್ಲಿ ಕಾದಂಬರಿಯ ಬಗ್ಗೆ ಪ್ರತಿಕ್ರಿಯಿಸಿದ ದೇಶವಿದೇಶದ ಸಹೃದಯದ ಓದುಗರನ್ನು ಪ್ರೀತಿಯಿಂದ ನೆನೆಯುತ್ತೇನೆ. ಪುಸ್ತಕ ರೂಪದಲ್ಲಿ ಹೊರಬರಲು ಕಾರಣರಾದ ಶ್ರೀಯುತ ರಾಜಾರಾಮ್, ಬಿ.ವಿ. ಕಕ್ಕಿಲ್ಲಾಯ, ಎಸ್.ಆರ್. ಭಟ್‌ರವರಿಗೂ, ಮುಖಪುಟ ಬರೆದ ಕಲಾವಿದ ಕಮಲೇಶ್‌ರವರಿಗೂ, ಜನಶಕ್ತಿ ಪ್ರಿಂಟರ್ಸ್, ನವಕರ್ನಾಟಕ ಪ್ರಕಾಶನ ಸಂಸ್ಥೆಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ದಿನಾಂಕ: 21-1-1989
ಮೂಡಬಿದಿರೆ

ಫಕೀರ್ ಮುಹಮ್ಮದ್ ಕಟ್ಪಾಡಿ

ಈ ಕಾದಂಬರಿಯ ಕಥೆ ಪಾತ್ರಗಳು
ಸನ್ನಿವೇಶಗಳು ಕಾಲ್ಪನಿಕ.   ಇವು ಯಾರ
ವೈಯಕ್ತಿಕ  ಬದುಕಿಗೂ ಸಂಬಂಧಿಸಿದ್ದಲ್ಲ;
ಅಕಸ್ಮಾತ್ ಸಂಬಂಧ ಕಂಡು ಬಂದರೆ ಲೇಖಕನಾಗಲಿ,
ಪ್ರಕಾಶಕರಾಗಲಿ, ಹೊಣೆಗಾರರಲ್ಲ.

ಬದುಕಿಗೆ ಮುದಕೊಡುವ
ಕನಸುಗಳೇ
ನೋವುಗಳೇ
ಇದೋ
ನಿಮಗೆ —

HAMZA MALAR
MALAR ARASTANA
"NUSRATUL ISLAM" MANZIL
P.O. PAVOOR-574 182.
MANGALORE.

# ಅವರವರ ಕರ್ಮಕ್ಕೆ...

ಕುಟ್ಟಿಚ್ಚಿರಾದ ಕಡಲ ತೀರದಲ್ಲಿ ಹಾಜಿಮು ಕಟ್ಟಿಗೆ ಚೂರುಗಳನ್ನು ಹೆಕ್ಕುತ್ತಿದ್ದಾಗ ಅವಳ ಮೊಮ್ಮಗ ಮುಯ್ಯದ್ದಿ ಮರಳದಂಡೆಯ ಮೇಲೆ ಕುಳಿತು ಮೈಯೆಲ್ಲ ಮರಳು ಸುರಿದುಕೊಂಡು ಮೀಯೋ ಆಟ ಆಡುತ್ತಿದ್ದ. ಸಮುದ್ರದ ತೆರೆಗಳು ಎಲ್ಲಿಂದಲೋ ಹೊತ್ತು ತಂದ ಕಸ, ಕಡ್ಡಿ, ಮರದ ಒಣ ರೆಂಬೆಗಳನ್ನು ದಡಕ್ಕೆ ಅಪ್ಪಳಿಸುತ್ತಲೇ ಇದ್ದವು. ಹಾಜಿಮ ಒಲೆ ಹೊತ್ತಿಸೋದಕ್ಕಾಗಿ ಅವುಗಳನ್ನು ಹೆಕ್ಕಿ ತನ್ನ ಬುಟ್ಟಿಯಲ್ಲಿ ತುಂಬಿಸಿಕೊಳ್ಳುತ್ತಿದ್ದಳು. ಸಮುದ್ರ ಎಂದಿಗಿಂತ ಭೀಕರವಾಗಿದ್ದರಿಂದ ಅಲ್ಲೆಲ್ಲೂ ಬೆಸ್ತರ ಸುಳಿವಿರಲಿಲ್ಲ. ಅವರ ಬಲೆ, ದೋಣಿಗಳೆಲ್ಲ ದಡದ ಮೇಲೆ ಅನಾಥವಾಗಿ ಬಿದ್ದಿದ್ದವು. ಕಾಗೆಗಳು ಮರಳು ನೆಲದಲ್ಲಿ ಅಲ್ಲಲ್ಲಿ ಅಳಿದುಳಿದ ಮೀನಿನ ಅವಶೇಷಗಳನ್ನು ಹೆಕ್ಕುತ್ತಿದ್ದವು.

ಹೊತ್ತು ಮುಳುಗಲು ಇನ್ನೂ ಮೂರುದ್ದ ಇದ್ದರೂ ಆಗಲೇ ಬಾನಿನಲ್ಲಿ ಮುಗಿಲ ರಾಶಿ ಕವಿದು ಕತ್ತಲಾಗತೊಡಗಿತ್ತು. ಹಾಜಿಮುಳ ಎದೆ ಡವಗುಟ್ಟತೊಡಗಿತ್ತು. ಈ ವರ್ಷವೂ ಗುಡಿಸಲನ್ನು ಗಟ್ಟಿಮಾಡಲಿಕ್ಕಾಗಲಿಲ್ಲ. ಈ ವರ್ಷದ ಮಳೆಗಾಲದಲ್ಲಿ ಈಗಾಗಲೇ ಕೇರಿಯ ಗುಡಿಸಲುಗಳು ಸಾಕಷ್ಟು ಬಿದ್ದು ಎದ್ದಿದ್ದವು, ಇನ್ನೂ ಅದೆಷ್ಟು ಬೀಳಲಿಕ್ಕಿವೆಯೋ ! ಹಾಜಿಮ ತನ್ನ ಕಸಬರಿಕೆಗೆ ಸಿಕ್ಕಿದ್ದ ಕಟ್ಟಿಗೆ ಚೂರುಗಳನ್ನೂ, ಕಸಕಡ್ಡಿಗಳನ್ನೂ ಒಟ್ಟು ಮಾಡಿ ಬುಟ್ಟಿ ತುಂಬಿದಳು. ಮೈಮೇಲೆ ಮರಳು ಹಾಕಿಕೊಂಡ ಮಗುವಿನ ಕಣ್ಣಿಗೆ ಮರಳು ಚುಚ್ಚಿತೇನೋ. ಅದು ಅಳತೊಡಗಿತು. ಬೇಗ ಬೇಗನೆ ಗುಡಿಸಲು ಸೇರುವ ತವಕದಲ್ಲಿದ್ದ ಹಾಜಿಮುಳಿಗೆ ಮಗುವನ್ನು ಕಂಡು ಸಿಟ್ಟು ನೆತ್ತಿಗೇರಿತ್ತು. "ಇದೆಂತಾದ್ದು ನಿನ್ನಮ್ಮನಿಗೆ ಫಾಲೆಹಾ ಮಾಡಿದ್ದಾ ? ಬರ್ಬೇಡಾಂದ್ರೂ ಬಾಲದ ತರ ಹೋದಲ್ಲಿಗೆಲ್ಲ ಓಡಿಬರ್ತಿ–"ಎಂದು ಮಗುವಿನ ಬೆನ್ನಿಗೊಂದು ಹೊಡೆದು ಮರಳು ಕೊಡವಿದಳು. ಮಗು ಮತ್ತಷ್ಟು

ಅಳತೊಡಗಿತು. ಬುಟ್ಟಿಯನ್ನು ಎತ್ತಿಕೊಂಡು ಮಗುವಿನ ಕೈಹಿಡಿದು ಮನೆ ಕಡೆ ನಡೆಯುತೊಡಗಿದಳು.

ಹಕ್ಕಿಗೂಡುಗಳಂತಿರುವ ಪುಟ್ಟ ಪುಟ್ಟ ಸೋಗೆಯ ಗುಡಿಸಲುಗಳ ಕೇರಿ ಯೊಳಗೆ ಹೊಕ್ಕು ಹಾಜಿಮ ತನ್ನ ಮನೆಯ ಮುಂದೆ ನಿಂತು ಮಗಳನ್ನು ಕರೆ ದಳು. ಹಫ್ಸಾ ತನ್ನ ಕೆಲಸ ಬಿಟ್ಟು ಗೊಣಗುತ್ತ ಬಂದವಳು ಮರಳು ಮೈಯೆಲ್ಲ ತುಂಬಿಕೊಂಡ ಮಗುವಿನ ಅವತಾರ ಕಂಡು ತಲೆಗೊಂದು ಕುಟ್ಟಿ ದಳು. ಮಗು ಮತ್ತೆ ಅಳತೊಡಗಿತು. ತನ್ನ ಸೆರಗಿನಿಂದ ಹಫ್ಸಾ ಮಗುವಿನ ಮೈ ಒರೆಸತೊಡಗಿದಳು. ಮರಳು ಮೈಗೆ ಒತ್ತುವಾಗ ಕಿರಿಕಿರಿ, ನೋವು ಒಟ್ಟಾಗಿ ಅದು ಇನ್ನಷ್ಟು ಅಳುತ್ತಾ ಕುಣಿಯಿತು.

ಬುಟ್ಟಿಯಲ್ಲಿ ತುಂಬಿ ತಂದ ಕಟ್ಟಿಗೆ ಚೂರುಗಳನ್ನು ಒಲೆಯ ಬದಿಯಲ್ಲಿ ರಾಶಿಹಾಕುವಾಗ ಆಕಾಶದಲ್ಲಿ ದಟ್ಟವಾಗುತ್ತಿರುವ ಮೋಡದ ನೆನಪುಮಾಡುತ್ತ "ಇದಿನ್ಯಾವ ಕರ್ಮಕ್ಕೆ ನಾನು ಹೊತ್ತುತಂದದ್ದು ರಬ್ಬೇ !" ಎಂದುಕೊಂಡಳು ಹಾಜಿಮ. ಮಳೆ ಜೋರಾಗಿ ಹೊಡೆದರೆ ಗುಡಿಸಲೆಲ್ಲ ಒದ್ದೆ. ಮತ್ತೆ ಒಲೆ ಉರಿಸೋದೇನು ಮಣ್ಣು ! ಎಂದುಕೊಂಡು ಹತಾಶಗೊಂಡ ಹಾಜಿಮಳಿಗೆ ಮಗುವಿನ ಅಳು ಕೇಳಿ ತಲೆ ಚಿಟ್ಟುಹಿಡಿಯುತೊಡಗಿತ್ತು. ಅಜ್ಜಿಗೆ ಸಿಟ್ಟು ಬಂದಿದೆ ಎಂದು ತಿಳಿದಿದ್ದ ಮಕ್ಕಳು ಮೂಲೆಯಲ್ಲಿ ಮುದುಡಿ ಕೂತು ಪಿಸು ಗುಟ್ಟುತ್ತ ಮಾತಾಡಿಕೊಳ್ಳತೊಡಗಿದ್ದವು.

ಹೊರಗೆ ಮಳೆಗಾಳಿಯ ಹೆದರಿಕೆಯಿಂದ ಕಾಗೆಗಳು ಒಂದೇ ಸಮನೆ ಕೂಗುತ್ತ ತೆಂಗಿನ ಮರಗಳಲ್ಲಿ ಕಟ್ಟಿದ್ದ ತಮ್ಮ ಗೂಡುಗಳತ್ತ ಸೇರುವ ತವಕ ದಿಂದ ಹಾರಾಡತೊಡಗಿದ್ದವು. ಸಮುದ್ರದ ಭೋರ್ಗರೆತ ಇನ್ನಷ್ಟು ಹೆಚ್ಚಾಗ ತೊಡಗಿತ್ತು. ಗುಡಿಸಲುಗಳಲ್ಲಿ ಅಲ್ಲೊಂದು ಇಲ್ಲೊಂದು ಮಕ್ಕಳ ಅಳು ಕೇಳಿ ಬರುವುದು ಬಿಟ್ಟರೆ ಭೀಕರ ಮೌನ ಆವರಿಸಿತು.

ಹಾಗೆ ನೋಡಿದರೆ ಈ ಕೇರಿಯಲ್ಲಿರುವ ನೂರಿನ್ನೂರು ಗುಡಿಸಲುಗಳ ಪೈಕಿ ಸ್ವಲ್ಪ ಗಟ್ಟಿ ಮುಟ್ಟಾಗಿರುವ ಗುಡಿಸಲೆಂದರೆ ಹಾಜಿಮಳದ್ದೇ. ಮಳೆಗಾಲ ದಲ್ಲಿ ಹಾಜಿಮಳ ಗುಡಿಸಲೇನಾದ್ರೂ ಬಿದ್ದುಹೋದರೆ ಈ ಕೇರಿಗೆ ಸೇರಿದ ಎಲ್ಲ ಗುಡಿಸಲುಗಳೂ ಬಿದ್ದು ನೆಲಸಮ ಆದುವೆಂದೇ ಲೆಕ್ಕ. ನಾಲ್ಕು ಕಲ್ಲಿನ ಕಂಬದ ಮೇಲೆ ನಿಂತ ಹುಲ್ಲು ಛಾವಣಿ, ಕಂಬಗಳ ನಡುವೆ ಅರ್ಧ ಗೋಡೆ ಅರ್ಧ ತೆಂಗಿನ ಸೋಗೆಯ ಕಟ್ಟೆ.

ಮಳೆಗಾಲದಲ್ಲಿ ಮುರುಕು ಗುಡಿಸಲ ಜನಕ್ಕೆ ಕ್ಷಣ ನಿಲ್ಲೋದಕ್ಕೆ ಹಾಜಿ ಮಳ ಗುಡಿಸಲು ಬೇಕಾದಂತೆ ಹಾಜಿಮ ಕೂಡ ಕೇರಿಗೆಲ್ಲ ಬೇಕಾದವಳು.

ಗಂಡು ದಿಕ್ಕಿಲ್ಲದ ಮನೆಗಳಿಗೆಲ್ಲ ಹಾಜಿಮಳದ್ದೇ ಧೈರ್ಯ. ಕೇರಿಯಲ್ಲಿ ಎಲ್ಲಾದ್ರೂ ಜಗಳವಾದರೆ ರಾಜಿಪಂಚಾತಿಗೆ ಹಾಜಿಮಳೇ ಆಗಬೇಕು. ಅರಬಿಗಳು ಊರಿಗೆ ಬಂದಾಗ ಕೇರಿಯ ಹೆಣ್ಣು ಮಕ್ಕಳ ಬಗ್ಗೆ ದಲ್ಲಾಳಿಗಳಿಗೆ ಮಾಹಿತಿ ತಿಳಿಯಲು ಹಾಜಿಮಳನ್ನೇ ಅವರೆಲ್ಲ ಭೇಟಿಯಾಗಬೇಕು. "ಯಾವ ಊರ ಮುಂಡೇಮಗ ನಿನ್ ಮಗಳನ್ನ ನಿಕಾಹ್ ಮಾಡ್ಕೊಳಿಕ್ಕೆ ಬರ್‍ತಾನೆಂತ ಕಾದು ಕೂತಿದ್ದೀಯ? ಅಂವಾ ಬರ್ತಾನೆಂತ ಕಾದುಕೂತ್ರೆ ನಿನ್ ಮಗಳು ಮುದ್ಕಿ ಆಗ್ತಾಳಷ್ಟೇ" ಎಂದು ಕನಸಿನ ಲೋಕದಿಂದ ಚುಚ್ಚಿ ಎಬ್ಬಿಸುತ್ತಾಳೆ. ಹಾಜಿಮಳ ಸಹಾಯ ಎಲ್ಲ ಅರಬೀ ಮದುವೆಯ ದಲ್ಲಾಳಿಗಳಿಗೂ ಬೇಕು. ಹೆಚ್ಚುಕಮ್ಮಿ ವ್ಯವಹಾರವನ್ನು ಕುದುರಿಸುವವಳೂ ಅವಳೇ. ಹುಡುಗಿಯ ಪ್ರಾಯ, ಸೌಂದರ್ಯ, ಎಷ್ಟನೇ ಮದುವೆ ಎಂದೆಲ್ಲಾ ಪರಾಮರ್ಶಿಸಿ ಅರಬ ಕೊಡಬೇಕಾದ ಮೊತ್ತವನ್ನು ನಿಗದಿಪಡಿಸುತ್ತಾಳೆ. ಇದಕ್ಕೆಲ್ಲ ಹೆಣ್ಣು ಹೆತ್ತವರಿಗೆ ಪ್ರಾಮಾಣಿಕವಾಗಿ ಸಹಕರಿಸುತ್ತಾಳೆ. ವ್ಯವಹಾರ ತನಗೆ ಬೇಕಾದಹಾಗೆ ಕುದುರಿಸು ಅಂತ ದಲ್ಲಾಳಿ ಏನಾದ್ರೂ ಕೈಗೆ ಹಾಕಿದ್ರೆ ತನ್ನ ಸೊಂಟದಲ್ಲಿರೋ ಎಲೆ ಅಡಿಕೆ ಚೀಲದೊಳಗೆ ಹಾಕ್ಕೊಳ್ತಾಳೆ. ಆದರೆ ನಿಗದಿಪಡಿಸಿದ ಮೊತ್ತವನ್ನು ಹೆತ್ತವರ ಕೈಗೆ ಒಪ್ಪಿಸದೆ ಹೆಣ್ಣನ್ನು ಮುಟ್ಟಲು ಬಿಡುವವಳಲ್ಲ. ಹಣಕ್ಕೆಲ್ಲಿಯಾದರೂ ಮೋಸ ಮಾಡಿದನೆಂದಾದರೆ ಆ ದಲ್ಲಾಳಿಯನ್ನು ಕಕ್ಕಿಸಿಬಿಡುವ ಛಾತಿ ಇರುವವಳು. ಹಾಜಿಮಳಿಗೊಮ್ಮೆ ಹೆಣ್ಣು ಹೆತ್ತವರು ಜವಾಬ್ದಾರಿ ವಹಿಸಿಬಿಟ್ರೆ ಯಾವುದಕ್ಕೂ ತಲೆ ಕೆಡಿಸ್ಕೊಬೇಕಾಗಿಲ್ಲ. ಇಷ್ಟೆಲ್ಲಾ ಅವಳ ಶ್ರಮಕ್ಕೆ ತನ್ನ ಕೇರಿಯ ಜನರಿಂದ ಹಾಜಿಮಾ ಚಿಕ್ಕಾಸನ್ನೂ ಪಡೆಯುತ್ತಿರಲಿಲ್ಲ. ಯಾರಾದರೂ ಕೊಡಲು ಬಂದರೆ "ಅದೆಲ್ಲಾ ಎಂತಕ್ಕೆ? ನಿಮ್ ಕಣ್ಣೀರಿನ ಹಣ ತಕ್ಕೊಂಡು ನಾನ್ಯಾವ ಜಹನ್ನುಮ್‌ಗೆ ಹೋಗಲಿ!" ಎಂದುಬಿಡುತ್ತಿದ್ದಳು.

ಕೇರಿಯ ಹೆಣ್ಣುಮಕ್ಕಳ ಮದುವೆಯ ವ್ಯವಹಾರದಲ್ಲಿ ತಾನೇ ಮುಂದೆ ನಿಂತು ಕೆಲಸ ಮಾಡುವಳಾದರೂ ತನ್ನ ಮಕ್ಕಳಿಬ್ಬರ ಮದುವೆಯ ವ್ಯವಹಾರದ ಬಗ್ಗೆ ದಲ್ಲಾಳಿಗಳು ಮಾತಾಡುವಾಗ ತನ್ನ ಮಗನನ್ನು ಬೊಟ್ಟು ಮಾಡಿ ತೋರಿಸಿದ್ದಳು. "ಅವನೇ ನಿಕಾಹದ ದಿವ್ಸ ಕೈ ನೀಡುವವನು. ಅವ್ನನ್ನು ಕೇಳದೆ ನಾನೇನೂ ಹೇಳೋದಿಲ್ಲ" ಎಂದುಬಿಡುತ್ತಿದ್ದಳು. ಸಿಟ್ಟುಬಂದಾಗಲೆಲ್ಲ "ಹೆಂಡ್ತಿ ಮನೇಲಿ ಬಿದ್ದಿರೋ ಬಿಕ್ನಾಸಿ" ಎಂದು ಒಂದಷ್ಟು ಬೈದರೂ ಮಗ ಮಮ್ಮುಟ್ಟಿ ಮನೆಕಡೆ ಅಪರೂಪಕ್ಕೊಮ್ಮೆ ಬಂದು ಒಂದೈದು ರೂಪಾಯಿ ಕೈಗೆ ಹಾಕಿದರೆ ಸಾಕು, ಅವನಿಗೆ ಹತ್ತು ರೂಪಾಯಿಯ ತಿಂಡಿ ತಿನ್ನಿಸುವಳು.

"ಮುಮ್ಮುಟ್ಟಿ, ಹಫ್ಸಾ, ಜುಲೇಖಾರು ಹ್ಯಾಗೂ ಅರಬರನ್ನು ಮದ್ವೆಯಾದ ದ್ದಾಯ್ತು. ನಫೀಸಳನ್ನಾದರೂ ಈ ಉರುಳಿನಿಂದ ಪಾರುಮಾಡಬೇಕಲ್ಲ ಮಗಾ – ನಿನ್ಸೆಂಡ್ತಿ ಕಡೆಯುವರ ಸಹಾಯದಿಂದ್ಲಾದ್ರೂ ಊರಕಡೆಯು ಒಂದು ಹುಡುಗನನ್ನು ಗೊತ್ತು ಮಾಡ್ಬೇಕಪ್ಪಾ–" ಎಂದು ತನ್ನ ಆಸೆಯನ್ನು ತೋಡಿ ಕೊಳ್ಳುವಳು.

ಅಜ್ಜಿ ಗುಡಿಸಲೊಳಗೆ ಬಂದದ್ದು ಕಂಡು ಜುಲೇಖಾ ಮತ್ತು ಹಫ್ಸಾರ ಮಕ್ಕಳೆಲ್ಲ ಒಮ್ಮೆಲೇ ಮೌನವಾಗಿ ಕುಕ್ಕರು ಕೂತು ಪಿಳಿಪಿಳಿ ನೋಡತೊಡಗಿ ದ್ದವು.

ಮನೆಯ ಮೂಲೆಯಲ್ಲಿ ಹಾಜಿಮ ಸಾಕಿದ ಹೇಂಟೆಯೊಂದು ಮುದುಡಿ ಕೂತಿತ್ತು. ಅದರ ಏಳೆಂಟು ಮರಿಗಳು ತಾಯಿಯ ಹೊಟ್ಟೆಯಡಿಯಲ್ಲಿ ಬೆಚ್ಚನೆ ಕೂತು ತಲೆಯನ್ನಷ್ಟೇ ರೆಕ್ಕೆಗರಿಗಳೆಡೆಯಿಂದ ಹೊರಚಾಚಿ "ಚಿಂವ್ – ಚಿಂವ್" ಗುಟ್ಟುತ್ತಾ ಆಕಡೆ ಈಕಡೆ ಅಚ್ಚರಿಯಿಂದ ನೋಡುತ್ತಿದ್ದವು. ಹುಂಜ ವೊಂದು ಅಲ್ಲೇ ಕವುಚಿಹಾಕಿದ್ದ ಬುಟ್ಟಿಯಮೇಲೆ ಠೀವಿಯಿಂದ ಕೂತಿತ್ತು. ಹೊರಗಿನಿಂದ ತಣ್ಣನೆ ಗಾಳಿ ಬೀಸಿದಂತೆ ಅಲ್ಲಿಂದಲೇ "ಕೊಕ್ – ಕೊಟ – ಕೊಟ–" ಮಾಡಿ ಹೇಂಟೆಯನ್ನು ಪ್ರಣಯಕ್ಕೆ ಕರೆಯತೊಡಗಿತು. ಹೇಂಟೆ ಇದರತ್ತ ಗಮನಕೊಡದೆ ಮರಿಗಳನ್ನು ಬೆಚ್ಚಗಿಡುತ್ತ ಸುಮ್ಮನೆ ಕೂತಿತ್ತು.

ಹಾಜಿಮ ಎಲೆ ಅಡಿಕೆ ತಂದು ಜಗಿಯುತ್ತ ಕೂತಳು. ನಫೀಸಾ ಸೈದುಕೋಯರ ಮನೆಗೆ ಮನೆಕೆಲಸಕ್ಕೆಂದು ಹೋದವಳು ಹಿಂತಿರುಗಿ ಬಂದಿರ ಲಿಲ್ಲ. ಎಲ್ಲಿ ಬರುವಾಗ ಮಳೆಹೊಡೆದರೆ ನನ್ನ ಮಗು ಏನು ಮಾಡ್ತದೋ ಅನ್ನೋ ಯೋಚನೆ ಮುತ್ತಿತ್ತು. ಹೊಟ್ಟೆತುಂಬ ಉಣ್ಣುವಷ್ಟು ಇದ್ದಿದ್ದರೆ ನಫೀಸಾ ಅವರ ಮನೆ ಮುಸುರೆ ತಿಕ್ಕೊ ಅಗತ್ಯವಿರಲಿಲ್ಲ. ಮಳೆಗಾಲದಲ್ಲಿ ಅತ್ತ ಅರಬರ ಮುಂಜಿಗಳು ಸ್ವದೇಶಕ್ಕೆ ತೆರಳುವಷ್ಟರಲ್ಲಿ ಹಫ್ಸಾ ಜುಲೇಖಾರ ಮಹರಿನ ಹಣ ಮನೆಯಲ್ಲಿ ಖಾಲಿಯಾಗಿರುತ್ತದೆ. ನಫೀಸಾಳು ಸೈದು ಕೋಯರ ಮನೆಕೆಲಸಕ್ಕೆ ಹೋದರೆ ಎರಡು ಹೊತ್ತು ಒಲೆಯಲ್ಲಿ ಹೊಗೆ ಯಾಡುತ್ತದೆ.

ತಮ್ಮ ಈ ಸ್ಥಿತಿಯ ಬಗ್ಗೆ ಹಾಜಿಮಳಿಗೆ ಯಾರ ಮೇಲೂ ಸಿಟ್ಟಿಲ್ಲ. ಅರಬರ ಮೇಲೆ ಕೂಡ ಇಲ್ಲ. ಅರಬರು ಬಂದು ನಮ್ಮ ಹೆಣ್ಮಕ್ಕಳನ್ನು ಮದುವೆಯಾಗೋದರಿಂದ ನಾವು ಬದುಕುತ್ತಿರೋದು ಎನ್ನುತ್ತಾಳೆ ಹಾಜಿಮಾ. ನಫೀಸಾ ಸೈದುಕೋಯರ ಮನೆಯಲ್ಲಿ ಕೆಲಸಕ್ಕಿರುವುದರಿಂದ ಎಂದಾದರೊಮ್ಮೆ ಅವರಲ್ಲಿಗೆ ಹಾಜಿಮ್ಮ ಹೋಗಿ ಬರುವುದಿದೆ. ಆಗೆಲ್ಲ ಆ ಕುಟುಂಬವನ್ನು

ನೋಡಿಬಂದವಳು ತಮ್ಮ ಜೀವನದೊಂದಿಗೆ ತುಲನೆ ಮಾಡುತ್ತ "ಈ ಮಲಾಮತ್ ಬದುಕಿನಿಂದ ನಮಗೆ ಬಿಡುಗಡೆ ಯಾವಾಗ ರಬ್ಬೇ—" ಎಂದುಕೊಳ್ಳುತ್ತಿದ್ದಳು.

ಜುಲೇಖಾ ತನ್ನ ಮಗುವನ್ನು ಯಾವುದೋ ಮಾಪ್ಪೈ ಪಾಟ್ಟಿನ ಸೊಲ್ಲೊಂದನ್ನು ಗುಣಿಗುಣಿಸುತ್ತಾ ಒಳಗೆ ಮಲಗಿಸುತ್ತಿದ್ದಳು. ಹಫ್ಸಾ ಒಲೆಯಲ್ಲಿ ಬೆಂಕಿ ಮಾಡೋದಕ್ಕೆ ಪ್ರಯತ್ನ ಮಾಡುತ್ತಿದ್ದಳು. ಹೊರಗೆ ನೋಡುತ್ತಾ ಕೂತ ಹಾಜಿಮಳ ಕಣ್ಣುಮುಂದೆ ತನ್ನ ಕಳೆದ ಬದುಕಿನ ಚಿತ್ರಗಳು ಒಂದೊಂದಾಗಿ ಮೂಡುತ್ತಿದ್ದವು.

* * *

ನಫೀಸಾ ಸೈದುಕೋಯಾರ ಮನೆಯ ಅಡುಗೆಕೋಣೆಯ ಪಾತ್ರೆಗಳನ್ನು ಓರಣವಾಗಿಡುವುದರಲ್ಲಿ ಮಗ್ನಳಾಗಿದ್ದಳು. ಹೊರಗೆ ದಟ್ಟವಾಗುತ್ತಿರುವ ಮೋಡವನ್ನು ಎಣಿಸುತ್ತಾ ತಾನು ಮನೆಗೆ ಹೋಗೋದು ಹೇಗೆ ಅನ್ನೋ ಭಯ ಆವರಿಸಿತ್ತು. ಜುಬೇದಾಳೊಂದಿಗೆ ಒಂದು ಕೊಡೆ ಕೇಳಿ ತಕೊಳ್ಳಬಹುದು. ಆದರೆ ಒಬ್ಬಳೇ ಹೋಗೋದು ಹೇಗೆ? ಇನ್ನೂ ಹಲವಾರು ಕೆಲಸಗಳು ಉಳಿದಿವೆ. ಎಲ್ಲ ಮುಗಿಸುವಾಗ ಮಳೆ ಬಂದು ನಿಲ್ಲಲೂಬಹುದು, ಎಂದುಕೊಂಡು ಕೆಲಸವನ್ನು ಮುಂದುವರಿಸಿದಳು.

ಸೈದುಕೋಯಾರದ್ದು ದೊಡ್ಡಮನೆ. ಆಸ್ತಿಯೂ ತುಂಬಾ ಇದ್ದುದರಿಂದ ಮದುವೆಯಾದ ಮೂರು ಹೆಣ್ಣು ಮಕ್ಕಳಿಗೆ ಸಂಪ್ರದಾಯದಂತೆ ಮೂರು ಕೋಣೆಗಳನ್ನು ಕೊಡುವ ಬದಲಿಗೆ ಮೂರು ಒಳ್ಳೆಯ ಮನೆಗಳನ್ನೇ ಕಟ್ಟಿಸಿಕೊಟ್ಟಿದ್ದರು. ಕೊನೆಯವಳು ಜುಬೇದಳನ್ನು ಮಾತ್ರ ತನ್ನ ಮನೆಯಲ್ಲೇ ಇರಿಸಿಕೊಂಡಿದ್ದರು. ತಮ್ಮ ನಂತರ ತಾವಿರುವ ಮನೆ ಅವಳಿಗೇನೇ ಅಂತ ಅವರ ಲೆಕ್ಕಾಚಾರ. ಮದುವೆಯಾದ ಹೆಣ್ಣುಮಕ್ಕಳು ತಾಯಿಯ ಮನೆಯಲ್ಲೇ ಇರಬೇಕಾದದ್ದು ಕೋಯಾ ಮನೆತನದ ಸಂಪ್ರದಾಯ. ಗಂಡಂದಿರು ದಿನವೂ ಬಂದು ಹೋಗಬೇಕು. ಜುಬೇದಾಳ ಗಂಡ ದುಬೈಯಲ್ಲಿ ಕೆಲಸ ಮಾಡುತ್ತಿದ್ದ, ಜುಬೇದಾಳಿಗೂ ನಫೀಸಾಳಿಗೂ ಬಾಲ್ಯದ ಗೆಳೆತನ. ಅರಬಿ ಮದ್ರಸದಲ್ಲಿ ಅಲಿಫ್... ಬ... ತ... ಸ ಓದುವಾಗಿನ ಗೆಳೆತನ. ಆಗಾಗ ಮನೆಗೂ ಬರುತ್ತಿದ್ದ ನಫೀಸಳನ್ನು ಕಂಡರೆ ಸೈದುಕೋಯಾರ ಹೆಂಡತಿ ಷರೀಫಮ್ಮನಿಗೂ ಇಷ್ಟ. ಅವಳ ಮುದ್ದಾದ ಮುಖ, ನೀಳಜಡೆ, ಮೊಗ್ಗಿನಂತಹ ತುಟಿ, ಚುರುಕು ಕಣ್ಣುಗಳು. ತನ್ನ ಮಗಳಿಗಿಂತಲೂ ಬಿಳಿ ಚರ್ಮದ

ಸುಂದರ ಮಗುವನ್ನು ಕಂಡಾಗ ಸಂತೋಷವಾಗುತ್ತಿತ್ತು. ಜೊತೆಗೆ ಈ ಮಗು ವಿನ ಮೇಲಿನ ಅರಬ್ ಮುದ್ರೆ ನೆನಪಾಗುತ್ತಲೇ ತಿರಸ್ಕಾರ ಉಂಟಾದರೂ 'ಇದರದ್ದೇನು ತಪ್ಪು ?' ಎಂದುಕೊಳ್ಳುತ್ತಿದ್ದರು. ನಫೀಸ ತನ್ನ ಜುಬೇದಾಳಿಗೆ ಸಂಗಾತಿಯಾಗುತ್ತಾಳೆಂದುಕೊಂಡು ಹಾಜಿಮಾಳೊಂದಿಗೆ ಮಾತಾಡಿ ಮನೆಕೆಲಸಕ್ಕೆ ಗೊತ್ತುಮಾಡಿಕೊಂಡಿದ್ದರು.

ಮನೆಯಲ್ಲಿರುವ ಇನ್ನೊಂದು ಮನುಷ್ಯ ಸೈದುಕೋಯಾರ ಒಬ್ಬನೇ ಮಗ ಸಲೀಮ್. ಅವನು ಕಾಲೇಜಿನಲ್ಲಿ ಓದುತ್ತಿದ್ದ. ತನ್ನ ಕೋಣೆಯಲ್ಲಿ ರಾಶಿರಾಶಿ ಪುಸ್ತಕ ಹಾಕಿಕೊಂಡು ಯಾವಾಗಲೂ ಓದುತ್ತಾ ಇರುತ್ತಿದ್ದ. ಈ ಮನೆಯಲ್ಲಿ ನಫೀಸಳಿಗೆ ಎಲ್ಲರೂ ಮೆಚ್ಚಿನವರಾಗಿದ್ದರು. ಇತ್ತೀಚೆಗೆ ಉದ್ದ ಕೂದಲು ಬಿಟ್ಟು, ಕುತ್ತಿಗೆಯಲ್ಲಿ ಮಲ್ಲಿಗೆಯ ಮಾಲೆಯಂತಹ ಕಸೂತಿ ಹಾಕಿದ ಜುಬ್ಬಾ ತೊಟ್ಟು ಯಾವಾಗಲೂ ಯಾವ ಬಗ್ಗೆಯೋ ಆಲೋಚನೆ ಮಾಡುತ್ತ ಮೌನಿಯಾಗಿರುವ ಸಲೀಮ್ ಅತ್ಯಂತ ಪ್ರಿಯ ವ್ಯಕ್ತಿಯಾಗಿದ್ದ.

ನಫೀಸಾ ಅಡುಗೆಕೋಣೆಯ ಪಾತ್ರೆಗಳನ್ನು ಓರಣವಾಗಿಟ್ಟು ಜುಬೇದಾಳ ಕೋಣೆಯ ವಸ್ತ್ರಗಳನ್ನು ಮಡಚಿಡಲು ಹೋದಳು. ಕೋಣೆಯಲ್ಲಿ ಜುಬೇದ ಪತ್ರವೊಂದನ್ನು ಓದುವುದರಲ್ಲಿ ತಲ್ಲೀನಳಾಗಿದ್ದಳು. ಆಗಾಗ ಮುಗುಳ್ನಗುತ್ತಿದ್ದಳು. ಅವಳ ಬಿಳಿ ಗಲ್ಲ ಕೆಂಪೇರಿತ್ತು. ಮಗು ಹಾಸಿಗೆಯಲ್ಲಿ ಮಲಗಿತ್ತು. ಗಂಡ ಕೊಟ್ಟ ಟೇಪ್‌ರಿಕಾರ್ಡರು 'ಮಾಪ್ಪಿಳೆ ಪಾಟ್ಟ'ನ್ನೂ ಹಾಡುತ್ತಿತ್ತು. ಅದರಲ್ಲಿ 'ಮಯಿಲಾಂಜಿ ಪಾಟ್ಟ್' ನಫೀಸಾಳಿಗೆ ಪ್ರಿಯವಾದ ಹಾಡು, ಮದುವೆಯ ಮುಂಚಿನ ದಿನ ಮದುಮಗಳ ಕೈಗೆ ಮದುರಂಗಿ ಹಚ್ಚುತ್ತಾ ಹೆಂಗಳೆಯರು ಹಾಡುವ ಹಾಡು. ಜುಬೇದಾಳಿಗೂ ಮುಂಚೆ ಈ ಹಾಡು ಅತ್ಯಂತ ಪ್ರಿಯವಾಗಿತ್ತು. ಆದರೆ ಈಗ 'ದುಬ್ಯಾಖತ್ತ್' ಪಾಟ್ಟು ಹಾಕಿ ಕೇಳುತ್ತಾ ಇರುತ್ತಾಳೆ. "ಇತ್ತರೆಯುಂ ಬಹುಮಾನಪ್ಪೆಟ್ಟೆ ಯಂಡೆ ಪ್ರಿಯ..." ಎಂದು ಹಾಡು ಶುರುವಾದಂತೆ ರೋಮಾಂಚನಗೊಳ್ಳುತ್ತಾಳೆ. ಕೇಳಿ ಕೇಳಿ ಮನೆಮಂದಿಗೆಲ್ಲ ತಲೆಚಿಟ್ಟು ಹಿಡಿದಂತಾಗಿದ್ದರೂ ಅವಳಿಗೆ ಮಾತ್ರ ತೃಪ್ತಿಯಿಲ್ಲ. ದುಬ್ಯಾಯಲ್ಲಿರುವ ತನ್ನ ಗಂಡನಿಗೆ ವಿರಹಿ ಹೆಂಡತಿ ತನ್ನ ಮನಸ್ಸಿನ ತೊಳಲಾಟ, ಪ್ರೀತಿ, ಚಡಪಡಿಕೆಯನ್ನು ಪತ್ರದ ಮೂಲಕ ಹೇಳುವ ಈ ಹಾಡು ತನಗೆ ಅತ್ಯಂತ ಇಷ್ಟವಾದದ್ದು ಅಂತ ಜುಬೇದ ಹೇಳುತ್ತಿರುತ್ತಾಳೆ.

ಜುಬೇದ ತನ್ನ ಗಂಡನಿಗಾಗಿ ಕಾತರದಿಂದ ಕಾಯುತ್ತಿರುವುದು, ದಿನಕ್ಕೊಂದು ಪತ್ರ ಬರೆಯುತ್ತಿರುವುದು, ಪತ್ರ ಓದುವಾಗಲೆಲ್ಲ ಗಲ್ಲ ಕೆಂಪಾಗುವುದು ಇವೆಲ್ಲ ನಫೀಸಳಿಗೆ ಹೊಸತು. ತನ್ನ ಮನೆಯಲ್ಲಿ ಅಕ್ಕಂದಿರು ಯಾರೂ

ಗಂಡನ ಪತ್ರದ ಬಗ್ಗೆ ಒಮ್ಮೆ ಕೂಡ ಮಾತಾಡಿದ್ದು ನೆನಪಿಲ್ಲ. ಮದುವೆಯೂ ಅಷ್ಟೇ ಗುಟ್ಟಾಗಿ ಕಣ್ಣು ತೆರೆಯುವಷ್ಟರಲ್ಲಿ ಮುಗಿದಿರುತ್ತದೆ. 'ಮಯಿಲಾಂಜಿ ಪಾಟ್ಟ್' ಹೇಳಿ ಮದುರಂಗಿ ಕೈಗಿಡುವುದೂ ಇಲ್ಲ. ಸಿಂಗರಿಸುವುದೂ ಇಲ್ಲ. ಉಟ್ಟ ಉಡುಪಿನಲ್ಲೇ ಎಲ್ಲ ಮುಗಿದುಹೋಗುತ್ತದೆ. ಅಚ್ಚುಕೋಯ ಪ್ರತಿ ವರ್ಷ ಊರಿಗೆ ಬಂದ ಹೊಸ ಹೊಸ ಅರಬರ ನೆಂಟಸ್ಥಿಕೆ ತರುತ್ತಾನೆ. ಪ್ರತಿ ವರ್ಷವೂ ಮಳೆಗಾಲ ಬರುವ ಮುಂಚೆ ಅರಬ ಗಂಡಂದಿರು ತಮ್ಮ ದೇಶಕ್ಕೆ ಹೊರಟು ಹೋಗುತ್ತಾರೆ. ಅರಬರು ಊರಲ್ಲಿ ಇದ್ದಷ್ಟು ದಿನ ಅವರು ತಂಗಿ ರುವ ಹೊಟೇಲಿನ ಕೋಣೆಗೆ ಸಂಜೆ ಹೋಗಿ ಬೆಳಿಗ್ಗೆ ಹಿಂತಿರುಗುತ್ತಾರೆ. ಒಮ್ಮೆ ಅರಬ ಗಂಡಂದಿರು ಊರುಬಿಟ್ಟು ಹೋದರೆಂದರೆ ಸಂಬಂಧ ಮುಗಿ ದಂತೆಯೇ. ಅಕ್ಕಂದಿರ ಗಂಡಂದಿರು ಪತ್ರ ಬರೆಯುವುದೂ ಇಲ್ಲ. ಅವರ ಪತ್ರ ಬರುತ್ತದೆಂದು ಅಕ್ಕಂದಿರು ಕಾದು ಕೂತಿರೋದೂ ಇಲ್ಲ. ಒಂದೇ ಒಂದು ಸಮಾನ ಅಂಶವೆಂದರೆ ಅವರು ಊರುಬಿಟ್ಟಾಗ ಇವರು ಇಲ್ಲಿ ಗರ್ಭಿಣಿಯರಾಗಿರೋದು. ಜುಬೇದಾಳಂತೆಯೇ ಇವರೂ ಮುದ್ದಾದ ಮಕ್ಕ ಳನ್ನು ಹೆತ್ತಿರೋದು. ಜುಬೇದ ತನ್ನ ಮಗುವನ್ನು ಆರೈಕೆ ಮಾಡಿದಂತೆ ನಫೀಸಾಳ ಅಕ್ಕಂದಿರೆಲ್ಲಿ ಮಾಡುತ್ತಾರೆ ? ಜುಬೇದಾಳಿಗೆ ಪ್ರತಿತಿಂಗಳೂ ಡ್ರಾಫ್ಟು, ಜೊತೆಗೆ ಆಗಾಗ ಮಗುವಿಗೆ ಅಂಗಿ, ಆಟಿಕೆಗಳ ಪಾರ್ಸೆಲು ಬರು ತ್ತದೆ. ಮಗುವನ್ನು ಜುಬೇದಾ ತನ್ನ ಗಂಡ ಕೊಟ್ಟು ಹೋದ ಕಾಣಿಕೆ ಎನ್ನು ತ್ತಾಳೆ. ಆದರೆ ನಫೀಸಾಳ ಅಕ್ಕಂದಿರು 'ನಮ್ಮ ಕರ್ಮಕ್ಕೆ ಮಕ್ಕಳೊಂದು ಕೇಡು' ಎಂದು ಸಿಟ್ಟುಬಂದಾಗಲೆಲ್ಲ ಗೊಣಗುತ್ತಿರುತ್ತಾರೆ.

# ಎಂಥ ಸುಂದರ ರಾತ್ರಿ

ನಫೀಸಾ ಬಂದದ್ದು ಜುಬೇದಾಳಿಗೆ ತಿಳಿಯಲಿಲ್ಲ. ಅವಳು ತನ್ನ ಸವಿ ಗನಸಿನ ಲೋಕವನ್ನು ಬಿಟ್ಟೇಳಲಿಲ್ಲ. ನಫೀಸಾ ನಗುತ್ತಾ "ಅದೇನೇ ಜುಬೇದಾ ಗಂಡನ ಖತ್ ಬಂದ ಹಾಗಿದೆ... ನೀನೇನು ನಿದ್ದೆ ಮಾಡ್ತಿದಿಯೊಂದು ಕೊಂಡಿದ್ದೆ" ಎಂದಳು.

"ಹೌದು ನಫೀಸಾ, ಈ ಹೊಟ್ಟೆಪಾಡಿನ ಕರ್ಮವೊಂದಿಲ್ಲದಿದ್ರೆ ಆ ಕಣ್ಣು ಕಾಣದ ದೇಶಕ್ಕೆ ಅವ್ರಾದ್ರೂ ಯಾಕೆ ಹೋಗಬೇಕಿತ್ತು! ಊರಲ್ಲೇ ಅವರಿ ಗೊಂದು ಕೆಲಸ ಸಿಕ್ಕಿದ್ರೆ ಎಷ್ಟು ಚೆನ್ನಾಗಿರ್ತಿತ್ತು! ಈ ಸಲ ಬರುವಾಗ ನಿನಗೆ ವೀಸಾ ತರ್ತೇನೆ ಎಂದಿದ್ದಾರೆ. ಯಾವಾಗ ಬರ್ತಾರೋ ಏನೋ...!" ಎಂದು ಜುಬೇದಾ ನಿಟ್ಟುಸಿರುಬಿಟ್ಟಳು.

ನಫೀಸಾ ಜುಬೇದಳ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ 'ಫೋರೇನ್' ಸೀರೆ ಗಳನ್ನು ಮಡಚಿಡತೊಡಗಿದಳು.

ಜುಬೇದ ಪಡುತ್ತಿರುವ ನೋವು, ಚಡಪಡಿಕೆ, ಆನಂದವನ್ನು ಕಾಣು ವಾಗ ನಫೀಸಾಳಿಗೆ ತಾನೂ ಹಾಗೆ ಅನುಭವಿಸಬೇಕೆನ್ನೋ ಆಸೆಯಾಗುತ್ತಿತ್ತು. "ನಮ್ಮನ್ನು ಪ್ರೀತಿಸೋ ಗಂಡನಿದ್ರೆ ಸಾಕು, ಇನ್ನೇನೂ ಬೇಡ" ಅನ್ನೋ ಜುಬೇದಾಳನ್ನು ಕಂಡರೆ ಯಾರೂ ತನ್ನ ಅಕ್ಕಂದಿರನ್ನು ಪ್ರೀತಿಸದೇ ಇರುವುದ ರಿಂದಲೇ ಇರಬೇಕು. ಯಾವಾಗಲೂ ಅವರು ಸಣ್ಣಪುಟ್ಟ ಕಾರಣಕ್ಕೆ ಜಗಳಾ ಡೂದು, ಮಕ್ಕಳನ್ನ ಹೊಡೆಯುವುದು ಎಂದುಕೊಂಡಳು. ಅಮ್ಮ ಅದಕ್ಕೆ ಆಗಾಗ ಹೇಳುತ್ತಿದ್ದಳು, "ಈ 'ಮುಲಾಮಂತ್' ಬದುಕು ಸಾಕು. ನಮ್ಮ ನಫೀಸ ಳನ್ನಾದರೂ ಊರ ಹುಡುಗನೊಬ್ಬನಿಗೆ ನಿಕಾಹ್ ಮಾಡಿಕೊಡಬೇಕು. ನನ್ನ ಬಾಳಿನಲ್ಲಿ ಪಟ್ಟ ಯಾತನೆ ನಫೀಸಳಾದ್ರೂ ಅನುಭವಿಸಕೂಡದು"–ಅಂತ.

ಸಲೀಮುನನ್ನು ಕಂಡಾಗ ನಫೀಸಳಿಗೆ ಈಗೀಗ ತಾನು ಯಾವುದೋ

ಮೋಡಿಗೊಳಗಾದಂತೆ ಅನ್ನಿಸುತ್ತಿತ್ತು. ಅವನ ಕೋಣೆಯನ್ನು ಶುಚಿಯಾಗಿಡುವುದು, ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಪುಸ್ತಕಗಳನ್ನೆಲ್ಲಾ ಓರಣವಾಗಿಡೂದು, ಒಗೆದು ಇಸ್ತ್ರಿ ಮಾಡಿದ ಅವನ ಬಟ್ಟೆಗಳನ್ನು ಹ್ಯಾಂಗರುಗಳಲ್ಲಿ ಸಿಕ್ಕಿಸಿ ಗಾದ್ರೆಜ್ ಬೀರಿನೊಳಗಿಡುವುದು, ಮುಂತಾದ ಕೆಲಸಗಳನ್ನು ಮಾಡುವುದೆಂದರೆ ಅವಳಿಗೆ ತುಂಬಾ ಸಂತೋಷ. ಅವನಿಗೆ ಸಂಬಂಧಪಟ್ಟ ಕೆಲಸವನ್ನು ಎಷ್ಟು ಮಾಡಿದರೂ ಅವಳಿಗೆ ದಣಿವೆಂಬುದು ಇರಲಿಲ್ಲ. ಅವನ್ನೆಲ್ಲ ಮಾಡಿ ಮುಗಿಸಿದಾಗಲೇ ಅವಳಿಗೆ ತೃಪ್ತಿ ಸಮಾಧಾನ.

ಬೆಳಿಗ್ಗೆ ಅವನು ಹಾಸಿಗೆ ಬಿಟ್ಟು ಏಳುವುದು ಎಂಟು ಗಂಟೆಯ ಹೊತ್ತಿಗೆ. ನಫೀಸಾ ಏಳು ಗಂಟೆಗೆ ಇವರ ಮನೆಗೆ ಬಂದು ಮುಸುರೆ ತಿಕ್ಕೋದು, ಮನೆ ಗುಡಿಸುವುದು ಮಾಡುತ್ತಾಳೆ. ಎಂಟು ಗಂಟೆಯೊಳಗೆ ಎಲ್ಲ ಮುಗಿಸಿ ತೀರಬೇಕು. ಅಡುಗೆ ಮನೆಯಲ್ಲಿ ಷರೀಫಮ್ಮ ತಿಂಡಿ ಮಾಡೋದರಲ್ಲಿ ತೊಡಗಿರುತ್ತಾರೆ. ನಾಷ್ಟಾಕ್ಕೆ 'ಪುಟ್ಟು' ಮತ್ತು ಬೇಯಿಸಿದ ನೇಂದ್ರಬಾಳೆ ಇದ್ದರೆ ಸಲೀಮನಿಗೆ ಇಷ್ಟ. ವಾರದಲ್ಲಿ ಒಂದು ದಿನವಾದರೂ ಇದನ್ನು ಮಾಡಲೇಬೇಕು. ಜೊತೆಗೆ ಪಚ್ಚೆ ಹೆಸರಿನ ಪಲ್ಯ, ಅಥವಾ ಬಾಳೆಹಣ್ಣು ಸಕ್ಕರೆ ಇದ್ದರೆ ಸಲೀಮ ಹೊಟ್ಟೆತುಂಬ ತಿನ್ನುತ್ತಿದ್ದ. ಇಡ್ಲಿ, ದೋಸೆ ಮಾಡಿದಾಗ ಎಷ್ಟಾದರೂ ಅಷ್ಟೇ. ಅವನು ಮಲಗಿರುವಾಗಲೇ ಕೋಣೆಗೆ ಹೋಗಿ ಚಾವನ್ನು ಟೀಪಾಯಿಯ ಮೇಲಿಟ್ಟು ಬಾತ್‌ರೂಮಿನಲ್ಲಿ ಟೂತ್‌ಪೇಸ್ಟು, ಬ್ರುಶ್, ವಾಶ್‌ಬೇಸಿನ್ನಿನ ಹತ್ತಿರ ಟವೆಲು ಇಟ್ಟು ಬರುತ್ತಿದ್ದಳು. ಅವನು ಎದ್ದು ಬಾತ್‌ರೂಮಿಗೆ ಹೋಗುವವರೆಗೆ ಮತ್ತೆ ನಫೀಸಾ ಕೋಣೆಯೊಳಗೆ ಬರುತ್ತಿರಲಿಲ್ಲ. ಅವನು ಬಾತ್‌ರೂಮಿನೊಳಗೆ ಹೋದ ಕೂಡಲೇ ಅವನ ಕೋಣೆಯನ್ನು ಗುಡಿಸಿ, ಹಾಸಿಗೆ ಕೊಡವಿ ಸರಿಮಾಡಿಟ್ಟು ಕೋಣೆಯಿಂದ ಮಾಯವಾಗಿ ಬಿಡುತ್ತಾಳೆ.

ಸಂಜೆ ಸಲೀಮ ಮನೆಗೆ ಹಿಂತಿರುಗಿದಾಗಲೂ ಚಾ ತಿಂಡಿ ತಂದು ಟೀಪಾಯಿಯ ಮೇಲಿಡುತ್ತಾಳೆ. ಅವನು ಶರ್ಟು, ಪ್ಯಾಂಟುಗಳನ್ನು ಹಾಸಿಗೆಯ ಮೇಲಿಟ್ಟು ಲುಂಗಿಯುಟ್ಟು ಕೈಕಾಲು ಮುಖ ತೊಳೆಯಲೆಂದು ಬಾತ್‌ರೂಮಿಗೆ ಹೋದಾಗ ಮತ್ತೆ ನಫೀಸಾ ಕೋಣೆಯೊಳಗೆ ಬರುತ್ತಾಳೆ. ಶರ್ಟು ಪ್ಯಾಂಟುಗಳನ್ನು ತೆಗೆದು ಹ್ಯಾಂಗರಿನಲ್ಲಿ ಸಿಕ್ಕಿಸಿಟ್ಟು ಅಲ್ಲಿಂದ ಚಂಗನೆ ಮಾಯವಾಗಿಬಿಡುತ್ತಾಳೆ.

ಸಲೀಮನ ಈ ಕೆಲಸಗಳೆಲ್ಲ ಅವಳಿಗೆ ಅತ್ಯಂತ ಪ್ರಿಯವೆನಿಸಿದರೂ ಅವಳು ಅವನ ಕಣ್ಣಮುಂದೆ ಹೆಚ್ಚು ಹೊತ್ತು ನಿಂತವಳಲ್ಲ. ಮುಸ್ಲಿಮ್ ಹುಡುಗಿಯರು ಪರ ಪುರುಷನ ಮುಂದೆ ನಿಂತು ಮಾತಾಡೋದು, ಎದುರಲ್ಲಿ ಓಡಾಡು

ವುದು ತಪ್ಪಲ್ಲವೇ ? ತಾನಿರುವ ಗಂಡಿಸಲು ಕೇರಿಯಲ್ಲಿ ಈ ಬಗೆಯ ಯಾವ ಕಟ್ಟುನಿಟ್ಟು ಇರದಿದ್ದರೂ ಸೈದುಕೋಯಾರಂತಹ ಪ್ರಮುಖ ವ್ಯಕ್ತಿಯ ಮನೆಯಲ್ಲಿ ಇದನ್ನು ಪಾಲಿಸದಿದ್ದರೆ ಮತ್ತೆಂಥಾ "ಇಸ್ಲಾಮು" ಮಂದಿ ? ದಿನ ಕಳೆದಂತೆ ನಫೀಸಾ ಸೈದುಕೋಯಾರವರ ಮನೆ ಮಂದಿಯಲ್ಲಿ ಓರ್ವಳೇ ಆಗಿ ಹೋದರೂ ಸಲೀಮನ ಮುಂದೆ ಸಲೀಸಾಗಿ ಓಡಾಡುವುದಕ್ಕೆ ಮಾತಾಡುವುದಕ್ಕೆ ತುಂಬಾ ನಾಚುತ್ತಿದ್ದಳು.

ಅವಳ ಆಸ್ಥೆ, ಆದರ, ಒಂದೂ ಸಲೀಮನ ಗಮನಕ್ಕೆ ಬಂದಿರಲಿಲ್ಲ. ಅವನು ಒಮ್ಮೆಯೂ ಅವಳ ಕೆಲಸಕ್ಕೆ ಮೆಚ್ಚುಗೆ ಸೂಚಿಸುವುದಾಗಲೀ, ಕೆಲಸ ಮಾಡಿದವರ ಬಗ್ಗೆ ವಿಚಾರಿಸುವುದಾಗಲೀ ಮಾಡಿರಲಿಲ್ಲ. ತನ್ನಷ್ಟಕ್ಕೆ ಕೂತು ಪುಸ್ತಕ ಓದುವುದು, ಏನನ್ನೋ ಯೋಚಿಸುವುದು ಎಂದಿನಂತೆ ನಡೆದಿತ್ತು.

ಒಮ್ಮೊಮ್ಮೆ ಸಲೀಮನ ಈ ಬಗೆಯ ಪ್ರತಿಕ್ರಿಯೆಯಿಂದ ನಫೀಸಾ ನೊಂದುಕೊಳ್ಳುವಳಾದರೂ, ತಾನು ಅವನ ಕೆಲಸ ಮಾಡುತ್ತಿರುವುದು ಅವನನ್ನು ತೃಪ್ತಿಪಡಿಸಲಿಕ್ಕಲ್ಲವಲ್ಲ. ತಾನು ಪಡೆಯುವ ಸಂಬಳಕ್ಕಾಗಿಯೇ ಅಲ್ಲವೇ ಎಂದುಕೊಳ್ಳುತ್ತಿದ್ದಳು. ಆದರೂ ಕುತೂಹಲ ತಡೆಯಲಾರದೆ ಒಮ್ಮೆ ಜುಬೇದಾಳೊಂದಿಗೆ ಕೇಳಿದ್ದಳು. "ಜುಬೇದಾ ನಿನ್ನಣ್ಣ ಯಾಕೆ ಯಾವಾಗ್ಲೂ ಒಂಥರಾ ಸಪ್ಪೆಯಾಗಿರ್ತಾರೆ ?" ಜುಬೇದಾ, "ಅವನ ಗುಣವೇ ಅಷ್ಟೆ. ಯಾರ ಜೊತೆಗೂ ಹೆಚ್ಚು ಮಾತಾಡೊದೇ ಇಲ್ಲ, ಅವನಾಯ್ತು ಅವನ ಪುಸ್ತಕಗಳಾಯ್ತು, ಈಗ ಎಮ್.ಎ. ಪಾಸು ಮಾಡಿದ್ದಾನೆ. ಕಲ್ಲಿಕೋಟೆಯ ಕಾಲೇಜಿನಲ್ಲಿ ಲೆಕ್ಚರರ್ ಆಗ್ತಾನೆ. ಮಕ್ಕಳಿಗೇನು ಹೇಳಿಕೊಡ್ತಾನೋ ?" ಎಂದು ಹೇಳಿದ್ದಳು. ನಫೀಸಾಳ ಕುತೂಹಲ ತಣ್ಣಗಾಗಿರಲಿಲ್ಲ. ಸ್ವಲ್ಪಹೊತ್ತು ಬಿಟ್ಟು ಜುಬೇದಾ ಮಾತು ಮುಂದುವರಿಸಿದ್ದಳು.

"ಮುಂಚೆ ಅಣ್ಣ ಹೀಗಿರಲಿಲ್ಲ, ಅವನು ಎಲ್ಲರೊಂದಿಗೂ ಮಾತಾಡುತ್ತಿದ್ದ, ನಗುತ್ತಿದ್ದ, ಜಗಳಾಡ್ತಿದ್ದ. ಅದೆಲ್ಲಾ ಅವ್ಳೊಬ್ಳು ಅವ್ನಿಗೆ ಮಂಕುಬೂದಿ ಎರಚುವ ಮುಂಚೆ ಮಾತ್ರ. ಅದ್ಯಾವ್ಳೋ ಒಬ್ಳ ಜೊತೆ ಕಾಲೇಜಿನಲ್ಲಿ ಸ್ನೇಹವಾಯ್ತಂತೆ. ಅವಳ ಜಾತಿಕೂಡ ಬೇರಾವುದೋ ಅಂತೆ. ನಂಗೆ ಅವ್ಳ ಹೆಸರು ಕೂಡ ಗೊತ್ತಿಲ್ಲ. ಅವಳ ಜೊತೆ ಪಿಕ್ಚರಿಗೆ ಹೋಗ್ತಿದ್ನಂತೆ. ಅಲ್ಲಿ ಇಲ್ಲಿ ಸುತ್ತಾಡುತ್ತಿದ್ನಂತೆ. ಮನೆಯಲ್ಲಿ ಒಂದೂ ಗೊತ್ತಾಗ್ತಿರ್ಲಿಲ್ಲ. ಸಿಕ್ಕಾಪಟ್ಟೆ ಹಣ ಖರ್ಚು ಮಾಡ್ತಿದ್ದ. ಒಬ್ನೇ ಮಗನಲ್ವಾಂತ ಅಪ್ಪ ಅವನು ಕೇಳಿದಕ್ಕೆ ಇಲ್ಲಾನ್ನದೆ ಕೊಡ್ತಿದ್ರು. ಕೊನೆಗೊಮ್ಮೆ ಎಲ್ಲಾ ನಿಂತುಬಿಡ್ತು. ಮಾತಾಡಿಸಿದರೆ ಬೆಚ್ಚಿಬಿದ್ದು 'ಹೂಂ, ಹಾಂ' ಅನ್ನುತ್ತಿದ್ದ. ನಾವೆಲ್ಲ ಅವನ ಅವಸ್ಥೆ

ಕಂಡು ಭಯ ಪಟ್ಟು ಯಾರಾದರೂ ಮಾಟಗೀಟ ಮಾಡಿರಬಹುದೇ ಎಂದು ಮಾತಾಡತೊಡಗಿದೆವು. ಅಪ್ಪನಿಗೆ ಅದರಲ್ಲೆಲ್ಲಾ ನಂಬಿಕೆ ಇಲ್ಲದಿದ್ದರಿಂದ ಅವರು ಅವನ ಸಹಪಾಠಿಗಳೊಡನೆ ವಿಚಾರಿಸಿದರು. ಆಗ಼್ೆ ತಿಳ್ದದ್ದು ಅವನ ಪ್ರೇಮ ವ್ಯವಹಾರ. ಆ ಹುಡುಗಿಯ ಮನೆಯವ್ರು ಈ ಬಗ್ಗೆ ತಿಳಿದು ಕಾಲೇಜು ಬಿಡಿಸಿ ಕೂಡ್ಲೆ ಮದುವೆ ಮಾಡ್ಸಿಬಿಟ್ರಂತೆ. ಅಪ್ಪ, ಇದ್ನೆಲ್ಲಾ ಹೇಳಿದವ್ರು, "ಯಾರೂ ಅವನೊಡನೆ ಈ ಬಗ್ಗೆ ಕೇಳ್ಬೇಡಿ. ಅವ್ನಾಗಿ ಹಚ್ಕೊಂಡದ್ದನ್ನ ಅವನಾಗಿಯೇ ಬಿಟ್ಟುಬಿಡ್ಲಿ" ಅಂದ್ರು. ಇಂದಿಗೂ ಅವ್ನ ಬಿಟ್ಟಹಾಗೆ ತೋರೋದಿಲ್ಲ. ಆದ್ರೆ ಮುಂಚಿಗಿಂತ ಈಗ ಎಷ್ಟೋ ವಾಸಿ. ಅವ್ನ ಮುಂಚಿನಂತೆ ನಗ್ತಾ ಇದ್ರೆ ಸಾಕು ಅಂತ ಅಲ್ಲಾಹುವಿನೊಂದಿಗೆ ದಿನಾಲೂ ಪ್ರಾರ್ಥನೆ ಮಾಡ್ತಿದ್ದೇವೆ."

ಸೂರ್ಯ ಮುಳುಗುವ ಹೊತ್ತಿಗೆ ಮಳೆ ಹೊಡೆಯತೊಡಗಿತು. ನಫೀಸಾ ಸೈದುಕೋಯಾರ ಮನೆಯಲ್ಲೇ ನಿಲ್ಲಬೇಕಾಯಿತು. ಆಚುಮ್ಮಳ ಮನೆ ಮತ್ತೆ ಬಿತ್ತೋ ಏನೋ ! ಅವಳೆರಡು ಮಕ್ಕಳು ಮಳೆಯಲ್ಲಿ ತೊಯ್ದು ತೊಪ್ಪೆಯಾಗಿ ಹೆದರಿ ನಡುಗುತ್ತ ತಮ್ಮ ಮನೆಯೊಳಗೆ ಬಂದರೇನೋ ಅಂದುಕೊಂಡಳು. ಮನೆಗೆ ಹೊರಟುನಿಂತ ನಫೀಸಾಳನ್ನು ಷರೀಫಮ್ಮ "ಮಳೆ ನಿಂತ ನಂತರ ಹೋಗು, ಹೆಚ್ಚು ದೂರ ಇಲ್ವಲ್ಲಾ ನಿನ್ನ ಮನೆ? ಏನವಸರ?" ಅಂದರು.

ರಾತ್ರಿ ಮಳೆ ನಿಂತಿತು. ಷರೀಫಮ್ಮ "ಇನ್ನು ಊಟ ಮುಗಿಸಿ ಹೋಗು. ನೀನೇನೂ ಹೆದರೋದು ಬೇಡ, ಸಲೀಮನನ್ನು ಕಳಿಸ್ತೇನೆ. ನಿನ್ನನ್ನು ಮನೆಗೆ ಬಿಟ್ಟು ಬರ್ಲಿಕ್ಕೆ ಹೇಳಿದ್ದೇನೆ," ಎಂದು ಒತ್ತಾಯ ಮಾಡಿ ಊಟ ಮಾಡಿಸಿದರು. ಸಲೀಮನನ್ನು ಕರೆದು, "ನಫೀಸಾಳನ್ನು ಸ್ವಲ್ಪ ಅವಳ ಮನೆ ಕಡೆ ಬಿಟ್ಟು ಬಾ ಮಗಾ..." ಅಂತ ಅಂದರು. ಸಲೀಮ "ಸರಿ" ಎಂದು ಟಾರ್ಚು ಹಿಡ್ಕೊಂಡು ಹೊರಗೆ ಹೊರಟ.

ನಫೀಸಾ ಸಲೀಮನನ್ನು ಹಿಂಬಾಲಿಸಿ ನಡೆಯುತ್ತಿರುವಾಗ ಅಮ್ಮ ಕತೆಯಲ್ಲಿ ಹೇಳುವ 'ಜನ್ನತುಲ್ ಫಿರ್‌ದೌಸ್' ಅನ್ನೋ ಸ್ವರ್ಗದಲ್ಲಿ ನಡೆಯುತ್ತಿದ್ದೇನೇನೋ ಎನ್ನುವ ಸುಂದರ ಗುಂಗಿನಲ್ಲಿದ್ದಳು. ಮೋಡಗಳು ಚದುರಿದ ಆಕಾಶದಲ್ಲಿ ಚಂದ್ರ ತನ್ನ ಬಂಗಾರ ವರ್ಣದ ಬೆಳಕನ್ನು ಅಲ್ಲೆಲ್ಲಾ ಹರಡಿದ್ದ. ನಫೀಸಾ ಮದುಮಗಳಂತೆ ನಾಚಿ ಸಲೀಮನ ಹಿಂದೆ ಮೌನವಾಗಿ ನಡೆಯುತ್ತಿದ್ದಳು. ಅವನಿಗೆ ಇಷ್ಟು ಸನಿಹವಾಗಿ ಅವಳೆಂದೂ ಇದ್ದಿರಲಿಲ್ಲ. ಸಲೀಮ ಸುಮ್ಮನಿದ್ದವನಿಗೇನನಿಸಿತೋ ಒಂದು ಕ್ಷಣ ನಿಂತುಬಿಟ್ಟ. ಮಳೆಯಿಂದ

ತೊಯ್ದು ಉದ್ದುದ್ದ ತೆಂಗಿನ ಗಿಡ ಮರದ ಸೋಗೆಗಳು ಬೆಳದಿಂಗಳ ಬಂಗಾರ ವರ್ಣದ ಬೆಳಕನ್ನು ಪ್ರತಿಫಲಿಸುತ್ತಾ ಅಲ್ಲೊಂದು ಸುಂದರ ದೃಶ್ಯವನ್ನು ಸೃಷ್ಟಿ ಸಿತ್ತು. ಪುಟ್ಟ ಪುಟ್ಟ ತೆಂಗಿನ ಸಸಿಗಳು, ಬಿಳಿ ಎಕ್ಕದ ಗಿಡದ ಎಲೆಗಳು ಮಳೆ ಹನಿಗಳನ್ನು ಹೊತ್ತು ನಿಂತಿದ್ದರಿಂದ ತಿಂಗಳ ಬೆಳಕನ್ನು ಪ್ರತಿಫಲಿಸುತ್ತಿದ್ದವು. ಎಲ್ಲವನ್ನೂ ತನ್ನದಾಗಿಸಿಕೊಂಡು ತನ್ನ ಮುಂದ್ರೆಯುನ್ನೊತ್ತಿದ್ದ ಚಂದ್ರನ ಬಗ್ಗೆ ಕ್ಷಣ ಅಸೂಯೆಗೊಂಡ ಸಲೀಮ. ಮರಳು ನೆಲ ಕೂಡ ಬಂಗಾರ ವರ್ಣಕ್ಕೆ ತಿರುಗಿತ್ತು. ಸಮುದ್ರದ ದೊಡ್ಡ ದೊಡ್ಡ ಅಲೆಗಳು ಹೊತ್ತ ನೊರೆಗಳು ಹೊಂಬಣ್ಣದ ಹೊಳಪಿನೊಂದಿಗೆ ನೋಡುವವರನ್ನು ಮುಗ್ಧರನ್ನಾಗಿಸಿತ್ತು. ಆನಂದ ಪರವಶನಾದ ಸಲೀಮ "ಅಬ್ಬಾ! ಎಷ್ಟು ಸುಂದರ!..." ಎಂದು ಉದ್ಗರಿಸಿದವನೇ ನಫೀಸಾಳ ಅಭಿಪ್ರಾಯಕ್ಕಾಗಿ ಹಿಂತಿರುಗಿ ನೋಡಿದ. "ಹಾಂ..." ಎಂದ ನಫೀಸಾ ತನ್ನ ನಾಚಿದ ಮುಖವನ್ನೆತ್ತಿ ನೋಡಿದಳು. ಬೆಳದಿಂಗಳ ಬೆಳಕು ಅವಳ ಮುಖದಲ್ಲೂ ಪ್ರತಿಫಲಿಸಿ ತಲೆಯಿಂದ ಇಳಿಬಿಟ್ಟ ಸೆರಗಿನ ಮಧ್ಯೆ ದುಂಡನೆಯ ಮುಖವನ್ನು ಕಂಡಾಗ ಸಲೀಮನಿಗೆ ಹುಣ್ಣಿ ಮೆಯ ಚಂದ್ರ ಎದುರು ನಿಂತಂತಾಯಿತು. ಅವಳನ್ನು ಮೊತ್ತಮೊದಲನೆಯ ಬಾರಿಗೆ ನೋಡುವಂತೆ ನೋಡುತ್ತ ನಿಂತ.

ತನ್ನನ್ನೇ ನೋಡುತ್ತ ನಿಂತ ಸಲೀಮನನ್ನು ಕಂಡ ನಫೀಸಾ ರೋಮಾಂಚನ ಗೊಂಡು ಸಣ್ಣನೆ ನಡುಗಿದಳು. ತಾನೆಂದೂ ಅನುಭವಿಸಿರದ ಅತ್ಯಂತ ಮಧುರ ವಾದದ್ದೇನೋ ತನ್ನ ಮೈಯ ಕಣಕಣದಲ್ಲಿ ನವಿರಾಗಿ ಹರಿದಂತಾಗಿ ಕಣ್ಣು ಗಳನ್ನು ಅರೆತೆರೆದು ಅವಳು ನಿಂತಿದ್ದಳು.

ತಟ್ಟನೆ ಸಲಿಗೆಯಿಂದ ಅವಳ ಕೈಹಿಡಿದ ಸಲೀಮ "ಬಾ... ಅಲ್ಲಿ ಸಮುದ್ರತೀರದ ಮರಳು ನೆಲದಲ್ಲಿ ಸ್ವಲ್ಪ ಹೊತ್ತು ಕೂತು ಮತ್ತೆ ಹೋಗೋ ಣಂತೆ" ಅಂದ. ನಫೀಸಾಳಿಗೆ ಅವನು ಕೈ ಮುಟ್ಟಿದಾಗ ಬೆಂಕಿಯ ಕೆಂಡ ಕೈಗೆ ತಾಗಿದಂತಾಗಿ ಬೆಚ್ಚಿ ಕೈ ಎಳೆದುಕೊಂಡಳು. ಮತ್ತೆ ಅದೇನೋ ಮೋಡಿ ಗೊಳಗಾದವಳಂತೆ ಅವನ ಹಿಂದೆಯೇ ನಡೆದಳು. ಸ್ವಲ್ಪ ದೂರ ನಡೆದು ಸಮುದ್ರದ ತೆರೆಗಳಿಗೆ ಸಮೀಪವಿದ್ದ ಮರಳು ದಂಡೆಯ ಮೇಲೆ ಕೂತರು. ನಫೀಸಾ ಮುದುಡಿ ಕೂತಿದ್ದಳು. ಸಲೀಮ ಸಮುದ್ರದ ಅಲೆಗಳ ಜೊತೆ ಚೆನ್ನಾಟವಾಡುತ್ತಿರುವ ಚಂದ್ರನ ಬೆಳಕನ್ನೇ ಪರವಶನಾಗಿ ನೋಡುತ್ತಿದ್ದ. ದೂರದಲ್ಲಿ ಮೀನುಗಾರರ ದೋಣಿಯೊಂದು ಹಾಯಿಬಿಟ್ಟುಕೊಂಡು ರಾತ್ರಿ ಮೀನಿನ ಬೇಟೆಗೆ ಹೊರಟಿತ್ತು. ಮಳೆಗಾಲದ ಭೀಕರತೆಯೊಳಗೂ ಈ ಸಾಹಸಿ ಗಳ ಎದೆಗಾರಿಕೆ ನಫೀಸಾಳಿಗೆ ಆಶ್ಚರ್ಯವುಂಟುಮಾಡಿತು. ದಡದಲ್ಲಿದ್ದ

ಮೀನುಗಾರನೊಬ್ಬ ಸಮುದ್ರದ ತೆರೆಗಳೊಂದಿಗೆ ಸೆಣಸಾಡುತ್ತಿರುವ ತನ್ನ ಜೊತೆಗಾರನನ್ನು ಹುರಿದುಂಬಿಸಲೋ ಎಂಬಂತೆ ಹಾಡೊಂದನ್ನು ರಾಗವಾಗಿ ಹಾಡುತ್ತಿದ್ದ. ನಫೀಸಾ ಇಂತಾದ್ದನ್ನು ಸರ್ವಸಾಧಾರಣವಾಗಿ ದಿನವೂ ನೋಡುತ್ತಿರುವವಳಾದರೂ ಇಂದು ಎಲ್ಲ ಹೊಚ್ಚಹೊಸದಾದಂತೆ ಅತ್ಯಂತ ಪ್ರಿಯವಾದಂತೆ ಅನಿಸಿತು. ನಫೀಸಳಿಗೆ ಇಷ್ಟವಾದ ಸಲೀಮನ ಉದ್ದ ದಟ್ಟ ಕೂದಲುಗಳು ತಂಗಾಳಿಯೊಂದಿಗೆ ಆಟವಾಡುತ್ತಿತ್ತು. ಅವನು ಅತ್ಯಂತ ಸಂತೋಷಗೊಂಡವನಂತೆ ಅಲ್ಲೇ ನೆಲಕ್ಕೆ ಒರಗಿದ. ನಫೀಸಾ "ಒದ್ದೆ ಮರಳು..." ಎಂದು ನಕ್ಕಳು. ನೋಡಿ ನಸುನಕ್ಕ. ಎದ್ದು ಬಟ್ಟೆಗೆ ಹತ್ತಿಕೊಂಡ ಮರಳ ಹರಳುಗಳನ್ನು ಕೊಡವಿಕೊಂಡು ಮತ್ತೆ ನಕ್ಕ.

ತನ್ನನ್ನೇ ನೋಡುತ್ತ ನಕ್ಕ ಸಲೀಮನನ್ನು ಕಂಡಾಗ ನಫೀಸಾ ಅತ್ಯಂತ ಖುಷಿಯಾದಳು. ಇಷ್ಟು ಪ್ರಫುಲ್ಲಿತ ನಗೆಯನ್ನು ತಾನು ಕಂಡೇ ಇಲ್ಲವೇನೋ ಎನಿಸುವಷ್ಟು ಅವಳನ್ನು ಆಕರ್ಷಿಸಿತ್ತು. ಆ ನಗೆ ಸಮುದ್ರದಲ್ಲಿ ದೊಡ್ಡ ತೆರೆಯೊಂದು ಎದ್ದು ರಪ್ಪನೆ ದಡಕ್ಕೆ ಅಪ್ಪಳಿಸಿತು. ಹಾಲಿನ ನೊರೆಯ ರಾಶಿಯೊಂದು ಮರಳಿಗೆ ಅಪ್ಪಳಿಸಿ ಹಂಚಿಹೋದ್ದು ಕಾಣಿಯಿತು. ಅದರಿಂದ ಸಿಡಿದ ತುಂತುರು ಹನಿಗಳ ಮೋಡವನ್ನು ತಂಗಾಳಿ ಹೊತ್ತು ತಂದು ಇಬ್ಬರ ಮುಖಗಳನ್ನೂ ನಯವಾಗಿ ತಡವಿತು.

ಆಗತಾನೇ ಎಚ್ಚರವಾದವಳಂತೆ ನಫೀಸಾ ಗಡಬಡಿಸಿ ಎದ್ದಳು. ಸೀರೆಗೆ ಮೆತ್ತಿಕೊಂಡ ಒದ್ದೆ ಮರಳಿನ ಕಣಗಳನ್ನು ಕೊಡವಿಕೊಂಡಳು. ಅಮ್ಮ ತನ್ನನ್ನು ಹುಡುಕಿಕೊಂಡು ಸೈದುಕೋಯಾರ ಮನೆಕಡೆ ಹೋದರೆ ಫಜೀತಿ! ಎಂದುಕೊಳ್ಳುತ್ತಾ "ನಾವು ಹೋಗೋಣ...ಅಮ್ಮ ತಡವಾದ್ದಕ್ಕೆ ಬಯ್ಯಲಿಕ್ಕಿದ್ದಾಳೆ ಮತ್ತೆ..." ಎಂದಳು.

ಸ್ವಲ್ಪ ಹೊತ್ತು ಅವಳನ್ನೇ ನೋಡುತ್ತ ಇದ್ದ ಸಲೀಮ್ "ಸರಿ... ಹೋಗೋಣ..." ಎಂದ.

ಮರಳು ನೆಲದ ಮೇಲೆ ನಡೆಯುತ್ತಾ ಬೀಚ್ ರೋಡಿಗೆ ಬಂದರು. ದೂರದಿಂದ ಕಾರೊಂದು ಭರ್ರನೆ ಬಂದು ಧೂಳೆಬ್ಬಿಸುತ್ತ ಹಾದು ಹೋಯಿತು! ಅಚ್ಚುಕೋಯಾನನ್ನು ಕಾರೊಳಗೆ ಕಂಡಂತಾಗಿ ನಫೀಸಾ ಬೆಚ್ಚಿಬಿದ್ದಳು! ತಾನು ಸಲೀಮನೊಂದಿಗೆ ನಡೆಯುತ್ತಿರುವುದನ್ನು ಕಂಡು ಅವನೇನಾದರೂ ಅಪಾರ್ಥ ಕಟ್ಟಿಕೊಂಡು ಅವಾಂತರ ಮಾಡಬಹುದೇ ಎಂಬ ಭಯ ಅವಳನ್ನಾವರಿಸಿತು. ಆದರೇನು? ಅಮ್ಮನೊಂದಿಗೆ ಎಲ್ಲ ಹೇಳಿದರಾಯ್ತು, ಎಂದು

ಕೊಂಡು ಸಮಾಧಾನಪಟ್ಟುಕೊಂಡಳಾದರೂ ಅಚ್ಚುಕೋಯಾನ ಮುಖ ಮತ್ತೆ ಮತ್ತೆ ಅವಳ ಮುಂದೆ ಬಂದಂತೆ ಭಯ ಆವರಿಸತೊಡಗಿತ್ತು.

ಮನೆ ಹತ್ತಿರವಾದಂತೆ "ಇನ್ನು ನೀವು ಹೋಗಿ...ನನ್ನ ಮನೆ ಬಂತು..." ಎಂದಳು. ಸಲೀಮ ಅದೇನೋ ಹೇಳಬೇಕೆಂದು ಬಾಯಿ ತೆರೆದದ್ದು ಕಂಡರೂ ಕಾಣಿಸದವಳಂತೆ ನಫೀಸಾ ಬಿರಬಿರನೆ ನಡೆದು ಮನೆಯ ಕದ ತಟ್ಟಿದ್ದಳು.

ಹಾಜಿಮ ಬಾಗಿಲು ತೆರೆದವಳೇ "ಅದ್ಯಾಕಿಷ್ಟು ತಡ...? ನೀನೊಬ್ಬೇ ಬಂದೆಯಾ... ?" ಅಂತ ಕೇಳಿದಳು. "ಮಳೆ ಬಂತಲ್ಲಾಮ್ಮ ಬಿಟ್ಟನಂತರ ಹೋಗು ಅಂತ ಷರೀಫಮ್ಮ ಅಂದ್ರು, ಮಳೆಬಿಟ್ಟಕೂಡ್ಲೇ ಊಟಮಾಡಿ ಹೋಗು ಅಂದ್ರು, ಅವರ ಮಗ ಸಲೀಮ ಬಂದು ಬಿಟ್ಟು ಹೋದ್ರು..." ಎಂದಳು ನಫೀಸಾ. ಅಮ್ಮ ಪ್ರಶ್ನೆಗಳ ಮಳೆ ಸುರಿಸಬಹುದೆಂತ ನಫೀಸಾ ಎಣಿಸಿದ ಹಾಗಾಗಲಿಲ್ಲ, "ಹೂಂ..." ಅಂದ್ಲು ಅಷ್ಟೆ.

ನಫೀಸಾ ಅಲ್ಲೇ ನೆಲದ ಮೇಲೆ ಕೂತಳು. ಜುಲೇಖಾಳ ಸಣ್ಣ ಮಗ ಮಯ್ಯದ್ದಿ ಬಂದು ತೊಡೆಯ ಮೇಲೆ ತಲೆಯಿಟ್ಟು ಮಲಗಿದ. ಅವನನ್ನು ತಟ್ಟಿ ಮಲಗಿಸುವಾಗ ಕಣ್ಣ ತುಂಬ ಸಲೀಮನೇ ತುಂಬಿದ್ದ. ತಾನು ಅವನನ್ನು ಮನೆಯೊಳಗೆ ಬರಲು ಹೇಳಲೇ ಇಲ್ಲ. ಇಲ್ಲೇನಿದೆ ಮಣ್ಣು. ಕೂತುಕೊಳ್ಳಲು ಒಂದು ಕುರ್ಚಿ ಕೂಡ ಇಲ್ಲ... ಆದರೂ ಸುಳ್ಳೇ ಕರೆಯಬಹುದಿತ್ತು... ಅದೇನು ಎಣಿಸಿದ್ನೋ... ಅವನೇನೋ ಮಾತಾಡಲಿಕ್ಕೆ ಪ್ರಯತ್ನಿಸಿದ್ದ, ತಾನು ಆಸ್ಪದ ಕೊಡದಿದ್ದದ್ದು ತಪ್ಪಾಯ್ತೇನೋ! ಅವ್ನೇನು ಹೇಳಬೇಕೆಂದಿದ್ದನೋ... ಕೇಳಬಹುದಿತ್ತು ಎಂದುಕೊಂಡಳು. ಹೀಗೆ ಯೋಚಿಸುತ್ತ ಹೋದಂತೆ ಫಕ್ಕನೆ ಕಾರಿನಲ್ಲಿ ಹಾದು ಹೋದ ಅಚ್ಚುಕೋಯಾನ ನೆನಪಾಗಿ ಮತ್ತೆ ಎದೆ ಡವಗುಟ್ಟತೊಡಗಿತು !

# ಹುಂಡಿ

ತಿರುವನ್ನೂರಿನ ಉದ್ದುದ್ದ ತೆಂಗಿನ ಮರಗಳ ಮಧ್ಯೆ ಅಡ್ಡಾದಿಡ್ಡಿ ಹೊರಳಿಕೊಂಡು ಹೋದ ಕೆಂಪು ಮಣ್ಣಿನ ರಸ್ತೆಯಲ್ಲಿ ಮಮ್ಮುಟ್ಟಿ ಮೈತುಂಬ ಬೆವರಿಳಿಸಿಕೊಂಡು ತನ್ನ ಹಳೆ ಹರ್‌ಕ್ಯೂಲಿಸ್ ಸೈಕಲನ್ನು ಮೆಟ್ಟುತ್ತಿದ್ದ. ಸೈಕಲಿನ ಹಿಂದೆ ಮೀನು ತುಂಬಿದ ಬುಟ್ಟಿಗಳನ್ನು ಕಟ್ಟಿಕೊಂಡಿದ್ದ. ಬೆಳಿಗ್ಗೆ ಎಂಟು ಗಂಟೆಯಾದ್ದರಿಂದ ರಸ್ತೆ ತುಂಬ ಜನಗಳು. ಫ್ಯಾಕ್ಟರಿ ಕೆಲಸಗಾರರು ನಡೆಯು ತ್ತಿದ್ದರು. ಮಮ್ಮುಟ್ಟಿ ಜನರ ನಡುವೆ ಸೈಕಲ್ಲು ತುಳಿಯುತ್ತ ಹ್ಯಾಂಡ್ ಲಿವರ್‌ನ ಅಡಿಯಲ್ಲಿ ಸಿಕ್ಕಿಸಿದ್ದ 'ಪೋಂ ಪೋಂ...' ಬಾರಿಸಿದ. ಕೇರಿಯ ಜನ ರಿಗೆ ಮಮ್ಮುಟ್ಟಿಯ 'ಪೋಂ...ಪೋಂ...' ಪರಿಚಿತ. ಖಾಯಂ ಗಿರಾಕಿಗಳ ಪರಿಚಯ ಮಮ್ಮುಟ್ಟಿಗೂ ಇದೆ. ಬಾಲಕೃಷ್ಣ ಮೆನನ್‌ರ ಮನೆಯ ಮುಂದೆ 'ಪೋಂ...ಪೋಂ' ಬಾರಿಸಿ ಸೈಕಲ್ಲನ್ನು ನಿಲ್ಲಿಸಿ ಕೆಳಗಿಳಿದ.

ಮೆನನ್ ಮೈತುಂಬ ತೆಂಗಿನೆಣ್ಣೆ ಹಚ್ಚಿಕೊಂಡು ಭಗವತಿ ಕೆರೆಗೆ ಸ್ನಾನಕ್ಕೆ ಹೊರಟಿದ್ದರು. ಮನೆಯ ಮುಂದಿನ ರಸ್ತೆಯಲ್ಲಿ ಮಮ್ಮುಟ್ಟಿ ಮೀನಿನ ಸೈಕಲನ್ನು ತಂದು ನಿಲ್ಲಿಸಿದ್ದನ್ನು ಕಂಡು ಸಿಟ್ಟಿನಿಂದ ಕೆಕ್ಕರಿಸಿ ನೋಡತೊಡಗಿ ದರು. ಅವರಿಗೆ ಮೀನು ಕಂಡರೆ ಅಸಹ್ಯ. ಆದರೆ ಅವರ ಹೆಂಡತಿ ಲಕ್ಷ್ಮಿ ಕುಟ್ಟಿಗೆ, ಮಗ ಗೋಪಾಲನ್‌ಗೆ ಮೀನಿಲ್ಲದೆ ಊಟ ರುಚಿಸದು. ಹಾಗಾಗಿ ಮನೆಯಲ್ಲಿ ದಿನವೂ ಎರಡು ರೀತಿಯ ಅಡುಗೆ. ಹೆಂಡತಿ ಮತ್ತು ಮಗನಿಗೆ ಈ ಮನೆಯಲ್ಲಿ ಮೀನು ತರಕೂಡದು, ನೀವು ಮೀನು ತಿನ್ನಕೂಡ ದೆಂದರೂ ಇವರ ಮಾತನ್ನು ಅವರು ಕೇಳುವುದಿಲ್ಲವಾದ್ದರಿಂದ ಅವರ ಸಿಟ್ಟು ದಿನವೂ ಬೆಳಗ್ಗೆ ಮನೆಯ ಮುಂದೆ 'ಪೋಂ...ಪೋಂ...' ಬಾರಿಸುತ್ತ ನಿಲ್ಲುವ ಮಮ್ಮುಟ್ಟಿಯ ಕಡೆಗೆ ತಿರುಗಿತ್ತು. ಹೆಂಡತಿ ಮತ್ತು ಮಗನಿಗಾಗಿ ಅವರು ತಮ್ಮ

ಸಿಟ್ಟನ್ನು ನುಂಗಿಕೊಳ್ಳುವುದು ಅನಿವಾರ್ಯವಾಗಿತ್ತು. ಇದನ್ನೆಲ್ಲ ತಿಳಿದ ಮಮ್ಮುಟ್ಟಿ ಸಣ್ಣಗೆ ನಕ್ಕು ಬುಟ್ಟಿಯ ಬಾಯಿ ತೆರೆಯುತ್ತ ನಿಂತ.

ಮೆನನ್ ಅಲ್ಲಿ ನಿಲ್ಲಲಾಗದೆ ಸರಸರನೆ ನಡೆದು ಹೋದರು. ಲಕ್ಷ್ಮಿ ಕುಟ್ಟಿ ಪಾತ್ರೆ ಹಿಡ್ಕೊಂಡು ಬಂದು, "ಏನಿದೆ ಮಮ್ಮುಟ್ಟಿ ?" ಅಂತ ಕೇಳಿದಾಗ "ಬಂಗುಡೆ, ಬೈಗೆ, ಸಿಗಡಿ ಇದೆ..." ಅಂದ. "ಮನೆಯಲ್ಲಿ ತರಕಾರಿ ಇದೆ. ಬೆರಕೆಗೆ ಸಿಗಡಿ ಚೆನ್ನಾಗಿರುತ್ತೆ ನೋಡು... ಸಿಗಡಿನೇ ಕೊಡು ಮಾರಾಯ ಎರಡು ರೂಪಾಯಿದ್ದು..." ಅಂದ್ಲು. ಮಮ್ಮುಟ್ಟಿ ಸಿಗಡಿ ಮೀನಿಗೆ ಕೈ ಹಾಕುವಾಗ ಬಂಗುಡೆ ಮೀನು ನೋಡಿದ ಲಕ್ಷ್ಮಿ ಕುಟ್ಟಿ, "ಮಮ್ಮುಟ್ಟಿ... ಬಂಗ್ಡೆ ಮೀನು ಚೆನ್ನಾಗಿದೇಂತ ಕಾಣ್ತದೆ... ಫ್ರೆಶ್...ಅಲ್ವಾ ?" ಅಂದ್ಲು. ಅವಳ ಆಸೆ ಕಂಡು ಮಮ್ಮುಟ್ಟಿ ರೇಗಿ "ಅದೇನು ಬೇಕಂತ ಬೇಗ ಹೇಳ್ಬಾರ್ದಾ ? ನಾನಿಲ್ಲೆ ಗಂಟೆಗಟ್ಲೇ ನಿಂತ್ರೆ ಉಳಿದ ಮೀನು ಮಾರಾಟ ಮಾಡೋದು ಬೇಡ್ವಾ ?" ಅಂದ. ಲಕ್ಷ್ಮಿ ಕುಟ್ಟಿಯ ಮಗಳು ಸುನೀತಾ ಸ್ಕೂಲಿಗೆ ಹೊರ ಟವಳು "ಅಮ್ಮಾ..." ಅಂತ ಕೂಗಿದ್ಲು. ಲಕ್ಷ್ಮಿಕುಟ್ಟಿ "ಬಂದೆ ಮಗಾ..." ಅನ್ನುತ್ತಾ ಮಮ್ಮುಟ್ಟಿಗೆ "ಸಿಗಡಿ ಮೀನೇ ಹಾಕು..." ಎಂದಳು. ಮಮ್ಮುಟ್ಟಿ ಎರಡು ಹಿಡಿ ಸಿಗಡಿ ಮೀನು ಬುಟ್ಟಿಯಿಂದ ತೆಗ್ದು ಪಾತ್ರೆಗೆ ಹಾಕಿದ. "ಇಷ್ಟೇನಾ...? ಸ್ವಲ್ಪ ಹಾಕು... ಇಷ್ಟು ತುಟ್ಟಿ ಆಯ್ತೇನು ?" ಎನ್ನುತ್ತಾ ಅವಳು ಚೌಕಾಸಿ ಮಾಡತೊಡಗಿದ್ಲು. ಮಮ್ಮುಟ್ಟಿ ಸ್ವಲ್ಪ ತೆಗೆದು ಪಾತ್ರೆಗೆ ಹಾಕುತ್ತ "ಇಕೊಳ್ಳಿ... ಇನ್ನು ಚರ್ಚೆ ಮಾಡ್ಬೇಡಿ ಮಾರಾಯ್ರೆ... ಕಡ್ಲ ಬದಿಯಲ್ಲಿ ನಂಗೆ ಒಂಚೂರು ರೇಟು ಕಡಿಮೆ ಮಾಡಿ ಅಂತ ದಮ್ಮಯ್ಯ ಹಾಕಿದ್ರೂ ಒಂದು ಪೈಸೆ ಕೂಡ ಕಡಿಮೆ ಮಾಡುವವರಿಲ್ಲ ಮಾರಾಯ್ರೆ..." ಅಂತ ಸಿಡಿಮಿಡಿಗೊಳ್ಳುತ್ತಾ ಅಂದ. ಲಕ್ಷ್ಮಿ ಕುಟ್ಟಿ ಕೊಟ್ಟ ಎರಡು ರೂಪಾಯಿ ಯನ್ನು ಜೇಬಿಗಿಳಿಸಿಕೊಂಡು ಮತ್ತೆ "ಪೋಂ ಪೋಂ..." ಬಾರಿಸುತ್ತ ಸೈಕಲ್ಲು ಹತ್ತಿ ಹೊರಟ.

ತಿರುವನ್ನೂರಿಗೆ ಒಂದು ಸುತ್ತು ಹೊಡೆದು ಕಾಟನ್ ಮಿಲ್ಸ್ ಕಡೆ ತಿರುಗಿ ಬರುವಾಗ ಗಂಟೆ ಹನ್ನೊಂದಾಗಿತ್ತು. ಬುಟ್ಟಿಯೂ ಮುಕ್ಕಾಲು ಭಾಗ ಖಾಲಿ ಯಾಗಿತ್ತು. ಆಗಲೇ ಮಮ್ಮುಟ್ಟಿಗೆ ಎಂದಿಲ್ಲದ ಸುಸ್ತು. ಹಿಂದಿನ ರಾತ್ರಿ ಹೆಂಡತಿಯ ಮೇಲಿನ ಸಿಟ್ಟಿನಿಂದ ಊಟಮಾಡದೆ ಬರಿ ಹೊಟ್ಟೆಯಲ್ಲೇ ಮಲಗಿದ್ದರಿಂದ ಈ ಸುಸ್ತು ಎಂದುಕೊಂಡ. ರಾತ್ರಿ ಹಲಿಮಾಬಿಯ ಮಾತು ಗಳೇ ಹೊಟ್ಟೆ ತುಂಬಿಸಿತ್ತು ! ಅಲ್ಲಾಹು ಯಾಕೆ ನಮ್ಮನ್ನು ಹೀಗೆ ಬಿಟ್ಟಿ ದ್ದಾನೋ ! ಹಣವಿಲ್ಲದಿದ್ರೆ ಬದುಕಿಯೂ ಸತ್ತಂತೆಯೇ. ಯಾರೂ ಆದರಿಸ್ಲು

ವುದಿಲ್ಲ. ಹಾಗಂತ ನಾನು ಹೆಂಡತಿಯ ಮನೆಯಲ್ಲಿ ಮರ್ಯಾದೆ ನಿರೀಕ್ಷಿಸಿದರೆ ಸಿಗೋದು ಹ್ಯಾಗೆ ಸಾಧ್ಯ? ಇದೆಲ್ಲ ಹೆಂಡ್ತೀ ಮನೆಯಲ್ಲಿ ಬಿದ್ಕೊಂಡಿರೋದ್ರಿಂದ್ಲೇ ! ಈ ಸಂಪ್ರದಾಯವನ್ನು ಮುರಿಯಬೇಕಾದ್ರೆ ಕೈ ತುಂಬ ಹಣವಿರಬೇಕಾಗ್ತದೆ. "ನಿನ್ನ ಮನೇಲಿ ಬಂದಿರೋದಕ್ಕೆ ನನ್ನಿಂದ ಸಾಧ್ಯವಿಲ್ಲ. ಬಾರೇ ನನ್ನ ಹಿಂದೆ..." ಅಂತ ಹೆಂಡತಿಯನ್ನು ಕರ್ಕೊಂಬಂದು ಬೇರೆ ಮನೆ ಮಾಡ್ಕೊಂಡು ಕಾಲ ಕಳೆಯಬಹುದು. "ಇದೆಲ್ಲ ಬರೀ ಕನಸು..." ಎಂದುಕೊಂಡ ಮಮ್ಮುಟ್ಟಿ ಮುಂದುಡಿಕೊಂಡ. ದಿನಕ್ಕೆ ಇಪ್ಪತ್ತು ಇಪ್ಪತ್ತೈದು ರೂಪಾಯಿ ಕಷ್ಟಪಟ್ಟು ಸಂಪಾದಿಸಿದ್ದು ಪೂರ್ತಿ ಅವಳ ಕೈಗೆ ಹಾಕಿದ್ದರೂ ಮದುವೆಯಾದ ಈ ಐದು ವರ್ಷಗಳಲ್ಲಿ ಅವಳನ್ನು ಒಮ್ಮೆಯೂ ಸಂತೃಪ್ತಿಪಡಿಸಲಾಗಲಿಲ್ಲ. ಜೊತೆಗೆ ಎರಡು ಮಕ್ಕಳೂ ಆದವು. ಬೇಡಿಕೆ ಉದ್ದುದ್ದ ಬೆಳೀತಾ ಹೋಯಿತು. ಸಂಪಾದನೆ ಮಾತ್ರ ಹೆಚ್ಚಾಗಲೇ ಇಲ್ಲ.

ಹತ್ತಿರದಲ್ಲಿ ಜೋರಾಗಿ ಕಾರಿನ ಹಾರ್ನ್ ಶಬ್ದ ಕೇಳಿದಾಗ ಮಮ್ಮುಟ್ಟಿ ತಿರುಗಿ ನೋಡಿದ. ಅಚ್ಚುಕೋಯ ತನ್ನ ಕಾರನ್ನು ಬದಿಗೆ ನಿಲ್ಲಿಸಿ "ಮಮ್ಮುಟ್ಟಿ... ಬಾ... ಇಲ್ಲಿ, ಸ್ವಲ್ಪ ಮಾತಾಡುವುದಿದೆ..." ಎಂದ. ತನ್ನ ಸೈಕಲ್ಲನ್ನು ಬದಿಯಲ್ಲಿ ನಿಲ್ಲಿಸಿ ಮಮ್ಮುಟ್ಟಿ ಕಾರಿನ ಬಳಿ ಬಂದು ನಿಂತು "ಅಸ್ಸಲಾಂ ಅಲೈಕುಂ..." ಎಂದ.

"ವ ಅಲೈಕು ಸಲಾಂ..." ಎಂದ ಅಚ್ಚುಕೋಯ "ಅಲ್ವಾ... ಮಮ್ಮುಟ್ಟಿ, ಕುಟ್ಟಿಚಿರಾದ ಕಡೆ ಹೋಗ್ತಿದ್ದೀಯಾ ಇಲ್ಲ ಹೆಂಡ್ತಿಮನೆಯಲ್ಲಿ ಸಾಕಂತ ಕೂತ್ಬಿಟ್ಟು ತಾಯಿಯನ್ನು ದೂರ ಮಾಡಿದ್ದೀಯಾ ಹ್ಯಾಗೆ?" ಅಂತ ಕೇಳಿದ.

ಮಮ್ಮುಟ್ಟಿ ತಡವರಿಸುತ್ತ "ಇಲ್ಲ... ಹೋಗ್ತಾ ಇದ್ದೇನಲ್ಲಾ... ಪುರ್ಸೊತ್ತಿಲ್ಲ..." ಎಂದ. ಅಮ್ಮನ ಬಗೆಗೆ ಈ ಅಚ್ಚುಕೋಯನಿಗ್ಯಾಕಿಷ್ಟು ಕಳಕಳಿ? ಏನಾದ್ರೂ ಉದ್ದೇಶವಿಲ್ದೇ ಇಷ್ಟೆಲ್ಲಾ ನಾಟಕ ಆಡೋ ಆಸಾಮಿ ಅಚ್ಚುಕೋಯಾ ಅಲ್ಲ... ಎಂಬ ವಿಚಾರ ಮಮ್ಮುಟ್ಟಿಗೆ ಹೊಳೆಯಿತು.

"ಮಮ್ಮುಟ್ಟಿ... ನೋಡು ಈ ಸಲ ಒಬ್ಬ ಅರಬಿ ಬರ್ತಾನೆ. ಬರೀ ಖಾಲಿಪೋಲಿ ಅರಬಿಯಲ್ಲ. ಅಸಲಿ ಅರಬಿ... ನಂಗೆ ಅವನ ಕಾಗದ ಬಂದಾಗ ನಿಮ್ಮ ನೆನಪಾಯ್ತು ನೋಡು... ನೀವು ಬೇಡಾಂದ್ರೆ ಮಾತ್ರ ಬೇರೆಯವರ ಹತ್ತಿರ ಹೋಗ್ತೇನೆ. ನಿನ್ನ ಅಭಿಪ್ರಾಯ ಹ್ಯಾಗೆ?" ಅಂತ ಅಚ್ಚುಕೋಯ ಕೇಳಿದಾಗ ಮಮ್ಮುಟ್ಟಿಗೆ ಅವನ ಗುರಿ ನಫೀಸಳತ್ತ ತಿರುಗಿದ್ದು ಕಂಡು ಒಂದು ಕ್ಷಣ ಬೆಚ್ಚಿಬಿದ್ದ. ಅಮ್ಮ ಅಳುತ್ತ "ಮಗಾ... ನಮ್ಮ ನಫೀಸಳನ್ನಾದ್ರೂ

ಈ ಕಿಚ್ಚಿನಿಂದ ಪಾರು ಮಾಡಂ. ಅವ್ಯಾದ್ರೂ ಮರ್ಯಾದೆಯಿಂದ ಬದ್ಕೋ ಹಾಗೆ ಮಾಡು. ನಿನ್ನ ತಂಗಿಗೆ ಒಂದು ಊರ ಹುಡುಗನನ್ನು ಹುಡುಕಿ ನಿಕಾ ಮಾಡಿಕೊಡು ಮಂಗಾ... ಹುಡುಗ ಕಡು ಬಡವನಾದ್ರೂ ಅಡ್ಡಿಯಿಲ್ಲ... ನೀನು ಅಣ್ಣನಾಗಿರೋದಕ್ಕೆ ನಿನ್ನ ತಂಗಿಗೆ ಇಷ್ಟಾದ್ರೂ ಮಾಡು..." ಎನ್ನುತ್ತಾ ಎದುರು ಬಂದು ನಿಂತಂತಾಯಿಂತು. ಕಣ್ಣಲ್ಲಿ ತುಂಟತನವಿನ್ನೂ ಮಾಸದೆ ಚುರು ಕಾಗಿ ಅತ್ತಿತ್ತ ಓಡಾಡುತ್ತ ಇರುವ ತಂಗಿಯ ಮುಗ್ಧ ಮುಖ ಕಣ್ಣ ಮುಂದೆ ತೇಲಿ ಬಂತು. ಮಮ್ಮುಟ್ಟಿ ಚಡಪಡಿಸಿದ.

ಬೆಪ್ಪನಂತೆ ನಿಂತ ಮಮ್ಮುಟ್ಟಿಯನ್ನು ಕಂಡು ಅಚ್ಚುಕೋಯ "ನೀನ್ಯಾಕೆ ಮಾತಾಡೊದಿಲ್ಲ ? ನಿನಗಿಷ್ಟವಿಲ್ಲದಿದ್ರೆ ಬೇಡ ಬಿಡು... ಬೇರೆ ಯಾರಿಗಾದ್ರೂ ಮಾತಾಡ್ತೇನೆ. ಏನೋ... ಒಳ್ಳೇ ಅರಬಿ ಬಂದಿದ್ದಾನೆ. ನಮ್ಮವರಿಗೆ ಯಾರಿ ಗಾದ್ರೂ ಉಪಕಾರ ಆದ್ರೆ ಆಗ್ಲೀಂತ ಹೇಳಿದೆ ಅಷ್ಟೆ..." ಎಂದು ಕಾರು ಸ್ಟಾರ್ಟ್ ಮಾಡಿದಾಗ ಮಮ್ಮುಟ್ಟಿ ಗಡಬಡಿಸಿ, "ಅಮ್ಮನತ್ರ ಕೇಳಿ ಹೇಳ್ತೇನೆ..." ಎಂದ.

ಅಚ್ಚುಕೋಯ ಗೆದ್ದ ಸಂತೋಷವನ್ನು ಹೊರಗೆ ತೋರ್ಪಡಿಸದೆ ಅಡ ಗಿಸಿಕೊಳ್ಳುತ್ತ "ಸರಿ... ಹಾಗಾದ್ರೆ ಹಾಗೆಯೇ ಮಾಡು ಮತ್ತೆ... ನಾನು ಮಾತಾಡ್ತಾ ಇರೋದು ನಿನ್ನ ತಂಗಿ ನಫೀಸಾಳ ಬಗ್ಗೆ... ಗೊತ್ತಾಯ್ತಲ್ಲಾ... ನಾಳೆ ಬಂದು ಹೇಳ್ಬೇಕು. ತಡವಾದ್ರೆ ನಾಳೆ ನನ್ನನ್ನು ದೂರ್ಬೇಡಿ ಮತ್ತೆ..." ಎಂದು ವ್ಯಾಪಾರ ಕುದುರಿದ್ರೆ ತನ್ನ ಜೇಬಿಗೆಷ್ಟು ಇಳಿಯಬಹುದೆಂಬ ಲೆಕ್ಕಾ ಚಾರ ಮಾಡುತ್ತ ಖುಶಿಯಾಗಿ ಕಾರನ್ನು ಪುರ್ರನೆ ಓಡಿಸಿದ.

ಮಮ್ಮುಟ್ಟಿ ತಲೆ ತಗ್ಗಿಸಿ ತನ್ನ ಸೈಕಲ್ಲಿನತ್ತ ಬಂದ. ಎದುರಲ್ಲಿದ್ದ ಶಂಕರನ್ ನಾಯರ್‌ನ ಹೊಟೇಲಿನಲ್ಲಿ ಚಾ ಕುಡಿಯುತ್ತಿರುವವರೆಲ್ಲ ತನ್ನತ್ತಲೇ ನೋಡುತ್ತಿರುವಂತೆ, ಮುಸಿ ಮುಸಿ ನಗುತ್ತಿರುವಂತೆ ಅನಿಸಿ ಪೆಚ್ಚಾದ. ಕಲ್ಲಿ ಕೋಟೆಯ ಕೇರಿ ಕೇರಿಗೂ ಗೊತ್ತು, ಅಚ್ಚುಕೋಯ ಅರಬ್ ಮದುವೆಯ ದಲ್ಲಾಳಿ ಅಂತ! ಮಮ್ಮುಟ್ಟಿಯ ತಲೆ ಸಿಡಿಯುತ್ತಿರುವ ಅನುಭವವಾಗಿ ಈ ಸುಡುವ ಬಿಸಿಲಲ್ಲಿ ಹ್ಯಾಗೆ ಸೈಕಲ್ ತುಳಿಯಲಿ ರಬ್ಬೆ...! ಅಂದುಕೊಂಡ. ನಾಯರ್‌ನ ಹೋಟೇಲಿನಲ್ಲಿ ಒಂದು ಚಾ ಕುಡಿದೇ ಇನ್ನು ಮುಂದೆ ಹೋಗುವ ಮಾತು ಎಂದು ಹೊಟೇಲಿನೊಳಗೆ ನಡೆದ.

ಹೋಟೇಲಿನೊಳಗೆ ಕುರ್ಚಿಯೊಂದನ್ನು ಎಳೆದು ಕೂತ. ನಾಯರ್ ತಂದಿಟ್ಟ ತಣ್ಣೀರು ಗಟಗಟನೆ ಕುಡಿದಾಗ ಸ್ವಲ್ಪ ಹಾಯೆನಿಸಿತು. "ಕಲ್ಪಪ್ಪ ಬಿಸಿಯಿದೆ ಕೊಡ್ಲಾ...?" ಅಂತ ನಾಯರ್ ಕೇಳಿದಾಗ "ಸರಿ ಕೊಡು, ಮತ್ತೆ

ಒಂದು ಕಡಕ್ ಚಾ ಮಾಡು..." ಎಂದ ಮಮ್ಮುಟ್ಟಿ. ನಫೀಸಳ ಮುಖ ಮತ್ತೆ ತೇಲಿ ಬಂದು ನಿಂತಿತು. "ನಾನೇನು ಮಾಡ್ಲಿ ರಬ್ಬೇ..." ಎಂದು ಕೊಂಡು ಅಸಹಾಯಕತೆಯು ನಿಟ್ಟುಸಿರುಬಿಟ್ಟ.

"ಏನು ಮಮ್ಮುಟ್ಟಿ... ಮೀನೆಲ್ಲ ಮಾರಿ ಆಯ್ತಾ?" ಅಂತ ಕೇಳುತ್ತ ಇಸ್ಮಾಯಿಲ್ ಬಂದು ಕೂತ. ತನ್ನಂತೆಯೇ ಕುಟ್ಟಿಚಿರಾದಲ್ಲಿ ಹುಟ್ಟಿ ಬೆಳೆದು ಈಗ ಊರ ಹೆಣ್ಣೊಬ್ಬಳನ್ನು ಮದುವೆಯಾಗಿ ಹೆಂಡ್ತಿ ಮನೆಯಲ್ಲಿ ನಿಂತ ಆಸಾಮಿ! "ಇಲ್ಲ ಮಾರಾಯ... ಇನ್ನೂ ಸ್ವಲ್ಪ ಉಳಿದಿದೆ. ಬಿಸಿಲು... ಸುಸ್ತಾಗಿದೆ. ಅಬ್ಬಾ...!" ಎಂದ ಮಮ್ಮುಟ್ಟಿ. "ಅದೇನು ಅಚ್ಚುಕೋಯ ಅಷ್ಟು ಹೊತ್ತು ಮಾತಾಡ್ತಾ ನಿಂತಿದ್ರಲ್ಲಾ...?" ಅಂತ ಇಸ್ಮಾಯಿಲ್ ಕೇಳಿದಾಗ ಮಮ್ಮುಟ್ಟಿಗೆ ಉತ್ತರಿಸುವ ಮನಸ್ಸಾಗದೆ ನಾಯರ್ ತಂದಿಟ್ಟ ಕಲ್ತಪ್ಪವನ್ನು ಕಚ್ಚಿ ತಿನ್ನತೊಡಗಿದ.

"ಅವ್ನ ಒಂದು ಹೊಸ ಹುಡುಗಿ ಬೇಕಂತ ಮೊನ್ನೆಯಿಂದ ಹುಡುಕು ತ್ತಿದ್ದಾನಂತೆ. ಯಾವ್ನೋ ಒಬ್ಬ ಅರಬಿ ಹೊಸ ಹುಡುಗಿಯೇ ಬೇಕಂತ ಹಟ ಹಿಡಿದಿದ್ದಾನಂತೆ! ನಿನ್ನ ತಂಗಿ ನಫೀಸಾ ಅವ್ನ ಕಣ್ಣಿಗೆ ಬಿದ್ದಿರಬೇಕು... ಸೂಳೇ ಮಗ..." ಎಂದು ಇಸ್ಮಾಯಿಲ್ ಹಲ್ಲು ಕಡಿದ.

ಮಮ್ಮುಟ್ಟಿ ಚಾ ಹೀರುತ್ತ ಕೂತವ, "ನಾವು ಸಿಟ್ಟು ಮಾಡಿ ಏನು ಪ್ರಯೋಜನ ಹೇಳು..." ಇವ್ನ ಕೈಯಿಂದ ಈ ಕೇರಿಯ ಜನ ಬಚಾವಾಗೂದು ಸಾಧ್ಯವುಂಟಾ..." ಅಂತ ತಣ್ಣನೆ ಕೇಳಿದ.

ಇಸ್ಮಾಯಿಲ್‌ನ ಕಣ್ಣು ಉರಿಯುತ್ತ ಕೆಂಪು ಉಂಡೆಯಂತಾಗಿತ್ತು! ಮೇಜಿಗೊಂದು ಬಲವಾಗಿ ಗುದ್ದಿದ. ಮಮ್ಮುಟ್ಟಿ ಕೈಯಲ್ಲಿದ್ದ ಚಾ ತುಂಬಿದ ಗ್ಲಾಸನ್ನು ಚೆಲ್ಲದಂತೆ ಗಟ್ಟಿಯಾಗಿ ಹಿಡ್ಕೊಂಡ. ಮೇಜಿನ ಮೇಲಿದ್ದ ನೀರಿನ ಲೋಟ ಟಣ್ಣಗೆ ಕೆಳಗೆ ಬಿತ್ತು. ನಾಯರ್ ಬಂದು ಇಣುಕಿದ... "ಏನು ಧಿಮಾಕು...! ಇವ್ರು ಹಾಂಕಾರ ನನ್ನ ಹೋಟ್ಲೊಳಗೆ ತೋರಿಸ್ಬೇಕಾ...? ಬೇರೆಲ್ಲೂ ಜಾಗ ಇಲ್ವಾ..." ಎನ್ನುತ್ತ ಬಂದು ಲೋಟ ಹೆಕ್ಕಿ ಮೇಲಿಟ್ಟ. ಇಸ್ಮಾಯಿಲ್ ಅಲ್ಲಿ ನಿಲ್ಲದೆ ಆಗಲೇ ಹೊರಗೆ ಹೋಗಿದ್ದ. ನಾಯರ್ ಮಮ್ಮುಟ್ಟಿಯ ಕಡೆ ಕೆಕ್ಕರಿಸಿ ನೋಡುತ್ತ ಕ್ಲೀನ್ ಮಾಡೋ ಹುಡುಗ ನನ್ನು ಕರೆದ. "ಏ... ಉಮ್ಮರೇ... ಎಲ್ಲಿ ಸತ್ತಿದ್ಯೋ ನೀನು? ಈ ನೀರ ನ್ನೆಲ್ಲ ಒರೆಸು... ಶನಿಗಳು ಹೋಟ್ಲೊಳಗೆ ಬರ್ತಾವೆ. ನಮ್ಮ ಜೀವ ಹಿಂಡ್ಲಿಕ್ಕೆ..." ಎಂದು ಬಯ್ಯುತ್ತ ತನ್ನ ಕೆಲಸಕ್ಕೆ ಹೋದ. ಪುಟ್ಟ ಹುಡುಗ

ಚಿಂದಿ ಚಡ್ಡಿ ಹರಿದ ಬನಿಯಂನಿನ ಉಮ್ಮರ್ ಬಂದು ನೆಲದ ನೀರು ಒರೆಸ ತೊಡಗಿದ.

ಮಂಮ್ಮುಟ್ಟಿ ತನ್ನ ಚಾ ತಿಂಡಿಯ ದುಡ್ಡು ಕೊಟ್ಟು ಹೊರಗೆ ಸೈಕಲ್ಲಿಟ್ಟಲ್ಲಿಗೆ ಹೊರಟ. ಅವನ ಸೈಕಲ್ಲಿನ ಮೇಲೆ ಕಾಗೆಗಳು ಸವಾರಿ ಮಾಡುತ್ತಿದ್ದುವು. ಬುಟ್ಟಿಯನ್ನು ಮುಚ್ಚಿದ್ದ ಗೋಣಿ ತಾಟನ್ನು ಎಳೆದು ಹಾಕುವ ಪ್ರಯತ್ನ ಮಾಡುತ್ತಿದ್ದುವು. ಮಮ್ಮುಟ್ಟಿ ಹತ್ತಿರವಾದಂತೆ ಅವುಗಳೆಲ್ಲ ಪುರ್ರನೆ ಹಾರಿ ಹೋದವು. ಮಮ್ಮುಟ್ಟಿಯ ತಲೆ ತುಂಬ ನಫೀಸಳನ್ನು ಈ ರಾಕ್ಷಸನಿಂದ ಪಾರು ಮಾಡುವುದು ಸಾಧ್ಯವೇ ಎಂಬ ಪ್ರಶ್ನೆಯೇ ತುಂಬಿತ್ತು. ಕಾಲು ಯಾಂತ್ರಿಕವಾಗಿ ಸೈಕಲ್ಲು ತುಳಿಯುತ್ತಿತ್ತು !

# ನಿರೀಕ್ಷೆಯಲ್ಲಿ

ರಾತ್ರಿ ಎಂಟು ಗಂಟೆ ಕಳೆದರೂ ಮಮ್ಮೂಟ್ಟಿ ಮನೆಗೆ ಬಂದಿರಲಿಲ್ಲ. ಅವನ ಹೆಂಡತಿ ಹಲೀಮಾ ಕಾಯುತ್ತಾ ಕೂತಿದ್ದಳು. ಮಕ್ಕಳಿಬ್ಬರೂ ಆಗಲೇ ಮಲಗಿದ್ದರು. ಮನೆಯಲ್ಲಿ ಮಕ್ಕಳ ಗದ್ದಲ, ಜನರ ಗೌಜಿ ಕಮ್ಮಿಯಾಗುತ್ತ ಬಂದಿತ್ತು. ದೊಡ್ಡ ಮನೆಯು "ಕೋಯಾ ತರವಾಡು" ಹಲೀಮಳದ್ದು. ಇಲ್ಲಿ ಇಪ್ಪತ್ತೆಂಟು ಕುಟುಂಬಗಳು ವಾಸಿಸುತ್ತಿದ್ದು ಒಂದು ಭಾಗದ ಮೂರು ಕೋಣೆ ಹಲೀಮಾಬಿಯವರ ಕುಟುಂಬಕ್ಕೆ ಸೇರಿದ್ದು. ಮನೆತನದ ಸಂಪ್ರದಾಯದಂತೆ ತನ್ನ ತಾಯಿಯ ಪಾಲಿಗೆ ಬಂದ ಈ ಭಾಗದಲ್ಲಿ ಕೋಣೆಯೊಂದನ್ನು ಹಲೀಮಾಬಿ ಪಡೆದಿದ್ದಳು. ಇಬ್ಬರು ತಂಗಿಯಂದಿರಿಗೆ ಮದುವೆಯಾಗುವಾಗ ಅಪ್ಪ ಎರಡು ಕೋಣೆಯನ್ನು ಹೊಸತಾಗಿ ಈ ಮನೆಗೆ ಸೇರಿಸಿ ಕಟ್ಟಿಸಿದ್ದರು. ಹೀಗೆ ಪ್ರತೀ ಕುಟುಂಬದವರೂ ತಮ್ಮ ಹೆಣ್ಮಕ್ಕಳಿಗೆ ಮದುವೆಯಾಗುವಾಗ ಹೊಸ ಹೊಸ ಕೋಣೆಗಳನ್ನು ಕೂಡಿಸಿ ಕಟ್ಟಿಸಿಕೊಂಡ ಹಾಗೆ ಮನೆಗೆ ಅಲ್ಲಲ್ಲಿ ರೆಕ್ಕೆಗಳು ಮೂಡಿ ವಿಚಿತ್ರ ರೂಪದ ದೊಡ್ಡ ಬಂಗಲೆಯಾಗಿತ್ತು.

ಈ ಮನೆಯಲ್ಲಿರುವ ಇಪ್ಪತ್ತೆಂಟು ಕುಟುಂಬದಲ್ಲಿ ಹೆಚ್ಚು ಕಡಿಮೆ ಇನ್ನೂರು ಜನ ಒಂದೇ ಸೂರಿನಡಿಯಲ್ಲಿ ವಾಸಿಸುತ್ತಿದ್ದರು. ಹಲೀಮಾಬಿಗೆ ಅವರಲ್ಲಿ ಹೆಚ್ಚಿನವರ ಪರಿಚಯವಿರಲಿಲ್ಲ. ಹಿಂದೊಮ್ಮೆ ಮನೆಯ ಕುಟುಂಬವೊಂದರಿಂದ ಮದುವೆಯ ಆಮಂತ್ರಣ ಬಂದಿತ್ತು. ಅವರಿರುವುದು ತಮ್ಮ ಮನೆಯ ಯಾವ ಭಾಗದಲ್ಲಿ ಅಂತ ಹಲೀಮಾಬಿಗೂ ಅವಳಮ್ಮನಿಗೂ ತಿಳಿಯದೆ ಪೆಚ್ಚಾಗಿದ್ದರು. ಹಲೀಮಾಬಿ ತನ್ನ ತಾಯಿಯೊಂದಿಗೆ "ಅವರು ನಮಗೇನಾಗಬೇಕಮ್ಮಾ..." ಅಂತ ಕೇಳಿದಾಗ ಅವಳಮ್ಮ ಸಂಬಂಧವನ್ನು ಹೆಸರಿಸ

ಲಾಗದೆ ಕಸಿವಿಸಿಗೊಂಡಿದ್ದಳು. ಬದಲಿಗೆ "ನಮ್ಮ ಮನೆತನ ಅಂದ್ರೆ ಅಷ್ಟು ದೊಡ್ಡದು..." ಎಂದು ತೇಲಿಸಿಬಿಟ್ಟಿದ್ದಳು.

"ಮುಂಚೆ ದೊಡ್ಡ ಮನೆಯ ಕೋಯ ತರವಾಡಿನಲ್ಲಿ ಮದುವೆ ಎಂದರೆ ಒಂದು ದೊಡ್ಡ 'ಉರೂಸ್' ನಡೆದ ಹಾಗೆಯೇ... ಅಷ್ಟು ಜನ... ಅಷ್ಟು ಗೌಜಿ...!" ಎನ್ನುತ್ತಿದ್ದಳು ಹಲೀಮಾಬಿಯ ತಾಯಿ. ದೊಡ್ಡ ಮನೆ 'ಕೋಯಾ ತರವಾಡಿ'ನಲ್ಲಿ ಹುಟ್ಟಬೇಕಾದರೆ ಪುಣ್ಯ ಮಾಡಿರಬೇಕು ಎನ್ನುವ ಕಾಲವೊಂದಿತ್ತಂತೆ. ಹಿಂದೆ ಈ ಮನೆಗೆ ಸೇರಿದ ಎಲ್ಲ ಕುಟುಂಬಗಳಿಗೂ ಒಂದೇ ಅಡುಗೆ ಕೋಣೆ ಇದ್ದು ದಿನವೂ ದೊಡ್ಡ ದೊಡ್ಡ ಕೊಪ್ಪರಿಗೆ ಅನ್ನ ಬೇಯುತ್ತಿತ್ತಂತೆ. ಏನು ಗೌಜಿ ! ಏನು ಸಂಭ್ರಮ ! ಹೊರಗೆ ಎಲ್ಲಿಯಾದ್ರೂ ಮದುವೆ ಸಮಾರಂಭಕ್ಕೆ ಈ ಮನೆಗೆ ಸೇರಿದವರು ಹೋದರೆ ಅಲ್ಲಿ ಇವರಿಗೆ ವಿಶೇಷ ರೀತಿಯ ಆದರ, ಆತಿಥ್ಯ ಕಾದಿರುತ್ತಿತ್ತಂತೆ– ಎಂದೆಲ್ಲಾ ಅಮ್ಮ ಪ್ರೋತ್ಸಾಹದಿಂದ ತನ್ನ ಮನೆತನದ ಬಗ್ಗೆ ಹೇಳುತ್ತಿರುತ್ತಾಳೆ. ಈಗ ಮಾತ್ರ ಅಮ್ಮ ಕೊಂಚ ಬೇಸರದಿಂದ ನುಡಿಯುತ್ತಾಳೆ. "ಈಗ ಕಾಲವೆಷ್ಟು ಕೆಟ್ಟು ಹೋಯ್ತು !" ಇಂತಹ ದೊಡ್ಡ ತರವಾಡಿನ ಹೆಣ್ಣು ಹಲೀಮಾಬಿಯ ನೆಂಟಸ್ಥಿಕೆ ಗುಡಿಸಲು ಕೇರಿಯ ಕುಟ್ಟಿಚಿರಾದ ಗಂಡು ಮಮ್ಮುಟ್ಟಿಯ ಜೊತೆ ಕೂಡಿಸಬೇಕಾಗಿ ಬಂತು. ತರವಾಡಿನ ಶಿಸ್ತು ತುಂಬಿದ ಮನೆಯಲ್ಲಿ ಗುಲ್ಲು ಗದ್ದಲವೇ ತುಂಬಿ ಹೋಯ್ತು ಎನ್ನುತ್ತಾಳೆ ಅಮ್ಮ.

ಹಲೀಮಾಬಿಯ ಸಹೋದರಿಯರಿಬ್ಬರೂ ಕೂಡ ಮದುವೆಯ ನಂತರ ಸಂಪ್ರದಾಯದಂತೆ ಮನೆಯಲ್ಲೇ ಉಳಿದಿದ್ದರೂ ಸಹೋದರರಿಬ್ಬರ ಮದುವೆಯ ನಂತರ ಮನೆಯಿಂದ ಹೊರಗೆ ವಾಸವಾಗಿದ್ದರು. ಅವಳ ಸಣ್ಣ ತಮ್ಮ ಅಜೀಜ್ ಮದುವೆಯಾದ ಹೊಸತರಲ್ಲಿ ಅಮ್ಮನೊಂದಿಗೆ "ನಂಗೆ ಹೆಂಡ್ತಿ ಮನೆಗೆ ಹೋಗಿ ಇರೋದು ಇಷ್ಟವಿಲ್ಲಮ್ಮಾ... ಇದೆಲ್ಲಾ ಎಂಥ ಸುಡುಗಾಡು ಸಂಪ್ರದಾಯ ? ನಾನು ಬೇರೆ ಮನೆಮಾಡ್ತೇನೆ..." ಎಂದಿದ್ದ. ಅಮ್ಮ ಮನೆಯಿಂಡಿ ಗಲಾಟೆ ಮಾಡಿದ್ದಳು. "ಅದೇನು ಸ್ವಲ್ಪ ಓದಿದವ್ನೂಂತ ಪೊಗರಾ ನಿಂಗೆ ? ನೀನು ಹುಟ್ಟಿದ್ದು ಕೋಯಾ ತರವಾಡಿನಲ್ಲಿ... ಅಸಲೀ ಮುಸ್ಲಿಮ್ ಕುಟುಂಬದಲ್ಲಿ... ಕಾಫಿರರ ಮನೆಯಲ್ಲಲ್ಲ... ಕೋಯಾ ಮನೆತನದಲ್ಲಿ ಹುಟ್ಟಿದ ನಂತರ ಈ ಮನೆತನದ ರಿವಾಜಿನ ರೀತಿ ನಡೆದುಕೊಳ್ಳಬೇಕು. ನಾವೆಲ್ಲ ಅದೇ ರಿವಾಜಿನ ಪ್ರಕಾರ ನಡೆದು ಬದುಕಿಲ್ವಾ ? ನಿಂಗೇನು ಧಾಡಿ ?" ಅಂತ ದಬಾಯ್ಸಿದ್ಲು. ಅಪ್ಪ ಕೂಡ "ನೀನು ನಮ್ಮ ಮನೆತನದ ಮರ್ಯಾದೆ ಮೂರ್ಕಾಸು ಮಾಡ್ಬೇಡ ಮಾರಾಯಾ... ರೀತಿ ರಿವಾಜಿಗೆ ಸ್ವಲ್ಪ ಬೆಲೆಕೊಡು..." ಎಂದಿದ್ದ.

ಅಪ್ಪ ಅಮ್ಮನ ಮಾತು ಕೇಳಿ ಅಜೀಜ್ ಸ್ವಲ್ಪ ತೆಪ್ಪಗಾದರೂ ತನ್ನ ಹಟವನ್ನು ಬಿಡಲಿಲ್ಲ. ಮದುವೆಯಾದ ವರ್ಷದೊಳಗೆ ಬಾಡಿಗೆ ಮನೆ ಮಾಡಿ ಬೇರೆಯಾದ. "ಅವನಿಗೆ ಮಕ್ಕಳಾದ ನಂತರ ಬುದ್ಧಿ ಬರುತ್ತದೆ..." ಅಂತ ಅಪ್ಪ ಸುಮ್ಮನಾದ್ನು. ತನ್ನ ಮಗ ಸಂಪ್ರದಾಯ ಮುರಿದು ತಮ್ಮ ಶ್ರೇಷ್ಠ 'ತರವಾಡಿ'ಗೆ ಅಪಮಾನ ಮಾಡಿದನೆಂದು ದಿನವೂ ಅಮ್ಮ ಕೊರಗುತ್ತಿದ್ದಳು. ಅಣ್ಣ ಶರ್ಫುದ್ದೀನ ಮಾತ್ರ ಮನೆತನದ ಸಂಪ್ರದಾಯದಂತೆ ಹೆಂಡತಿಯ ಮನೆಗೆ ಸಂಜೆ ಹೋಗಿ ಮುಂಜಾನೆ ನಸುಕಿನಲ್ಲಿ ಎದ್ದು ಮನೆಗೆ ಬಂದು ಅಮ್ಮನೊಂದಿಗೆ ಮಾತಾಡಿ ತನ್ನ ಫ್ಯಾಕ್ಟರಿ ಕೆಲಸಕ್ಕೆ ಹೋಗುತ್ತಿದ್ದ. ಅವನಿಗೂ ಮೂರು ಮಕ್ಕಳಾಗಿದ್ದವು. ಅತ್ತಿಗೆ ತನ್ನ ಮಕ್ಕಳನ್ನು ಕರೆದುಕೊಂಡು ವರ್ಷಕ್ಕೊಮ್ಮೆಯೋ ಎರಡು ವರ್ಷಕ್ಕೊಮ್ಮೆಯೋ ಬಂದು ಹೋಗುತ್ತಿದ್ದಳು. ಬಂದರೂ ಹೆಚ್ಚು ಹೊತ್ತು ನಿಲ್ಲುತ್ತಿರಲಿಲ್ಲ.

ಹಲೀಮಾಬಿಗೆ 'ತರವಾಡಿ'ನ ಸಂಪ್ರದಾಯಗಳೆಂದರೆ ತನ್ನ ತಾಯಿಯಷ್ಟೇ ಗೌರವ. ಹಾಗೇ ಈ ಸಂಪ್ರದಾಯಗಳನ್ನು ಮುರಿದರೆ ಉಳಿದ ಖಾಲಿ ಪೋಲಿ ಮುಸ್ಲಿಮರಿಗೂ ಕೋಯಾ ಮನೆತನದ ಅಸಲೀ ಮುಸ್ಲಿಮರಿಗೂ ಏನು ವ್ಯತ್ಯಾಸ ಉಳಿಯಿತು ? 'ದೊಡ್ಡ ಮನೆ ಕೋಯಾ ತರವಾಡಿನ' ಗೌರವವೆಲ್ಲಿ ಉಳಿದೀತು ? ಅವಳ ತಂಗಿಯಂದಿರ ಗಂಡಂದಿರು ಕೂಡ ಸಂಪ್ರದಾಯಕ್ಕೆ ಸರಿಯಾಗಿ ಸಂಜೆ ಮನೆಗೆ ಬಂದು, ಬೆಳಿಗ್ಗೆ ನಸುಕಿನಲ್ಲಿ ಎದ್ದು ಮಿಂದು, ಅವರಿಗಾಗಿ ಅಮ್ಮ ತಯಾರಿಸಿಡುವ ವಿಶೇಷ ತಿಂಡಿಗಳ ನಾಷ್ಟಾ ಮುಗಿಸಿ ತಮ್ಮ ಕೆಲಸಕ್ಕೋ, ಮನೆಗೋ ಹೊರಟುಬಿಡುತ್ತಾರೆ. ಇದು ತಲೆ ತಲಾಂತರದಿಂದ ಬಂದ ಸಂಪ್ರದಾಯ. ಆದರೆ ಹಲೀಮಾಬಿಯ ಗಂಡ ಮಮ್ಮುಟ್ಟಿಗೆ ಮಾತ್ರ ಇವಳು ಅತಿಯಾಗಿ ಸಂಪ್ರದಾಯಶರಣಳಾಗಿರೋದು ಇಷ್ಟವಿಲ್ಲ. ಒಮ್ಮೊಮ್ಮೆ ತನ್ನ ಮನೆತನದ ಗೌರವದ ಬಗ್ಗೆ ಹಲೀಮಾಬಿ ಮಾತನಾಡಿದಾಗ ಮಮ್ಮುಟ್ಟಿ ರೇಗುತ್ತಿದ್ದ. "ಈ ದರಿದ್ರ ಸಂಪ್ರದಾಯಕ್ಕೂ ಸೂಳೆಮನೆಗೆ ಹೋಗಿ ನಸುಕಿನಲ್ಲಿ ಓಡಿ ಬರುವ ವಿಟನಿಗೂ ಏನು ವ್ಯತ್ಯಾಸ ಇದೆ. ಹೇಳು...?" ಎಂದು ರೇಗಿಸುತ್ತಿದ್ದ. ತನ್ನ ಗಂಡನ ಮಾತುಗಳೆಲ್ಲಿ ಯಾದ್ರೂ ಅಮ್ಮನ ಕಿವಿಗೆ ಬಿದ್ದು ರಾದ್ಧಾಂತವಾದೀತೆಂದು ಹೆದರಿ, "ಸ್ವಲ್ಪ ಮೆಲ್ಲಗೆ ಮಾತಾಡಿ..." ಎನ್ನುತ್ತಿದ್ದಳು.

ಮಮ್ಮುಟ್ಟಿ ಕೂಡ ಕೋಯಾ ಮನೆತನಕ್ಕೆ ಸೇರಿದವನಾಗಿದ್ದರೂ ಹಾಗೆ ಹೇಳಲು ಕಾರಣವಿತ್ತು. ಅವನು ಹುಟ್ಟಿದ ಗುಡಿಸಲು ಕೇರಿಯ ಜನ ಈ ತರದ ಸಂಪ್ರದಾಯಗಳನ್ನು ಎಂದೋ ಮುರಿದಿದ್ದರು. ಈ ಸಂಪ್ರದಾಯ

ಗಳು ಹೊಟ್ಟೆ ತುಂಬಿಸೋದಿಲ್ಲ ಎನ್ನುವುದು ಅವರು ಕಂಡುಕೊಂಡ ಸತ್ಯ. ಹೊಟ್ಟೆ ಹೊರೆದುಕೊಳ್ಳುವುದೇ ಮುಖ್ಯವಾದ ಬಡವರಿಗೆ ಈ ಸಂಪ್ರದಾಯ 'ತರವಾಡು'ಗಳ ಬಗ್ಗೆ ತಲೆ ಜಜ್ಜಿಕೊಳ್ಳಲು ಸಮಯವಿಲ್ಲ ಎನ್ನುತ್ತಾನೆ ಮುಮ್ಮುಟ್ಟಿ.

ಹಲೀಮಾಬಿ ಒಬ್ಬಳೇ ಕೂತಾಗ ಮುಮ್ಮುಟ್ಟಿಯ ಅಭಿಪ್ರಾಯದ ಬಗ್ಗೆ ಯೋಚಿಸುತ್ತಿದ್ದಳು. ಅವನ ಮಾತುಗಳನ್ನು ಒಪ್ಪಿಕೊಳ್ಳಲು ಅವಳಿಗೆ ಸಾಧ್ಯ ವಾಗಲೇ ಇಲ್ಲ. ಇದು ತಲೆತಲಾಂತರದಿಂದ ಬಂದ ಸಂಪ್ರದಾಯ. ಇದನ್ನು ತನ್ನ ತಮ್ಮ ಅಜೀಜ್‌ನಂತಹವರು ಮುರಿದರೂ ಸಂಪ್ರದಾಯ ಅಳಿಯ ಲಾರದು. ಇತರ ಧಾರ್ಮಿಕ ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಪಾಲಿಸು ವದರಲ್ಲಿ ಕೋಯಾ ಮನೆತನ ಹೆಸರುವಾಸಿ. ಊರು ಪರವೂರುಗಳಲ್ಲಿ ಸಂಚರಿ ಸುವ ಮೌಲ್ವಿಗಳು ಹೆಚ್ಚಾಗಿ ಈ ಮನೆತನಕ್ಕೆ ಸೇರಿದವರೇ ಎಂದು ತನ್ನಲ್ಲೇ ವಾದಿಸಿಕೊಳ್ಳುತ್ತ ಸಮಾಧಾನಪಟ್ಟುಕೊಳ್ಳುತ್ತಿದ್ದಳು. ಹಾಗೆಲ್ಲ ಸಂಪ್ರದಾಯ ಗಳನ್ನು ಮುರಿದರೆ ನಾಳೆ ಅಖ್ರುತ್‌ನಲ್ಲಿ ಅಲ್ಲಾಹುವಿಗೆ ಉತ್ತರ ಕೊಡಬೇಕಲ್ಲ.

ಮಕ್ಕಳಿಬ್ಬರೂ ಮಲಗಿರುವುದು ಗಂಡನ ಸಿಟ್ಟಿಗೆ ಇನ್ನೊಂದು ಕಾರಣ ವಾಗುತ್ತದೆ ಎಂದು ಹಲೀಮಾಬಿ ತನ್ನ ದೊಡ್ಡ ಮಗುವನ್ನು ಎಬ್ಬಿಸುವ ಪ್ರಯತ್ನ ಮಾಡಿದಳು. ಅದು ಹೂಂ... ಊಹೂಂ... ಅನ್ನುತ್ತಾ ಅಲ್ಲೇ ಮಲಗಿ ಬಿಟ್ಟಿತು. "ಸ್ವಲ್ಪ ಬೇಗ ಮನೆಕಡೆ ಬರ್ಬಾರ್ದೇ...?" ಎಂದು ಸಾಕಷ್ಟು ಬಾರಿ ಹಲೀಮಾ ಹೇಳಿದ್ದಳು. "ಕೆಲ್ಸ ಮುಗ್ಸಿ ಬರ್ಬೇಕಲ್ಲಾ... ಬಿಟ್ಟು ಬರ್ಲಿ ಕ್ಕಾಗ್ತದ ?" ಎನ್ನುತ್ತಿದ್ದ ಮುಮ್ಮುಟ್ಟಿ. ಮೀನು ಮಾರಿ ಹೋಗದೆ ಉಳಿದ ದ್ದನ್ನು ಹಾಳಾಗುವ ಮೊದಲೇ ಐಸ್ ಹಾಕಿ ಇಡಬೇಕು. ಇಲ್ಲವಾದರೆ ಉಪ್ಪು ಹಾಕಿ ಒಣಗಿಸುವ ಏರ್ಪಾಟು ಮಾಡಬೇಕು. ಇದೆಲ್ಲ ಸಂಜೆ ಆಗಬೇಕಾದ ಕೆಲಸವೆನ್ನುವುದು ಹಲೀಮಾಬಿಗೂ ಗೊತ್ತು. ಮುಮ್ಮುಟ್ಟಿ ಮನೆಕಡೆ ಬರುವಾಗ ಮಕ್ಕಳಿಬ್ಬರೂ ಮಲಗಿರುತ್ತಿದ್ದರು. ಮುಮ್ಮುಟ್ಟಿ ಇದರಿಂದ ತುಂಬ ನೊಂದು ಕೊಳ್ಳುತ್ತಿದ್ದ.

ಹಿಂದೊಮ್ಮೆ ಮುಮ್ಮುಟ್ಟಿ ರಾತ್ರಿ ಬರುವಾಗ ಮಕ್ಕಳಿಗೆ ಬಿಸ್ಕತ್ತು, ಆಟದ ಸಾಮಾನುಗಳನ್ನು ತಂದಿದ್ದ. ಮಕ್ಕಳಿಬ್ಬರೂ ಮಲಗಿದ್ದರು. ಮುಮ್ಮುಟ್ಟಿ ಮಗುವನ್ನು ಎಬ್ಬಿಸುವ ಪ್ರಯತ್ನ ಮಾಡಿದ್ದ. ಹಲೀಮಾಬಿ "ಅದ್ಯಾಕೆ ಮಕ್ಕಳನ್ನು ಎಬ್ಬಿಸ್ತೀರಿ... ಬೆಳಿಗ್ಗೆ ಎದ್ದಾಗ ನಾನು ಕೊಡ್ತೇ ನಲ್ಲಾ...?" ಎಂದಿದ್ದಳು. "ಬೆಳಿಗ್ಗೆ ಎದ್ದ ನಂತರ ನೀನು ಕೊಡ್ತಿ ಅನ್ನೋದು ನಂಗೂ ಗೊತ್ತು. ನಂಗೆ ಅವು ಆನಂದ ಪಡೋದು ನೋಡಬೇಕೆನ್ನೋ

ಆಸೆ..." ಎಂದಿದ್ದ ಮಮ್ಮುಟ್ಟಿ. "ಅದಕ್ಕೇ ಹೇಳೋದು ಸಂಜೆ ಬೇಗ ಮನೆಗೆ ಬಂದು ಬಿಡಿ" ಅಂತ ಹೇಳಿದಾಗ ಮಮ್ಮುಟ್ಟಿ ವಾದಮಾಡಲಿಚ್ಛಿಸದೆ ಸುಮ್ಮ ನಿದ್ದ. ಅವನು ನಸುಕಿನಲ್ಲಿ ಮನೆಯಿಂದ ಹೊರಡುವಾಗಲೂ ಮಕ್ಕಳು ಮಲಗಿಯೇ ಇರುತ್ತಿದ್ದವು. ಅವು ಏಳುವ ತನಕ ಕಾದರೆ ಹೊತ್ತು ಮೂಡುತ್ತದೆ. ಅಷ್ಟು ಹೊತ್ತು ನಿಂತರೆ ಈ ಮನೆತನದ ಸಂಪ್ರದಾಯವಾದಿ ಗಳ ತಮಾಷೆಗೆ, ಕೊಂಕು ನುಡಿಗಳಿಗೆ ಬಲಿಯಾಗಬೇಕಾಗುತ್ತದೆ ಎಂದುಕೊಂಡು ಮಕ್ಕಳನ್ನು ಮುದ್ದಿಸುವ ಆಡಿಸುವ ಆಸೆಯನ್ನು ಹತ್ತಿಕ್ಕಿಕೊಂಡು ಸಿಟ್ಟಿನಿಂದಲೇ ಹೊರಟಿದ್ದ.

ಹಲೀಮಾಬಿಗೆ ಗಂಡನ ಸಿಡುಕು ಅರ್ಥವಾಗುತ್ತಿರಲಿಲ್ಲ. ತನ್ನ ತಂದೆ, ಸಹೋದರಿಯರ ಗಂಡಂದಿರು ಎಲ್ಲರೂ ಇದಕ್ಕೆ ಹೊಂದಿಕೊಂಡು ಬದುಕು ತ್ತಿಲ್ಲವಾ ? ತನ್ನ ಗಂಡ ಮಾತ್ರ ಯಾಕೆ ವಿರೋಧಿಸಬೇಕು ? ಇದಕ್ಕೆಲ್ಲಾ ಅವನು ಹುಟ್ಟಿದ ಕೇರಿಯು ದರಿದ್ರ ವಾತಾವರಣವೇ ಕಾರಣ ಎನ್ನುವ ತೀರ್ಮಾನಕ್ಕೆ ಬಂದು ಅವನ ಪ್ರಕೃತಿ ಸಹಜ ಭಾವನೆಗಳನ್ನೆಲ್ಲ ತಿರಸ್ಕರಿಸಿ ಬಿಡುತ್ತಿದ್ದಳು.

ಹಲೀಮಾಬಿಯು ಮೂಗಿಗೆ ಎಣ್ಣೆಯಲ್ಲಿ ಕರಿದ ತಿಂಡಿಯ ಹಿತವಾದ ವಾಸನೆ ಬಡಿದಾಗ ಸಂಜೆ ಮಸೀದಿಯ ಮುಲ್ಲಾರಿಂದ ಕೋಳಿ ಕೊಯ್ಸಿ 'ಹಲಾಲ್' ಮಾಡಿ ತಂದ ನೆನಪಾಯಿತು. ತಂಗಿ ಸಬಿನಾಳ ಗಂಡನಿಗೆ ಅದ್ದೂ ರಿಯ ಸತ್ಕಾರ. ಕೋಳಿ ತಂದೂರಿಯು ತಯಾರಿ ಇರಬೇಕು. ತನ್ನ ಗಂಡನಿಗೆ ಈ ತರದ ಸತ್ಕಾರ ನಿಂತು ಎಷ್ಟೋ ವರ್ಷವಾಯಿತು. ಗಂಡ ಈ ಬಗ್ಗೆ ಎಂದೂ ತಲೆ ಕೆಡಿಸಿಕೊಂಡಿಲ್ಲವಾದರೂ ಅವಳಿಗೆ ಈ ಅನಾದರದಿಂದ ನೋವಿನ ಅನುಭವವಾಗುತ್ತದೆ. ಈ ಬಗ್ಗೆ ಮಮ್ಮುಟ್ಟಿಗೆ ಹೇಳಿದರೆ ಅವನು ನಕ್ಕು ತೇಲಿಸಿಬಿಡುತ್ತಾನೆ. ಅಮ್ಮ ಯಾವಾಗಲೂ ಹಲೀಮಾಬಿಯೊಂದಿಗೆ ಹೇಳು ತ್ತಿರುತ್ತಾಳೆ. "ಇದ್ದರೆ ಮನೆ ಅಳಿಯಂದಿರು ಸಬೀನಾಳ ಗಂಡನಂತಿರ ಬೇಕು..." ಅವನು ವಿದೇಶದಿಂದ ಬರುವಾಗ ತನ್ನ ಹೆಂಡತಿಗೆ ಚಿನ್ನ, ಹತ್ತಾರು ಸೀರೆ ಕುಪ್ಪಸಗಳು, ಸೆಂಟು, ಮಕ್ಕಳಿಗೆ ಆಟದ ಸಾಮಾನು, ಮನೆಗೆ ಬೇಕಾದ ಪಾತ್ರೆಗಳು ತರುತ್ತಿದ್ದ. ಈ ಸಲ ಬರುವಾಗ ಹೆಂಡತಿಗೆ ತಂದ ಸೀರೆಗಳ ಜೊತೆಗೆ ತನ್ನ ಅತ್ತೆಗೂ ಒಂದು ಅದ್ದೂರಿಯ ಸೀರೆ ತಂದಿದ್ದ. ಹಲೀಮಾ ಬಿಯ ತಂದೆಗೆ ವಾಚು, ಫೋರೇನ್ ಕೊಡೆ, ಶರ್ಟ್‌ಪೀಸು ತಂದಿದ್ದ. ಅಮ್ಮನಿಗೆ ತನ್ನ ಅಳಿಯನನ್ನು ಯಾವ ರೀತಿಯಲ್ಲಿ ಸತ್ಕರಿಸಿದರೂ ಕಮ್ಮಿಯೇ ಅನಿಸು ತ್ತಿತ್ತು. ಅವಳು ಪದೇ ಪದೇ "ಹಲೀಮಾ... ನೋಡಿದ್ದೀಯೊ ಸಬೀನಾಳ

ಗಂಡ ಕೋಣೆಗೆ ಫ್ಯಾನು ತಂದಿದ್ದಾನೆ ಬಹಳ ಚೆನ್ನಾಗಿದೆ. ಈ ಸಲ ಫೋರೇನ್ ನಿಂದ ಬರುವಾಗ ಹಾಸಿಗೆ, ರಗ್ ತಂದಿದ್ದಾನೆ. ಎಷ್ಟು ಮಿದು ಗೊತ್ತಾ? ನಯಾ... ಬೆಣ್ಣೆಯಂ ಹಾಗಿದೆ..." ಎನ್ನುತ್ತ ಹೊಸ ಹೊಸ ಸುದ್ದಿ ಕೊಡುತ್ತಿದ್ದಳು. ಅಮ್ಮ ಹೀಗೆ ಹೇಳುವಾಗ ಹಲಿಮಾಬಿಗೆ "ನಿನ್ನ ಗಂಡ ಅದೊಂದು ತರದ ಪ್ರಾಣಿ... ಬರಿ, ದಂಡಕ್ಕೆ..." ಅಂತ ಅಂದಹಾಗನಿಸುತ್ತಿತ್ತು. ಅವುಗಳನ್ನೆಲ್ಲ ಸಬೀನಳ ಕೋಣೆಗೆ ಹೋಗಿ ನೋಡಿಬಂದು ತನ್ನ ಕೋಣೆಯೊಳಗೆ ಮದುವೆಯ ದಿನ ತಾಯಿಕೊಟ್ಟ ಹಳೆಯ ಮಂಚದ ಮೇಲೆ ಕೂತು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ತನ್ನ ಗಂಡನಿಗೆ ಮಂಚದ ಮೇಲೆ ಒಂದು ಮೆತ್ತನೆಯ ಹಾಸಿಗೆಯನ್ನು ಕೂಡ ಕೊಂಡುತಂದು ಹಾಕುವ ತಾಕತ್ತಿಲ್ಲ... ಬರಿಯ ಚಾಪೆ ತಲೆದಿಂಬೇ ಗತಿ ಎಂದುಕೊಳ್ಳುತ್ತ ಗಂಡನ ಬಗ್ಗೆ ಅತ್ಯಂತ ಜಿಗುಪ್ಸೆಗೊಂಡಿದ್ದಳು.

ಹಲೀಮಾಳ ಎರಡನೇ ತಂಗಿ ಆಯೆಷಾಳ ಗಂಡ ಊರಿನಲ್ಲಿ ದೊಡ್ಡ ಕಟ್ಲೇರಿ ಅಂಗಡಿಯ ಮಾಲಿಕ. ಅವನೂ ತನ್ನ ಕೋಣೆಯನ್ನು ಸಾಕಷ್ಟು ಸಿಂಗರಿಸಿದ್ದ. ಸಬೀನಾಳ ಗಂಡ ತಮ್ಮ ಕೋಣೆಯನ್ನು ವಿದೇಶಿ ವಸ್ತುಗಳಿಂದ ತುಂಬಿಸಿದ್ದರೆ, ಆಯೆಷಾಳ ಗಂಡ ಗಾದ್ರೆಜು ಕಪಾಟು, ಆಲ್ವಿ ರೆಫ್ರಿಜರೇಟರು ಮುಂತಾದ ಊರ ವಸ್ತುಗಳಿಂದ ತುಂಬಿಸಿದ್ದ. ಸಬೀನಾಳ ಗಂಡ ವಾಶಿಂಗ್ ಮೆಶಿನ್ ತಂದಾಗ, ಆಯೆಷಾಳ ಗಂಡ ಕೊಯಮತ್ತೂರಿಗೆ ಸ್ವತಹ ಹೋಗಿ ಹೊಸ ಕಂಪೆನಿಯೊಂದರ ಅತ್ಯಾಧುನಿಕ ವಾಶಿಂಗ್ ಮೆಶಿನ್ ತಂದಿದ್ದ! ಮಾವ ಅತ್ತೆಯರಿಗೆ ಸಬೀನಾಳ ಗಂಡ ಉಡುಗೊರೆ ತಂದಿದ್ದಾನೆಂತ ತಿಳಿದ ಕೂಡಲೇ ಆಯೆಷಾಳ ಗಂಡನೂ ಅಮ್ಮನಿಗೆ ಒಳ್ಳೆಯ ರೇಷ್ಮೆ ಸೀರೆ, ಅಪ್ಪನಿಗೆ ನೂರು × ನೂರರ ಮೌಲಾನ ಲುಂಗಿ, ರೇಷ್ಮೆಯ ಬಿಳಿ ಜುಬ್ಬ ತಂದಿದ್ದ. ಮನೆ ಅಳಿಯಂದಿರ ಈ ಪೈಪೋಟಿ ಅಮ್ಮ ಅಪ್ಪ ಇಬ್ಬರನ್ನೂ ತುಂಬ ಸಂತೋಷಗೊಳಿಸಿತ್ತು. ಅವರು ಬಂದರೆಂದರೆ ಸಡಗರದಿಂದ ಮನೆತುಂಬ ಓಡಾಡುತ್ತಿದ್ದರು. ಹೊಸ ಹೊಸ ತಿಂಡಿ ಬಿರಿಯಾನಿ ಮಾಡಿ ಅಮ್ಮ ತನ್ನ ಪ್ರೀತಿ ವ್ಯಕ್ತಪಡಿಸುತ್ತಿದ್ದಳು.

ಕಳೆದ ರಾತ್ರಿ ಮಮ್ಮುಟ್ಟಿ ಮನೆಗೆ ಬಂದಾಗ ಹಲೀಮಾಬಿಯ ಅಮ್ಮ ಊಟ ಬಡಿಸುವ ಸನ್ನಾಹದಲ್ಲಿದ್ದಳು. ಅಮ್ಮ ಆ ದಿನ ಮಾಂಸದ ಅಡುಗೆ ಮಾಡಿ ತುಪ್ಪನ್ನ ಮಾಡಿದ್ದಳು! ಸಬೀನಾಳ ಗಂಡನೂ ಆಯೆಷಾಳ ಗಂಡನೂ ಆಗಲೇ ಬಂದು ತಮ್ಮ ತಮ್ಮ ಕೋಣೆ ಸೇರಿದ್ದರು. ಅಮ್ಮ ಅಡುಗೆ ಕೋಣೆಯಲ್ಲಿರುವಾಗ ನೆರವಾಗುವುದು ಹಲೀಮಾಳ ಅಭ್ಯಾಸ. ಇವರು ಬಡಿಸಿಟ್ಟ

ದ್ದನ್ನು ತಮ್ಮ ತಮ್ಮ ಗಂಡಂದಿರಿಗೆ ಆಯೆಂಷಾ ಸಬೀನಾ ಕೊಂಡು ಹೋಗು ತ್ತಾರೆ. ಹಲೀಮಾ ತನ್ನ ಗಂಡನಿಗೆಂದು ಅಮ್ಮ ಬಡಿಸಿಟ್ಟಿದ್ದ ಸಾರಿನ ಪಾತ್ರೆಗೆ ಕೈ ಹಾಕುವಾಗ "ಹಲೀಮಾ... ಅದು ನಿನ್ನ ಅಪ್ಪನಿಗಂತ ಬಡಿಸಿದ್ದು. ನೀನು ಆ ಪಾತ್ರೆಯದ್ದು ಕೊಂಡು ಹೋಗು" ಎಂದಳು. ಹಲೀಮಾ ತನ್ನ ಅಮ್ಮ ತೋರಿ ಸುವ ಪಾತ್ರೆ ಎತ್ತಿಕೊಂಡು ಹೋಗುವಾಗ ತಿಳಿದಿತ್ತು, ಆ ಪಾತ್ರೆಗೂ ಉಳಿದ ಪಾತ್ರೆಗಳಿಗೂ ಇರುವ ವ್ಯತ್ಯಾಸ. ಮುಂಚೆ ಅಮ್ಮ 'ಊಟ ಬಡಿಸುವಾಗ ಯಾವ ತಾರತಮ್ಯ ಮಾಡಕೂಡದು. ಅದನ್ನು ಅಲ್ಲಾಹು ಮೆಚ್ಚುವುದಿಲ್ಲ...' ಅಂತ ಹೇಳುತ್ತಿದ್ದಳು. ಆದರೆ ಈಗವಳು ಮಾಡಿದ್ದೇನು? ಎಂದು ನೊಂದು ಕೊಂಡು ತನ್ನ ಕೋಣೆಗೆ ಹೋಗಿದ್ದಳು.

ಮಮ್ಮುಟ್ಟಿ ಕೈತೊಳೆದು ಬಂದು "ಬಿಸ್ಮಿಲ್ಲಾಹ್..." ಹೇಳಿ ತುತ್ತು ಅನ್ನವನ್ನು ಬಾಯಿಗಿಡುವಾಗ ಹಲೀಮಾಬಿ "ಸಬೀನಾಳ ಗಂಡ ಕೋಣೆಗೆ ಫೋರೇನ್‌ನ ಬೆಡ್ ತಂದಿದ್ದಾರೆ, ಅಮ್ಮನಿಗೆ ಸೀರೆ ಕುಪ್ಪಸ, ಅಪ್ಪನಿಗೆ ವಾಚು, ಲುಂಗಿ ಎಲ್ಲಾ ತಂದುಕೊಟ್ಟಿರುತ್ತಾರೆ. ಆಯೆಂಷಾಳ ಗಂಡ ಕೂಡ ಕಪಾಟು, ಫ್ರಿಜ್ಜು ತಂದಿದ್ದಾರೆ. ನಮ್ಮ ಕೋಣೆಯಲ್ಲಿ ಏನೂ ಇಲ್ಲ. ಅವರೆಲ್ಲಿಯಾದ್ರೂ ನಮ್ಮ ಕೋಣೆ ನೋಡ್ಲಿಕ್ಕೆಂತ ಬಂದ್ರೆ ನಂಗೆ ನಾಚಿಕೆಯಾಗ್ತದೆ..." ಎಂದಿ ದ್ದಳು.

ಮಮ್ಮುಟ್ಟಿ ಬಾಯಿಗಿಟ್ಟ ಅನ್ನವನ್ನು ನುಂಗುತ್ತ "ಅವ್ರೆಲ್ಲಾ ಕೈತುಂಬ ಸಂಪಾದನೆ ಮಾಡುವವರು. ನನ್ನ ಹಾಗೆ ಮೈಲುಗಟ್ಲೆ ಸೈಕಲ್ಲು ತುಳಿದು ಮೀನು ವ್ಯಾಪಾರ ಮಾಡುವವರಲ್ಲವಲ್ಲಾ?" ಎಂದಿದ್ದ ತಮಾಷೆಯಾಗಿ. ಹಲೀಮಳ ಕಣ್ಣಲ್ಲಿ ನೀರುಕ್ಕಿ ಬಂದಿತ್ತು. "ನೀವು ಹೀಗೇನೆ ಹೇಳ್ತಾ ಇರಿ. ಬೇರೆಯವರಂತೆ ಮಾನವಾಗಿ ಬದುಕಬೇಕೆಂಬ ಆಸೆಯೇ ನಮಗಿಲ್ಲ..." ಎಂದಿ ದ್ದಳು. ಮಮ್ಮುಟ್ಟಿ ಉತ್ತರಿಸದೆ ಸುಮ್ಮನಿದ್ದ. ಹಲೀಮಾ ಸಿಟ್ಟಾಗುತ್ತ "ನೀವೊಂದು ಅಮ್ಮನಿಗೇಂತ ಸೀರೆ ತೆಗೆದದ್ದುಂಟಾ? ಅಪ್ಪನಿಗೊಂದು 'ಮೌಲಾನಾ' ಲುಂಗಿಯಾದ್ರೂ ತಂದದ್ದುಂಟಾ? ಅಪ್ಪ ಅಮ್ಮ ಮಂಚಕ್ಕೆ ಒಂದು ಹಾಸಿಗೆ ಕೂಡ ತಂದು ಹಾಕಿಲ್ಲ..." ಎನ್ನುತ್ತ ಎಲ್ಲ ನಂಜನ್ನು ಒಟ್ಟಾಗಿ ಕಾರಿದ್ದಳು.

ಮಮ್ಮುಟ್ಟಿಗೆ ಅತ್ಯಂತ ನೋವಾಗಿತ್ತು. "ನನ್ನ ಸಂಪಾದನೆ ಎಷ್ಟಂತ ನಿಂಗೆ ಗೊತ್ತು. ಪೂರ್ತಿ ಹಣವನ್ನೆಲ್ಲ ನಿನ್ನ ಕೈಗೆ ಹಾಕುತ್ತಿದ್ದೇನೆ. ಹೀಗಿದ್ದೂ ನೀನ್ಯಾಕೆ ಹೀಗೆ ಹೇಳ್ತಿ ಅಂತ ನಂಗೆ ಗೊತ್ತು..." ಎಂದಿದ್ದ ಖಾರವಾಗಿ.

ಹಲೀಮಾಬಿ ಬಿಡಲಿಲ್ಲ. ಅವಳು ಇನ್ನಷ್ಟು ನಂಜುಕಾರುತ್ತ "ಏನು

ಹೇಳಿದ್ರೂ ನಾನಿಲ್ಲಿ ಬಂದು ಬಿದ್ದಿರೋದ್ರಿಂದ ನೀನು ಹೀಗೆ ಹೇಳ್ತಿ ಅಂತ ನನ್ನ ಬಾಯಿ ಮುಚ್ಚಿಸ್ತೀರಿ. ಇಲ್ಲಿ ನಾನು ಪಡುತ್ತಿರುವ ಹಿಂಸೆ ನಿಮ್ಗೆ ಹ್ಯಾಗೆ ಗೊತ್ತಾಗ್ತದೆ ಹೇಳಿ..." ಎಂದಿದ್ದಳು.

ಮಮ್ಮುಟ್ಟಿ ಇನ್ನಷ್ಟು ಸಿಟ್ಟಾಗಿ "ನೋಡು ನಿನಗೆ ಹೆಚ್ಚೇನು ಹೇಳಲಾರೆ. ನಿನ್ನಪ್ಪನ ಹತ್ರ ಹೋಗಿ ಯಾಕೆ ನನ್ನನ್ನ ಇಂಥ ಭಿಕಾರಿಗೆ ಮದುವೆ ಮಾಡಿ ಕೊಟ್ರಿ? ಅಂತ ಕೇಳು. ಯಾವನಾದ್ರೂ ಫೋರೇನ್‌ನವನೋ, ವ್ಯಾಪಾರಿಯೋ ಆಗ ನಿಮ್ಗೆ ಸಿಗ್ಲಿಲ್ವಾಂತ ಕೇಳು. ಇದಕ್ಕೆಲ್ಲ ಕಾರಣ ನಿಮ್ಮಪ್ಪ, ಎಲ್ಲಾ ತಪ್ಪು ನಿನ್ನಪ್ಪಂದೆ" ಎಂದು ಎದುರಿಗಿದ್ದ ಅನ್ನವನ್ನು ಉಣ್ಣಲಾಗದೆ ಕೈಕೊಡವಿ ಎದ್ದಿದ್ದ. ಊಟ ಮಾಡದೆ ಹಾಗೆಯೇ ಮಲಗಿದ್ದ. ಬೆಳಿಗ್ಗೆ ಕೂಡಾ ನಾಷ್ಟ ಮಾಡದೆ ಹಾಗೆಯೇ ಎದ್ದು ಕೆಲಸಕ್ಕೆ ಹೊರಟಿದ್ದ.

ಒಳಗಿನಿಂದ ಹಲೀಮಾಬಿಯನ್ನು ಅಮ್ಮ ಕೂಗಿದ್ದು ಕೇಳಿಸಿದಾಗ ಹಿಂದಿನ ದಿನದ ಜಗಳದ ನೆನಪುಗಳಲ್ಲಿ ಮುಳುಗಿದ್ದವಳು ಎಚ್ಚತ್ತಳು. ಅಡುಗೆ ಕೋಣೆಯೊಳಗೆ ಹೋದಾಗ ಅವಳಮ್ಮ ಸುಂದರ ಹೂಗಳ ಚಿತ್ರವಿರುವ ಪಿಂಗಾಣಿ ಪಾತ್ರೆಯಲ್ಲಿ ತುಪ್ಪದನ್ನ, ಕೋಳಿಸಾರು ತಂದೂರಿ ಬಡಿಸುತ್ತಿದ್ದಳು. ಆ ಪಾತ್ರೆಗಳನ್ನು ಹಲೀಮಾಬಿ ಎವೆಯಿಕ್ಕದೆ ನೋಡುವುದನ್ನು ಕಂಡಾಗ ಅವಳಮ್ಮ "ಇದು ಸಬೀನಳ ಗಂಡ ಫೋರೇನ್‌ನಿಂದ ತಂದದ್ದು..." ಎಂದಳು. "ನಿನ್ನ ಗಂಡ ಇನ್ನೂ ಬಂದಿಲ್ವೇನೇ" ಅಂತಲೂ ಕೇಳಿದಳು. "ಇನ್ನೂ... ಇಲ್ಲ" ಅಂದಳು ಹಲೀಮಾಬಿ, ಅಮ್ಮನಿಗೆ ಕೆಲಸದಲ್ಲಿ ನೆರವಾಗುತ್ತಾ. ಸಬೀನಾ ಮತ್ತು ಆಯೆಷಾ ತಮ್ಮ ತಮ್ಮ ಕೋಣೆಯೊಳಗೆ ಇದ್ದರು. ಒಳಗೆ ಸಣ್ಣಗೆ ನಗೆ ಪಿಸುಮಾತು ಕೇಳಿಬರುತ್ತಿತ್ತು.

ಅಮ್ಮ ಬಡಿಸಿಟ್ಟ ಪಾತ್ರೆಗಳಲ್ಲಿ ಕೆಲವನ್ನು ಎತ್ತಿಕೊಂಡು ಹೋದವಳು ಮೊದಲು ಸಬೀನಾಳ ಕೋಣೆಯ ಹೊರಗೆ ನಿಂತು "ಸಬೀನಾ..." ಅಂತ ಕರೆದಳು. ಸಬೀನಾಳ ಗಂಡ ಒಳಗಿರುವಾಗ ಅವಳು ಒಳಗೋಗೋದು ಹ್ಯಾಗೆ? ಮರೆಯಲ್ಲಿ ನಿಂತು ಕರೆದಳು. ಸಬೀನಾ ಹೊರಗೆ ಬಂದವಳು ಅಮ್ಮನ ಕೈಯಲ್ಲಿದ್ದ ಪಾತ್ರೆಗಳನ್ನು ಎತ್ತಿಕೊಂಡು ಒಳಗೆ ಹೋದಳು.

ಆಯೆಷಾ ತನ್ನ ಕೋಣೆಯಿಂದ ಎದ್ದು ಅಡುಗೆ ಕೋಣೆಯೊಳಗೆ ಬಂದಳು. ಹಲೀಮಾ ಅವಳಿಗಾಗಿ ಹೊಸ ಪಿಂಗಾಣಿ ಪಾತ್ರೆಯಲ್ಲಿ ಅನ್ನ ಬಡಿಸುತ್ತಿದ್ದಳು. ಆಯೆಷಾ ಅವಳ ಹತ್ತಿರ ಬಂದು "ಅಕ್ಕಾ... ಆ ಪಾತ್ರೆಯಲ್ಲಿ ಅನ್ನ ಹಾಕಿ ಕೊಡಬೇಡ. ಫೋರೇನ್‌ನ ಭಾವ ತಂದ ಪಾತ್ರೆಯಲ್ಲಿ ಹಾಕಿ ಕೊಡುವುದು ಅವರಿಗಿಷ್ಟವಿಲ್ಲ. ಬೇರೆ ಪಾತ್ರೆಯಲ್ಲಿ ಹಾಕಿಕೊಡು..."

ಎಂದಳು. ಹಲೀಮಾ ಬೆರಗಾಗಿ ನಿಂತಿದ್ದಳು. ಅಮ್ಮ "ಅದಕ್ಕೇನು... ಬೇರೆ ಪಾತ್ರೆಯಲ್ಲಿ ಬಡಿಸಿಕೊಡೋಣ..." ಎಂದು ಬೇರೆ ಪಾತ್ರೆಯಲ್ಲಿ ಬಡಿಸಿ ಕೊಟ್ಟಳು. ಅಮ್ಮ ಕೂಡ ಈ ಸಹೋದರಿಯರ ನಡುವಿನ ಪೈಪೋಟಿಗೆ ಬೆಂಬಲ ನೀಡುತ್ತಿರುವುದು ಕಂಡ ಹಲೀಮಾಬಿ ಚಕಿತಳಾದಳು. ಇಂತಹ ಸಂದರ್ಭದಲ್ಲಿ ಮಮ್ಮುಟ್ಟಿ ಹೇಳಿದ ಮಾತುಗಳೆಲ್ಲ ನೆನಪಾಗುತ್ತದೆ. "ಬೇರೆ ಮನೆ ಮಾಡೋದು ಒಳ್ಳೆಯದೇನೋ..." ಅಂದುಕೊಳ್ಳುತ್ತಾಳಾದರೂ ಧೈರ್ಯಸಾಲದೆ ಸುಮ್ಮ ನಾಗುತ್ತಿದ್ದಳು.

ಆಯೆಷಾ ಊಟದ ಪಾತ್ರೆಗಳನ್ನೆತ್ತಿಕೊಂಡು ತನ್ನ ಕೋಣೆಯೊಳಗೆ ಹೋದನಂತರ ಅಮ್ಮ ಕೋಣೆಯ ಹೊರಗೆ ನಿಂತು "ಮದುಮಗ ಚೆನ್ನಾಗಿ ಊಟಮಾಡಬೇಕು..." ಎನ್ನುತ್ತ ಇಬ್ಬರಿಗೂ ಕೇಳುವಂತೆ ಉಪಚರಿಸು ತ್ತಿದ್ದಳು. ತನ್ನ ಗಂಡನನ್ನು ಅಮ್ಮ ಪ್ರೀತಿಯಿಂದ ಉಪಚರಿಸುವುದಿರಲಿ, 'ಮದುಮಗ' ಅಂತ ಕೋಯಾ ಮನೆತನದ ಅತ್ತೆಯಂವರ ರಿವಾಜಿನ ಸಂಬೋಧನೆ ಕೂಡ ಮಾಡಿ ಮಾತಾಡುವುದು ಕೂಡ ಅಪರೂಪವಾಗಿಬಿಟ್ಟಿತು ಎಂದು ಕೊಂಡಳು ಹಲೀಮಾ.

"ಅಲ್ಲಾಹು ನಮ್ಮನ್ನು ಹೀಗೆಯೇ ಇಡಲಿಕ್ಕಿಲ್ಲ. ತನ್ನಲ್ಲಿರುವ ಸಂಪತ್ತು ಬರ್ಕತ್ತಿನ ರಾಶಿಯಿಂದ ನಮಗೂ ಒಂದಿಷ್ಟು, ಒಂದಲ್ಲಾ ಒಂದುದಿನ ಕರುಣಿಸಿ ಯಾನು..." ಎಂದುಕೊಂಡು ಹಲೀಮಾಬಿ ತನ್ನ ತಂಗಿಯಂದಿರ ಮುಂದೆ ತನ ಗಾಗುವ ಅವಮಾನವನ್ನು ದಿನವೂ ನುಂಗಿಕೊಳ್ಳುತ್ತಿದ್ದಳು. ಮಮ್ಮುಟ್ಟಿಯು ಮುಂದೆ ಹೀಗೆಯೇ ಹೇಳಿಯೂ ಇದ್ದಳು. ಮಮ್ಮುಟ್ಟಿ ನಾಟಕೀಯವಾಗಿ ಕೈಯೆತ್ತಿ "ಆಮೀನ್..." ಎಂದು ನಕ್ಕು ತಮಾಷೆ ಮಾಡಿದ್ದ.

ತುಂಬ ಹೊತ್ತಾದರೂ ಗಂಡ ಬಾರದೆ ಇರುವುದು ಕಂಡು 'ಎಲ್ಲೋ ಮೀನು ಉಳಿದಿರಬೇಕು. ಉಪ್ಪು ಹಾಕಿಸಿಟ್ಟು ಬರುವುದಕ್ಕೆ ಹೋಗಿರ ಬಹುದು' ಎಂದುಕೊಳ್ಳುತ್ತಾ ಊಟದ ಪಾತ್ರೆಗಳನ್ನು ಮುಚ್ಚಿಟ್ಟಳು.

ಸಬೀನಾ, ಆಯೆಷಾರ ಕೋಣೆಗಳಲ್ಲಿ ಮೆತ್ತಗಿನ ಮಾತು, ನಗೆ, ಕೇಳಿ ಬರುತ್ತಿತ್ತು. ಹಲೀಮಾಬಿ ತನ್ನ ಮಂಚದ ಮೇಲೆ ಒರಗಿ ಕೂತು ಗಂಡನ ಆಗ ಮನ ನಿರೀಕ್ಷಿಸುತ್ತಿದ್ದಳು.

ಮಮ್ಮುಟ್ಟಿ ಮನೆಗೆ ಬರುವಾಗ ಹತ್ತೂವರೆ ದಾಟಿತ್ತು. ಅವನು ಬಾಗಿಲು ತಟ್ಟಿದಾಗ ಹಲೀಮಾಬಿಗೆ ನಿದ್ದೆ ಬಂದಿರಲಿಲ್ಲ. ಕೂಡಲೆ ಎದ್ದು ಬಾಗಿಲು ತೆರೆದಳು. ಮಮ್ಮುಟ್ಟಿ ಎಂದಿನಂತೆ ತೆಪ್ಪಗಿದ್ದ.

ಹಲೀಮಾಬಿ ಮುಖವನ್ನು ಸಿಂಡರಿಸಿಕೊಂಡೇ ಊಟದ ಪಾತ್ರೆಯನ್ನು

ತಂದು ಅವನ ಮುಂದಿಟ್ಟಳು. ಯಾಕೆ ತಡ ಅಂತ್ಲೂ ಕೇಳಲಿಲ್ಲ. ಮಮ್ಮು ಟ್ಟಿಗೆ ಜೋರಾಗಿ ಹಸಿವಾಗಿತ್ತು. ಕೈಕಾಲು ತೊಳೆದು ಬಂದು ಊಟಕ್ಕೆ ಕೂತ. ಹಲೀಮಾ ತಲೆ ತಿರುಗಿಸಿ ಎಲ್ಲೋ ನೋಡುತ್ತ ಕೂತಿದ್ದಳು. ಅವಳು ಊಟ ಬಡಿಸುವಾಗ ತನ್ನ ಕಣ್ಣುಗಳನ್ನು ಅವಳ ಕಣ್ಣುಗಳು ಸಂಧಿಸಿದಾಗ ನಗೆ ಬೀರಿ ಅವಳನ್ನು ನಗಿಸಲು ಪ್ರಯತ್ನ ಪಟ್ಟ. ಅವಳಿಗೆ ದುಃಖ ಉಮ್ಮಳಿಸಿ ಬಂದಿತ್ತು. ಮಮ್ಮುಟ್ಟಿಗೆ ಅವಳನ್ನು ಮಗುವಿನಂತೆ ತಬ್ಬಿ ಸಂತೈಸಬೇಕೆನಿಸು ತ್ತಿತ್ತು. ಅವಳು ಬೇಡದ್ದೆಲ್ಲಾ ಅವಾಂತರಗಳನ್ನು ತಲೆಗೆ ಹಚ್ಚಿಕೊಂಡು ಯಾಕೆ ಕೊರಗುತ್ತಿರಬೇಕೆಂಬ ಪ್ರಶ್ನೆ ಮೂಡಿಬಂದಂತೆ ಅವಳ ಬಗ್ಗೆ ಅಸಹ್ಯ ವಾಗುತ್ತದೆ. ತನ್ನ ತಂಗಿಯಂದಿರಲ್ಲಿ ಅದುಂಟು, ಇದುಂಟು ಅಂತ ಹೇಳ್ಕೊಂಡು ತಲೆಕೆಡಿಸಿಕೊಳ್ಳೋದು. ನಮಗೆ ಅಲ್ಲಾಹು ಕೊಟ್ಟಷ್ಟರಲ್ಲೇ ತೃಪ್ತಿ ಪಡ್ಕೊಂಡಿರಬೇಕಂತ ಎಷ್ಟು ಹೇಳಿದ್ರೂ ಆಗಷ್ಟೇ ಹೂಂಗುಟ್ಟಿದರೂ ಮತ್ತೆ ಹಿಂದಿನಂತೆಯೇ ಶುರುಮಾಡುತ್ತಿದ್ದಳು.

ಇದಕ್ಕೆಲ್ಲಾ ಇರುವ ಒಂದೇ ಮದ್ದೆಂದರೆ ಇಲ್ಲಿಂದ ದೂರ ಹೋಗಿ ನಮ್ಮದೇ ಎನಿಸುವ ರೀತಿಯಲ್ಲಿ ಸಂಸಾರ ಸಾಗಿಸೋದು. ಅದಕ್ಕಾಗಿ ಸಾಕಷ್ಟು ಪ್ರಯತ್ನ ಪಟ್ಟಿದ್ದ. ಒಂದು ಸಣ್ಣ ಬಾಡಿಗೆ ಮನೆಯನ್ನು ಹುಡುಕುವುದಕ್ಕಾಗಿ ಕಲ್ಲಿಕೋಟೆಯನ್ನು ಇಡಿಯಾಗಿ ಸುತ್ತಿದ್ದ. ಅವರು ಕೇಳುವ ದುಬಾರಿ ಬಾಡಿಗೆ, ಇಡುಗಂಟನ್ನು ಕೊಡಲಾರದೆ ಸೋತಿದ್ದ. ಒಂದು ವೇಳೆ ತನಗೆ ಬೇಕಾದ ಮನೆ ಸಿಕ್ಕಿದರೂ ಈ ಮನೆತನದ ದರಿದ್ರ ಸಂಪ್ರದಾಯ ತನ್ನನ್ನು ಬೇರೆಡೆ ಹೋಗಲು ಬಿಡುವುದಿಲ್ಲ ಎನ್ನುವುದು ಅವನಿಗೆ ಗೊತ್ತಿತ್ತು. ಹೋದರೆ ಅದರ ಪರಿಣಾಮವೂ ತಿಳಿದಿತ್ತು. ಹಲೀಮಾಬಿ ತನ್ನ ಜೊತೆಗಿದ್ದರೆ ಬೆಟ್ಟವನ್ನಾದರೂ ಕಡಿದೇನು ಎನ್ನುವ ಹುಮ್ಮಸ್ಸಿತ್ತು. ಆದರೆ ಅವಳಲ್ಲಿ ಈ ವಿಚಾರ ತಿಳಿಸಿದರೆ ಅಮ್ಮ ಏನೆಂದಾರು? ಅಪ್ಪ ಏನೆಂದಾರು, ಜನ ಏನೆಂದಾರು ಅಂತ ಮನೆ ತನದ ಮುದುಕಿಯಂತೆ ವಟಗುಟ್ಟಿ ಮಮ್ಮುಟಿಯನ್ನು ಸಿಟ್ಟಿಗೆಬ್ಬಿಸುತ್ತಾಳೆ. ಅವನ ಉತ್ಸಾಹದ ಬುಗ್ಗೆ ಟುಸ್ಸೆನ್ನಿಸುತ್ತದೆ.

ಹಿಂದೊಮ್ಮೆ ಕುಟ್ಟಿಚಿರಾದಲ್ಲಿ ಮಮ್ಮುಟ್ಟಿ ತನ್ನ ಅಮ್ಮನನ್ನು ನೋಡಲು ಹೋದಾಗ ತಂಗಿ ನಫೀಸಾಳ ಬಗ್ಗೆ "ಅವಳಿಗೊಂದು ಒಳ್ಳೆಯ ಹುಡುಗನನ್ನು ನೋಡಬೇಕು ಮಗಾ... ನೀನವಳ ಅಣ್ಣನಾಗಿರೋದಕ್ಕೆ ಅಷ್ಟಾದರೂ ಮಾಡಿ ಪುಣ್ಯ ಕಟ್ಟಿಕೋ" ಅಂತ ಗೋಗರೆದಿದ್ದಳು. ಮಮ್ಮುಟ್ಟಿಯ ತಲೆಯಲ್ಲಿ ಯೋಚನೆಯೊಂದು ಹೊಳೆದು ತನ್ನ ಹೆಂಡತಿಯ ಮುಂದೆ ವಿಚಾರವನ್ನು ಮುಂದಿಟ್ಟಿದ್ದ. "ನಫೀಸಾಳನ್ನು ಊರಿನ ಹುಡುಗನೊಬ್ಬನಿಗೆ ಕೊಟ್ಟು

ಮದುವೆ ಮಾಡಿಸಬೇಕಂತ ಅಮ್ಮನ ಆಸೆ. ನಂಗೂ ಅದೇ ಅಭಿಪ್ರಾಯ. ಇದಕ್ಕೆ ನಿನ್ನ ಸಹಾಯ ಬೇಕು... ಹಲೀಮಾ..." ಎಂದಿದ್ದ.

ಮಮ್ಮುಟ್ಟಿಯ ಮಾತು ಕೇಳಿದಂತೆ ಅವಳ ಮುಖದಲ್ಲಾದ ಬದಲಾವಣೆಗಳನ್ನು ಗುರುತಿಸಿಕೊಂಡರೂ ಹೇಳುವುದನ್ನು ಹೇಳಿಯೇ ಬಿಡಬೇಕೆಂಬ ಹಟದಿಂದ ಅವನು ಮುಂದುವರಿಸಿದ್ದ. "ನೋಡು, ಅಲ್ಲಿ ಅವಳಿದ್ದರೆ ಮದುವೆಗೆ ತೊಂದರೆಯಾಗಬಹುದು. ಅದಕ್ಕೆ ಅವಳನ್ನು ಇಲ್ಲಿಗೆ ಕರೆತಂದರೆ ಒಳ್ಳೆಯದಂತ ನನ್ನ ಅಭಿಪ್ರಾಯ. ನಿನಗೂ ಒಬ್ಬಳು ಜೊತೆಗಾತಿಯಾಗುತ್ತಾಳೆ. ಅವಳಿಗೊಂದು ಗಂಡು ಹುಡುಕುವ ತನಕ ಅಷ್ಟೆ..." ಎಂದಾಗ ಹಲೀಮಾಬಿ ಸಿಡಿದೆದ್ದು, "ಏನು, ನಿಮ್ಮ ತಂಗಿಯನ್ನು ಈ ಮನೆಗೆ ಕರೆತರಬೇಕೆಂದಿದ್ದೀರಾ... ಯಾ ಅಲ್ಲಾಹ್... ನಮ್ಮ ಮನೆತನದ ಮರ್ಯಾದೆಯನ್ನು ಬೀದಿ ಪಾಲು ಮಾಡಬೇಕೆಂದಿದ್ದೀರೇನೋ..." ಎಂದಿದ್ದಳು.

ಮಮ್ಮುಟ್ಟಿಗೆ ಅವಳನ್ನು ಹಿಡಿದು ಜಜ್ಜಿಬಿಡಬೇಕೆನ್ನುವಷ್ಟು ಕೋಪ ಬಂದರೂ ತಡೆದುಕೊಂಡ. "ನಿಂಗಿಷ್ಟವಿಲ್ಲದಿದ್ರೆ ಬೇಡಬಿಡು. ಆದರೆ ಅವರು ಕೂಡ ನಿನ್ನಂತೆಯೇ ಹೆಣ್ಣು ಜೀವಿಗಳು, ಅವ್ರಿಗೂ ನಿನ್ನಂತೆಯೇ ಬದುಕಬೇಕೆನ್ನುವ ಆಶೆಯಿದೆ. ನೀವು ಅವಕಾಶ ಕೊಟ್ಟರಲ್ಲವೇ ಅವ್ರು ತಮಗಿರುವ ಕಳಂಕದಿಂದ ಹೊರಬರಲು ಸಾಧ್ಯ ?" ಎಂದ.

"ಅದೇನೇ ಇದ್ರೂ ಅವಳನ್ನು ಇಲ್ಲಿಗೆ ಕರೆತರಬೇಡಿ, ನನ್ನ ನೆಮ್ಮದಿ ಕೆಡಿಸಬೇಡಿ... ನಿಮ್ಮ ದಮಯ್ಯ... ನನ್ನ ಅಪ್ಪ ಅಮ್ಮ ಏನೆಂದಾರು...!" ಎಂದಳು ಹಲೀಮಾಬಿ.

ಮಮ್ಮುಟ್ಟಿ ಸಿಟ್ಟಿನಿಂದ "ನೀನು ಮತ್ತು ನಿನ್ನ ಮನೆಯವ್ರು ಅವರನ್ನು ಅಷ್ಟು ಹೀನವಾಗಿ ಕಾಣ್ತದ್ದೀರಲ್ಲಾ, ನಿನ್ನ ಗಂಡನಾದ ನಾನು ಆಕಾಶದಿಂದ ಕೆಳಬಿದ್ದವನೇನು ? ನಂಗೆ ನಿನ್ನಪ್ಪ ನಿನ್ನನ್ನು ನಿಕಾಹ್ ಮಾಡ್ಸಿ ಹೇಗೆಕೊಟ್ಟರು ? ನಾನು ಕೂಡ ಯಾವನೋ ಒಬ್ಬ ಅರಬಿಗೆ ಹುಟ್ಟಿದೋನು. ನಿಮ್ಮಪ್ಪನತ್ರ ಕೇಳು. ಈ ಕೋಯ ಮನೆತನ ಕೂಡಾ ಯಾವನೋ ಒಬ್ಬ ಅರಬನಿಂದ ಹುಟ್ಟಿ ಬೆಳೆದದ್ದಲ್ವಾಂತ...?" ಹೇಳಿದಾಗ ಹಲೀಮಾಬಿ ಮೌನವಾಗಿದ್ದಳು.

ಮಮ್ಮುಟ್ಟಿಗೆ ತನ್ನ ಮದುವೆಯಾದಾಗಿನ ಸಂದರ್ಭ ಕಣ್ಣಮುಂದೆ ನಿಂತಿತು. ಆಗ ಹಲೀಮಾಬಿಯ ಅಪ್ಪ ತನ್ನ ಮೂರು ಹೆಣ್ಣು ಮಕ್ಕಳು ಎರಡು ಗಂಡು ಮಕ್ಕಳನ್ನು ಸಾಕಲು ಹೆಣಗಾಡಬೇಕಾಗಿತ್ತು. ಅತ್ಯಂತ ಬಡತನದಲ್ಲಿದ್ದರು. ಒಣ ಮೀನಿನ ವ್ಯಾಪಾರದಲ್ಲಿ ಅನುಭವಿಸಿದ ನಷ್ಟದ ಜೊತೆಗೆ ಬೆಳೆದು ನಿಂತ ಹಿರಿಯ ಮಗಳು ಹಲೀಮಾಬಿಯ ಮದುವೆಯ

ಕೊರಗು ಅವರನ್ನು ಮತ್ತಷ್ಟು ಕಾಡಿತ್ತು. ಈ ಕಂಗಾಲಾದ ಘಳಿಗೆಯಲ್ಲೇ ಮಮ್ಮೂಟ್ಟಿ ಅವರ ಕಣ್ಣಿಗೆ ಬಿದ್ದದ್ದು. ಕಲ್ಲಿಕೋಟೆಯ ಮೀನ ಮಾರ್ಕೆಟಿನಲ್ಲೇ ಪರಿಚಯವಾದದ್ದು. ಅವನ ಪ್ರಾಮಾಣಿಕತೆಯನ್ನು ಅವರು ಮೆಚ್ಚಿದ್ದೆ ಹೊರತು, ಈಗಿನಂತೆ ಐಶ್ವರ್ಯ, ತರವಾಡಿನ ಬಗ್ಗೆ ತಲೆಕೆಡಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಸರಳ ರೀತಿಯಲ್ಲೇ ಮಮ್ಮೂಟ್ಟಿಗೆ ತನ್ನ ಮಗಳನ್ನು ನಿಕಾಹ್ ಮಾಡಿಕೊಟ್ಟಿದ್ದರು. ನಂತರ ಅವರ ಒಣಮೀನಿನ ವ್ಯಾಪಾರ ಚೆನ್ನಾಗಿ ನಡೆದು ತನ್ನ ಉಳಿದಿಬ್ಬರು ಹೆಣ್ಣುಮಕ್ಕಳ ಮದುವೆಯನ್ನು ಅದ್ದೂರಿಯಲ್ಲೇ ಮಾಡಿದರು. ಹಿಂದೆ ಅನುಭವಿಸಿದ ಬಡತನವನ್ನು ಮರೆತು ಈಗ ಹುಟ್ಟು ಶ್ರೀಮಂತರೇನೋ ಎನ್ನುವಂತೆ ಮೆರೆಯುವುದನ್ನು ಕಂಡಾಗ ಮಮ್ಮೂಟ್ಟಿಗೆ ಅವರ ಬಗ್ಗೆ ಅಸಹ್ಯ ಹುಟ್ಟುತ್ತಿತ್ತು.

ಈ ಮರ್ಯಾದಸ್ಥರೆನಿಸಿಕೊಂಡವರ ಬಗ್ಗೆ ಯೋಚಿಸಿದಂತೆ ಅವರ ಹುಳುಕುಗಳನ್ನೆಲ್ಲಾ ಎತ್ತಿ ತೋರಿಸಿ ಮುಖಕ್ಕೆ ರಾಚಿಬಿಡಬೇಕೆನಿಸುವಷ್ಟು ಮಮ್ಮೂಟ್ಟಿಗೆ ಸಿಟ್ಟು ಬಂದರೂ ತನಗಿವರೊಂದಿಗೆ ರಾಜಿ ಮಾಡಿಕೊಳ್ಳದಿದ್ದರೆ ನೆಮ್ಮದಿ ಇಲ್ಲ ಎನ್ನುವ ಸತ್ಯ ಅವನ ಮುಂದೆ ನಿಂತಾಗ ತೀರ ಅಸ್ವಸ್ಥನಾಗುತ್ತಿದ್ದ.

ಒಮ್ಮೊಮ್ಮೆ ಹಲೀಮಾಬಿ ಮಮ್ಮೂಟ್ಟಿಗೆ ಎಷ್ಟು ಪ್ರಿಯಳಾಗುತ್ತಾಳೆಂದರೆ ಅವನ ವಿಚಾರಗಳೆಲ್ಲಾ ಸರಿಯೆಂಬಂತೆ ಒಪ್ಪಿಕೊಂಡಾಗ ಹೃದಯಕ್ಕೆ ತೀರ ಹತ್ತಿರದವಳೆನಿಸಿ, ಇವಳಿಲ್ಲದೆ ತನ್ನ ಬದುಕು ಅಸಾಧ್ಯವೆನಿಸುತ್ತಿತ್ತು. ಆಗ ಹಣ ಬದುಕನ್ನು ಸುಂದರವಾಗಿಸುತ್ತದೆ ಎಂಬ ಕಲ್ಪನೆ ಎಷ್ಟು ಸುಳ್ಳು ಎನ್ನುವುದನ್ನು ತೋರಿಸಿ ಪ್ರೀತಿಯ ಮಳೆಗೆರೆದಿದ್ದ, ಬದುಕಿನ ಅತ್ಯಂತ ಸವಿಯಾದ ಸುಖವನ್ನು ತಾನೂ ಸವಿದು ಅವಳಿಗೂ ಉಣಿಸಿದ್ದ. ಇದ್ದುದರಲ್ಲೇ ತೃಪ್ತಿಗೊಂಡರೆ ಬಡತನವೆಂಬುದು ಕೂಡ ಎಷ್ಟು ಸುಂದರ ಸ್ವರ್ಗವಾಗಬಲ್ಲದೆಂಬುದನ್ನು ತೋರಿಸಿಕೊಟ್ಟಿದ್ದ.

ಆದರೆ ಇವೆಲ್ಲಾ ಬರೀ ಕ್ಷಣಿಕ. ಹಲೀಮಾಬಿ ತನ್ನ ತಾಯಿಯನ್ನು ತಂಗಿಯಂದಿರನ್ನು ಅವರ ಕೋಣೆಗಳನ್ನು ಕಂಡ ಮರುಕ್ಷಣವೇ ಮಮ್ಮೂಟ್ಟಿಯ ನೆಮ್ಮದಿಯನ್ನು ಕೆಡಿಸುವ ಹುಳುವಾಗುತ್ತಾಳೆ.

ಉಂಡಪಾತ್ರೆಯನ್ನು ಬೆಳಿಗ್ಗೆ ತೊಳೆದರಾಯ್ತೆಂದು ಹಾಗೆಯೇ ತೆಗೆದು ಮುಚ್ಚಿಟ್ಟಳು ಹಲೀಮಾಬಿ. ಮಮ್ಮೂಟ್ಟಿ ಕೈ ತೊಳೆದು ಬಂದು ಮಂಚದಲ್ಲಿ ಒರಗಿದ. ಹತ್ತಿರದಲ್ಲೇ ಮಲಗಿದ ಮಗುವಿನ ಬೆನ್ನ ಮೇಲೆ ನಯವಾಗಿ ತನ್ನ ಕೈಯಿಂದ ತಡವಿದ. ನೆಮ್ಮದಿಯಿಂದ ಮಲಗಿದ ಮುಗ್ಧ ಮುಖವನ್ನು

ಮಂತ್ರಿಟ್ಟಿ. ಹಾಗೆಯೇ ಮಗುವನ್ನು ತಬ್ಬಿಕೊಂಡು ಮಲಗಿದ. ಅಚ್ಚು ಕೋಯನ ಮುಖ ತೇಲಿಬಂತು. ನಾಳೆ ಮನೆಗೆ ಹೋಗಿ ಅವನು ಹೇಳಿದ್ದನ್ನು ಅಮ್ಮನಿಗೆ ತಿಳಿಸಬೇಕೆಂದುಕೊಂಡ.

ಕೊನೆಗೂ ತನಗೆ ನಫೀಸಳನ್ನು ಅಲ್ಲಿಂದ ತಪ್ಪಿಸಲಿಕ್ಕಾಗಲೇ ಇಲ್ಲ !

"ಹಲೀಮಾ...ನಾನು ಬೆಳಿಗ್ಗೆ ಅಮ್ಮನನ್ನು ನೋಡಲು ಹೋಗಬೇಕೆಂದಿದ್ದೇನೆ. ಅವಳನ್ನು ನೋಡದೆ ತುಂಬ ದಿನವಾಯ್ತು. ನನ್ನ ಅಂಗಿ ಜೇಬಿನಲ್ಲಿ ಹಣವಿದೆ. ಅದರಲ್ಲಿ ಹತ್ತು ರೂಪಾಯಿ ಬಿಟ್ಟು ಉಳಿದದ್ದು ತಕ್ಕೋ..." ಎಂದ ಮಮ್ಮುಟ್ಟಿ.

ಹಲೀಮಾ ಉತ್ತರಿಸದೆ ಕೆಳಗೆ ಚಾಪೆಹಾಕಿ ಮಲಗಿದಳು. ಮಮ್ಮುಟ್ಟಿ ನಿಟ್ಟುಸಿರು ಬಿಟ್ಟ.

ನಫೀಸಳಿಗೆ ಊರ ಹುಡುಗನೊಬ್ಬನನ್ನು ಪ್ರಯಾಸಪಟ್ಟು ಹುಡುಕಿದ್ದು ಮಮ್ಮುಟ್ಟಿ ನೆನಸಿಕೊಂಡ. ಅವನ ಜೊತೆಯಲ್ಲಿ ಸೈಕಲಲ್ಲಿ ಮೀನು ಮಾರಾಟ ಮಾಡುವ ಹುಡುಗ ಹುಸೇನ ಬಹಳ ಚೂಟಿಯಾಗಿದ್ದ. ಮಮ್ಮುಟ್ಟಿಗೆ ಅವನ ಮೇಲೆ ಆಸಕ್ತಿ ಉಂಟಾಗಿತ್ತು. ಇವನು ನಫೀಸಾಳಿಗೆ ವರನಾಗಲು ತಕ್ಕವ ನೆನಿಸಿತು. ಬಡವನಾದರೂ ಹುಸೇನ ನಿಯತ್ತಿನ ಹುಡುಗ. ತನ್ನಂತೆಯೇ ಅವನಿಗಿರುವ ಆಸ್ತಿಯೆಂದರೆ ಒಂದು ಸೈಕಲು, ಎರಡು ಮೂರು ಬುಟ್ಟಿಗಳು, ಇಪ್ಪತ್ತೋ ಇಪ್ಪತ್ತೈದೋ ದಿನಕ್ಕೆ ಸಂಪಾದನೆ. ಮನೆಯಲ್ಲಿ ಒಬ್ಬಳು ತಾಯಿ ಮಾತ್ರ. ಅವನು ಮತ್ತು ನಫೀಸಾ ಸಂಸಾರಮಾಡಿದರೆ ತಕ್ಕಮಟ್ಟಿಗೆ ನೆಮ್ಮದಿಯಾಗಿರಬಹುದು. ಅದೂ ಅಲ್ಲದೆ ಹುಸೇನ ಕೋಯಾ ಮನೆತನಕ್ಕೆ ಸೇರಿದವನಲ್ಲವಾದ್ದರಿಂದ ಹೆಂಡತಿಯ ಮನೆಯಲ್ಲಿ ಬಿಡಾರ ಹೂಡಬೇಕೆಂಬ ನಿಯಮ ವೇನೂ ಇಲ್ಲ. ಮದುವೆಯಾದರೆ ತನ್ನ ಮನೆಗೆ ಹೆಂಡತಿಯನ್ನು ಕರೆದು ಕೊಂಡು ಹೋಗಿ ಸಂಸಾರ ಮಾಡುತ್ತಾನೆ ಎಂದೆಲ್ಲಾ ಮಮ್ಮುಟ್ಟಿ ಲೆಕ್ಕ ಹಾಕಿದ್ದ. ಒಮ್ಮೆ ಮಮ್ಮುಟ್ಟಿ ಹುಸೇನನೊಡನೆ ಪ್ರಸ್ತಾಪಿಸಿದ. ಹುಸೇನ "ತನಗೇನೂ ಅಭ್ಯಂತರವಿಲ್ಲ ! ಆದರೆ ತನ್ನ ಅಮ್ಮನ ಅಭಿಪ್ರಾಯ ಕೇಳದೆ ಈ ವಿಷಯದಲ್ಲಿ ಏನೂ ಹೇಳಲಾರೆ" ಎಂದ. ಮಮ್ಮುಟ್ಟಿ ಸಂತೋಷಗೊಂಡು ಕನಸು ಕಾಣತೊಡಗಿದ.

ಹುಸೇನನೊಂದಿಗಾದ ಮಾತುಕತೆಯ ಬಗ್ಗೆ ಉತ್ಸಾಹಗೊಂಡು ತನ್ನ ತಾಯಿಗೆ ಹೇಳಿದ. ಹಾಜಿಮ ತುಂಬ ಉತ್ಸಾಹಗೊಂಡಿದ್ದಳು. "ಕೂಲಿಯವನಾದ್ರೂ ಅಡ್ಡಿಯಿಲ್ಲ ಮಮ್ಮುಟ್ಟಿ... ಮಾನವಾಗಿ ಬದುಕೋನಾದ್ರೆ ಸಾಕು. ಇದೊಂದು ಸಂಬಂಧ ಕುದುರಿಸಿ ಬಿಡು ಮಗಾ... ಸಾಲವಾದ್ರೂ

ಚಿಂತಿಲ್ಲ. ಈ ಕುಟ್ಟಿಚಿರಾದ ಗಂಡಿಸಲು ಕೇರಿಯಿಂದ ಒಂದು ದಿಬ್ಬಣ ಹೊರಡಿಸಲೇಬೇಕು. ನಮ್ಮ ಗಂಡು ಮಕ್ಕಳು ಆಗುವವರೆಗೆ ಹೆಣ್ಣುಮಕ್ಕಳು ಯಾಕಾಗುವುದಿಲ್ಲ ನೋಡಬೇಕು..." ಎನ್ನುತ್ತಾ ಉತ್ಸಾಹದ ಚಿಲುಮೆ ಯಾದಳು.

ಮರುದಿನ ಮುಮ್ಮುಟ್ಟಿ ಪನಿಯಂತರಾದ ಓಣಿಯೊಂದರಲ್ಲಿ ಮೀನು ಮಾರುತ್ತಾ ಹೋಗುವಾಗ ಹೆಂಗಸೊಬ್ಬಳು ಕರೆದು ನಿಲ್ಲಿಸಿದಳು. ಅವಳಿಗೆ ಮೀನು ಬೇಕಿತ್ತೇನೋ ಎಂದುಕೊಂಡು ಸೈಕಲಿಗೆ ಬ್ರೇಕು ಹಾಕಿ ನಿಲ್ಲಿಸಿದ. "ನೀನೇನಾ... ಮುಮ್ಮುಟ್ಟಿ ಅಂದ್ರೆ...?" ಅಂತ ಕೇಳಿದ್ಲು. ಹೌದೆಂದ. "ನಿನ್ನ ತಂಗಿಯನ್ನು ನನ್ನ ಮಗ ಹಂಸೇನನಿಗೆ ಗಂಟು ಹಾಕಬೇಕೆಂದಿದ್ದೀಯಂತೆ! ನೋಡು, ನಾವು ಹೊಟ್ಟೆಗಿಲ್ಲದಿದ್ರೂ ಮರ್ಯಾದೆ ಉಳಿಸಿಕೊಂಡವ್ರು. ನನ್ನ ಮಗನಿಗೆ ಬೇರೆಲ್ಲಿಯೂ ಹೆಣ್ಣು ಸಿಗಲ್ಲಾಂತ ನಿಮ್ಮ ಕೇರಿಯ ಹೆಣ್ಣನ್ನು ಮದುವೆಯಾಗ್ಬೇಕಾ? ನಿನ್ನ ತಂಗಿಯನ್ನು ಯಾವನಾದ್ರೂ ಅರಬ ಬಂದು ಹಣ ಕೊಟ್ಟು ಕೊಂಡಾನು, ನನ್ನ ಮಗನ ಸುದ್ದಿಗೆ ಬರಬೇಡ..." ಅಂತ ಹೇಳಿ ಮುಮ್ಮುಟ್ಟಿಗೆ ಮಾತಾಡುವ ಅವಕಾಶ ಕೂಡ ಕೊಡದೆ ಬಿರಬಿರನೆ ಹೋಗಿ ಬಿಟ್ಟಳು. ಮುಮ್ಮುಟ್ಟಿ ಈ ಅನಿರೀಕ್ಷಿತ ದಾಳಿಯಿಂದ ತಬ್ಬಿಬ್ಬಾಗಿದ್ದ. ಪುಣ್ಯಕ್ಕೆ ಅಲ್ಲಿ ಸುತ್ತಮುತ್ತ ಯಾರೂ ಇದ್ದಿರಲಿಲ್ಲ. ಆದರೂ ಮುಮ್ಮುಟ್ಟಿ ಅವಳ ಧಿಮಾಕು ಕಂಡು ಕೋಪಗೊಂಡಿದ್ದ. ಅವಳಿಗೆ ಕಡಕ್ಕಾಗಿ ನಾಲ್ಕು ಮಾತು ಹೇಳಿಬಿಡಬೇಕೆಂದರೂ ಅವಳಲ್ಲಿಂದ ಆಗಲೇ ಹೊರಟು ಹೋಗಿದ್ದಳು. ತನ್ನ ಸಿಟ್ಟನ್ನೆಲ್ಲಾ ಒಟ್ಟುಗೂಡಿಸಿ "ಥೂ..." ಎಂದು ಕ್ಯಾಕರಿಸಿ ಉಗುಳಿದ್ದ. ಸೈಕಲ್ಲು ಮೆಟ್ಟುತ್ತ ಮುಂದೆ ಹೋಗಿದ್ದ.

ಅಮ್ಮ ಮತ್ತು ನಫೀಸಾ ಕಂಡ ಕನಸುಗಳನ್ನು ಒಡೆಯುವ ಶಕ್ತಿ ಸಾಲದೆ ಮುಮ್ಮುಟ್ಟಿ ಈ ವಿಷಯವನ್ನು ಅವರಿಗೆ ತಿಳಿಸಿರಲಿಲ್ಲ. ನಾಳೆ ಹೋಗಿ ಕೆಲವು ದಿನಗಳಾದರೂ ಸಂತೋಷದಿಂದ ಅವರು ಸವಿಯುತ್ತಿದ್ದ ಕನಸುಗಳನ್ನು ಮುರಿಯಬೇಕು... ಅಚ್ಚುಕೋಯನ ಮಾತನ್ನು ತಿಳಿಸಬೇಕು... ಎಂಬುದು ತಲೆಯೊಳಗೆ ಕೊರೆಯತೊಡಗಿ ಮುಮ್ಮುಟ್ಟಿಗೆ ನಿದ್ದೆಬಾರದಾಯಿತು. ಅತ್ತಿತ್ತ ಹೊರಳುತ್ತಲೇ ರಾತ್ರಿ ಕಳೆದ.

* * *

ನಫೀಸಳನ್ನು ಅವಳ ಮನೆಕಡೆ ಬಿಟ್ಟು ತನ್ನ ಮನೆಯತ್ತ ನಡೆಯುವಾಗ ಸಲೀಮ್ ಅತ್ಯಂತ ಉಲ್ಲಸಿತನಾಗಿದ್ದ. ತಾನು ಇಷ್ಟು ದಿನ ಹೊತ್ತಿದ್ದ

ಅನಿವಾರ್ಯ ಹೊರೆಯೊಂದನ್ನು ಹೊತ್ತು ಹಾಕಿದ ಹಗುರವಾದ, ಹಿತವಾದ ಅನುಭವ. ಗಾಳಿಯಲ್ಲಿ ತೇಲಿದಂತೆ, ಎಲ್ಲೆಲ್ಲೂ ಹಾರಾಡಿದಂತೆ, ಸಣ್ಣಗೆ ಹಾಡೊಂದನ್ನು ಗುಣಿಗುಣಿಸುತ್ತಾ ಕುಣಿದು ಕುಪ್ಪಳಿಸುವ ಮಗುವಿನಂತೆ ಮನೆಯೊಳಗೆ ಹೋದವನೇ ಜುಬೇದಾಳ ಕೋಣೆಯೊಳಗೆ ಕಾಲಿಟ್ಟ. ಅಲ್ಲಿ ಅವಳ ಜೊತೆಗೆ ಆಡುತ್ತಾ ಹಾಸಿಗೆಯ ಮೇಲಿದ್ದ ಮಗುವನ್ನು ಎತ್ತಿಕೊಂಡು ತನ್ನ ಕೋಣೆಗೆ ಹೋಗಿ ಅದರೊಂದಿಗೆ ಆಡತೊಡಗಿದ. ಮಗುವಿನ ನಗೆ, ಲಲ್ಲೆ ಮಾತು, ಆಟ ಎಲ್ಲವೂ ಅವನನ್ನು ಅತ್ಯಂತ ಖುಷಿಯಾಗಿಸಿತ್ತು.

ಅಣ್ಣ ತಮ್ಮ ಮಗುವಿನೊಂದಿಗೆ ಆಡುವುದನ್ನು ಎಂದೂ ಕಾಣದ ಜುಬೇದಳಿಗೆ ಅವನ ಈ ಬದಲಾವಣೆ ಆಶ್ಚರ್ಯ ಹುಟ್ಟಿಸಿತ್ತು. ಜೊತೆಗೆ ಅಣ್ಣ ಮೊದಲಿನಂತಾಗುತ್ತಾನೆಂಬುದನ್ನು ಕಲ್ಪಿಸಿಕೊಂಡಾಗ ಅವಳಿಗೆ ಆನಂದವಾಗುತ್ತಿತ್ತು. ತನ್ನ ಕೋಣೆಯಿಂದ ಎದ್ದು ಬಂದು ಅಣ್ಣನ ಎದುರು ಕೂತಳು. ಅವಳನ್ನು ಕಂಡು ಸಲೀಮ್ ನಕ್ಕ. "ನಿನ್ನ ಮಗ ಎಷ್ಟು ಚೂಟಿಯಾಗಿದ್ದಾನೆ ನೋಡು..." ಎಂದು ನಗುತ್ತಾ ಬಿದ್ದುಕೊಂಡಿದ್ದ ಮಗುವಿನ ಗಲ್ಲಕ್ಕೊಂದು ಮೆತ್ತಗೆ ಏಟುಕೊಡುತ್ತಾ ಅಂದ. ಮಗು ಕಿಲಕಿಲನೆ ನಕ್ಕಿತು. "ಅವನನ್ನು ಹೀಗೆ ಹಾಸಿಗೆಯ ಮೇಲೆ ಹಾಕ್ಕೊಂಡ್ರೆ ಉಚ್ಚೆಹೊಯ್ದಾನು" ಎನ್ನುತ್ತಾ ಜುಬೇದ ಎತ್ತಿಕೊಂಡಳು. ಸಲೀಮ್ "ಜುಬೇದ ಬಾವನ ಕಾಗದ ಬಂದಿತ್ತಾ... ಹ್ಯಾಗಿದ್ದಾರಂತೆ...?" ಎಂದು ಕೇಳಿದ. ಇತ್ತೀಚೆಗಂತೂ ಈ ತರ ಮಾತಾಡುತ್ತಿರಲಿಲ್ಲ. ಅವರ ಕಾಗದದಲ್ಲಿ ನಿನಗೆ ಸಲಾಂ ಹೇಳಿದ್ದಾರಣ್ಣಾ... ಅಂತ ಹೇಳಿದ್ರೂ ಪ್ರತಿಕ್ರಿಯೆ ತೋರಿಸುತ್ತಿರಲಿಲ್ಲ. ಆದರೂ ಅವಳು ತನ್ನ ಗಂಡನಿಗೆ ಪತ್ರದಲ್ಲಿ ಸಲೀಮ್ ನಿಮಗೆ ಸಲಾಂ ತಿಳಿಸಿದ್ದಾನೆಂತ ಬರೆಯುತ್ತಿದ್ದಳು.

"ನಿನ್ನೆಯೇ ಪತ್ರ ಬಂದಿತ್ತು. ನಿನಗೆ ಸಲಾಂ ತಿಳಿಸಿದ್ದಾರೆ. ಚೆನ್ನಾಗಿದ್ದಾರಂತೆ..." ಅಂದ್ಲು. "ಈ ಸಲ ಪತ್ರ ಬರೆಯುವಾಗ ನನ್ನ ಸಲಾಂ ಬರೆ..." ಎಂದ ಸಲೀಮ್. ಮಗುವಿಗೆ ನಿದ್ದೆಯ ಹೊತ್ತು ಅಂತ ಜುಬೇದಾ ಮಗುವನ್ನೆತ್ತಿಕೊಂಡು ಹೋದಳು.

ಸಲೀಮ್ ಅಡುಗೆಕೋಣೆಯೊಳಗೆ ಹೋಗಿ ಅಮ್ಮನೊಂದಿಗೆ ಅದೂ ಇದೂ ಮಾತಾಡಿದ. ಮತ್ತೆ ತನ್ನ ಕೋಣೆಗೆ ಬಂದು ಟೇಪ್‌ರೆಕಾರ್ಡರಿನಲ್ಲಿ ಹಳೆಯ ಮಲೆಯಾಳಿ ಚಿತ್ರದ ಹಾಡುಗಳ ಕ್ಯಾಸೆಟ್ ಹಾಕಿ ಹಾಡು ಕೇಳತೊಡಗಿದ. ರೆಕಾರ್ಡರು ಗೊಗ್ಗರು ಧ್ವನಿ ಮಾಡತೊಡಗಿತು. ಅದನ್ನು ಉಪಯೋಗಿಸದೆ ತುಂಬ ದಿನಗಳಾದ್ದರಿಂದ ಹೆಡ್‌ನಲ್ಲಿ ಧೂಳು ತುಂಬಿತ್ತು.

ಅಲ್ಲೇ ಇದ್ದ ಸ್ಪಿರಿಟ್‌ನಿಂದ ಹೆಡ್ ಕ್ಲೀನ್ ಮಾಡಿದ. ಮತ್ತೆ ಟೇಪ್‌ರೆಕಾರ್ಡರು ನಿಜವಾದ ಯೇಸುದಾಸನ ಧ್ವನಿಯಲ್ಲಿ ಹಾಡತೊಡಗಿತು. ಹಾಡು ಕೇಳುತ್ತಾ ಬಟ್ಟೆ ಬದಲಾಯಿಸಿ ಹಾಸಿಗೆಯ ಮೇಲೊರಗಿದ.

ಬೆಳಿಗ್ಗೆ ನಫೀಸಾ ಸೈದುಕೋಯಾರ ಮನೆಗೆ ಬರುವಾಗ ಒಂಥರಾ ಅಳುಕು ಅವಳನ್ನು ಮುತ್ತಿಕೊಂಡಿತ್ತು. ಸಲೀಮ್ ಅವಳ ಕೈ ಹಿಡಿದಿದ್ದು, ಸಮುದ್ರ ತೀರಕ್ಕೆ ಅವನು ಕರೆದಾಗ ಹೋದದ್ದು ತಪ್ಪಾಯಿತೇನೋ ಅನ್ನುವ ಅಪರಾಧಿ ಭಾವನೆ ಅವಳನ್ನು ಕಾಡುತ್ತಿತ್ತು. ಮನೆಯೊಳಗೆ ತಲೆತಗ್ಗಿಸಿ ಹೊಕ್ಕವಳು ಯಾರೊಂದಿಗೂ ಮಾತಾಡದೆ ಅಡುಗೆ ಮನೆಯನ್ನು ಸ್ವಚ್ಛಗೊಳಿಸುವ ಕೆಲಸದಲ್ಲಿ ನಿರತಳಾದಳು.

ಷರೀಫಮ್ಮ ಅಡುಗೆ ಕೋಣೆಯೊಳಗೆ ಬರುವಾಗ ನಫೀಸಾ ಪಾತ್ರೆಗಳನ್ನು ತೊಳೆದು ಓರಣವಾಗಿಡುತ್ತಿದ್ದಳು. "ಅದೇನು ನಫೀಸಾ... ಅಲ್ಲಿ ಸಲೀಮ್ ಕೂಗುತ್ತಿದ್ದಾನೆ ಚಾ ಮಾಡಿಲ್ವಾ...?" ಅಂತ ಕೇಳಿದಾಗ "ಈಗ ತಯಾರು ಮಾಡ್ತೇನಮ್ಮಾ..." ಅಂದ್ಲು ತಲೆ ಮೇಲೆತ್ತದೆ. ಷರೀಫಮ್ಮ ಕೋಣೆಯಿಂದ ಹೊರಗೆ ಹೋಗುವವಳು ತಿರುಗಿ "ಏನು ನಫೀಸಾ ಹುಷಾರಿದ್ದೀ ತಾನೆ?" ಅಂತ ಕೇಳಿದಳು. ಆಗ ನಫೀಸಾ "ಸೌಖ್ಯವಾಗಿದ್ದೇನಲ್ಲಾ..." ಎಂದು ನಗುವ ಪ್ರಯತ್ನ ಮಾಡಿದಳು. ಷರೀಫಮ್ಮ ಹೊರಗೆ ಹೋದಕೂಡಲೇ ಸ್ಟವ್‌ಗೆ ಬೆಂಕಿ ಹಚ್ಚಿ ಚಾಕ್ಕೆ ನೀರಿಟ್ಟಳು. "ಪಾಪ... ಸಲೀಮನೇನು ತಪ್ಪುಮಾಡಿದ್ದಾನೆ? ಅದ್ಯಾವುದೋ ಗುಂಗಿನಲ್ಲಿ ಕೈ ಹಿಡಿದ. ಅದಕ್ಕೆ ನಾನು ಬೆಳಿಗ್ಗೆ ಚಾ ಕೂಡ ಕೊಡದಷ್ಟು ನಿಷ್ಠುರಳಾಗಬೇಕೆ?" ಎಂದುಕೊಂಡು ಬೇಗಬೇಗನೆ ಚಾ ಮಾಡಿ ಕಪ್‌ನಲ್ಲಿ ಹಾಕಿಕೊಂಡು ಸಲೀಮನ ಕೋಣೆಯೊಳಗೆ ಕಾಲಿಟ್ಟಳು.

ಸಲೀಮ್ ಆಗಲೇ ಬಾತ್‌ರೂಮಿಗೆ ಹೋಗಿದ್ದ. ಚಾವನ್ನು ಟೀಪಾಯಿಯ ಮೇಲಿಟ್ಟು, ಅಸ್ತವ್ಯಸ್ತವಾಗಿದ್ದ ಅವನ ಹಾಸಿಗೆಯನ್ನು ಸರಿಪಡಿಸಿದಳು. ಸಲೀಮ್ ಮುಖತೊಳೆದು ಟವಲ್‌ನಲ್ಲಿ ಒರೆಸುತ್ತಾ ಕೋಣೆಯೊಳಗೆ ಬಂದ. ಟೀಪಾಯಿಯ ಮೇಲಿದ್ದ ಕಪ್ಪನ್ನು ಕೈಗೆತ್ತಿಕೊಂಡ. ನಫೀಸಾ ಇಷ್ಟರಲ್ಲೇ ಅಲ್ಲಿಂದ ಹೋಗಬೇಕಿತ್ತು. ಆದರೆ ಅವನು ಒಳಗೆ ಬಂದಾಗಿತ್ತು! ನಫೀಸಾ ಗಡಿಬಿಡಿಯಲ್ಲಿ ಹೊರಗೆ ಹೋಗಲನುವಾದಳು. ಸಲೀಮ ಚಾ ಗುಟುಕರಿಸುತ್ತಾ "ನಫೀಸಾ ನಾನ್ಯಾವ ತಪ್ಪು ಮಾಡಿದ್ದೇನೆಂತ ಈವತ್ತು ನಂಗೆ ಬೆಡ್ ಟೀ ಸಿಕ್ಕಿಲ್ಲ...?" ಅಂತ ನಕ್ಕ. "ಅಲ್ಲಾ... ನೀವು ಹಲ್ಲುಜ್ಜದೆನೇ

ಚಾ ಕುಡೀತೀರಲ್ಲ... ಹೊಲಸು... ಅದಕ್ಕೆ ತಡಮಾಡಿದೆ..." ಎಂದವಳೇ ಹೊರಗೆ ಹೋಗಿಬಿಟ್ಟಳು.

ಅರೇ !... ನಾನೆಷ್ಟು ಸಲೀಸಾದ ಸುಳ್ಳು ಹೇಳಿಬಿಟ್ಟೆ! ಎಂದು ಹೊರಗೆ ಬಂದವಳೇ ನಫೀಸಾ ತನ್ನಷ್ಟಕ್ಕೆ ಆಶ್ಚರ್ಯ ಪಟ್ಟುಕೊಂಡಳು. ಅವನು ದಿನವೂ ಬಾಯಿ ತೊಳೆಯದೆ ಚಾ ಕುಡಿಯುವುದನ್ನು ಕಂಡು ಅಸಹ್ಯ ಪಟ್ಟುಕೊಂಡಿದ್ದರೂ ಅದನ್ನು ಅವನಿಗೆ ಹೇಳುವಷ್ಟು ಸಲಿಗೆ ಬೆಳೆದಿರಲಿಲ್ಲ. ಇಂದು ಅವನು ಮಾತಾಡಿದಾಗ ಅದೇ ಮಾತು ತಟ್ಟನೆ ಬಂದು ಬಿಡಬೇಕೆ ?

ನಫೀಸಾ ಮತ್ತೆ ಎಂದಿನ ಹುರುಪಿನಿಂದ ಕೆಲಸ ಮಾಡತೊಡಗಿದಳು. ಮನಸ್ಸು ಆನಂದದಿಂದ ಕುಣಿಯುತ್ತಿತ್ತು. ಏಕೆ... ಹೀಗೇಕೆ...? ಅಂದು ಕೊಂಡಳು. ಅವನೊಂದಿಗೆ ಒಂದೇ ಒಂದು ವಾಕ್ಯದ ಮಾತಿನಿಂದ ತಾನೆಷ್ಟು ಉಲ್ಲಾಸಗೊಂಡಿದ್ದೇನೆ! ಎಂದು ಆಶ್ಚರ್ಯಪಟ್ಟುಕೊಂಡಳು. ಬೆಳಿಗ್ಗೆ ಬರುವಾಗ ಇದ್ದ ತಳಮಳಗಳೆಲ್ಲಾ ಕ್ಷಣ ಮಾತ್ರದಲ್ಲಿ ದೂರವಾಗಿತ್ತು.

ತನ್ನ ಗುಡಿಸಲಿಗೆ ಹಿಂತಿರುಗಿ ನಫೀಸಾ ಹಾಸಿಗೆಯಲ್ಲಿ ಉರುಳಿದಾಗ ದಿನವಿಡೀ ದಣಿದ ದೇಹಕ್ಕೆ ನಿದ್ದೆ ಕೂಡಲೇ ಆವರಿಸಿತು. ಸಲೀಮ್ ಚಿತ್ತದಿಂದ ಹೊರಗೆ ಹೋಗಿರಲಿಲ್ಲ. ಕನಸಿನಲ್ಲಿ ಅವಳ ಜೊತೆ ಮಾತಾಡುತ್ತಿದ್ದ. ಹುಣ್ಣಿಮೆಯ ಚಂದ್ರ ಮುಳುಗಲೆಂದು ಸಜ್ಜಾಗಿದ್ದ ಸಮುದ್ರ ಬಂಗಾರದ ಬಣ್ಣದಿಂದ ಪಳಪಳನೆ ಹೊಳೆಯುತ್ತಿತ್ತು. ಚಿನ್ನದ ಮರಳರಾಶಿಯ ಮೇಲೆ ಸಲೀಮ್ ಮತ್ತು ನಫೀಸಾ ನಡೆಯುತ್ತಿದ್ದರು. ಸಲೀಮ್ ನೆಟ್ಟದೃಷ್ಟಿಯಿಂದ ಅವಳನ್ನೇ ನೋಡುತ್ತಿದ್ದ. ನಫೀಸಾ ತಲೆ ತಗ್ಗಿಸಿ ನೆಲಕೆರೆಯುತ್ತ ನಿಂತಳು. ಒಳಗೊಳಗೇ ಸಂತೋಷ... ಇದು ಕನಸಲ್ಲವೆನ್ನುವಷ್ಟು ಸಹಜ. ಥಟ್ಟನೆ ಅಚ್ಚುಕೋಯನ ಕಾರು ಭರ್ರನೆ ನಿಂತಿತು. ಅವನು ಕಿಟಕಿಯಿಂದ ತಲೆ ಹೊರಹಾಕಿ ಇವಳತ್ತಲೇ ತೀಕ್ಷ್ಣ ದೃಷ್ಟಿಯಿಂದ ನೋಡತೊಡಗಿದ! ನಫೀಸಾ ಹೆದರಿ ಎಚ್ಚತ್ತುಬಿಟ್ಟಳು...! ಹಣೆತುಂಬ ಬೆವರು ಮೂಡಿ ತಲೆಕೂದಲನ್ನು ತೋಯ್ದಿಸಿತ್ತು...!

# ದಲ್ಲಾಳಿಯ ದಂಧೆ

ಅಚ್ಚುಕೋಯನಿಗೆ ಹಾಜಿಮಳ ಸಣ್ಣ ಮಗಳಂ ಮತ್ತು ಸೈದುಕೋಯಂರ ಮಗ ಜೊತೆಯಾಗಿ ರಾತ್ರಿ ಸಮುದ್ರ ತೀರದಿಂದ ಬೀಚ್ ರೋಡಿನ ಕಡೆ ನಡೆದು ಬರಂತ್ತಿರಂವುದಂ ಕಂಡಂದಿನಿಂದ ನೆಮ್ಮದಿ ಇರಲಿಲ್ಲ. ಇವರ ನಡಂವೆ ಏನಾದರೂ ಪ್ರೇಮಂಗೀಮ ನಡೆದಿರಬಹಂದಾದ ಆಪತ್ತಿನ ಬಗ್ಗೆ ಎಚ್ಚರಗೊಂಡಿದ್ದ. ಒಬ್ಬ ಊರಿನ ಹಂಡಂಗ ಈ ಗಂಡಿಸಲ ಕೇರಿಯಂ ಹುಡಂಗಿಯಂನ್ನು ನಿಕಾಹ್ ಮಾಡಿಕೊಳ್ಳುವ ಧೈರ್ಯ ಮಾಡಿದರೆ ಸಾಕು. ಈ ರೋಗ ಊರ ಹುಡಂಗರಿಗೆಲ್ಲ ತಗಲಿಬಿಡಬಹುದಂ. ಅಲ್ಲದೆ ಈ ಗುಡಿಸಲಂ ಕೇರಿಯಂ ಹೆಮ್ಮಕ್ಕಳು ಬಿಳಿ ಚರ್ಮದ ಅಂದಗಾತಿಯರಂ. ಊರ ಹುಡಂಗರಿಗೆ ಹಂಚ್ಚು ಹಿಡಿಸಿ ಬಿಟ್ಟಾರು! ಹೀಗಾದ್ರೆ ತನ್ನ ಗತಿ? ಅರಬರಿಗೆ ನಿಕಾಹ್ ಮಾಡಿಕೊಳ್ಳಲು ಗಂಡಿಸಲು ಕೇರಿಯಂ ಹೆಮ್ಮಕ್ಕಳು ನಿರಾಕರಿಸಿದರೆ ತನ್ನ ವ್ಯವಹಾರ ಎಲ್ಲ ನಾಶವಾಗಿ ಬಿಡಂತ್ತದೆ!

ಊರಿನಿಂದ ಈ ಕೇರಿ ಆದಷ್ಟು ದೂರವಿದ್ದರೇನೇ ತನಗೆ ಒಳಿತು ಎಂದುಕೊಂಡಿರಂವ ದಲ್ಲಾಳಿ ಅಚ್ಚುಕೋಯಂ ಈ ಗಂಡಿಸಲು ಜನಗಳ ಬಗ್ಗೆ ಊರಲ್ಲಿ ಸಾಕಷ್ಟು ಅಪಪ್ರಚಾರ ಹಬ್ಬಲು ಸಹಕಾರಿಯಾಗಿದ್ದ. ಈ ಜನರ ಹಾದರ ಕಳ್ಳತನದ ಬಗ್ಗೆ ಇಲ್ಲಸಲ್ಲದ ಗುಮಾನಿ ಊರಿನಲ್ಲಿ ಹಬ್ಬಿ ನೆಮ್ಮದಿಯಿಂದಿದ್ದ. ಆದರೆ ನಫೀಸಾ ಮತ್ತು ಸಲೀಮಂರನ್ನು ಜೊತೆಯಾಗಿ ಕಂಡಂದಿನಿಂದ ತುಂಬ ಆತಂಕಗೊಂಡಿದ್ದ. ಕೆಲವು ವರ್ಷಗಳ ಹಿಂದೆ ಊರ ಹುಡಂಗರಂ ಸಂಘ ಕಟ್ಟಿ ಅರಬರ ಮದಂವೆಯ ವಿರುದ್ಧ ಚಳವಳಿ ಹೂಡಿದಾಗ ಅಚ್ಚುಕೋಯಂ ಇಷ್ಟು ಹೆದರಿರಲಿಲ್ಲ. ಈ ಚಳವಳಿಯಿಂದ ತನ್ನ ದಂಧೆಗೆ ಎಳ್ಳಷ್ಟೂ ತೊಡಕಾಗದು ಎಂದು ಖಾತ್ರಿಗೊಂಡಿದ್ದ. ಉಳಿದೆಲ್ಲ ದಲ್ಲಾಳಿಗಳು ಕಂಗಾಲಾದರೂ ಅಚ್ಚುಕೋಯಂ ಎಳ್ಳಷ್ಟೂ ವಿಚಲಿತನಾಗಿರಲಿಲ್ಲ. ಅವ

ರೆಲ್ಲರಿಗೂ ಧೈರ್ಯ ಹೇಳಿದ್ದ : "ಇದೆಲ್ಲ ಏನೂ ನಡೆಯೂದಿಲ್ಲ... ಮಕ್ಕಳು ಸ್ವಲ್ಪದಿನ ಹಾರಾಡ್ತಾವಷ್ಟೆ. ಮತ್ತೆ ನಮ್ಮ ದಂಧೆ ಎಂದಿನಂತೆಯೇ ಶುರು ವಾಗ್ತದೆ..." ಎಂದಿದ್ದ. ಅವನ ದೂರಾಲೋಚನೆ ನಿಜವಾಗಿತ್ತು. ಮರು ವರ್ಷ ಅರಬ್ ಮದುವೆಗಳು ನಿರಾತಂಕವಾಗಿ ನಡೆದಿದ್ದವು. ಈ ಚಳವಳಿಯ ಜೊತೆಗೆ ಬದುಕುವ ಇನ್ನೊಂದು ದಾರಿ ಗುಡಿಸಲು ಕೇರಿಯ ಜನಕ್ಕೆ ಕಲ್ಪಿಸಿ ಕೊಟ್ಟಾಗ ಮತ್ತು ಈ ಕೇರಿಯ ಹೆಮ್ಮಕ್ಕಳನ್ನು ಊರ ಗಂಡುಗಳು ಮದುವೆ ಯಾಗಲು ತಯಾರಾದಾಗ ಮಾತ್ರ ತನ್ನ ಸಂಪಾದನೆಗೆ ಆಪತ್ತು ಎಂಬುದು ಅಚ್ಚುಕೋಯನಿಗೆ ಚೆನ್ನಾಗಿ ತಿಳಿದಿತ್ತು. ಈ ಯುವಕರದ್ದು ಯಾವೊಂದೂ ಯೋಜನೆ ಹಾಕಿಕೊಳ್ಳದ ಬಿಸಿನೆತ್ತರ ಉತ್ಸಾಹ. ಇದೆಲ್ಲಾ ತಾತ್ಕಾಲಿಕ. ಗುಡಿಸಲು ಕೇರಿಯ ಹಸಿದ ಹೊಟ್ಟೆಗಳು ತಮ್ಮನ್ನು ಹುಡುಕಿಕೊಂಡು ಖಂಡಿತ ವಾಗಿ ಬರುತ್ತವೆ ಎಂದುಕೊಂಡ ಅಚ್ಚುಕೋಯನ ಲೆಕ್ಕಾಚಾರ ತಲೆಕೆಳಗಾಗ ಲಿಲ್ಲ.

ಅಚ್ಚುಕೋಯ ಇಂದು ನಿನ್ನೆಯ ದಲ್ಲಾಳಿಯಲ್ಲ. ಅರಬರ ನಿಕಾಹ್ ದಲ್ಲಾಳಿಗಳಲ್ಲಿ ಅತ್ಯಂತ ಚಾಣಾಕ್ಷ ಮತ್ತು ಪ್ರಮುಖನೆನಿಸಿಕೊಂಡ ಈತ ಹಾಜಿ ಮಳ ಒಂದೆರಡು ಮದುವೆಗೆ ಕೂಡ ದಲ್ಲಾಳಿ ಮಾಡಿದ್ದ. ದುಂಡಗಿನ ಧಡೂತಿ ದೇಹ, ಒಳ್ಳೆ ಅಕ್ಕಿ ಮುಂಡಿಯಂತಹ ಹೊಟ್ಟೆ, ಅಲ್ಲಲ್ಲಿ ಬಿಳಿಕೂದಲು ಗಳು, ಮಿಂಚುವ ನೀಟಾಗಿ ಕಸಿ ಮಾಡಿದ ದಾಡಿ, ತಲೆಗೊಂದು ಕಪ್ಪು ಜಿನ್ನಾ ಟೊಪ್ಪಿ, ಸಿಲ್ಕು ಜುಬ್ಬ, ಪ್ಯಾಂಟು ಹಾಕುವ ಈತ ನೆಪ ಮಾತ್ರಕ್ಕೆ ಕುಟ್ಟಿ ಚಿರಾದ ಪೇಟೆಯಲ್ಲೊಂದು ಕಟ್ಲೇರಿ ಅಂಗಡಿಯ ಮಾಲಿಕ. ಅರಬರ ಮಂಜಿ ಗಳು ಕಲ್ಲಿಕೋಟೆಯ ಬಂದರು ಸೇರಿದಾಗಲೇ ಇವನ ನಿಜವಾದ ಚಟುವಟಿಕೆ ಪ್ರಾರಂಭವಾಗುವುದು. ಒಳ್ಳೆಯ ಹೋಟೆಲಲ್ಲಿ ರೂಮಿನ ವ್ಯವಸ್ಥೆಯಿಂದ ಹಿಡಿದು ಊಟ ಉಪಚಾರಗಳ ಮೇಲುಸ್ತುವಾರಿಯೂ ಇವನದ್ದೆ. ಜೊತೆಗೆ ಅವರ ತಾತ್ಕಾಲಿಕ ಮದುವೆಗೂ ಇವನದ್ದೆ ವ್ಯವಸ್ಥೆ. ಇವನ ಮುಖ್ಯವಾದ ಆದಾಯ ಅಡಗಿರುವುದೂ ಬಂಡವಾಳ ಅಗತ್ಯವಿಲ್ಲದ ಈ ವ್ಯವಹಾರದಲ್ಲೇ.

ಈ ವ್ಯವಹಾರದಲ್ಲಿ ಸಾವಿರಗಟ್ಟಲೆ ಎರಡೂ ಪಾರ್ಟಿಯಿಂದ ದೋಚುವ ಈತ ಇತ್ತೀಚೆಗೆ ದೊಡ್ಡ ಮಹಲೊಂದನ್ನು ಕಟ್ಟಿಸಿದ್ದಾನೆ. ರಮ್ಜಾನ್ ಹಬ್ಬದ ಸಮಯದಲ್ಲಿ ಗೋಣಿ ಚೀಲದಲ್ಲಿ ಅಕ್ಕಿ ಮತ್ತು ಹೊಸ ಹೊಸ ಒಂದು ಎರ ಡರ ನೋಟುಗಳ ಕಂತೆ ಹಿಡಿದುಕೊಂಡು ಮನೆಯ ಹೊರಗೆ ಸಾಲಾಗಿ ನಿಂತ ಬಡಬಗ್ಗರಿಗೆ ಬಹಿರಂಗವಾಗಿ ದಾನ ಮಾಡುತ್ತಾನೆ. "ಇದೆಲ್ಲ ಅಲ್ಲಾಹು ಕೊಟ್ಟಿದ್ದು, ಅವನು ಆದೇಶಕೊಟ್ಟಂತೆ ದಾನ ಮಾಡಬೇಕು..." ಎನ್ನುತ್ತ

ಸ್ವರ್ಗಕ್ಕೆ ರಹದಾರಿ ಪಡೆಯುವ ಪ್ರಯತ್ನ ಮಾಡುತ್ತಿದ್ದ. ದಾನದ ಹೆಸರಿನಲ್ಲಿ ಆಗಾಗ ಬಡಬಗ್ಗರಿಗೆ ತಿರುಪೆ ನೀಡಿ ತೇಪೆ ಹಚ್ಚುವ ಪ್ರಯತ್ನ ಮಾಡುವ ಈತನನ್ನು ಜನ ದಾನಶೂರನೆಂದು ಕರೆಯುತ್ತಿದ್ದರು. ಗುಡಿಸಲು ಕೇರಿಯ ಜನರ ಯೋಗಕ್ಷೇಮ ವಿಚಾರಿಸುತ್ತ ಆಗಾಗ ಅವರಿಗೆ ಸಣ್ಣಪುಟ್ಟ ಸಹಾಯ ನೀಡುತ್ತ ಅವರು ತನ್ನ ಬಗ್ಗೆ ತಿರುಗಿ ಬೀಳದಂತೆ ಎಚ್ಚರವಹಿಸಿದ್ದ.

ಮೊದಮೊದಲು ಗುಡಿಸಲುಗಳ ಬಳಿಗೆ ಹೋಗಿ ಅರಬರ ವಿವಾಹ ವ್ಯವಹಾರವನ್ನು ಖುದ್ದಾಗಿ ಕುದುರಿಸುತ್ತಿದ್ದ ಅಚ್ಚುಕೋಯ ಈಗ ಹೋಟೆಲುಗಳಲ್ಲಿ ಮಾತ್ರ ಕಾಣಸಿಗುತ್ತಾನೆ. ದಾರಿಯಲ್ಲಿ ಈಗ ಕಾಣಸಿಗುವುದಿದ್ದರೆ ಹೊಸ ಮಾಡೆಲ್ ಫಿಯೆಟ್ ಕಾರಿನೊಳಗೆ ಮಾತ್ರ. ಈ ವ್ಯವಹಾರದಲ್ಲಿ ಸಾಕಷ್ಟು ಪೈಪೋಟಿ ಇದ್ದರೂ ಇವನಿಗೇನೂ ಇದರಿಂದ ಧಕ್ಕೆಯಾಗಿಲ್ಲ. ಇವನು ಮುದುಕ ಅರಬರಿಗೆ ಸಣ್ಣ ಹುಡುಗಿಯರನ್ನು ಗೊತ್ತು ಮಾಡುವಲ್ಲಿ ಹೆಚ್ಚು ಮುತುವರ್ಜಿ ವಹಿಸುತ್ತಾನೆಂಬ ವರ್ತಮಾನವಿದ್ದರೂ ಅದೆಲ್ಲ ತನ್ನ ವಿರೋಧಿಗಳು ಹುಟ್ಟಿಸಿರುವ ಪುಕಾರುಗಳೆಂದು ಅಲ್ಲಗಳೆಯುತ್ತಾನೆ. ತನಗೆ ಇದರಲ್ಲೇನೂ ದಿನಹೋಗಬೇಕಾಗಿಲ್ಲ. ಬೇರೆ ವ್ಯವಹಾರಗಳಿವೆ. ಏನೋ ಬಡಬಗ್ಗರಿಗೆ ತನ್ನಿಂದಾದಷ್ಟು ಸಹಾಯವಾಗಲಿ ಎಂದು ಮುಂದುವರಿಸುತ್ತಿದ್ದೇನೆ ಎನ್ನುತ್ತ ಗುಡಿಸಲು ಮಂದಿಯೊಂದಿಗೆ ಆತ್ಮೀಯತೆ ನಟಿಸುತ್ತ ಅವರ ಹೃದಯಗಳನ್ನು ಗೆದ್ದಿದ್ದಾನೆ. ಈ ಬಂಗಾರದ ತತ್ತಿಗಳನ್ನು ಕೊಡುವ ಬಾತುಗಳನ್ನು ತೃಪ್ತಿ ಪಡಿಸಲು ಎಷ್ಟು ಬೇಕು, ಎಷ್ಟು ಸಾಕು ಎಂಬುದನ್ನು ತನ್ನ ಇಷ್ಟು ವರ್ಷಗಳ ಸರ್ವಿಸಿನಲ್ಲಿ ಚೆನ್ನಾಗಿ ಅರಿತಿದ್ದಾನೆ.

ಗುಡಿಸಲು ಕೇರಿಯ ಜನರ ಮೇಲೆ ಇವನಿಗೆ ಸಂಪೂರ್ಣ ಹಿಡಿತವಿದೆ ಎಂಬುದು ಊರಲ್ಲೆಲ್ಲಾ ಸುದ್ದಿ. ಅಚ್ಚುಕೋಯ ತೆರೆಯ ಮರೆಯಲ್ಲಿದ್ದುಕೊಂಡು ಯುವಕ ಸಂಘದವರು ಹೂಡಿದ ಚಳವಳಿಯನ್ನು ಹೇಗೆ ಹತ್ತಿಕ್ಕಿದನೆಂಬ ಸ್ವಾರಸ್ಯಕರ ಕತೆಯನ್ನು ಜನ ಉದಾಹರಣೆಯಾಗಿ ಕೊಡುತ್ತಾರೆ. ಈ ಬಗ್ಗೆ ತನ್ನದು ಎಳ್ಳಷ್ಟೂ ಸಂಬಂಧವಿಲ್ಲದಿದ್ದರೂ ಯಾರಾದರೂ ಕೇಳಿದರೆ ಅರ್ಥಗರ್ಭಿತ ನಗೆ ಬೀರಿ ಅವರು ಹೌದೆಂದುಕೊಳ್ಳುವಂತೆ ಮಾಡುತ್ತಾನೆ. ಅನಾಯಾಸವಾಗಿ ಸಿಕ್ಕ ಪುಕ್ಕಟೆ ಪ್ರಚಾರವನ್ನು ತನ್ನ ಪ್ರತಿಷ್ಠೆ ಬೆಳೆಸಿಕೊಳ್ಳಲು ಉಪಯೋಗಿಸಿಕೊಂಡಿದ್ದ.

ಆದರೆ ಸೈದುಕೋಯಾರ ಮಗ ಸಲೀಮ್ ತನ್ನ ವ್ಯವಹಾರಗಳನ್ನೆಲ್ಲಾ ತಲೆಕೆಳಗೆ ಮಾಡುತ್ತಾನೇನೋ ಅನ್ನೋ ಭಯ ಅಚ್ಚುಕೋಯನನ್ನು ಕಾಡತೊಡಗಿತ್ತು. ಈ ಆಪತ್ತಿನಿಂದ ಪಾರಾಗುವ ಬಗೆ ಹೇಗೆ ಎಂಬುದನ್ನು

ಯೋಚಿಸತೊಡಗಿದ. ಮೊದಲನೆಯದಾಗಿ ಹಾಜಿಮಳ ಮಗಳಿಗೆ ಅರಬ ನೊಬ್ಬನನ್ನು ಗೊತ್ತು ಮಾಡಬೇಕು. ತನಗೆ ಸಿಗುವ ಕಮೀಷನ್ನು ಕಮ್ಮಿ ಯಾದ್ರೂ ಪರವಾಗಿಲ್ಲ. ದೊಡ್ಡ ಮೊತ್ತ ತೋರಿಸಿ ಬುಟ್ಟಿಗೆ ಹಾಕಿಕೊಳ್ಳ ಬೇಕು. ಎರಡನೆಯದಾಗಿ ಸೈದುಕೋಯರನ್ನು ಕಂಡು ತಾನು ಕಂಡ ದೃಶ್ಯದ ಬಗ್ಗೆ ಹೇಳಿ ಎಚ್ಚರಿಸುವುದು. ಕಲ್ಲಿಕೋಟೆಯ ಖ್ಯಾತ "ತರವಾಡು"ಗಳಲ್ಲಿ ಅವರ ಮನೆತನವೂ ಒಂದಾದ್ದರಿಂದ ಮರ್ಯಾದೆಗೆ ಅಂಜುವ ಜನವೇ.

ಅವನ ಮೊದಲನೆಯ ಕ್ರಮಕ್ಕೆ ಸರಿಯಾಗಿ ಆಗಲೇ ಒಬ್ಬ ಶ್ರೀಮಂತ ಅರಬ ಕಲ್ಲಿಕೋಟೆಗೆ ಬರುವವನಿದ್ದೇನಂತ ಕಾಗದ ಬರೆದಿದ್ದ. "ಸ್ವಲ್ಪ ಕೈ ಸಡಿಲು ಬಿಟ್ಟರೆ ಈ ವ್ಯವಹಾರಕ್ಕೆ ಹೊಚ್ಚ ಹೊಸದಾದ ಅಪರಂಜಿ ಹೆಣ್ಣಿದೆ..." ಎಂದು ಈಗಾಗಲೇ ಉತ್ತರ ಬರೆದು ತಿಳಿಸಿದ್ದ. ಅವನ ಕಣ್ಣ ಮುಂದೆ ನಫೀಸ ನಿಂತಿದ್ದಳು. ಮಧ್ಯ ಪ್ರಾಯ ದಾಟಿದ ಅರಬನಿಗೆ ಸುಂದರ ಕನಸನ್ನು ತೋರಿಸಿದ್ದ. "ಮಹರ್ ಸ್ವಲ್ಪ ಜಾಸ್ತಿಯಾದರೂ ಪರವಾಗಿಲ್ಲ. ಹೆಣ್ಣು ಮಾತ್ರ ನೀನು ಹೇಳಿದ ಹಾಗೆಯೇ ಇರಬೇಕು. ಆದಷ್ಟು ಬೇಗನೆ ಕಲ್ಲಿಕೋಟೆಗೆ ಬರಲಿದ್ದೇನೆ" ಎಂದು ಉತ್ತರವೂ ಬಂದಿತ್ತು. ಈ ಬಗ್ಗೆ ಹಾಜಿ ಮಳಿಗೆ ತಿಳಿಸಬೇಕೆಂದು ಮನೆಯಿಂದ ಹೊರಟಾಗಲೇ ತಿರುವನ್ನೂರಿನ ಕಾಟನ್ ಮಿಲ್ ರಸ್ತೆಯಲ್ಲಿ ಮಮ್ಮುಟ್ಟಿ ಇದಿರಾಗಿದ್ದ. ತನಗೆ ಒಲಿದ ಅದೃಷ್ಟಕ್ಕೆ ಸಂತೋಷಪಡುತ್ತ ಮಮ್ಮುಟ್ಟಿಗೆ ವಿಷಯ ತಿಳಿಸಿದ್ದ. ತನ್ನ ಯೋಜನೆ ಅರ್ಧ ಪಾಲು ಯಶಸ್ವಿಯಾದಂತೆ ಎಂದುಕೊಂಡ.

ಅಂದೇ ಸಂಜೆ ಸೈದುಕೋಯರನ್ನು ಕುಟ್ಟಿಚಿರಾದ ಪೇಟೆಯಲ್ಲಿ ಭೇಟಿ ಯಾಗುವುದರಲ್ಲೂ ಅಚ್ಚುಕೋಯ ಯಶಸ್ವಿಯಾದ. ಸೈದುಕೋಯ ಸಂಜೆ ನಂಬಿಯಾರನ ಅಂಗಡಿಗೆ ಎಂದಿನಂತೆ ಕೊಡೆ ಮಾರ್ಕಿನ ನಶ್ಯವನ್ನು ಕೊಳ್ಳಲು ಬಂದಾಗ ಅಚ್ಚುಕೋಯ ತನ್ನ ಫಿಯೆಟ್ ಗಾಡಿಯನ್ನು ಕಿರ್ರನೆ ಬ್ರೇಕುಹಾಕಿ ಬದಿಯಲ್ಲಿ ನಿಲ್ಲಿಸಿದ. ಕಾರಿನಿಂದ ಹೊರಗೆ ಬಂದ ಅಚ್ಚುಕೋಯ "ಅಸ್ಸಲಾಂ ಅಲೈಕುಂ..." ಹೇಳಿದ. "ವ ಅಲೈಕುಂ ಸಲಾಂ..." ಹೇಳಿದ ಸೈದುಕೋಯ ಪರಿಚಯದ ನಗೆ ಬೀರಿದರು. ಅವರು ಕೊಂಡ ನಶ್ಯದ ಡಬ್ಬಿಯಿಂದ ತಾನೂ ಒಂದಿಷ್ಟು ತೆಗೆದು ಸೊರ್ರನೆ ಎಳೆದುಕೊಂಡ. ನಶ್ಯದ ಬಗ್ಗೆ ಶುರುವಾದ ಮಾತು ಈ ವರ್ಷದ ಮಳೆಗೆ ಬಂತು, ಮತ್ತೆ ಮನೆಯವರ ಬಗ್ಗೆ ಕೇಳಿದ ಅಚ್ಚುಕೋಯ, "ನಿಮ್ಮ ಮಗ ಸಲೀಮ ಏನ್ಮಾಡ್ತಾ ಇದ್ದಾನೆ...?" ಎಂದ.

"ಅವನ ಎಂ.ಎ. ಮುಗಿಯಿತು. ಈ ಸಲ ಕಾಲೇಜಿನಲ್ಲಿ ಲೆಕ್ಚರರ್ ಪೋಸ್ಟೇನಾದ್ರೂ ಸಿಗ್ತದಾಂತ ನೋಡ್ಬೇಕಂತ ಇದ್ದಾನೆ. ಈಗಾಗ್ಲೆ ಒಂದೆ

ರಡು ಕಾಲೇಜಿಗೆ ಅರ್ಜಿ ಹಾಕಿದ್ದಾನೆ–" ಎಂದರು ಸೈದಂಕೋಯ. "ಏನು...
ಸೈದಂಕೋಯ ಈ ಸಲ ಮಗನಿಗೆ ಮದುವೆ ಮಾಡೋ ಅಂದಾಜಿನಲ್ಲಿಲ್ವಾ ?"
ಅಂತ ಕೇಳಿದ ಅಚ್ಚುಕೋಯ ನಗುತ್ತ "ಮದ್ವೆ ಅಂದ್ರೆ ಒಂಥರ ಮಾಡ್ತಿದ್ದ.
ಈಗೀಗ ಸ್ವಲ್ಪ ಬದ್ಲಾಗಿದಾನೆಂತ ಅವನಮ್ಮ ಹೇಳ್ತಿದ್ಲು..." ಅಂತ ಹೇಳಿದ
ಸೈದಂಕೋಯ ಅನುಮಾನ ಪಡುತ್ತ, "ಅಲ್ಲಾ ಅಚ್ಚುಕೋಯನತ್ರ ಹೆಣ್ಣಿನ
ಹುಂಡಿಯೇನಾದ್ರೂ ಉಂಟಾ...?" ಅಂತ ಕೇಳಿದರು.

"ನೀವು ಹೂಂ... ಅಂದ್ರೆ ಸಾಕು, ನೂರು ಹೆಣ್ಣುಗಳ ಹುಂಡಿ ತಂದು
ನಿಮ್ಮ ಮುಂದೆ ಇಟ್ಟೇನು. ನಿಮ್ಮ 'ತರವಾಡು' ಏನು ಕಮ್ಮಿಯಂದ್ಲಾ ?
ಸೈದಂಕೋಯಾರ ಮೇಲೆ ಜನರ ಗೌರವಕ್ಕೇನು ಕಮ್ಮಿಯಾ? ಅಲ್ಲಾ...
ಬೇಸರ ಮಾಡ್ಕೋಬೇಡಿ, ನಾ ಹೀಗೆ ಹೇಳಿದೇಂತ... ನಿಮ್ಮ ಮಗ ಮೊನ್ನೆ
ರಾತ್ರಿ ಬೀಚ್‌ರೋಡಿನಾಚೆಯ ಗುಡಿಸಲು ಕೇರಿಯ ಹತ್ರ ಹಾಜಿಮಾಳ ಮಗ
ಳೊಂದಿಗೆ ಸಮುದ್ರ ತೀರದಿಂದ ಜೊತೆಯಾಗಿ ಬರ್ತಿರೋದು ನೋಡಿದೆ...
ಅದೆಲ್ಲ ನಿಮ್ಮಂತಹ ದೊಡ್ಡ ತರವಾಡಿನ ಜನಕ್ಕೆ ಯಾಕೆ ಅಂತ... ಕೊಳಕಿಗೆ
ಕಾಲು ಹಾಕಿದ್ರೆ ಮೈತುಂಬ ಸಿಡಿಯುತ್ತೆ ನೋಡಿ... ಜನ ಎಲ್ಲ ಬಾಯಿಗೆ
ಬಂದ ಹಾಗೆ ಆಡ್ಕೊಳ್ಳೋದಕ್ಕೆ ಮುಂಚೆ ನಿಮ್ಗೆ ಕೂಡ ತಿಳಿದಿರ್ಲಿ... ಅಂತ
ಹೇಳ್ತಿದ್ದೇನೆ... ಅಷ್ಟೇ..." ಅಂತ ತನ್ನ ವಿಷ ಬೀಜ ಬಿತ್ತಿಯೇ ಬಿಟ್ಟ.

ಸೈದಂಕೋಯರಿಗೆ ಈಗ ಸ್ಪಷ್ಟವಾಯಿತು. ಈ ಮನುಷ್ಯ ಇದನ್ನು
ಹೇಳ್ಲಿಕ್ಕಾಗಿಯೇ ಇಷ್ಟು ಮುತುವರ್ಜಿ ವಹಿಸಿ ಮಾತನಾಡಿದ್ದು ಅಂತ. "ಆ
ಹುಡುಗಿ ನಫೀಸಾ ನಮ್ಮ ಮನೆಗೆ ಕೆಲಸಕ್ಕೆ ಬರೋ ಹುಡುಗಿ. ಆ ದಿನ ಕೆಲಸ
ಮುಗಿದಾಗ ರಾತ್ರಿ ಆಯ್ತೂಂತ ನನ್ನ ಮಗನನ್ನು ಅವಳ ಮನೆಗೆ ಬಿಟ್ಟು ಬಾ
ಅಂತ ಅವನಮ್ಮನೇ ಕಳುಹಿಸಿದ್ಲು..." ಅಂದರು.

"ಅದೇನೋ... ನಾನು ಕಂಡದ್ದು ನಿಮಗೆ ಹೇಳಿದೆ. ನಿಮ್ಮ ಗೌರವ,
ತರವಾಡಿನ ಹೆಸರು ಉಳಿಯಬೇಕಂತ ಹೇಳಿದೆ ಅಷ್ಟೇ..." ಎಂದು ತನ್ನ ಕೆಲಸ
ಮುಗಿಯಿತೆಂಬಂತೆ ಸಲಾಂ ಹೇಳಿ ಅಚ್ಚುಕೋಯಾ ತನ್ನ ಕಾರಿನತ್ತ ನಡೆದ.

ಸೈದಂಕೋಯಾ ತಮ್ಮ ಮನೆ ಕಡೆ ನಡೆಯುವಾಗ ತಲೆ ತುಂಬ ಅಚ್ಚು
ಕೋಯುನ ಮಾತುಗಳೇ ತುಂಬಿತ್ತು. ಸಲೀಮ ನಫೀಸಳನ್ನು ಮನೆಗೆ ಬಿಟ್ಟು
ಬರಲಿಕ್ಕೆ ಹೋದದ್ದು ಸರಿ. ಆದ್ರೆ ಅವರ್‍ಯಾಕೆ ಸಮುದ್ರ ತೀರದಿಂದ ಬರ
ಬೇಕು ? ಬೀಚ್ ರೋಡಿನಲ್ಲಿ ಸೀದಾ ನಡೆದರೆ ಹಾಜಿಮಳ ಮನೆಯೆಂದುರು
ನಿಲ್ಲಬಹುದು. ಹೀಗಿರುವಾಗ ಬೀಚ್ ರೋಡನ್ನು ದಾಟಿ ಸಮುದ್ರದ ತೀರಕ್ಕೆ
ಹೋಗುವ ಅಗತ್ಯವೇನು ? ಸೈದಂಕೋಯರ ಮನಸ್ಸಿನೊಳಗೆ ಸಂಶಯ

ಹೊಕ್ಕಿತು. ತನ್ನ ಹೆಂಡತಿ ಇತ್ತೀಚೆಗೆ ಮಗ ಬದ್ಲಾಗಿದ್ದಾನೆಂತ ಹೇಳಿದ್ದನ್ನು ಜ್ಞಾಪಿಸಿಕೊಂಡರು. ಅಚ್ಚುಕೋಯನ ಅನುಮಾನ ನಿಜವಾಗಿರಬಹುದೇ ಎಂದು ಯೋಚಿಸುತ್ತಾ ಹೋದಂತೆ "ಹಾಗಾಗದಿರಲಿ ರಬ್ಬೇ..." ಎಂದು ಕೊಂಡರು. ಈಗಾಗ್ಲೇ ಕಾಲೇಜಿನಲ್ಲಿ ಹೆಣ್ಣಿನ ಬಲೆಗೆ ಬಿದ್ದ ತಮ್ಮ ಮಗ ಇನ್ನೊಮ್ಮೆ ಏನಾದ್ರೂ ಅವಾಂತರ ಮಾಡ್ಕೊಂಡಾನೇನೋ... ಎಂಬ ಅನು ಮಾನ ಹುಟ್ಟಿಕೊಂಡಂತೆ ಭಯಗೊಂಡರು. "ರಬ್ಬುಲ್ ಅಲಮೀನಾಯ ತಂಪುರಾಯೇ... ಹೀಗಾಗದಿರಲಿ... ನಮ್ಮ ಮನೆತನದ ಮರ್ಯಾದೆ ಬೀದಿ ಪಾಲಾಗದಿರಲಿ... ಯಾ ಅಲ್ಲಾಹ್..." ಎಂದು ದುವಾ ಮಾಡಿಕೊಳ್ಳುತ್ತ ಮನೆಕಡೆ ನಡೆದರು.

* * *

ಇತ್ತೀಚೆಗೆ ಮಗ ಖುಷಿಯಾಗಿ ಉಲ್ಲಾಸದಿಂದ ಮನೆ ತುಂಬ ಓಡಾಡು ತ್ತಿರುವುದರಿಂದ ಮನೆಗೊಂದು ಕಳೆ ಬಂದಿತ್ತು. ಎರಡು ವರ್ಷಗಳಿಂದ ಕಾಡು ತ್ತಿದ್ದ ಕೊರಗಿನಿಂದ ಬಿಡುಗಡೆಗೊಂಡು ಸೈದುಕೋಯಾರಿಗೆ ಹಾಯೆನಿಸು ತ್ತಿತ್ತು. ಆದರೆ ಇಂದು ಅಚ್ಚುಕೋಯ ಕೊಟ್ಟ ಸುದ್ದಿಯಿಂದ ಪುನಃ ಮನಸ್ಸು ಕದಡತೊಡಗಿತು. ಇನ್ನೊಂದು ಮನಸ್ಸು ಹೇಳುತ್ತಿತ್ತು, "ಯಾರನ್ನು ಬೇಕಾದ್ರೂ ಮದುವೆಯಾಗ್ಲಿ. ಇರುವ ಒಬ್ಬ ಮಗ. ಸುಖವಾಗಿರ್ಲಿ. ನಫೀಸಾ ಆದ್ರೇನಾಯ್ತು? ನೋಡಲು ತುಂಬ ಚೆನ್ನಾಗಿದ್ದಾಳೆ. ನಡೆನುಡಿಯಲ್ಲೂ, ಕೆಲಸದಲ್ಲೂ ತುಂಬ ಅಚ್ಚುಕಟ್ಟು. ಸಲೀಮನಿಗೆ ಹೇಳಿ ಮಾಡಿಸಿದಂತಿದ್ದಾಳೆ. ಆದರೆ ಅದರ ಹಿಂದೆಯೇ ತನ್ನ ತರವಾಡಿನ ಗೌರವವೆಲ್ಲ ಮಣ್ಣುಪಾಲಾ ಗೋದು ಅವರಿಗಿಷ್ಟವಿರಲಿಲ್ಲ. ಹೋಗಿ ಹೋಗಿ ಸಲೀಮ ಇಂತಹದ್ದಕ್ಕೆ ಬಲಿ ಬೀಳಬೇಕೆ? ಜನ ಛೀ... ಥೂ... ಅನ್ನೋದಿಲ್ವೇ! ಅಲ್ಲಾಹುವನ್ನು ಬೇಡಿ ಬೇಡಿ ಪಡೆದ ಒಬ್ಬನೇ ಗಂಡು ಮಗ. ಅವನಿಂದಾಗಿ ತನ್ನ ಕೊನೆಗಾಲದಲ್ಲಿ ಕೊರಗುತ್ತಲೇ ಇರಬೇಕಾಗುತ್ತದೇನೊ... ಎಂದುಕೊಂಡು ನಿಟ್ಟುಸಿರು ಬಿಟ್ಟರು.

ಸೈದುಕೋಯಾರಿಗೆ ಕುಟ್ಟಿಚಿರಾದ ಗುಡಿಸಲುಗಳ ಜನ ಅರಬರನ್ನು ವಿವಾಹವಾಗುವ ಬಗ್ಗೆ ಏನೂ ಅಗೌರವವಿರಲಿಲ್ಲ. ಊರವರಂತೆ ಅಸಹ್ಯ ಪಡುವುದೂ ಇಲ್ಲ. ನಿಖಾ ರಿಜಿಸ್ಟರಲ್ಲಿ ದಾಖಲೆಯಾಗದಷ್ಟಕ್ಕೆ ನಿಕಾಹ್ ಪೂರ್ತಿ ಆಗೂದಿಲ್ಲ ಅನ್ನೋ ಮಾತಿಗೆ ಅವರ ಒಪ್ಪಿಗೆ ಇರಲಿಲ್ಲ. ಇದೆಲ್ಲ

ಮನುಷ್ಯರ ರಿಕಾರ್ಡ್. ಅಲ್ಲಿ ಪರಲೋಕದಲ್ಲಿ ಅಲ್ಲಾಹುವಿನ ರಿಕಾರ್ಡಿಗಿಂತ ದೊಡ್ಡದಾ ಇದೆಲ್ಲ ? ಇಲ್ಲಿ ರಿಕಾರ್ಡ್ ಆಗದಿದ್ರೆ ಅಲ್ಲಿ ಆಗದೆ ಇರ್ತದಾ ?

"ಅರಬ್ ನಿಕಾಹ್"ಗಳ ಬಗ್ಗೆ ಅಸಹ್ಯ ಪಡದಿರುವುದಕ್ಕೆ ಮುಖ್ಯ ಕಾರಣ ಸೈದುಕೋಯಾರ ಒಬ್ಬಳು ತಂಗಿ ಅರಬನೊಬ್ಬನನ್ನು ನಿಕಾಹ್ ಆದದ್ದು. ಗುಡಿಸಲ ಕೇರಿಯ ಜನಕ್ಕೂ ಅವಳಿಗೂ ಇರುವ ವ್ಯತ್ಯಾಸವೆಂದರೆ ಅವರು ವರ್ಷಕ್ಕೊಬ್ಬ ಅರಬಿಯನ್ನು ಮದುವೆಯಾದರೆ ಅವಳು ಮದುವೆಯಾದದ್ದು ಒಬ್ಬನೇ ಅರಬಿಯನ್ನು. ಅವನು ಕೈಬಿಡಲಿಲ್ಲ. ಗುಡಿಸಲು ಕೇರಿಯ ಜನಕ್ಕೆ ಸಿಗುವವರು ಅರಬ ಸ್ಥಾನದಲ್ಲಿ ಸಾಮಾನ್ಯರೆನಿಸಿಕೊಂಡ ಅರಬರು. ಅಲ್ಲಿನ ಅರಬ್ ಹೆಣ್ಣುಗಳಿಗೆ ಲಕ್ಷಗಟ್ಟಲೆ ಮಹರ್ ಕೊಡಲಾಗದೆ ಬಲವಂತವಾಗಿ ಬ್ರಹ್ಮಚಾರಿಗಳಾಗಿ ಉಳಿದವರು ಅಥವಾ ಎರಡು ಮೂರು ತಿಂಗಳಿಗೆ ಮಜಾ ಮಾಡಲಿಕ್ಕೆ ಬಂದವರು, ಇವರಿಗೆ ಗುಡಿಸಲು ಕೇರಿಯಲ್ಲಿ ಸುಲಭವಾಗಿ ಅಗ್ಗದ ಮಹರ್‌ಗೆ ಹೆಣ್ಣುಗಳು ಸಿಗುವದಾದರೆ, ಸೈದುಕೋಯಾರಂತಹ ಸಭ್ಯ ಮನೆತನದ ಹೆಣ್ಣುಗಳು ಸಿಗುವುದು ಸಕತ್ತಾಗಿ ಮಹರ್ ಕೊಡಬಲ್ಲ ಶ್ರೀಮಂತ ಅರಬರಿಗೆ ಮಾತ್ರ.

ಸೈದುಕೋಯಾರ ತಂಗಿಯನ್ನು ಮದುವೆಯಾದ ಅರಬ ಒಂದು ಹೊಸ ಮನೆಯನ್ನು ಕಟ್ಟಿಸಿಕೊಟ್ಟಿದ್ದ. ಸ್ವದೇಶಕ್ಕೆ ಹೋದಾಗ ಪ್ರತಿ ತಿಂಗಳೂ ತಪ್ಪದೆ ಖರ್ಚಿಗೆ ಹಣ ಕಳುಹಿಸುತ್ತಿದ್ದ. ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ಕಲ್ಲಿಕೋಟೆಗೆ ಬಂದು ಮೂರು ನಾಲ್ಕು ತಿಂಗಳು ಮನೆಯಲ್ಲಿ ಉಳಿದು ತನ್ನ ವ್ಯವಹಾರ ಮುಗಿಸಿ ಮತ್ತೆ ತನ್ನ ದೇಶಕ್ಕೆ ಹೋಗುತ್ತಿದ್ದ. ಎರಡು ಹೆಣ್ಣು ಒಂದು ಗಂಡು ಮಗುವನ್ನು ಇಲ್ಲಿ ಪಡೆದು ತನ್ನ ಮಕ್ಕಳನ್ನು ಚೆನ್ನಾಗಿಯೇ ನೋಡಿಕೊಂಡಿದ್ದ. ಗಂಡು ಮಗುವನ್ನು ಅರೇಬಿಯಾಕ್ಕೆ ಕರೆಸಿಕೊಂಡು ಇತ್ತೀಚೆಗೆ ಒಳ್ಳೆಯ ಉದ್ಯೋಗ ಕೊಡಿಸಿದ್ದ. ಎರಡು ಹೆಣ್ಣು ಮಕ್ಕಳನ್ನೂ ಕಲ್ಲಿಕೋಟೆಯ ಒಳ್ಳೆಯ ಮನೆತನದ ಗಂಡುಗಳಿಗೆ ಕೊಟ್ಟು ಮದುವೆ ಮಾಡಿದ್ದ. ಪ್ರತೀ ಮದುವೆಯ ಸಂದರ್ಭದಲ್ಲೂ ಸ್ವತಹ ಅವನೇ ಬಂದು ನಿಕಾಹ್ ನಡೆಸಿ ಕೊಟ್ಟು ಹೋಗಿದ್ದ.

ಈ ಅರಬ ಭಾವನಿಂದ ಸೈದುಕೋಯಾರಿಗೂ ಸಾಕಷ್ಟು ಸಹಾಯ ವಾಗಿತ್ತು. ಕುಟುಂಬದ ಕೆಲವು ಹುಡುಗರಿಗೆ ಪರದೇಶದಲ್ಲಿ ನೌಕರಿಯೂ ದೊರೆತಿತ್ತು. ಒಂದು ವಿಧದಲ್ಲಿ ನೋಡಿದರೆ ಸೈದುಕೋಯಾರ ಆರ್ಥಿಕಸ್ಥಿತಿ ಈ ಮಟ್ಟಕ್ಕೆ ಬರಬೇಕಾದರೆ ಕಾರಣ ಈ ಅರಬಿ ಭಾವನೇ. ಕುಟುಂಬದ ಇತರರೂ ಅವರಿಂದ ಸಾಕಷ್ಟು ಸಹಾಯ ಪಡೆದು ಒಳ್ಳೆಯ ಸ್ಥಿತಿಯಲ್ಲಿದ್ದರು.

ಸೈದುಕೋಯು ಅರಬರಿಗೆ ಹಡಗು ತಯಾರಿಸಲು ಬೇಕಾದ ಮರಗಳನ್ನು ಆರಿಸುವುದನ್ನು ಕಲಿತದ್ದು ತನ್ನ ಅರಬಿ ಭಾವನಿಂದ. ಅರಬರಿಗೆ ಬೇಕಾದ ಈ ವಿಶೇಷ ತರದ ಮರವನ್ನು ದೂರದೂರದಿಂದ ತರಿಸಿ ಸ್ಟಾಕು ಮಾಡಿ ಸೀಜನಿನಲ್ಲಿ ಅರಬರಿಗೆ ಮಾರುವ ಈ ವ್ಯಾಪಾರದಲ್ಲೇ ಸೈದುಕೋಯಾರಿಗೆ ಶ್ರೀಮಂತಿಕೆ ಬಂದದ್ದು. ಜೊತೆಗೆ ಅರಬರಿಗೆ ಬೇಕಾದ ಸಂಬಾರ ಜಿನಸು, ಸುಗಂಧ ದ್ರವ್ಯಗಳನ್ನು ಕೂಡಾ ಒದಗಿಸುವ ವ್ಯಾಪಾರಕ್ಕೂ ಕೈಹಾಕಿದ್ದರು. ತೀರಾ ಇತ್ತೀಚೆಗಷ್ಟೆ ತನಗೆ ವಯಸ್ಸಾಯಿತೆಂದು ವ್ಯಾಪಾರವನ್ನು ನಿಲ್ಲಿಸಿದ್ದರು.

ಸೈದುಕೋಯಾ ಮನೆಯೊಳಗೆ ಬಂದಾಗ ಮುಂಕಾಗಿರೋದು ಕಂಡ ಷರೀಫಮ್ಮನಿಗೆ ಭಯವಾಗತೊಡಗಿತು. ಸಣ್ಣ ಪುಟ್ಟ ವಿಷಯಕ್ಕೆಲ್ಲ ಹೀಗೆ ಮುಂಕಾಗೋದು ಗಂಡನ ಸ್ವಭಾವವಲ್ಲ. ಪೇಟೆಗೆ ಹೋದಾಗ ಏನೋ ಆಗಿರಬೇಕು. ಮನೆಯೊಳಗೆ ಬಂದಾಗ ಒಮ್ಮೆಲೇ ಕೇಳಿದರೆ ಸಿಟ್ಟಾಗುತ್ತಾರೆಂಬುದು ಅವರಿಗೆ ತಿಳಿದಿತ್ತು. ಅಡುಗೆ ಕೋಣೆಯೊಳಗೆ ಹೋಗಿ ಒಂದು ಕಪ್ ಚಾ ಮಾಡಿ ತಂದು ಗಂಡ ಕೂತ ಈಸೀಚೇರಿನ ಹತ್ತಿರ ಟೀಪಾಯಿ ಎಳೆದು ಇಟ್ಟರು. ಗಂಡ ಕಪ್ಪನ್ನೆತ್ತಿ ಚಾ ಕುಡಿಯತೊಡಗಿದಾಗ ಷರೀಫಮ್ಮ ಅಳುಕುತ್ತಲೇ ಕೇಳಿದರು: "ಏನು... ತಲೆನೋಯುತ್ತಾ...?" ಸೈದುಕೋಯಾ ಸ್ವಲ್ಪ ಮಿದುವಾಗಿಯೇ "ಏನಿಲ್ಲ..." ಎಂದಾಗ ಷರೀಷಮ್ಮ ಧೈರ್ಯಗೊಂಡು "ಮತ್ತೆ ಒಂಥರಾ ಇದ್ದೀರಲ್ಲಾ... ಪೇಟೆಗೆ ಹೋದಾಗ ಏನಾಯ್ತು ?" ಅಂತ ನಗುತ್ತ ಕೇಳಿದರು. ಸೈದುಕೋಯು ಉತ್ತರಿಸದೆ ಚಾ ಕುಡಿದು ಕಪ್ಪನ್ನು ಟೀಪಾಯಿಯು ಮೇಲಿಡುತ್ತ "ಸಲೀಮು ಮನೇಲಿದ್ದಾನೇನು ?" ಅಂತ ಕೇಳಿದರು. "ಆಗ್ಲೇ ಬಂದಿದ್ದಾನೆ... ಅದೇನೋ ಪುಸ್ತಕ ಓದ್ತಿದ್ದಾನೆ ಕೋಣೆಯಲ್ಲಿ..." ಎಂದರು ಷರೀಫಮ್ಮ, "ಸ್ವಲ್ಪ ಕರಿ..." ಅಂತ ಸೈದುಕೋಯು ಹೇಳಿದಾಗ ಷರೀಫಮ್ಮ ಸಲೀಮನ ಕೋಣೆಯತ್ತ ಹೋಗಿ ಕೂಗಿದ್ರು...

ಸಲೀಮು ಬಂದವನು ಅಪ್ಪನ ಮುಂದೆ ನಿಂತು "ಕರ್ದಿರಾ...ಪ್ಪ..." ಅಂದಾಗ ಸೈದುಕೋಯು ಗಂಭೀರವಾಗಿ "ಮಗಾ... ಈ ಸಲ ನಿಂಗೆ ಅಲ್ಲಾಹು ವಿನ ಇಚ್ಛೆಯಿದ್ರೆ ಮದುವೆ ಮಾಡ್ಬೇಕಂತ ನಮ್ಮಾಸೆ. ನೀ ಬ್ಯಾಡಾಂತ ಅನ್ನಕೂಡ್ದು..." ಅಂದರು. ಅಪ್ಪ ನೇರವಾಗಿ ಮದುವೆಯ ವಿಷಯ ಮಾತಾಡಿದಾಗ ಸಲೀಮು ತುಸು ನಾಚಿದ. "ಸರಿ... ನಿಮ್ಮಿಷ್ಟ..." ಅಂತ ಅಂದು ಅಮ್ಮನ ಕಡೆ ನೋಡಿದ. ಅಮ್ಮ ನಕ್ಕಳು. "ಹಾಗಾದ್ರೆ ಭೇಪುರಕ್ಕೆ ನಾಳೆ ಹೆಣ್ಣು ನೋಡ್ಲಿಕ್ಕೆ ಹೋಗ್ಬೇಕು. ತಯಾರಿದ್ದಿಯಲ್ಲಾ..." ಅಂತ ಸೈದುಕೋಯು ಕೇಳಿದಾಗ ಷರೀಫಮ್ಮ ಮಧ್ಯೆ ಬಾಯಿ ಹಾಕಿ, "ಅದ್ಯಾರ

ಮಗಳು ಏನು ಕತೆ... ಹೇಳ್ಬಾರ್ದ...?" ಅಂತ ಕೇಳಿದರು. "ಅದೇ ಭೇಪುರದ ಹಾಜಿ ಸುಲೇಮಾನ್ ಕೋಯಾರ ಮಗಳು. ಹುಡುಗಿ ಒಪ್ಪಿಗೆಯಾದ್ರೆ ಮುಂದಿನ ಏರ್ಪಾಟು ಮಾಡೋಣ..." ಅಂತ ಸೈದುಕೋಯು ಹೇಳಿದ್ರು. "ಒಳ್ಳೆಯ ತರವಾಡಿನವರು. ನಮಗೆ ಸರಿಹೊಂದಬಹುದು..." ಅಂತ ಷರೀಫಮ್ಮ ದನಿಗೂಡಿಸಿದರು. ಸಲೀಮ ನಕ್ಕು "ಅದೇನು ಮಾಡ್ತಿರೋ ಮಾಡಿ... ನಿಮಗೆ ಸಂತೋಷವಾದ್ರೆ ನಂಗೂ ಸಂತೋಷ..." ಎಂದು ತನ್ನ ಕೋಣೆಗೆ ಹೋದ. ಸೈದುಕೋಯು ಮಗನನ್ನು ಅಭಿಮಾನದಿಂದ ನೋಡಿದರು.

# ಪಿತೂರಿ

ಸೈದುಕೋಯಾ ದೊಡ್ಡ ಸಂಕಟವೊಂದರಿಂದ ಪಾರಾದವರಂತೆ ಸಮಾಧಾನದ ಉಸಿರು ಬಿಟ್ಟರು. ಗೆಲುವಿನಿಂದ ಹಿಗ್ಗಿ ಹೆಂಡತಿಯೊಂದಿಗೆ ಪಿಸುಮಾತಿನಿಂದ "ಅಚ್ಚುಕೋಯ ಪೇಟೆಯಲ್ಲಿ ಸಿಕ್ಕಿದವ, ನಮ್ಮ ಸಲೀಮ ಮತ್ತು ನಫೀಸರ ಬಗ್ಗೆ ಏನೇನೋ ಹೇಳಿ ಹೆದರಿಸಿದ ಮಾರಾಯ್ತಿ. ಮೊನ್ನೆ ನೀನು ಅವಳನ್ನು ಮನೆಗೆ ಬಿಟ್ಟು ಬಾ ಅಂತ ಸಲೀಮನ ಜೊತೆ ಕಳಿಸಿದ್ಯಲ್ಲಾ, ಅದೇ ಎಷ್ಟು ರಾದ್ಧಾಂತಕ್ಕೆ ಕಾರಣವಾಯ್ತು, ನೋಡು. ಅಚ್ಚುಕೋಯ ಬೀಚ್ ರೋಡಲ್ಲಿ ಬರುವಾಗ ಅವರು ಸಮುದ್ರ ತೀರದಿಂದ ನಡೆದುಕೊಂಡು ಬರುವುದು ನೋಡಿದೆ ಎಂದ. ನಂಗೆ ದಿಗಿಲಾಯ್ತು. ಒಂದು ವೇಳೆ ಸಲೀಮನಿಗೆ ಅವಳನ್ನೇ ಮದುವೆಯಾಗ್ಬೇಕಂತ ಇದ್ದಿದ್ರೆ ಈಗ ಖಂಡಿತ ನಮ್ಮ ಮಾತಿಗೆ ಒಪ್ತಾ ಇರ್‍ಲಿಲ್ಲ ಅಲ್ವಾ...?" ಅಂದರು.

ಪರೀಫಮ್ಮ ಸೈದುಕೋಯಾರ ಮಾತಿಗೆ ನಕ್ಕು "ಇಷ್ಟು ವಿಷಯಕ್ಕೆಲ್ಲ ನೀವು ತಲೆಬಿಸಿ ಮಾಡ್ಕೊಂಡದ್ದಾ? ಆ ಹುಡುಗಿ ನಫೀಸಾ ಪುಟ್ಟ ಮಗುವಾಗಿದ್ದಾಗ್ಲಿಂದ ನೋಡ್ತಾ ಇಲ್ವಾ ನಾನು...? ಅವ್ಳು ಅಂತಾ ಹುಡುಗಿಯೇನಲ್ಲ ಮಾರಾಯ್ರೇ. ಅವರ ಮನೆ ಕೂಡಾ ಇರೂದು ಕಡ್ಲು ಬದಿಯಲ್ಲೇ ಅಲ್ವಾ... ಅವ್ರು ಹೋಗುವಾಗ ಅಚ್ಚುಕೋಯನಿಗೆ ಕಡ್ಲುಬದಿಯಿಂದ ಬಂದ ಹಾಗೆ ಕಂಡಿರಬೇಕು...ಅಷ್ಟೆ" ಎಂದರು.

ಸೈದುಕೋಯರನ್ನು ಪರೀಫಮ್ಮ ಸಮಾಧಾನಪಡಿಸಿದರಾದರೂ ಅಚ್ಚುಕೋಯಾನ ಮಾತು ಚಿತ್ತದಿಂದ ಕದಲಲಿಲ್ಲ! ಅವರಿಬ್ಬರೂ ಸಮುದ್ರ ತೀರಕ್ಕೆ ಹೋಗಿ ಬಂದಿರಬಹುದೇ ಎಂಬ ಅನುಮಾನ ಕಾಡತೊಡಗಿತು. ಯೌವನದ ಹೊಸ್ತಿಲಲ್ಲಿರುವ ಇಬ್ಬರನ್ನೂ ಜೊತೆಯಾಗಿ ತಾನು ಕಳುಹಿಸಬಾರದಿತ್ತೇನೋ! ಎಂದುಕೊಂಡರಾದರೂ ಏನಾದ್ರೂ ಹೆಚ್ಚುಕಮ್ಮಿಯಾದ್ರೂ ನಮ್ಮದು

ಹುಡುಗನಲ್ವಾ ? ಏನಾದ್ರೂ ಆದ್ರೂ ಆ ಗಂಡಿಸಲು ಕೇರಿಯಂವರಿಗೆ ಇದೆಲ್ಲ ದೊಡ್ಡ ವಿಷಯಂವೇನೂ ಅಲ್ಲ. ಜಾರಿದ್ರೂ ಮಾನವಂರ್ಯಾದೆಯಂ ಪ್ರಶ್ನೆ ಅವರನ್ನೇನೂ ಕಾಡಲಾರದು. ಹ್ಯಾಗೂ ಯಾವನಾದರೊಬ್ಬ ಅರಬನಿಗೆ ಮಂದುಂವೆಯಾಗುವ ಹುಡುಂಗಿ. ಹ್ಯಾಗಿದ್ರೇನು ಅವರಿಗೆ ? ಹುಡುಂಗಿ ಸಿಕ್ಕಿದ್ರೆ ಸಾಕು. ಆದ್ರೆ ನನ್ನ ಮಂಗನ ತಲೆಗಿಲೆ ತಿರುಂಗಿಸಿ ಬಲೆಗೆ ಹಾಕಿಕೊಂಡ್ರೇನುಂ ಗತಿ ?! ನಾವು ಹತ್ತು ಮಂಂದಿಯು ನಡುವೆ ತಲೆಯೆತ್ತಿ ಬದ್ಕೋದು ಹ್ಯಾಗೆ? ಎಂದುಂಕೊಂಡಂತೆ ಷರೀಫಮ್ಮನಿಗೆ ಭಯುವಾಗತೊಡಗಿತುಂ. ಜೊತೆಗೆ ಅವಳುಂ ಸಲೀಮನಿಗೆ ಸಂಬಂಧಪಟ್ಟ ಕೆಲಸಗಳನ್ನು ಹೆಚ್ಚು ಆಸ್ಥೆಯಿಂಂದ ಮಾಡುವು ದನ್ನು ನೆನಸಿಕೊಂಡುಂ ಏನಾದ್ರೂ ಒಳಗಿಂದೊಳಗೆ ನಡೆದಿರಬಹುಂದೇ ಎಂಬ ಅನುಂಮಾನ ಕಾಡತೊಡಗಿತುಂ. ಹಾಗೇನಾದ್ರೂ ಕಂಡುಂಬಂದರೆ ಕೆಲಸಕ್ಕೆ ಜನ ಬೇರೆ ನೋಡುವುದು ಒಳ್ಳೆಯಂದು ಎಂದುಂಕೊಂಡರು. ತಮ್ಮ ಈ ಅನುಂಮಾನ ವನ್ನು ಜುಂಬೇದಳೊಂದಿಗೆ ತೋಡಿಕೊಳ್ಳಲು ಅವಳ ಕೋಣೆಯೊಳಗೆ ಹೋದರುಂ.

ಮರುಂದಿನ ಮುಂಂಜಾನೆ ನಫೀಸಾ ಎಂದಿನಂತೆ ಬಂದುಂ ಮನೆಕೆಲಸದಲ್ಲಿ ತೊಡಗಿದಳುಂ. ಚಾ ಮಾಡಿ ಕಪ್‌ನಲ್ಲಿ ಹಾಕಿ ಸಲೀಮನ ಕೋಣೆಗೆ ಕೊಂಡುಂ ಹೋಗಬೇಕೆನ್ನುವಷ್ಟರಲ್ಲಿ ಷರೀಫಮ್ಮ ಅಡುಂಗೆ ಕೋಣೆಯೊಳಗೆ ಬಂದರುಂ. "ನಫೀಸಾ... ಆ ಕುಂಕ್ಕರನ್ನು ಚೆನ್ನಾಗಿ ತೊಳೆದಿಡುಂ. ಸಲೀಮನ ಚಾ ನಾನುಂ ಕೊಂಡುಹೋಗ್ತೇನೆ. ನೀನು ಕೆಲ್ಸ ಮಾಡುಂ" ಎಂದುಂ ನಫೀಸಾಳ ಕೈಯಿಂಂದ ಕಪ್ ತೆಗೆದುಂಕೊಂಡು ಹೋದರುಂ. ನಫೀಸಳಿಗೆ ಎಂದಿನಂತಿರದ ಷರೀಫಮ್ಮ ನವರ ನಡವಳಿಕೆ ಕಂಡುಂ ಅಚ್ಚರಿಯಾಯಿಂತುಂ. ಮತ್ತೆ ತನ್ನ ಕೆಲಸಗಳಲ್ಲಿ ಮಗ್ನ ಳಾದಳುಂ.

ಅಡುಂಗೆ ಕೋಣೆಯು ಕೆಲಸವೆಲ್ಲ ಮುಂಗಿದನಂತರ ಬಟ್ಟೆ ಒಗೆಯಂಂವ ತಯಾರಿ ಮಾಡುಂತ್ತ ಕೊಳೆ ಬಟ್ಟೆಗಳನ್ನು ಬೇರೆ ಬೇರೆ ಕೋಣೆಗಳಿಂದ ಎತ್ತಿ ತಂದಿಡತೊಡಗಿದಳುಂ. ಸಲೀಮನ ಕೋಣೆಯಿಂಂದ ಬಟ್ಟೆಗಳನ್ನು ತರಲೋ ಬೇಡವೋ ಎಂಬ ಅನುಮಾನ ಒಂದು ಕ್ಷಣ ಕಾಡಿತುಂ. ಏನಾದರಾಗಲಿ ಎಂದುಂಕೊಂಡುಂ ಕೋಣೆಯೊಳಗೆ ಕಾಲಿಟ್ಟಳುಂ.

ಸಲೀಮ್ ಯಾವುದೋ ಪುಸ್ತಕವೊಂದನ್ನು ಓದುಂತ್ತ ಕೂತಿದ್ದು ನಫೀಸಾ ಮೂಲೆಯಂಲ್ಲಿ ಹಾಕಿಟ್ಟ ಕೊಳೆ ಬಟ್ಟೆಗಳನ್ನು ಎತ್ತಿಕೊಳ್ಳಲು ಹೋದಾಗ ಸಲೀಮ್ "ಏನುಂ ನಫೀಸಾ... ಬೆಳಿಗ್ಗೆ ಚಾ ತಂದುಂಕೊಡಲಿಲ್ಲ ? ಸಿಟ್ಟಾ...?" ಎಂದ. ನಫೀಸಾ ತಲೆಯೆತ್ತಿ ನೋಡಿ. "ಇಲ್ಲ..." ಎಂದಳುಂ. "ನಾನುಂ

ಹಲ್ಲುಜ್ಜದೆ ಚಾ ಕುಡೀತೇನಂತ ಕೋಪವಾ...?" ಅಂತ ಮಂಗ್ಧವಾಗಿ ನಕ್ಕ. ಈ ನಗು ನಫೀಸಾಳಿಗೆ ಅತ್ಯಂತ ಪ್ರಿಯ. ಸುಮ್ಮನೆ ಪರವಶಳಾದವಳಂತೆ ಅವನನ್ನೇ ನೋಡುತ್ತ ನಿಂತಳು. "ಯಾಕೆ ಮಾತಾಡ್ತಾ ಇಲ್ಲ? ಈವತ್ತು ನಾನು ಹಲ್ಲುಜ್ಜಿ ಮುಖ ತೊಳೆದ ನಂತರವೇ ಚಾ ಕುಡಿದದ್ದು..." ಎಂದ ಸಲೀಮ್. ತನ್ನ ಮಾತಿಗಷ್ಟು ಮಹತ್ವವಿದೆಯೇ? ನಫೀಸಳ ಮನಸ್ಸು ಹುಚ್ಚೆದ್ದು ಕುಣಿಯಿತು. "ನಫೀಸ... ನಿನ್ನೊಂದಿಗೆ ಮತ್ತೆ ಬೆಳದಿಂಗಳ ರಾತ್ರಿ ಸಮುದ್ರ ತೀರಕ್ಕೆ ಹೋಗುವ ಆಸೆ..." ಎಂದ. "ನೀವೆ... ಹೋಗಿ. ನಾನ್ಯಾಕೆ ಸುಮ್ನೆ..." ಎಂದಳು ನಫೀಸಾ ತಲೆತಗ್ಗಿಸಿ. "ನನಗೇಕೋ ನೀನು ಜೊತೆಗಿದ್ರೆ ಒಳ್ಳೆಯದೆನಿಸ್ತಾ ಇದೆ. ಒಮ್ಮೆ ಹೋಗಿಬಂದೆ. ನನಗೆ ನೀನಿಲ್ಲದೆ ಸಮುದ್ರ ತೀರ ಬರೀ ಸಪ್ಪೆ ಅನ್ನಿಸ್ತು ಅದೇಕೋ..." ಎಂದ ಸಲೀಮ ಅವಳನ್ನೇ ನೋಡುತ್ತಾ.

ನಫೀಸಾ ಅವನ ಮಾತು ಕೇಳುತ್ತಾ ಮಂತ್ರಮುಗ್ಧಳಾಗಿ ನಿಂತಿದ್ದಳು. ತಾನು ಕನಸು ಕಾಣುತ್ತಿದ್ದ ತನ್ನ ಪ್ರಿಯ ವ್ಯಕ್ತಿ ಇವನೇ ಇರಬಹುದೇ? ಎನ್ನುವ ಆಸೆ ಮೂಡಿದಂತೆ ಸಲೀಮ್ ತನ್ನನ್ನು ನಿಕಾಹ್ ಮಾಡಿಕೊಳ್ಳುತ್ತೇನಂತ ಹೇಳಿದಂತೆ, ತಾಯಿಯೊಡನೆ ನಿಮ್ಮ ಮಗಳನ್ನು ನಾನು ನಿಕಾಹ್ ಮಾಡಿಕೊಳ್ಳುತ್ತೇನೆ. ನಿಮ್ಮ ಒಪ್ಪಿಗೆಯಾ? ಅಂತ ಕೇಳಿದಂತೆ... ಅಮ್ಮ ಸಂತೋಷದಿಂದ ಕಣ್ಣೀರು ಸುರಿಸುತ್ತಿದ್ದಂತೆ, ಅಕ್ಕ, ಅಣ್ಣ, ಸಂತೋಷದಿಂದ ಮೂಕರಾಗಿ ನಿಂತಂತೆ ಕಲ್ಪಿಸಿಕೊಂಡು ಗೆಲುವಾದಳು.

"ಏನು ಮಾತಾಡೂದಿಲ್ಲ?" ಅಂತ ಸಲೀಮ್ ಕೇಳುತ್ತಿದ್ದಾಗ ಷರೀಫಮ್ಮ ಕೋಣೆಯೊಳಗೆ ಬಂದು, "ಏನು ನಫೀಸಾ ಇಲ್ಲೇ ನಿಂತುಬಿಟ್ಟೆ? ಕೆಲಸ ಮುಗಿಯೂದು ಯಾವಾಗ?" ಅಂತ ಕೇಳಿದಾಗಲೇ ನಫೀಸಾ ಎಚ್ಚರಗೊಂಡದ್ದು. ಗಲಿಬಿಲಿಗೊಂಡ ನಫೀಸಾ, "ಈಗ... ಬಟ್ಟೆ ಒಗೆಯುತ್ತೇನೆ" ಎಂದು ಬಟ್ಟೆಗಳನ್ನು ಎತ್ತಿಕೊಂಡು ಹೋದಳು.

ನಫೀಸಾ ಕೋಣೆಯ ಹೊರಗೆ ಹೋದನಂತರ ಷರೀಫಮ್ಮ ಮಗನೊಂದಿಗೆ, "ಅದೇನು ಸಲೀಮ... ಪ್ರಾಯಕ್ಕೆ ಬಂದ ಹುಡುಗಿಯ ಜೊತೆ ಮಾತಾಡ್ತಾ ನಿಂತಿರೂದು? ಇದೆಲ್ಲ ಚೆನ್ನಾಗಿರೂದಿಲ್ಲ ನೋಡು..." ಎಂದರು. "ಅದೇನಮ್ಮಾ. ನಾನು ನಫೀಸಾಳನ್ನು ಹೊಸ್ತಾಗಿ ನೋಡ್ತಾ ಇರೋದಾ? ಮಾತಾಡಿದ್ರೇನಾಯ್ತು?" ಎಂದ ಸಲೀಮ್ ಅಮ್ಮನ ಮಾತಿಗೆ ಬೇಸರಪಡುತ್ತ. ಮಗ ಸಿಟ್ಟಾದರೆ ಇಲ್ಲದ ತೊಂದರೆಗಳಿಗೆ ಕಾರಣವಾಗಬಹುದೆಂದು ಷರೀಫಮ್ಮ "ಅಲ್ಲ... ಮಗಾ, ಜನ ನೋಡಿದ್ರೆ ಅಪಾರ್ಥ ಕಲ್ಪಿಸಿಕೊಳ್ತಾರೆ

ನೋಡು. ಅದಕ್ಕೇನೇ ಹಾಗಂದದ್ದು. ನಂಗೊತ್ತಿಲ್ವಾ ನನ್ನ ಮಗ ಎಷ್ಟು ಒಳ್ಳೆಯುವಾಂತ ?" ಅಂದಾಗ ಸಲೀಮ್ ಸುಮ್ಮನಾದ.

ಮಗನ ಕೋಣೆಯಿಂದ ಹೊರಬಂದ ಷರೀಫಮ್ಮ ಇವರಿಬ್ಬರಲ್ಲಿ ಹೀಗೆ ಸಲುಗೆ ಬೆಳೆಯುಗೊಟ್ಟರೆ ಗಂಡಾಂತರವಾದೀತೆಂದು ಯೋಚಿಸತೊಡಗಿದರು. ಬರೀ ಮಾತಿನಲ್ಲಿ ತೊಡಗಿದ ಸ್ನೇಹ ಇನ್ನಷ್ಟು ಬೆಳೆದುಬಿಟ್ಟರೆ ನಾವು ಊರಿನಲ್ಲಿ ಮಾನವಾಗಿ ತಲೆಯೆತ್ತಿ ನಡೆಯುವ ಹಾಗಿಲ್ಲ. ಒಮ್ಮಿಂದೊಮ್ಮೆಲೇ ಕಟ್ಟು ನಿಟ್ಟು ಮಾಡಿದರೆ ಸಲೀಮು ನೊಂದುಕೊಂಡಾನು. ಮತ್ತೆ ಹಿಂದಿನಂತೆ ಬಿಮ್ಮನೆ ಕೂತುಬಿಟ್ಟರೆ ಕಷ್ಟ. ನಯವಾಗಿಯೇ ಅವನನ್ನು ಒಲಿಸಿಕೊಳ್ಳಬೇಕು. ನಫೀಸಳನ್ನು ಕೆಲಸದಿಂದ ಬಿಡಿಸಿ ಅವಳ ಅಮ್ಮ ಕೆಲಸಕ್ಕೆ ಬರುವ ಹಾಗೆ ಮಾಡ ಬೇಕು ಎಂದುಕೊಂಡರು.

ನಫೀಸಾ ಮನೆಕೆಲಸ ಮುಗಿಸಿ ತನ್ನ ಮನೆಕಡೆ ಹೋಗಲೆಂದು ಹೊರಟು ನಿಂತಾಗ ಷರೀಫಮ್ಮ, "ನೀನು ಮನೆಗೆ ಹೋದಕೂಡ್ಲೆ ನಿನ್ನ ಅಮ್ಮನನ್ನು ಇಲ್ಲಿಗೆ ಕಳ್ಸಿಕೊಡು" ಎಂದರು. ನಫೀಸಾ "ಯಾಕಿರಬಹುದು...?" ಎಂಬ ಯೋಚನೆಯಲ್ಲಿ ಬಿದ್ದಾಗ ಷರೀಫಮ್ಮ ಅವಳ ಗಲಿಬಿಲಿ ಕಂಡು "ಅದ್ಯಾಕಿಲ್ಲ ನೋಡು... ನಿನ್ನ ಅಮ್ಮನನ್ನು ಕಾಣದೆ ತುಂಬ ದಿನವಾಯ್ತು. ಹೀಗೆಯೇ ಮಾತಾಡೋಣಾಂತ..." ಅಂದಳು. ನಫೀಸಾ ಸರಿಯಾದ ಉಸಿರುಬಿಟ್ಟು 'ಸರಿ' ಎಂದು ಗೋಣಾಡಿಸಿ ಮನೆಯ ಕಡೆಗೆ ನಡೆದಳು.

ಸಂಜೆ ಹಾಜಿಮ ಸಲಾಂ ಹೇಳುತ್ತಾ ಒಳಗೆ ಬಂದಾಗ ಷರೀಫಮ್ಮ ಜಗಲಿಯ ಮೇಲೆ ಕೂರಿಸಿ ಎಲೆ ಅಡಿಕೆ ಹರಿವಾಣ ಮುಂದೆ ದೂಡಿದರು. ಜುಬೇದ ಅಪರೂಪಕ್ಕೆ ಬಂದ ಹಾಜಿಮಳೊಂದಿಗೆ ಮಾತಾಡಲೆಂದು ಮಗು ವನ್ನೆತ್ತಿಕೊಂಡು ಕೂತಳು. ಹಾಜಿಯ ಮಗುವನ್ನೆತ್ತಿಕೊಂಡು "ಸಾವಿರ ವರ್ಷ ಬದುಕು ಮಗಾ..." ಎಂದು ನಟಿಕೆ ಮುರಿದಳು. ಷರೀಫಮ್ಮ ಒಂದು ಗ್ಲಾಸು ಚಾ ಮಾಡಿ, ಬೆಳಗ್ಗಿನ ತಿಂಡಿ ಉಳಿದದ್ದು ತಟ್ಟೆಯಲ್ಲಿ ಹಾಕಿ ತಂದು ಹಾಜಿಮಳ ಮುಂದಿಟ್ಟಳು. "ಇದೆಲ್ಲ ಯಾಕೆ ಷರೀಫಮ್ಮ... ನಾನೇನು ನಿಮ್ಮನೇಗೆ ಅತಿಥಿಯಾ..." ಅಂತಲೇ ತಿಂಡಿಯ ತಟ್ಟೆಗೆ ಕೈಹಾಕಿದ್ಲು ಹಾಜಿಮ.

"ಏನು ಜುಬೇದಾ... ಗಂಡ ಪಾರೀನ್‌ನಿಂದ ಯಾವಾಗ ಬರ್ತಾ ನಂತೆ...?" ಅಂತ ಹಾಜಿಮ ಕೇಳಿದಾಗ "ಈ ವರ್ಷದ ಆಖೈರಿಗೆ ಬರ್ತಾರಂತೆ ಹಾಜಿಮಾ..." ಅಂದ್ಲು ಜುಬೇದ. "ಅಲ್ಲಾಹು... ನಿಮ್ಮನ್ನೆಲ್ಲ ಚೆನ್ನಾಗಿ ಟ್ಟಿರ್ಲಿ..." ಅನ್ನುತ್ತಲೇ ಜುಬೇದ, ತನ್ನ ಮಗಳು ನಫೀಸಳ ಪ್ರಾಯದ

ಹುಡುಗಿ. ಆಗಲೇ ಗಂಡನ ಬಗ್ಗೆ ಮಾತಾಡೂದು, ಮಗುವನ್ನೆತ್ತಿಕೊಂಡಿರೂದು ನೋಡುವಾಗ ನನ್ನ ಮಗಳಿಗೂ ಇಂತಹ ಭಾಗ್ಯ ಅಲ್ಲಾಹು ಒದಗಿಸಿಕೊಡ್ತಿದ್ರೆ! ಅನ್ನೋ ಆಲೋಚನೆ ಮಾಡತೊಡಗಿದ್ಲು. ಎಲ್ಲರ ಕರೆಗೂ ಓಗೊಟ್ಟು ಆಲಿಸುವ ಕರುಣಾಳು ಅಲ್ಲಾಹು ತನ್ನ ಕರೆಗ್ಯಾಕೆ ಹೀಗೆ ಸುಮ್ಮನಿದ್ದಾನೆ? ನನ್ನ ನಫೀಸಳಿಗಾದರೂ ಒಂದಿಷ್ಟು ಒಳ್ಳೆಯದು ಮಾಡು ಎಂದು ದಿನವೂ ಕೇಳಿಕೊಂಡರೂ ಅಲ್ಲಾಹು ತನ್ನ 'ದುವಾ' ಖಬೂಲ್ ಮಾಡೋದೇ ಇಲ್ಲವಲ್ಲಾ...?

"ನಿನ್ನ ಗಂಡ ಊರಿಗೆ ಬಂದಾಗ ನಿನ್ನದೊಂದು ಹಳೆಯ ಫಾರೀನ್ ಸೀರೆ ನಂಗೆ ಕೊಡೋದಿಕ್ಕೆ ಮರೀಬೇಡ ಮಗಾ..." ಅಂದಳು ಹಾಜಿಮ, ತಿಂಡಿಯ ತಟ್ಟೆಯನ್ನು ಬರಿದು ಮಾಡುತ್ತಾ. "ಖಂಡಿತಾ ಕೊಡ್ತೇನೆ. ಅದರ ಬಗ್ಗೆ ದುವಾ ಮಾಡಿ ಹಾಜಿಮಾ..." ಅಂದ್ಲು ಜುಬೇದ. "ನಮ್ಮಂತವರ ದುವಾವನ್ನೆಲ್ಲಿ ಅಲ್ಲಾಹು ಖಬೂಲ್ ಮಾಡ್ತಾನೆ...?" ಎಂದುಕೊಂಡವಳು "ಅಲ್ಲಾಹು ಖಂಡಿತಾ ಒಳ್ಳೇದು ಮಾಡ್ತಾನಮ್ಮ, ನಿಮ್ಮನ್ನು ಒಳ್ಳೇದು ಮಾಡದಿದ್ರೆ ಮತ್ತೆ ನಮ್ಮನ್ನು ಒಳ್ಳೇದು ಮಾಡೂದಾ?" ಅಂದು ಜುಬೇದಾಳನ್ನು ನೋಡಿ ನಕ್ಕಳು.

ಅಷ್ಟರತನಕ ಸುಮ್ಮನಿದ್ದ ಷರೀಫಮ್ಮ ಎಲೆಗೆ ಸುಣ್ಣ ಹಚ್ಚುತ್ತಾ "ಅಲ್ಲ... ಹಾಜಿಮಾ, ನಫೀಸಾ ಪ್ರಾಯಕ್ಕೆ ಬಂದ್ಲು. ಅವಳ ಬಗ್ಗೆ ಏನಾದ್ರೂ ಯೋಚಿಸಿದ್ಯಾ... ಇಲ್ಲ ಅರಬನನ್ನೇ ಕಾಯ್ತಾ ಇದ್ದೀಯಾ..." ಅಂತ ನೇರವಾಗಿ ವಿಷಯಕ್ಕೆ ಬಂದಳು. "ಏನೋ... ಷರೀಫಮ್ಮ ನಿಮ್ಮಂತವರ ಆಶೀರ್ವಾದ. ದುವಾ ಬರ್ಕತಿನಿಂದಾದ್ರೂ ನನ್ನ ಮಗಳಿಗೆ ಊರಿನ ಹುಡುಗ ಸಿಕ್ಕಿದ್ರೆ ನೋಡಬೇಕಂತ ನಂಗೆ ಅನ್ನಿಸ್ತಾ ಇದೆ. ನಮ್ಮಂತವರ ಹುಡುಗಿಯರನ್ನು ಕೇಳುವವರ್‍ಯಾರಿದ್ದಾರೆ..." ಎಂದಳು ಹಾಜಿಮ ನಿಟ್ಟುಸಿರು ಬಿಟ್ಟು.

"ಹಾಜಿಮಾ... ನಾನ್ಹೇಳೂದಿದ್ರೆ ಹೆಣ್ಣು ಮಕ್ಕಳು ಪ್ರಾಯಕ್ಕೆ ಬಂದ ಕೂಡ್ಲೆ ಏನಾದ್ರೂ ಮಾಡಿ ಮದುವೆಯ ಏರ್ಪಾಡು ಮಾಡಬೇಕು. ಊರ ಹುಡುಗ ಸಿಕ್ತಾನೇನೋ ಅಂತ ಹಾಗೆಯೇ ಕೂತಿದ್ರೆ ಆಗ್ತದಾ? ಪ್ರಾಯಕ್ಕೆ ಬಂದವಳು ನೋಡು... ಗಂಡಾಂತರ... ಯಾವ್ದೂ ಇಲ್ಲದಿದ್ರೆ ನಿನ್ನ ಹಾಗೆಯೇ ಇದ್ದೇ ಇದೆಯಲ್ಲಾ. ಒಳ್ಳೆಯ ಅರಬಿಯೊಬ್ಬನನ್ನು ನೋಡಿ ಮದುವೆ ಮಾಡಿಸಿ ಬಿಡು..." ಅಂತ ಷರೀಫಮ್ಮ ಹಾಜಿಮಳ ಮುಖ ನೋಡುವಾಗ ಅವಳು ಪೆಚ್ಚಾಗಿ ಕೂತಿದ್ದಳು. ಕಸಿವಿಸಿಗೊಂಡ ಷರೀಫಮ್ಮ "ನಾನ್ಯಾಕೆ ಹೀಗೆ

ಹೇಳ್ತಿದ್ದೆನೆಂದ್ರೆ ಹಾಜಿಮಾ... ನಫೀಸಾ ನಂಗೆ ಜುಬೇದ ಇದ್ದ ಹಾಗೆಯೇ ನೋಡು... ಪ್ರಾಯಕ್ಕೆ ಬಂದ ಹುಡುಗಿಯರನ್ನು ಮನೆಯಲ್ಲಿಟ್ಟು ಕೊಳ್ಳೋದೂ ಸೆರಗಿನಲ್ಲಿ ಬೆಂಕಿಕಟ್ಟಿಕೊಳ್ಳೋದೂ ಒಂದೇ ಅಂತ ಹಿರೀರು ಹೇಳಿಲ್ವಾ... ಅದೇನು ಸುಳ್ಳಾಗ್ತದಾ? ನಾವು ಜಾಗ್ರತೆ ಮಾಡ್ಕೊಳ್ಬೇಕಾ ಬ್ಯಾಡ್ವಾ...?" ಅಂತ ವಿವರಣೆ ಕೊಟ್ಟಾಗ ಹಾಜಿಮಾಳ ತಲೆಗೆ ಕಲ್ಲುಚಪ್ಪಡಿ ಹೊತ್ತು ಹಾಕಿದಂತಾಯಿತು.

ಷರೀಫಮ್ಮನೇ ಮತ್ತೆ ಮುಂದುವರೆಸಿದಳು. "ನೋಡು... ಹಾಜಿಮಾ, ಪ್ರಾಯಕ್ಕೆ ಬಂದ ಹುಡುಗಿಯರನ್ನು ಜಾಗ್ರತೆಯಿಂದ ನೋಡ್ಕೊಳ್ಳೋದು ನಮ್ಮಂತಹ ಹೆತ್ತವರ ಕರ್ತವ್ಯ. ನಮ್ಮನೇಲೂ ಪ್ರಾಯಕ್ಕೆ ಬಂದ ಹುಡುಗ ಇದ್ದಾನೆ. ಜನ ಏನೆಲ್ಲ ಅನ್ನಲಿಕ್ಕೆ ಅಸ್ಪದ ನಾವು ಕೊಡ್ಬಾರ್ದು ಅಲ್ವಾ? ಹಾಗಂತ ನಮ್ಮ ಸಲೀಮನಾಗ್ಲಿ ನಿಮ್ಮ ನಫೀಸಳಾಗ್ಲಿ ಅಂಥವ್ರಲ್ಲ... ಆದ್ರೂ ಪ್ರಾಯ ನೋಡು ಕೆಟ್ಟದ್ದು... ಊರವರು ಅದ್ನೆಲ್ಲಾ ನೋಡ್ತಾರಾ... ಏನೆಲ್ಲ ಹೇಳಿ ನಮಗೆ ಬರೀ ರಗಳೆ ಮಾಡ್ತಾರು... ನೀನು ಬೇಜಾರೇನೂ ಮಾಡ್ಕೊಳ್ಬೇಕಾಗಿಲ್ಲ ನಾಹೀಗೆ ಹೇಳಿದೇಂತ... ಅಂಥಾ ಗಂಡಾಂತರವೇನೂ ಈಗ ಆಗಿಲ್ಲ..." ಎಂದಾಗ ಉಸಿರುಕಟ್ಟಿ ಕೂತಿದ್ದ ಹಾಜಿಮಾ ಸಮಾಧಾನ ಗೊಂಡಳು. "ನೋಡು ನಾ ಅದ್ಕೆ ಒಂದು ಯೋಚನೆ ಮಾಡಿದ್ದೇನೆ... ನಾಳೆ ಯಿಂದ ನೀನು ನಮ್ಮನೇಗೆ ಕೆಲ್ಸಕ್ಕೆ ಬಂದ್ರೆ ಹ್ಯಾಗೆ? ನಫೀಸಾ ನಿಮ್ಮಲ್ಲೇ ಕೂತಿರ್ಲಿ... ನಿನ್ನ ಅಭಿಪ್ರಾಯ ಹೇಳು..." ಅಂತ ಷರೀಫಮ್ಮ ಹೇಳಿದಾಗ, "ಅದೇನೋ... ನಾನು ನನ್ನಿಂದಾದಷ್ಟು ಕೆಲ್ಸ ಮಾಡಿಯೇನು..." ಎಂದು ಹಾಜಿಮ ಗೊಣಗಿದಳು.

"ಹಾಂ... ನೀನು ಬರ್‍ತಾ ಇರು. ನಿನ್ನಿಂದಾದಷ್ಟು ಮಾಡು. ಅಷ್ಟೇ ನಾನೂ ಹೇಳ್ತಾ ಇರೋದು..." ಎಂದಳು ಷರೀಫಮ್ಮ ಎದುರಿಗಿದ್ದ ಪೀಕದಾ ನಿಗೆ ವೀಳ್ಯದ ರಸವನ್ನು ಉಗುಳುತ್ತ.

ಹಾಜಿಮ ಇನ್ನೊಂದೆರಡು ಎಲೆಗೆ ಸುಣ್ಣ ಹಚ್ಚಿ ಬಾಯೊಳಗೆ ತಳ್ಳುತ್ತ "ಷರೀಫಮ್ಮ ಎಷ್ಟು ಒಳ್ಳೆಯವಳು! ನಮ್ಮಂತಹ ಭಿಕಾರಿಗಳ ಮರ್ಯಾದೆಗೆ ಕೂಡ ಎಷ್ಟು ಬೆಲೆ ಕೊಡ್ತಾಳೆ?" ಎಂದುಕೊಂಡಳು. "ಹಾಗೆಯೇ ಆಗ್ಲಿ ಷರೀಫಮ್ಮ ನಾನೇ ನಾಳೆಯಿಂದ ಮನೆಕೆಲ್ಸಕ್ಕೆ ಬರ್‍ತೇನೆ... ಅಸ್ಸಲಾಂ ಅಲೈಕುಂ..." ಎಂದು ಹೇಳಿ ತನ್ನ ತಲೆಯ ರುಮಾಲು ವಸ್ತ್ರ ಸರಿಪಡಿಸಿ ಕೊಳ್ಳುತ್ತ ಅಲ್ಲಿಂದ ಮನೆಕಡೆ ಹೊರಟಳು.

# ವಿಷಾದ

ಮಳೆಗಾಲ ಮುಗಿದಂತೆ ಕುಟ್ಟಿಚಿರಾದ ಜನ ಚುರುಕಾಗುತ್ತಾರೆ. ಬದುಕುವ ಒಂದೇ ಒಂದು ಆಸೆಯನ್ನು ಹೊತ್ತು ಅತ್ತಿತ್ತ ಪರದಾಡುತ್ತಾರೆ. ಶಿಶಿರ ಋತು ಕೊನೆಯಾಗುತ್ತ ಇನ್ನೇನು ವಸಂತ ಕಾಲಿಡುತ್ತಿದ್ದಾನೆನ್ನುವಾಗ ಅರಬರ ಮಂಜಿಗಳು ಕಲ್ಲಿಕೋಟೆಯ ಪುಟ್ಟ ಬಂದರನ್ನು ಸೇರುತ್ತವೆ. ಗುಡಿಸಲ ಕೇರಿಯ ಹೆಮ್ಮಕ್ಕಳ ದಲ್ಲಾಳಿಗಳು ಅರಬರ ಬೇಟೆಯಲ್ಲಿ ತೊಡಗುತ್ತಾರೆ. ಜನರಲ್ಲಿ ಜೀವ ಸಂಚಾರವಾಗುತ್ತದೆ.

ಹಾಜಿಮ ಸೈದುಕೋಯಾರ ಮನೆಕೆಲಸ ಮುಗಿಸಿ ಬಂದವಳು ನಫೀಸಾ ಒಲೆಗಿಟ್ಟಿದ್ದ ಗಂಜಿ ಬೇಯಿಸುವ ಕೆಲಸದಲ್ಲಿ ತೊಡಗಿದಳು. ನಫೀಸಾ ಜುಲೇಖಾಳ ಜ್ವರದಿಂದ ನರಳುತ್ತಿದ್ದ ಮಗುವನ್ನು ನೋಡಿಕೊಂಡಿದ್ದಳು. ಎರಡು ದಿನಗಳಿಂದ ಬಿಡದೆ ಜ್ವರ ಬಂದು ಆ ಮಗು ಹಾಸಿಗೆ ಹಿಡಿದಿತ್ತು. ಹಫ್ಸಾಳ ಎರಡು ಮಕ್ಕಳು ಮತ್ತು ಜುಲೇಖಾಳ ಮೊದಲನೆಯ ಮಗು ಬೀದಿಯಲ್ಲಿ ಆಡತೊಡಗಿದ್ದವು.

ನಫೀಸಾ ಸೈದುಕೋಯರಲ್ಲಿಗೆ ಹೋಗುವುದನ್ನು ಸಂಪೂರ್ಣ ನಿಲ್ಲಿಸಿದ್ದಳು. ಹಾಜಿಮಳೇ ಹೋಗಿ ಬರುತ್ತಿದ್ದಳು. ಸಂಪ್ರದಾಯಸ್ಥ ಜನರ ಹುಳಬಿದ್ದ ಮನಸ್ಸಿನ ಪರಿಚಯ ನಫೀಸಳಿಗೆ ಆಗಲೇ ಆಗಿತ್ತು. ಹಾಜಿಮಳಿಂದ ಕಾರಣ ತಿಳಿದುಕೊಂಡ ದಿನದಿಂದ ಅವರ ಬಗ್ಗೆ ಅಸಹ್ಯ ಪಡತೊಡಗಿದ್ದಳು. ಆದರೆ ಹಾಜಿಮಳಿಗೆ ಇದೆಲ್ಲ ತಿಳಿಯದೆ ಸೈದುಕೋಯರನ್ನು ಷರೀಫಮ್ಮನವರನ್ನು ಮನೆಯಲ್ಲಿ ಆಗಾಗ ಗುಣಗಾನ ಮಾಡುತ್ತಿದ್ದಳು. ದೊಡ್ಡ ದೊಡ್ಡ ಮನೆತನದ ಹೆಣ್ಣುಗಳ ಸಾಲು ಸಲೀಮನಿಗಾಗಿ ಕಾದು ನಿಂತಿರುವ ಬಗ್ಗೆ ಅವರ ಮನೆತನದ ದೊಡ್ಡಸ್ತಿಕೆಯ ಬಗ್ಗೆ ಆಗಾಗ ಹೇಳುತ್ತಿದ್ದಳು.

ಅಮ್ಮ ಸಲೀಮನ ವಿಷಯ ಹೇಳುತ್ತಿರುವಾಗ ನಫೀಸಳಿಗೆ ಸವಿಯಾದ

ಕಂಪನವೊಂದು ತನ್ನ ದೇಹವಿಡೀ ವ್ಯಾಪಿಸಿದ ಅನುಭವವಾದರೂ ಅದನ್ನು ಸಾಧ್ಯವಾದಷ್ಟು ಹತೋಟಿಗೆ ತಂದುಕೊಂಡು ದೂರವಿಡುವುದನ್ನು ರೂಢಿಸಿ ಕೊಳ್ಳತೊಡಗಿದ್ದಳು. ಸಲೀಮನೊಂದಿಗೆ ಕಳೆದ ಆತ್ಮೀಯ ಕ್ಷಣಗಳು ತನ್ನ ಮತ್ತು ಆ ಮನೆಯ ಸಂಬಂಧದ ಮಧ್ಯ ದೊಡ್ಡ ಕಂದರ ತೋಡುತ್ತದೆಂತ ಅವಳು ಕನಸಿನಲ್ಲಿಯೂ ಎಣಿಸಿರಲಿಲ್ಲ. ತಾನೆಲ್ಲಿ? ಅವರೆಲ್ಲಿ? ಎಂಬ ವಿಷಾದ ಪ್ರಜ್ಞೆ ಅವಳಲ್ಲಿ ಮೂಡತೊಡಗಿದಂತೆ ಅವನಿಂದ ದೂರವಿರುವುದೇ ಒಳ್ಳೆಯದೆಂದುಕೊಂಡಿದ್ದಳು. ಅಂದ ಮಾತ್ರಕ್ಕೆ ಸಲೀಮನನ್ನು ಸಂಪೂರ್ಣ ವಾಗಿ ಮರೆತಿದ್ದೇನೆಂದುಕೊಳ್ಳಲು ನಫೀಸಳಿಗೆ ಸಾಧ್ಯವಾಗಲೇ ಇಲ್ಲ.

ಹೊರಗೆ ಮಕ್ಕಳ ಗಲಾಟೆ ಜೋರಾಗಿ ಕೇಳಿಬಂತು. ನಫೀಸಾ "ಅಮ್ಮಾ" ಅಂತ ಕೂಗಿದಾಗ ಹಾಜಿಮ ಹೊರಗೆ ಬಂದ್ಲು. "ಮಗುವಿಗೆ ಜ್ವರ ಜೋರಾಗ್ತಾ ಉಂಟಲ್ಲಮ್ಮಾ..." ಅಂದಳು ನಫೀಸಾ. "ಜುಲೇಖಾ ಬರ್ಲಿ... ಡಾಕ್ಟರರಿಗೆ ತೋರ್ಸ್ಲೋಣ..." ಅಂದ್ಲು ಹಾಜಿಮ. "ಹೊರಗೆ ಮಕ್ಕಳು ಧೂಳಲ್ಲಿ ಆಡ್ತಿದಾವೆ ನೋಡಮ್ಮಾ..." ಅಂತ ನಫೀಸ ದೂರಿದಾಗ ಹಾಜಿಮ ಬೀದಿಯಲ್ಲಿ ಧೂಳು ಸುರಿದುಕೊಂಡು ಆಟ ಆಡುತ್ತಿರುವ ಮಕ್ಕಳನ್ನು ಕರೆದ್ಲು. ಅವುಗಳು ಒಳಗೆ ಬರುವಾಗ್ಲೂ ಧೂಳು ಮೈತುಂಬ ಹಿಡ್ಕೊಂಡೇ ಬಂದಿದ್ದವು. ಅಜ್ಜಿ ತಿಂಡಿಯೇನಾದ್ರೂ ಕೊಡ್ತಾಳೇನೋ ಅಂತ ಆಸೆಯಿಂದ ಓಡಿಬಂದ ಮಕ್ಕಳನ್ನು ಹಾಜಿಮ ಬಯ್ಯತೊಡಗಿದಳು. "ಎಂಥಾ ಬಿಕ್ನಾಸಿ ಮಕ್ಳೋ ನೀವು...? ಧೂಳಲ್ಲಿ ಆಡದಿದ್ರೆ ಆಗೂದಿಲ್ವಾ? ಕೊಳೆ ಬಟ್ಟೆ ಒಗೆಯೂದಕ್ಕೆ ಯಾರು ನಿಮ್ಮಪ್ಪ ಅರಬ ಬರ್‍ತಾನಾ...?"

ಹಾಜಿಮ ಮಕ್ಕಳಿಗೆ ಹೇಳಿದ ಮಾತು ನಫೀಸಾಳನ್ನು ನೇರವಾಗಿ ಇರಿ ಯಿತು. ಇನ್ನೇನು ತಾನು ಕೂಡ ಅರಬಿಗಳ ಬೆನ್ನು ಹತ್ತೋದಕ್ಕೆ ಹೆಚ್ಚು ಸಮಯವಿಲ್ಲ. ನನಗೂ ಒಂದಷ್ಟು ಮಕ್ಕಳಾಗ್ತಾವೆ. ಅವು ಮಣ್ಣಲ್ಲಿ ಧೂಳಲ್ಲಿ ಹೀಗೆ ಆಡ್ತಾ ಅಜ್ಜಿಯಿಂದ ಬೈಗಳನ್ನ ಕೇಳ್ತಾ ಇರುವಾಗ ಅವುಗಳ ಅಪ್ಪಂದಿರು ಅರಬಸ್ತಾನದ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುತ್ತಿರಬಹುದು, ನಾನೂ ಇಲ್ಲಿ ಯಾವನೋ ಮತ್ತೊಬ್ಬ ಅರಬಿಯನ್ನು ನಿಕಾಹ್ ಆಗಿ ಅವನ ಜೊತೆ ಹೋಟೇಲೊಂದರ ಮೆತ್ತನೆಯ ಹಾಸಿಗೆಯಲ್ಲಿ ಬಿದ್ದಿರಬಹುದು.

ಹೊರಗೆ ಸೈಕಲಿನ ಬೆಲ್ ಕೇಳಿದಂತಾದಾಗ ಮಕ್ಕಳೆಲ್ಲ ಬಾಗಿಲ ಕಡೆ ಓಡಿ ದವು. "ಮಾವ... ಬಂದ... ಮಾವ" ಎನ್ನುತ್ತ ಒಳಗೆ ಹೊರಗೆ ಓಡಾಡ ತೊಡಗಿದವು. ಅಣ್ಣ ಬಂದಾಂತ ಕಾಣ್ತದೆ. ಇನ್ನು ಅಮ್ಮನ ಗಲಾಟೆ ಶುರು ವಾಗ್ತದೆ ಎಂದುಕೊಂಡಳು ನಫೀಸಾ. ಅಣ್ಣ ಒಳಗೆ ಬಂದವನು ನಫೀಸಾಳತ್ತ

ನೋಡಿ ಸ್ವಲ್ಪ ನಕ್ಕಹಾಗೆ ಮಾಡಿ ಸೀದಾ ಅಮ್ಮನ ಹತ್ತಿರ ಹೋಗಿ ನೆಲದ ಮೇಲೆ ಕೂತ.

ಅಮ್ಮ ಆಗ್ಲೇ ಶುರುಮಾಡಿದ್ಲು. "ಬಂದ್ಯಾ... ಬಾ ಮಗನೆ... ನಿಂಗೆ ಹೆತ್ತಮ್ಮ ಒಬ್ಬಿದಾಳೆಂತ ಈಗ್ಲಾದ್ರೂ ನೆನಪಾಯ್ತಲ್ಲಾ ? ನನ್ನ ಸೌಭಾಗ್ಯ... ರಾತ್ರಿ ಹಗಲೂಂತ ಹೆಂಡ್ತಿಯ ಸೆರಗಿನಡಿ ಬಿದ್ದಿರುವ ನಿಂಗೆ ಹೆತ್ತಮ್ಮನ ವ್ಯಥೆ ಯಾಕೆ ಹೇಳು ? ಇದ್ದಾರಾ ಸತ್ತಿದಾರಾಂತ ನೋಡ್ಲಿಕ್ಕೆ ಈಗ ಬಂದ್ಯಾ ?" ಅಂದ್ಲು.

ಅಣ್ಣ ಮದುವೆಯಾದನಂತರ ಮನೆಗೆ ಬರುವುದೇ ಕಡಿಮೆಯಾಗಿತ್ತು. ಕುಟ್ಟಿಚಿರಾದ 'ಕೋಯಾ' ಮನೆತನದವರಲ್ಲವೇ ನಾವು? ಇಲ್ಲಿನ ಸಂಪ್ರದಾಯವೇ ಹಾಗಿರುವಾಗ ಹೆಂಡ್ತಿ ಮನೆಯಲ್ಲಿರೂದರಲ್ಲಿ ಅಣ್ಣನದೇನು ತಪ್ಪು? ಈ ಕೇರಿಯ ಹೆಣ್ಣು ಮಕ್ಕಳಿಗೆ ಗಂಡು ಸಿಗೋದು ಅಸಾಧ್ಯವೆನಿಸಿದರೂ ಗಂಡು ಮಕ್ಕಳಿಗೆ ಹೆಣ್ಣು ಸಿಗೋದು ಕಷ್ಟವಿಲ್ಲವಲ್ಲಾ? ಎಂಥ ವಿಪರ್ಯಾಸ ?! ಎಂದುಕೊಂಡಳು ನಫೀಸಾ.

ಅಮ್ಮ ಅಣ್ಣನನ್ನು ಮಾತಿನಿಂದ ಇರಿಯುತ್ತಾ ಇದ್ದಳು. "ಮದುವೆಗೆ ಮುಂಚೆ ಹಣ ಕೊಡ್ತಿದ್ದೆ. ಮದುವೆಯಾದ ನಂತರ ದುಡ್ಡಿದ್ದನ್ನೆಲ್ಲಾ ಹೆಂಡ್ತಿ ಮನೆಗೇ ಸುರಿದ್ರೆ ನಾನೇನು ಮಣ್ಣು ತಿನ್ಲಾ ? ಒಂದು ಬೀಡಿ ಎಳೆಯೂದಕ್ಕೆ ಕೂಡ ಕಾಸು ಕೊಡ್ತೀಯಾ? ನಿನ್ಹೆಂಡ್ತಿ ಮಕ್ಳಿಗೆ ಇದರಿಂದ ಒಳ್ಳೇದಾಗ್ತದಾ...?" ಎಂದೆಲ್ಲ ಹೇಳುವಾಗ್ಲೂ ಅಣ್ಣ ಮೌನವಾಗಿದ್ದ. ಜೇಬಿನಿಂದ ಕೇರಳ ದಿನೇಶ್ ಬೀಡಿಯೊಂದನ್ನು ತೆಗೆದು ಬೆಂಕಿ ಪೊಟ್ಟಣಕ್ಕಾಗಿ ಅತ್ತಿತ್ತ ನೋಡಿದ. ಅಮ್ಮ ತನ್ನ ಭಾಷಣ ಮುಂದುವರಿಸಿದ್ದಳು. "ನೀನೊಬ್ಬ ಸರಿಯಾಗಿರ್ತಿದ್ದರೆ ನನಗಿಂತಾ ಗತಿ ಬರ್ಲಿಕ್ಕಿತ್ತಾ ?" ಅಂದ್ಲು. ಅಣ್ಣ ಮೆಲ್ಲಗೆ ಅಮ್ಮನ ಮುಂದಿದ್ದ ಒಲೆಯತ್ತ ಸರಿದು ಬೆಂಕಿಕೊಳ್ಳಿಯೊಂದನ್ನು ತೆಗೆದು ಬೀಡಿ ಹೊತ್ತಿಸಿದ. ಬೀಡಿ ಎಳೆದು ದಮ್ಮು ಬಿಟ್ಟ, ಜೇಬಿನಿಂದ ಬೀಡಿಯೊಂದನ್ನು ತೆಗೆದು ಅಮ್ಮನ ಕಡೆಗೆ ಚಾಚಿದ. ಅವಳು ಸಿಟ್ಟು ತುಂಬಿದ ಕಣ್ಣಿನಿಂದ ನೋಡುತ್ತ ಒಳಗೊಳಗೆ ವಾತ್ಸಲ್ಯಮಯಿಯಾಗುತ್ತ ಬೀಡಿಯನ್ನು ತೆಗೆದು ಬೆಂಕಿ ಹಚ್ಚಿ ದಮ್ಮೆಳೆದು ಬಿಟ್ಟಳು. ಹೊಗೆಯೊಂದಿಗೆ ಹೊಗೆ ಸೇರಿ ಅಲ್ಲೊಂದು ಪುಟ್ಟ ಮೋಡವಾಗಿ ಚದುರಿತು.

*　　　*　　　*

ಮಮ್ಮೂಟ್ಟಿಗೇನೋ ನೆನಪಾದಂತೆ ತಟ್ಟನೆ ಜೇಬನ್ನೆಲ್ಲ ತಡಕಾಡಿದ.

ಬೀಡಿಯ ಕಟ್ಟಿನಲ್ಲಿರುವ ಹತ್ತು ಬೀಡಿಗಳು ಮಾತ್ರ "ಹತ್ತು ರೂಪಾಯಿ ಬಿಟ್ಟು ಉಳಿದದ್ದನ್ನ ಜೇಬಿನಿಂದ ತಕ್ಕೊ..." ಅಂತ ಹೆಂಡತಿಗೆ ಹೇಳಿದ್ದ. ಆದರೆ ಅವಳೆಲ್ಲ ತೆಗೆದುಬಿಟ್ಟಿದ್ದಳು. ಹತ್ತು ರೂಪಾಯಿಯ ನೋಟೊಂದನ್ನಾದರೂ ಅಮ್ಮನ ಮುಂದೆ ಚಾಚಿ ಬಯ್ಯುತ್ತಿರುವ ಬಾಯಿಯನ್ನು ಮುಚ್ಚಿಸಿಬಿಡಬಹುದಿತ್ತು. ಅದು ಕೂಡ ಸಾಧ್ಯವಾಗಲಿಲ್ಲ. ಹೆಂಡತಿಯ ಮೇಲೆ ಅಸಾಧ್ಯ ಕೋಪ ಬಂತು.

ಅಚ್ಚುಕೋಯ ಹೇಳಿದ್ದನ್ನು ಅಮ್ಮನಿಗೆ ಹೇಗೆ ತಿಳಿಸೂದು ಎಂಬ ಸಂದಿಗ್ಧದಲ್ಲಿ ಬಿದ್ದ ಮಮ್ಮುಟ್ಟಿ. ಅಮ್ಮನ ಮುಂದಿದ್ದ ಒಲೆಯ ಬೆಂಕಿ ಭಗ್ಗನೆ ಉರಿದುಕೊಂಡಾಗ ಅವಳ ಮುಖದಲ್ಲಿ ಬೆಳಕು ಕುಣಿದಾಡಿತು. ಬಾಳಲ್ಲಿ ಅವಳುಂಡ ನೋವಿನ ಗೆರೆಗಳು ಅವಳ ಮುಖದಲ್ಲಿ ಎದ್ದು ಕಾಣುತ್ತಿದ್ದು, ಅವು ತನ್ನನ್ನು ಅಣಕಿಸಿದಂತೆ ಮಮ್ಮುಟ್ಟಿಗೆ ಭಾಸವಾಯಿತು. ತನ್ನ ಮಕ್ಕಳನ್ನು ಸಾಕಿ ಸಲಹಲು ಅವಳು ಪಟ್ಟ ಕಷ್ಟಗಳು, ಊರವರ ನಿಂದೆ, ಒಳಗೊಳಗೆ ತನ್ನ ಬಾಳಿನ ನಿಕೃಷ್ಟತೆಯ ಅರಿವು ಮೂಡಿಸಿದ ಕೊರಗು ತುಂಬಿಕೊಂಡು ಅದೆಷ್ಟು ನೊಂದು ಬೆಂದಿದ್ದಾಳೆ! ಅವಳ ಸಾಮರ್ಥ್ಯದೆದಿರು ತಾನೊಂದು ಹುಳ ಎನಿಸಿತು.

ತನ್ನನ್ನು ಕಂಡಾಗಲೆಲ್ಲ ಅಮ್ಮ ಸಿಟ್ಟಿನಿಂದ ಕುದಿಯುತ್ತಿರೂದು, ತನ್ನ ಹೆಂಡತಿ ಮಕ್ಕಳಿಗೆ ಸದಾ ಬಯ್ಯುತ್ತಿರುವುದರ ಕಾರಣ ಮಮ್ಮುಟ್ಟಿಗೂ ಗೊತ್ತು. ಅವಳು ಬಯ್ಯುವಾಗ ಅವನಿಗೂ ಸಿಟ್ಟು ಬಂದು, "ನೋಡಮ್ಮ ನನಗೆ ಬೇಕಾದರೆ ಎಷ್ಟು ಬೇಕಾದರೂ ಬಯ್ಯು, ಪರವಾಗಿಲ್ಲ. ಆದರೆ ನನ್ನ ಹೆಂಡತಿಗ್ಯಾಕೆ ಬಯ್ತಿ? ನಿನ್ನ ಮೊಮ್ಮಕ್ಕಳು ನಿಂಗೇನು ಮಾಡಿದ್ದಾರೆ ಹೇಳು?" ಎಂದಾಗ ಅಮ್ಮ ಜೋರಾಗಿ ಅತ್ತಿದ್ಲು. "ನನ್ನ ಹೊಟ್ಟೆಯಲ್ಲಿ ಬೆಂಕಿ ಹತ್ತಿದೆ ಮಗಾ... ನೀನು ನೆಮ್ಮದಿಯಿಂದಿರೂದನ್ನು ನೋಡಲಿಕ್ಕಾಗದೆ ಎಂದುಕೊಳ್ಳಬೇಡಪ್ಪಾ... ಹಾಳು ಹೊಟ್ಟೆಯ ಹಸಿವು ಇದನ್ನೆಲ್ಲಾ ಹೇಳಿಸ್ತಾ ಇದೆ ಮಗನೇ..." ಎಂದಿದ್ಲು. ಆದರೆ ವಾಸ್ತವದಲ್ಲಿ ತಾನು, ತನ್ನ ಹೆಂಡತಿ, ಮಕ್ಕಳು ಕೂಡ ಊರವರಂತೆ ಕೀಳಾಗಿ ಕಾಣ್ತೇವೇನೋ ಅನ್ನುವ ಅನಿಸಿಕೆಯೇ ಅವಳನ್ನು ನೋಯಿಸುತ್ತಿರುವುದನ್ನು ಮಮ್ಮುಟ್ಟಿ ಅರಿತಿದ್ದ.

ತನ್ನ ಸಂಸಾರ ಮತ್ತು ತಾಯಿ, ಸಹೋದರಿಯರ ಮಧ್ಯೆ ಇಷ್ಟು ವಿಶಾಲವಾದ ಅಂತರವೇರ್ಪಟ್ಟಿರೂದು ಮಮ್ಮುಟ್ಟಿಗೆ ಈಗಾಗಲೇ ತಿಳಿದಿತ್ತು. ತನ್ನ ತಾಯಿ, ಸಹೋದರಿಯರ ಬಗ್ಗೆ ತನ್ನ ಹೆಂಡತಿಯ ತಿರಸ್ಕಾರ ಭಾವನೆ

ತಮ್ಮ ಗಮನಕ್ಕೆ ಬಂದಂದಿನಿಂದ ಪರಸ್ಪರ ಸಂಬಂಧಗಳನ್ನು ಕಡಿದುಕೊಂಡಂತಿದ್ದರು.

ಅರಬರ ಸಂಬಂಧದಿಂದಲೇ ಹುಟ್ಟಿಕೊಂಡ ಈ ಕೋಯಾ ಮನೆತನ ಅತ್ಯಂತ ಶ್ರೇಷ್ಠ 'ತರವಾಡು' ಎನ್ನುವ ಒಣಜಂಭ ಇದಕ್ಕೆ ಸೇರಿದ ಕಡು ಬಡವನಲ್ಲೂ ಉಳಿದಿರುವುದು ವಿಚಿತ್ರವೆನಿಸಿತ್ತು. ಇಲ್ಲಿನ ಸಂಪ್ರದಾಯಂಗಳಿಗೆ ನೇತುಬಿದ್ದು ಈ ಜನ ತಮ್ಮ ಬದುಕನ್ನು ಬಲಿಕೊಡುವುದನ್ನು ಮಮ್ಮುಟ್ಟಿ ದಿನವೂ ಕಾಣುತ್ತಿದ್ದ. ತಾನು ಕೂಡ ತನಗೆ ತಿಳಿಯದಂತೆ ಈ ನೇಣಿಗೆ ನೇತು ಬಿದ್ದು, ತಪ್ಪಿಸಿಕೊಳ್ಳಲಾರದೆ ಒಳಗಿದ್ದುಕೊಂಡೇ ಬದುಕಲು ಹವಣಿಸುತ್ತಿರುವುದು ಮಮ್ಮುಟ್ಟಿಯ ಅನುಭವಕ್ಕೆ ಬಂದು ಅಸ್ವಸ್ಥನಾಗುತ್ತ ಹೋದ.

ಮಮ್ಮುಟ್ಟಿಗೆ ತನ್ನ ಅಮ್ಮ ಕಷ್ಟಪಟ್ಟು ಎಸ್ಸೆಸ್ಸೆಲ್ಸಿ ತನಕ ಪಟ್ಟು ಹಿಡಿದು ವಿದ್ಯಾಭ್ಯಾಸ ಕೊಡಿಸಿದ್ದು ನೆನಪಾಯಿತು. ತನ್ನ ಮಗ ಕಟ್ಟಕಡೆಗೆ ಸರಕಾರಿ ಗುಮಾಸ್ತನಾದರೂ ಆಗಬೇಕೆನ್ನೂದು ಅವಳ ಕನಸಾಗಿತ್ತು. ಕೆಲಸಕ್ಕಾಗಿ ತಿಂಗಳುಗಟ್ಟಲೆ ಅಲೆಯುತ್ತಿದ್ದಾಗ ಮಮ್ಮುಟ್ಟಿಗೆ ಆಸರೆಯಾದದ್ದು ಅಮ್ಮನ ಸಾಂತ್ವನವೇ, "ನೋಡೋಣ... ನಮ್ಮಂತಹ ಬಡವರನ್ನು ಅಲ್ಲಾಹು ಕೈಬಿಡಲಾರನಂತೆ..." ಎನ್ನುತ್ತಿದ್ದಳು.

ಕೆಲಸ ಹುಡುಕಿ ಹತಾಶನಾದ ಮಮ್ಮುಟ್ಟಿ ಕೊನೆಗೊಮ್ಮೆ ಸೈಕಲ್ಲಲ್ಲಿ ಮೀನು ಮಾರುವ ಕೆಲಸ ಶುರುಮಾಡಿದ. ಜುಲೇಖಾ, ಹಫ್ಸಾರು ಆಗಲೇ ಒಂದೆರಡು ಬಾರಿ ಅರಬಿಗಳನ್ನು ಮದುವೆಯಾಗಿದ್ದರು. ಜುಲೇಖಾ ಕಿವಿಗೆ ಚಿನ್ನದ 'ಅಲಿಕಾತ್' ಮಾಡಿಸಲಿಕ್ಕೆಂದು ಕೂಡಿಟ್ಟ ಹಣದಿಂದ ಹಳೆಯ ಹರ್‌ಕ್ಯೂಲಿಸ್ ಸೈಕಲ್ ಕೊಂಡದ್ದಾಯಿತು. ಹಫ್ಸಾ ಸೀರೆಗೆಂದು ಅರಬಿ ಗಂಡನಿಂದ ಪಡೆದ ಹಣ ಉಳಿಸಿ ಕೂಡಿಸಿಟ್ಟಿದ್ದು ವ್ಯಾಪಾರ ಬಂಡವಾಳವಾಯಿತು. ಅವರೆಲ್ಲ ಅಂದು ಅಷ್ಟು ಸಹಾಯ ಮಾಡಿದ್ದರೂ ತಾನಿಂದು ಅವರಿಗೇನೂ ಸಹಾಯ ಮಾಡಲಾಗುತ್ತಿಲ್ಲವಲ್ಲ ಎಂದು ಮಮ್ಮುಟ್ಟಿ ಕೊರಗಿದ.

ಮದುವೆಗೆ ಮುಂಚೆ ದುಡಿದು ಸಂಪಾದಿಸಿದ ಹಣವನ್ನೆಲ್ಲ ಅಮ್ಮನ ಕೈಗೆ ಹಾಕಿ ಬಿಡುತ್ತಿದ್ದ. ಆದರೆ ಮದುವೆಯ ನಂತರ ತನ್ನ ಆದಾಯ ತನ್ನ ಸಂಸಾರಕ್ಕೆ ಸಾಲದಾಗಿರುವಾಗ ಅಮ್ಮನಿಗೇನು ತಾನೇ ಕೊಡಬಲ್ಲ? ಈ ಕಾರಣಕ್ಕಾಗಿಯೇ ಮಮ್ಮುಟ್ಟಿ ತಾಯಿಯ ಗುಡಿಸಲಿನ ಹತ್ತಿರ ತಿಂಗಳಿಗೊಮ್ಮೆ ಕೂಡ ಸುಳಿಯಲು ಹಿಂಜರಿಯುತ್ತಿದ್ದ. ಅವರ ಬಡತನದ ಬವಣೆ ಕಣ್ಣ ಮುಂದೆ ಮೂಡಿದಾಗಲೆಲ್ಲ ಮಮ್ಮುಟ್ಟಿಗೆ ಅತ್ಯಂತ ನೋವಾಗುತ್ತಿತ್ತು.

ಅವರ ಸಂಕಷ್ಟಗಳಿಗೆಲ್ಲ ಬಡತನವೇ ಮುಖ್ಯ ಕಾರಣವೆಂಬುದು ಅವನಿಗೆ ತಿಳಿದಿತ್ತು. ಹಣವೊಂದು ಅವರಲ್ಲಿದ್ದಿದ್ದರೆ ಸಮಾಜದಲ್ಲಿ ಅವರಿಗೆ ಸಿಗದೆ ಇರುವುದು ಯಾವುದೂ ಇಲ್ಲ. ಮಾನ, ಮರ್ಯಾದೆ, ತರವಾಡಿನ ಗೌರವ ಇವೆಲ್ಲ ಹಣದ ಮುಂದೆ ಗೌಣವೆಂದು ಮಮ್ಮುಟ್ಟಿಗೆ ತಿಳಿದಿತ್ತು.

ಅಮ್ಮ ಮತ್ತು ಸಹೋದರಿಯರಿಗೆ ಸಹಾಯ ಮಾಡಬೇಕೆಂದುಕೊಂಡರೂ ಮಮ್ಮುಟ್ಟಿಗೆ ಸಾಧ್ಯವಾಗದೆ ಒಳಗಿಂದೊಳಗೆ ಹತಾಶನಾಗಿ ಕೊರಗುತ್ತಿದ್ದ. ನಫೀಸಾಳಿಗೆ ಊರಗಂಡು ಹುಡುಕಿ ಮದುವೆ ಮಾಡಬೇಕೆಂಬ ಅಮ್ಮನ ಆಸೆಯಾದರೂ ನೆರವೇರಿಸೋಣವೆಂದು ಪ್ರಯತ್ನ ಪಟ್ಟಾಗ ಅದರಲ್ಲಿ ಅವನಿಗೆ ಸೋಲೇ ಕಾದಿತ್ತು. ಈ ಬಗ್ಗೆ ಅಮ್ಮನಿಗೆ ಹೇಳೋದಾದ್ರೂ ಹೇಗೆ? ಅವಳು ಏನೆಲ್ಲ ಕನಸುಕಂಡಿದ್ದಳೋ ಏನೋ!

ನಮಗೆ ಗಂಡು ದಿಕ್ಕಿಲ್ಲದಿರುವುದರಿಂದಲೇ ಈ ಅವಸ್ಥೆ ಎಂದು ಇಲ್ಲಿಯ ಹೆಂಗಸರು ಬಲವಾಗಿ ನಂಬಿದ್ದರು. ಇತರ ಮುಸ್ಲಿಮರಿಗಿರುವಂತೆ ತಮಗೆ ಗಂಡಸರ ಆಶ್ರಯವಿಲ್ಲದಿರುವುದರಿಂದ ಮಕ್ಕಳನ್ನು ಸಾಕುವ ಹೊಣೆಗಾರಿಕೆ, ಜೊತೆಗೆ ಬದುಕಿನ ಹೋರಾಟದಿಂದಾಗಿ ದಿಕ್ಕುತಪ್ಪಿದ ಪರದೇಶಿಗಳಂತೆ ಬದುಕಬೇಕಾಗಿ ಬಂದಿದೆ ಎನ್ನುತ್ತಾರೆ. ಈ ಕೇರಿಯ ಹೆಂಗಸರೆಲ್ಲ ಅರಬರ ಸೂಳೆಗಳೆಂದೇ ಪುಕಾರು ಹಬ್ಬಿರುವುದರಿಂದ ಕೀಳರಿಮೆ ಹೊತ್ತ ಈ ಕೇರಿಯ ಗಂಡು ಮಕ್ಕಳು ರೆಕ್ಕೆ ಬಲಿತಂತೆ ಪುರ್ರನೆ ಹಾರಿ ಹೋಗುತ್ತಿದ್ದರು.

ಇಲ್ಲಿನ ಹೆಂಗಸರು ಬದುಕಿನೊಂದಿಗೆ ಸಾಕಷ್ಟು ಸೆಣಸಾಡಿರುವುದರಿಂದ ಯಾವ ಗಂಡಸಿಗೂ ಕಡಿಮೆ ಇಲ್ಲದಂತೆ ಧೈರ್ಯವಂತರಾಗಿರುವುದನ್ನು ಮಮ್ಮುಟ್ಟಿ ಹಲವು ಸಂದರ್ಭಗಳಲ್ಲಿ ಕಂಡಿದ್ದ. ಕೆಲವು ವರ್ಷಗಳ ಹಿಂದೆ ಅರಬಿ ಮದುವೆಗಳನ್ನು ನಿಲ್ಲಿಸಲು ಊರ ಯುವಕರು ಚಳವಳಿ ಹೂಡಿದಾಗ ಕೇರಿಯ ಹೆಂಗಸರು ಅನಿವಾರ್ಯವಾಗಿ ಒಗ್ಗಟ್ಟಾಗಿ ಪ್ರತಿಟಿಸಿದ ಘಟನೆ ಮಮ್ಮುಟ್ಟಿಯ ಕಣ್ಣ ಮುಂದೆ ತೇಲಿ ಬಂತು.

# ಅಧೋಲೋಕ

ಹಿಂದೊಮ್ಮೆ ಮಳೆಗಾಲದಲ್ಲಿ ಭೀಕರ ಬಿರುಗಾಳಿಯೆದ್ದು ಕೆಲವೇ ದಿನಗಳಲ್ಲಿ ಕುಟ್ಟಿಚಿರಾದ ಗುಡಿಸಲುಗಳೆಲ್ಲ ನೆಲಸಮವಾಗಿತ್ತು. ಕೆಲವು ಗುಡಿಸಲುಗಳ ಮಾಡುಗಳಂತೂ ಹಾರಿ ದೂರ ಬಿದ್ದು ಚೆಲ್ಲಾಪಿಲ್ಲಿಯಾಗಿತ್ತು. ಸಮುದ್ರ ವುಕ್ಕಿ ತೆರೆಗಳು ದಂಡೆಯು ಮೇಲ್ಗಡೆ ಬಂದು ಜನರನ್ನು ಕಂಗಾಲಾಗಿಸಿತ್ತು. ಜಲಪ್ರಳಯುವಾಯಿತೆಂದುಕೊಂಡು ಜನ ದಿಕ್ಕೆಟ್ಟು ಓಡಿದರು. ಎರಡು ಮುದುಕಿಯರೂ, ಮೂರು ಮಕ್ಕಳೂ ಬಲಿಯಾದವು. ಈ ಬಗ್ಗೆ ಸ್ಥಳೀಯ ಪತ್ರಿಕೆಯೊಂದು ಸಚಿತ್ರ ಲೇಖನ ಪ್ರಕಟಿಸಿತು. ಲೇಖನದಲ್ಲಿ ಈ ಕೇರಿಯ ಜನರ ಹೀನ ಬದುಕಿನ ಸ್ಥಿತಿಯನ್ನು ವಿವರವಾಗಿ ಬರೆಯಲಾಗಿತ್ತು.

ಈ ಲೇಖನವನ್ನು ಓದಿದ ಪ್ರತಿಷ್ಠರೆನಿಸಿದ ಮುಸ್ಲಿಮರೆಲ್ಲ 'ನಮ್ಮ ಮರ್ಯಾದೆ ಬೀದಿಪಾಲಾಯಿತೆಂದು' ಕೂಗಾಡತೊಡಗಿದರು. ಕುಟ್ಟಿಚಿರಾದ ಮಸೀದಿಯ "ಮುತವಲ್ಲಿ'ಯವರು ಈ ಬಗ್ಗೆ ಒಂದು ಶುಕ್ರವಾರ ಜಮಾತಿನವರ ಮುಂದೆ ಪುಟ್ಟ ಭಾಷಣವನ್ನೇ ಮಾಡಿದರು. "ನಮ್ಮ ಮರ್ಯಾದೆಯೆಲ್ಲಾ ಮೂರ್ಕಾಸಾಯ್ತು. ಈ ಪೇಪರಿನವ್ರು ನಮ್ಮೂರಿನ ಬಗ್ಗೆ ಎಲ್ಲಾ ಬರೆದು ಪರ ಊರವರೆಲ್ಲ ನಮ್ಮ ಬಗ್ಗೆ ತಮಾಷೆ ಮಾಡಿ ನಗುವಂತೆ ಮಾಡಿದ್ರು. ಈ ಅರಬಿ ನಿಕಾಹ್ ನಿಲ್ಲಲೇಬೇಕು" ಎಂದರು.

ಜಮಾತಿನವರೆಲ್ಲ 'ಹೂಂ...' ಗುಟ್ಟಿದರು. ಅಂದುಕ್ಕ ಮಾತ್ರ ಎದ್ದು ನಿಂತು ಹೇಳಿದ, "ಮತ್ತೆಂತದು... ಆ ಕೇರಿಯ ಜನರೆಲ್ಲ ಮಣ್ಣು ತಿನ್ನೊದಾ...?"

ಮುತವಲ್ಲಿಯವರಿಗೆ ಅಂದುಕ್ಕನ ಮಾತು ಕೇಳಿ ಸಿಟ್ಟು ಬಂತು. "ಕುಟ್ಟಿಚಿರಾದಲ್ಲಿ ಬೇರೆ ಬಡವರು ಬದುಕದೆ ಮತ್ತೇನು ಮಣ್ಣು ತಿಂತಾ ಇದ್ದಾರಾ ? ಅವ್ರು ಅರಬರಿಗೆ ಮದುವೆಯಾಗಿಯೇ ಬದುಕ್ತಾ ಇದ್ದಾರಾ ?"

ಎಂದರು. ಜಮಾತಿನವರೆಲ್ಲ "ಹೌದು... ಮುತವಲ್ಲಿಯವ್ರು ಹೇಳೂದೇ ಸರಿ..." ಅಂದ್ರು. ಮತ್ತೇನೊ ಹೇಳಬೇಕೆಂದು ಎದ್ದು ನಿಂತ ಅಂದುಕ್ಕ ನನ್ನು ಯಾರೋ ಎಳೆದು ಕುಳ್ಳಿರಿಸಿದರು.

ಅಂದುಕ್ಕನ ಮೇಲಿನ ಸಿಟ್ಟನ್ನು ತಮ್ಮ ಮುಂದೆ ಕೂತಿದ್ದ ಯುವಕ ಸಂಘದ ಪ್ರೆಸಿಡೆಂಟ್ ನಜೀರ್ ಅಹಮ್ಮದ್‌ನ ಮೇಲೆ ಮುತವಲ್ಲಿಯವರು ಕಾರಿದರು. "ನಮ್ಮೂರಿನ ಮರ್ಯಾದೆಯೆಲ್ಲಾ ಬೀದಿ ಪಾಲಾಗ್ತಾ ಇದೆ. ಪರಊರಿನ ಮುಸ್ಲಿಮರೆಲ್ಲ ನಮ್ಮ ಮುಖಕ್ಕೆ ಉಗಿಳ್ತಾರೆ. ನೀವು ಈ ಮುಸ್ಲಿಮ್ ಯುವಕ ಸಂಘ ಕಟ್ಟಿದ್ದೀರಲ್ಲಾ... ಬರೀ ಮೀಟಿಂಗು ಮಾಡ್ಲಿಕ್ಕಾ ಇಲ್ಲ ಏನಾದ್ರೂ ಕೆಲ್ಸ ಮಾಡ್ಲಿಕ್ಕಾ ?"

ಮುತವಲ್ಲಿಯವರು ನೇರವಾಗಿ ತನ್ನ ಮೇಲೆ ಹರಿಹಾಯ್ದದ್ದು ಕಂಡು ನಜೀರನಿಗೆ ಕಸಿವಿಸಿಯಾಗಿ, "ನಾವೇನೂ ಕೈಕಟ್ಟಿ ಕೂತಿಲ್ಲ. ಅದೇನ್ಮಾಡ್ಬೇಕು ಹೇಳಿ. ಮಾಡ್ತೇವೆ" ಎಂದ.

"ಏನ್ಮಾಡ್ಬೇಕಂತ ನನ್ನ ಹತ್ರ ಕೇಳ್ತಿದ್ದಿಯಲ್ಲ..." ನೀವ್ಯಾಕೆ ಮತ್ತೆ ಸಂಘ ಕಟ್ಟಿದ್ದು ಮಣ್ಣು ಹೊರ್ಲಿಕ್ಕಾ...? ಈ ಅರಬಿ ಮದುವೆ ನಿಲ್ಲಿಸೂದ ಕ್ಕಾದ್ರೂ ಪ್ರಯತ್ನ ಮಾಡಿ. ಇಸ್ಟ್ರೈಕು ಮಾಡಿ. ಈ ಮದುವೆಗಳಾಗದ ಹಾಗೆ ತಡೆಯಿರಿ. ಇದೊಂದಾದ್ರೂ ಒಳ್ಳೆಯ ಕೆಲ್ಸ ನಿಮ್ಮಿಂದ ಆಗ್ಲಿ..." ಎಂದರು ಮುತವಲ್ಲಿಯವರು.

ಕುಟ್ಟಿಚಿರಾದ ಯುವಕರನ್ನು ಊರ ಹಿರಿಯರೆಲ್ಲ ಕೆಣಕತೊಡಗಿದರು. ಯುವಕರು ಏನಾದರೂ ಮಾಡಬೇಕೆಂದು ಹಾರಾಡತೊಡಗಿದರು. ತುರ್ತಾಗಿ ಯುವಕ ಸಂಘದ ಸಭೆ ಕರೆದರು. ಇಸ್ಮಾಲಿ, ಕೋಯಾಲಿ , ಯೂಸೂಫು, ನಜೀರ್ ಅಲಿ, ಅದ್ರಮಾನ್, ರಹೀಮ್ ಮೊದಲಾದ ಬಿಸಿರಕ್ತದ ಯುವಕರು ಒಟ್ಟಾದರು. ಯುವಕ ಸಂಘದ ಸಭೆ ಕರೆದರು.

ಪ್ರೆಸಿಡೆಂಟ್ ನಜೀರ್ ಮೊದಲು ಕುರ್ಚಿಯಲ್ಲಿ ಕೂತ. ಕಾರ್ಯದರ್ಶಿ ಷರೀಫ್ ಪದ್ಧತಿಯಂತೆ ದುವಾ ಓದಿದ. ದುವಾ ಮುಗಿದ ಕೂಡಲೇ ಸಭೆ ಕರೆದುದರ ಉದ್ದೇಶ ಹೇಳತೊಡಗಿದ. "ಬಂಗ್ಲಾದೇಶ ಅಂತಾರಲ್ಲಾ ಆ ಬೀಚ್ ರೋಡಿನ ಹತ್ರ ಇರುವ ಗುಡಿಸ್ಲು ಕೇರಿ. ಅಲ್ಲಿಯ ಹೆಂಗಸ್ರುನ್ನು ಅರಬರು ನಿಕಾಹ್ ಆಗೂದು, 'ಶರೀಯತ್' ನಂತಲ್ಲ. ಇದು ನಮಗೆಲ್ಲ ನಾಚಿಕೆಯ ವಿಷಯ..." ಅಂದ. ಇಸ್ಮಾಲಿಗೆ ಷರೀಫ ಹೇಳ್ತಾ ಇರೂದು ಸರಿಕಾಣಲಿಲ್ಲ. "ಅದ್ಹೇಗೆ ನಮ್ಗೆ ನಾಚಿಕೆ ವಿಷ್ಯ ಆಗೂದು ? ನಾವು ಆ ಕೇರಿಯಲ್ಲಿದ್ದೇವಾ..." ಅಂತ ಗಟ್ಟಿಯಾಗೇ ಕೇಳಿದ. "ಈ ಮಾತನ್ನು ಸೆಕ್ರೆಟರಿ

ಹಿಂತೆಗೆದುಕೊಳ್ಳಬೇಕು..." ಎಂದು ಪಟ್ಟು ಹಿಡ್ದು ಕೂತ. ತನಗೆ ಸಿಕ್ಕಿದ ಕಾರ್ಯದರ್ಶಿ ಸ್ಥಾನ ಷರೀಫನಿಗೆ ಸಿಕ್ಕಿರೂದರಿಂದಲೇ ಇಸ್ಮಾಲಿ ತಲೆಹರಟೆ ಮಾಡ್ತಿರೋದಂತ ಎಲ್ಲರಿಗೂ ಗೊತ್ತಿತ್ತು. ಷರೀಫ ಗೊಣಗಿಕೊಂಡ. "ಇವ ನದ್ದು ಪ್ರತೀ ಮೀಟಿಂಗಿನಲ್ಲಿ ಕೊಕ್ಕೆ ಇದ್ದದ್ದೇ..."

ಅದ್ರಾಮು ಎದ್ದು ನಿಂತು ಹೇಳಿದ. "ನೋಡಿ ಕಾರ್ಯದರ್ಶಿಯುವ್ರು ನಾಚಿಕೆ ಹೇಳಿದ್ದು ಅವರಿಗೆ ನಮುಗಲ್ಲಾ... ಆ ಬಗ್ಗೆ ನಾವೆಲ್ಲ ಯಾಕೆ ಮಂಡೆ ಬಿಸಿ ಮಾಡ್ಕೊಳ್ಬೇಕು?"... ಎಲ್ಲರೂ "ಅದ್ರಾಮು ಹೇಳಿದ್ದು ಸರಿ...' ಎಂದರು.

"ಈ ಚಿಲ್ರೆ ವಿಷಯದಲ್ಲಿ ಮುಳುಗಿದ್ರೆ ನಮ್ಮ ಮೀಟಿಂಗು ನಡೆದ ಹಾಗೇನೆ... ಬೇಗ ಮಾತಾಡಿ ಸಭೆ ಮುಗಿಸಬೇಕು..." ಅಂತ ಪ್ರೆಸಿಡೆಂಟ್ ನಜೀರ್ ಅವಸರ ಮಾಡಿದ. ಅವನು ಮ್ಯಾಟಿನಿ ಶೋ ಸಿನಿಮಾಕ್ಕೆ ಟಿಕೇಟು ಮಾಡಿದ್ದು ಅಲಿಗೆ ನೆನಪಾಗಿ ನಗೆ ಬಂತು.

ಅಂತೂ ಇಂತೂ ಸೆಕ್ರೆಟರಿ ಷರೀಫ ಮುಖ್ಯ ವಿಷಯಕ್ಕೆ ಬಂದ. "ನಾವು ಇದನ್ನು ನಿಲ್ಲಿಸೂದಕ್ಕೆ ಇಸ್ಟ್ರೈಕ್ ಮಾಡಬೇಕು. ಸಾಲಾಗಿ ಮೆರವಣಿಗೆ ಹೋಗ್ಬೇಕು. ಕೂಗಬೇಕು. ಅರಬರಿರುವ ಹೋಟೆಲುಗಳ ಮುಂದೆ ನಿಂತು ಕೂಗಬೇಕು..." ಎಂದು ಉತ್ಸಾಹದಿಂದ ಹೇಳಿದ.

ಇವನು ಹೀಗೆ ಇಸ್ಟ್ರೈಕ್ ಮಾಡಿದ್ರೆ ಹೀರೋ ಆಗ್ತಾನೆ. ಮುಂದಿನ ವರ್ಷ ಕೂಡ ತಾನು ಸೆಕ್ರೆಟರಿ ಆಗೂ ಹಾಗಿಲ್ಲ ಎಂದುಕೊಂಡ ಇಸ್ಮಾಲಿ, "ಅದೇನು ಇಸ್ಟ್ರೈಕ್ ಮಾಡೂದಂದ್ರೆ ಅಷ್ಟು ಸುಲಭವಾ...? ಯಾರಾದ್ರೂ ಕಂಪ್ಲೇಂಟು ಕೊಟ್ಟು ಒಳಗೆ ಹಾಕಿದ್ರೆ...?" ಅಂತ ತನ್ನ ಅನುಮಾನವನ್ನು ಮುಂದಿಟ್ಟ.

ಪ್ರೆಸಿಡೆಂಟನಾಗಿದ್ದ ನಜೀರನಿಗೆ ತಡೆಯಲಾಗಲಿಲ್ಲ. "ಇಸ್ಟ್ರೈಕ್ ಎಂದ ಮೇಲೆ ಎಲ್ಲದಕ್ಕೂ ತಯಾರಿರ್ಬೇಕು..." ಎಂದ. "ಹೌದು... ಹೌದು..." ಎಂದ ಕೂಡ್ಲೆ ಷರೀಫ ಚಳವಳಿಯ ಠರಾವು ಮಂಜೂರು ಮಾಡಿಬಿಟ್ಟ.

ಇನ್ನು ಯಾವ ದಿನ ಎಂಬುದು ನಿಶ್ಚಯವಾಗಬೇಕು. ಹೆಚ್ಚಿನವರು ನಿರುದ್ಯೋಗಿಗಳಾದ್ದರಿಂದ ಯಾವ ದಿನವಾದ್ರೂ ರೆಡಿ ಎನ್ನುವ ಹಾಗಿದ್ದರು. ಆದರೆ ನಜೀರ್ ಮಾತ್ರ ಅಪ್ಪನ ಕಟ್ಲೇರಿ ಅಂಗಡಿಯಲ್ಲಿ ಕೂರುವವನು. "ಆದಿತ್ಯವಾರ ರಜಾದಿನ ಅಂದೇ ಒಳ್ಳೇದು" ಅಂದ. ಎಲ್ಲ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿ ಹೇಳಿದ ಹಾಗೆ ಆಗ್ಬೇಕಾಂತ ಮತ್ತೆ ಇಸ್ಮಾಲಿ ಕೊಕ್ಕೆ ಇಕ್ಕಿದ. "ಇಲ್ಲ ಆದಿತ್ಯವಾರ ಸುರು ಮಾಡ್ಲಿಕ್ಕೆ ನಮ್ಗೆ ಆಗೂದಿಲ್ಲ. ಶನಿವಾರ

ಮಾಡಿ..." ಅಂದ. ಅದಕ್ಕೆ ಅದ್ರಮಾನ್ ಮತ್ತು ರಹೀಮ್ ಕೂಡ ಗಾಳಿ ಹಾಕಿದ್ರು. ಅವರು ಪಟ್ಟು ಹಿಡಿದಿದ್ದರಿಂದ ಚಳವಳಿ ಸುರು ಮಾಡೋದು ಶನಿವಾರ ಅಂತ ನಿಶ್ಚಯವಾಯಿತು. ಕರಪತ್ರ ಮುದ್ರಿಸೋದು, ಬ್ಯಾನರು ಗಳನ್ನು ಬರೆಯುವುದಕ್ಕೆ ಕಾರ್ಯದರ್ಶಿಗೆ ಒಪ್ಪಿಸಲಾಯಿತು.

ತೀರ್ಮಾನಿಸಿದಂತೆ ಶನಿವಾರದಂದು ಕುಟ್ಟಿಚಿರಾದ ಮುಸ್ಲಿಮ್ ಯುವಕ ಸಂಘದ ಆಫೀಸಿನಿಂದ ಮೆರವಣಿಗೆ ಹೊರಟಿತು. ಇಪ್ಪತ್ತು ಮೂವತ್ತು ಯುವಕರು ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತ ಹೊರಟರು. ಕೆಲ ವರು ಕೈಯಲ್ಲಿ "ನಮ್ಮ ಹೆಣ್ಣು ಮಕ್ಕಳು ಮಾರಾಟದ ವಸ್ತುಗಳಲ್ಲ..." "ಅರಬ ವ್ಯಭಿಚಾರಿಗಳಿಗೆ ಧಿಕ್ಕಾರ...", "ಮದುವೆಯಾಗುವುದಾದರೆ ಮುಸ್ಲಿಂ ಶರಿಯತ್ತಿನ ನಿಯಮದಂತೆ ಆಗಿರಿ..." ಎಂಬ ಘೋಷಣಾ ಫಲಕಗಳನ್ನು ಹಿಡಿದುಕೊಂಡಿದ್ದರು. ಕುಟ್ಟಿಚಿರಾದಿಂದ ಮೆರವಣಿಗೆ ಹೊರಟು ಬೀಚ್ ರೋಡಿನ ಮೂಲಕ 'ಬಂಗ್ಲಾದೇಶ್' ಕೇರಿಯ ಮುಂದಿನಿಂದ ಬಂತು. ಹೆಂಗಸರು, ಮಕ್ಕಳು ಇದೇನಪ್ಪಾಂತ ಗುಡಿಸಲಿನಿಂದ ಹೊರಗೆ ಬಂದು ನೋಡಿ ದರು. ಮಕ್ಕಳು ಇವರ ಕೂಗನ್ನು ಅಣಕಿಸಿ ತಾವೂ ಕೂಗಿದವು. ಅವರೆಸೆದ ಕರಪತ್ರಗಳನ್ನು ಹೆಕ್ಕಿತಂದು ದೋಣಿ ಮಾಡಿ ನೀರಿನ ಹೊಂಡಗಳಲ್ಲಿ ಬಿಟ್ಟು ಆಡಿದವು.

ಯುವಕರು ಅಲ್ಲಲ್ಲಿ ಪೋಸ್ಟರುಗಳನ್ನು ಹಚ್ಚಿದರು. ಕೆಲವು ಹೋಟೇಲು ಗಳ ಮುಂದೆ ನಿಂತು ಘೋಷಣೆಗಳನ್ನು ಕೂಗಿದರು. ಊರ ಹಿರಿಯರು ಯುವಕರ ಉತ್ಸಾಹಕ್ಕೆ 'ಶಹಬಾಸ್ ಗಿರಿ' ಕೊಟ್ಟರು. ಯುವಕರು ಉಬ್ಬಿ ಬಲೂನಿನಂತಾದರು. ಸ್ಥಳೀಯ ಪತ್ರಿಕೆಯಲ್ಲಿ ಇವರ ಚಳವಳಿಯ ಬಗ್ಗೆ ಫೋಟೋ ಸಹಿತ ಲೇಖನ ಅಚ್ಚಾದಾಗಂತೂ ಅವರು ಗಾಳಿಯಲ್ಲೇ ತೇಲು ವಂತಾದರು.

ಮೊದಮೊದಲು 'ಇದೆಂತದಪ್ಪ' ಎಂದುಕೊಂಡಿದ್ದ ಗುಡಿಸಲ ಜನಕ್ಕೆ ತಮ್ಮ ಹೊಟ್ಟೆ ಹೊರೆಯುವ ಒಂದೇ ಒಂದು ವೃತ್ತಿಗೆ ಸಂಚಕಾರ ಎಂಬುದು ತಿಳಿಯುತ್ತಲೇ ಗಾಬರಿಯಾದರು. ಅರಬರ ಮದುವೆಯ ದಲ್ಲಾಳಿಗಳು, ಯಾರೂ ಇವರನ್ನು ತಡೆಯಲು ಬರಲಿಲ್ಲ. ಅರಬರು ಹೆದರಿ ನಮಗೆ ನಿಕಾಹ್ ಬೇಡ ಎಂದುಬಿಟ್ಟರು. ಅವರು ಕಲ್ಲಿಕೋಟೆ ಬಿಟ್ಟು ಬೆಂಗಳೂರು, ಹೈದರಾ ಬಾದ್ ಮುಂತಾದ ಪಟ್ಟಣಗಳ ಕಡೆ ಹೋಗಿ ಅಲ್ಲಿನ ಮುಸ್ಲಿಮ್ ಹೆಣ್ಣುಗಳ ಬೇಟೆಯಲ್ಲಿ ತೊಡಗಿದರು. ಗುಡಿಸಲುಗೇರಿಯ ಜನಕ್ಕೆ ಈ ವರ್ಷ ನಾವು

ಬದುಕೋದು ಹ್ಯಾಗೆಂಬ ಚಿಂತೆ ಕಾಡತೊಡಗಿತು. ಚಳವಳಿ ತೀವ್ರವಾದಂತೆ ತಲೆಯು ಮೇಲೆ ಕೈ ಹೊತ್ತು ಕೂತರು.

ಯುವಕರ ಚಳವಳಿ ವ್ಯಾಪಕವಾಗಿ ಶತಮಾನಗಳಿಂದ ನಡೆದು ಬಂದ ವಿವಾಹ ವ್ಯಾಪಾರವನ್ನು ಒಂದು ವರ್ಷದ ಮಟ್ಟಿಗೆ ನಿಲ್ಲಿಸುವಲ್ಲಿ ಯಶಸ್ವಿಯಾಯಿತು. ದಿನವೂ ಹೋಟೇಲುಗಳ ಕಡೆ ಯುವಕರ ಗುಂಪು ಹೋಗಿ ನೋಡಿ ಬರುತ್ತಿತ್ತು. ಗುಡಿಸಲುಗಳ ಕಡೆಗೆ ಬಂದು ಕೇರಿಯು ಜನರನ್ನು ಕೂಡ ಬೆದರಿಸಿತು. "ಈ ರೀತಿಯು ನಿಕಾಹ್ ಇಸ್ಲಾಂ ಧರ್ಮದ ಶರೀಯತ್ತಿಗೆ ವಿರುದ್ಧವಾದದ್ದು. ವರ್ಷಕ್ಕೊಂದು ಮದುವೆಯಾಗುವುದು, ತಲಾಕ್ ಪಡೆಯದೆ ಮರು ಮದುವೆಯಾಗೂದು. ತಲಾಕ್ ಪಡೆದರೂ 'ಇದ್ದತ್' ದಿನಗಳನ್ನು ಆಚರಿಸದೆ ಮರು ಮದುವೆಯಾಗೂದು ಧರ್ಮ ನಿಷಿದ್ಧ..." ಎಂದು ಧಾರ್ಮಿಕ ಮುಖಂಡರು ಹೇಳಿಕೊಟ್ಟಂತೆ ಯುವಕರು ಈ ಜನರ ಮುಂದೆ ಹೇಳಿದರು. ಅನಿರೀಕ್ಷಿತ ಆಘಾತದಿಂದ ಕಂಗೆಟ್ಟ ಜನ ಈ ಯುವಕರ ಮಾತುಗಳನ್ನು ಕೇಳಿ ಮುಖ ಮುಖ ನೋಡಿಕೊಂಡರು. ಆರ್ಥಿಕವಾಗಿ ಪೂರ್ಣ ಅವಲಂಬಿಸಿದ್ದ ಈ ವಿವಾಹ ವ್ಯವಹಾರ ನಿಂತುಹೋದಾಗ ಗುಡಿಸಲ ಮಂದಿ ದಿಕ್ಕೆಟ್ಟವು.

ಹಾಜಿಮಳ ಗುಡಿಸಲ ಮುಂದೆ ಹೆಂಗೆಳೆಯರ ಗುಂಪೊಂದು ಸೇರಿತ್ತು. ಅವಳು ಹೇಳುತ್ತಿದ್ದಳು, "ನಾವು ಮಾಡ್ತಿರೋದು ತಪ್ಪು ಹೌದು... ಇದನ್ನು ಮಾಡದೆ ನಾವು ಬದ್ಕೋದು ಹ್ಯಾಗೆ...?" ಎರಡು ದಿನಗಳಿಂದ ಅನ್ನ ನೀರು ಕಾಣದ ಚೆಯ್ಯುಮ್ಮ ಅತ್ತೇಬಿಟ್ಟಳು. ಅವಳನ್ನು ಸಂತೈಸುತ್ತಾ ಅಚ್ಚುಮ್ಮ, "ಈ ಸಲದ ಮಳೆಗಾಲದಲ್ಲಿ ನಾವು ಬದುಕಿ ಉಳಿದರೆ ಅಲ್ವಾ? ಹ್ಯಾಗೂ ಒಂದಲ್ಲ ಒಂದು ದಿನ ಸಾಯೂದು ಇದ್ದದ್ದೇ... ಹಸಿವಿನಿಂದ ಸಾಯೂದು ನಮ್ಮ ತಕ್‌ದೀರ್..." ಎಂದಳು.

ಮಮ್ಮುಟ್ಟಿ ಆಗತಾನೆ ಮೀನಿನ ವ್ಯಾಪಾರದಲ್ಲಿ ತೊಡಗಿದ್ದರಿಂದ ಮನೆಯಲ್ಲಿ ಹೊಗೆ ಕಾಣುತ್ತಿತ್ತು. ಹಾಜಿಮ ಚೆಯ್ಯುಮ್ಮಳನ್ನು ಮತ್ತು ಅವಳೆರಡು ಮಕ್ಕಳನ್ನು ಕರೆದು ರಾತ್ರಿಗೆಂದು ಉಳಿಸಿದ್ದ ಮಧ್ಯಾಹ್ನದ ಗಂಜಿಯನ್ನು ಬಡಿಸಿದಳು? ಯುವ ಚಳವಳಿಗಾರರ ಮೇಲೆ ಸಿಟ್ಟಿನಿಂದ ಕುದಿಯು ತೊಡಗಿದಳು. "ನಾವು ಏನು ಮಾಡಿದ್ರೆ ಇವರಿಗೇನು? ನಮ್ಮ ಹೊಟ್ಟೆ ತುಂಬಿಸ್ಲಿಕ್ಕೆ ಇವ್ರು ಬರ್ತಾರೇನು?" ಎಂದುಕೊಳ್ಳುತ್ತ ಹಿಡಿ ಶಾಪ ಹಾಕಿದಳು.

ಮಮ್ಮುಟ್ಟಿಗೆ ಯುವಕರು ಹೂಡಿದ ಚಳವಳಿಯು ಬಗ್ಗೆ ಮೊದಲು ಉತ್ಸಾಹ ಮೂಡಿದರೂ ಹೆಚ್ಚು ಹೊತ್ತು ಉಳಿಯಲಿಲ್ಲ. ಜನ ಮಾಡು

ತ್ತಿರೂದು ತಪ್ಪೇನೋ ಹೌದು. ಆದರೆ ದುಡಿಯೋದಕ್ಕೆ ಬೇರೆ ದಾರಿ ಬೇಕಲ್ಲ? ಇಲ್ಲದಿದ್ರೆ ಇವರು ಬದ್ಕೋದು ಹ್ಯಾಗೆ? ಅಂತ ಅವನಿಗೆ ಅನ್ನಿಸ ತೊಡಗಿತ್ತು. ಕೆಲವು ಹೆಂಗಸರು ಹೊಟ್ಟೆ ಹೊರೆಯಲಿಕ್ಕಾಗಿ ಮನೆಕೆಲಸ ಹುಡುಕಿಕೊಂಡು ಮಹಲುಗಳತ್ತ ಹೋಗತೊಡಗಿದರು. ಕೆಲವರು ಕೂಲಿ ಕೆಲಸಕ್ಕಾಗಿ ಅಲೆದಾಡತೊಡಗಿದರು.

ಕೇರಿಯ ಮುದುಕಿ ಸಾರಮ್ಮ ತನ್ನ ಗುಡಿಸಲಲ್ಲಿ ಒಬ್ಬಳೇ ಕೂತಿದ್ಲು. ಅವಳ ಮಗಳು ಪೊನ್ನಿಮೋಳು ತುಂಬ ದಿನಗಳಿಂದ ಮಾಡಲು ಕೆಲಸವಿಲ್ಲದೆ ಕಂಗಾಲಾಗಿ ಕೂತಿದ್ದವಳು ಏನಾದ್ರೂ ಕೂಲಿ ಕೆಲ್ಸ ಸಿಗ್ತದಾಂತ ನೋಡ್ತೇನೆಂದು ಆಗ್ಲೆ ಮನೆಯಿಂದ ಹೋಗಿದ್ದಳು. ಅವಳ ಎರಡು ಗಂಡುಮಕ್ಕಳು ಬೆಳಗ್ಗಿನಿಂದ ಅಳುತ್ತಿದ್ದವು. ಹೊಟ್ಟೆ ಹಸೀತದೆ ಏನಾದ್ರೂ ಕೊಡು ಅಂತ ಅಜ್ಜಿಯನ್ನು ಒಂದೇ ಸಮನೆ ಪೀಡಿಸುತ್ತಿದ್ದವು. ಪೊನ್ನಿಮೋಳು ಮನೆಯಿಂದ ಹೊರಡುವಾಗ್ಲೆ, ಮಕ್ಕಳ ಅಳು ಶುರುವಾಗಿದ್ದಿತು. ಎಷ್ಟು ರಮಿಸಲು ಪ್ರಯತ್ನಪಟ್ಟರೂ ಮಕ್ಕಳು ಸುಮ್ಮನಾಗಲಿಲ್ಲ. ಮುಂಚಿನ ದಿನದಿಂದ ಉಪವಾಸವಿದ್ದ ಪೊನ್ನಿಮೋಳಿಗೆ ಸಿಟ್ಟು ಬಂದು "ಯಾಕೆ ಹೀಗೆ ಗೋಳು ಹೊಯ್ತೀರಿ ಮಕ್ಳೇ? ಯಾವ ಕರ್ಮಕ್ಕೆ ನನ್ನ ಹೊಟ್ಟೆಯಲ್ಲಿ ಹುಟ್ಟಿದ್ರೋ...!" ಎಂದು ಹಸಿದ ಮಕ್ಕಳ ಬರಿ ಮೈಮೇಲೆ ಎರಡೇಟು ಬಿಗಿದ್ಲು. ಮಕ್ಕಳ ಎಳೇ ಚರ್ಮದ ಮೇಲೆ ಕೆಂಪು ಅಚ್ಚು ಮೂಡಿತ್ತು. ಮುದುಕಿ ಕೂತಲ್ಲಿಂದ್ಲೇ ಮಗಳಿಗೆ "ಅದ್ಯಾಕೆ ಪೊನ್ನಿ, ಮಕ್ಕಳಿಗೆ ಹೊಡೀತಿ? ನಿಂಗೇನಾದ್ರೂ ಹುಚ್ಚುಗಿಚ್ಚು ಹಿಡ್ದಿದ್ಯಾ? ಹಸಿವನ್ನು ನಾವಾದ್ರೂ ತಡ್ಕೋಬಹುದು. ಮಕ್ಕಳಿಗೆ ಸಾಧ್ಯವಾ? ಅವುಗಳಿಗೆಂತಾದ್ದು ಗೊತ್ತಾಗ್ತದೆ? ಎಲ್ಲಿಯಾದ್ರೂ ಕೂಲಿ ಸಿಗ್ತದಾಂತ ನೋಡ್ಬಾರ್ದ?" ಅಂದ್ಲು. ಪೊನ್ನಿಮೋಳು ಸುಮ್ಮನೆ ಎದ್ದು ಹೊರಗೆ ಹೋಗಿದ್ದಳು.

ಮುದುಕಿ ಎಷ್ಟು ರಮಿಸಿದರೂ ಮಕ್ಕಳು ಕುಸುಕುಸು ಮಾಡೂದು ನಿಲ್ಲಿಸಲಿಲ್ಲ. ಹಸಿವನ್ನು ತಾಳಲಾರದೆ ಮಕ್ಕಳೆರಡು ಅತ್ತು ಅತ್ತು ಅಲ್ಲೆ ನೆಲದ ಮೇಲೆ ಬಿದ್ದುಕೊಂಡು ಮಲಗಿ ಬಿಟ್ಟವು. ಮುದುಕಿ ಕೈಯಲ್ಲೊಂದು ಕೋಲು ಹಿಡಿದುಕೊಂಡು ಊರುತ್ತ ಹೊರಗೆ ಹೊರಟಳು. ಕುಟ್ಟಿಚಿರಾದ ಪೇಟೆ ಕಡೆ ಹೊರಟಾಗ ಅಂದು ಶುಕ್ರವಾರವೆಂದು ತಿಳಿದು ಅದೇನೋ ಯೋಚಿಸಿದವಳು ಮಸೀದಿಯ ಗೇಟಿನ ಮುಂದೆ ನಿಂತಳು.

ಶುಕ್ರವಾರದ ನಮಾಜು ಮುಗಿಸಿ ಮಮ್ಮುಟ್ಟಿ ಮಸೀದಿಯಿಂದ ಬರುವಾಗ ತನ್ನ ಕೇರಿಯ ಮುದುಕಿ ಸಾರಮ್ಮ ಮಸೀದಿಯ ಗೇಟಿನ ಮುಂದೆ,

"ಏನಾದರೂ ಸಹಾಯ ಮಾಡಿ..." ಎಂದು ಅಂಗಲಾಚಿ ಬೇಡುತ್ತಿರುವುದನ್ನು ಕಂಡು ದಂಗಾದ. ಎಷ್ಟು ಕಷ್ಟ ಬಂದರೂ ತನ್ನ ಕೇರಿಯ ಜನ ಭಿಕ್ಷೆಗೆ ಕೈಯೊಡ್ಡಿದ್ದು ಕಾಣದ ಮಮ್ಮುಟ್ಟಿ ಚಕಿತನಾದ.

ಈ ವಿಷಯವನ್ನು ಪೊನ್ನಿಮೋಳಿಗೆ ತಿಳಿಸಬೇಕೆಂದುಕೊಂಡ. ಸಂಜೆ ಮೀನು ವ್ಯಾಪಾರ ಮುಗಿಸಿ ಬರುವಾಗ ದಾರಿಯಲ್ಲಿ ಪೊನ್ನಿಮೋಳುಳ ಗುಡಿಸಲ ಮುಂದೆ ನಿಂತು ಅವಳನ್ನು ಕರೆದ. "ಏನು ಮಮ್ಮುಟ್ಟಿ... ವ್ಯಾಪಾರ ಮುಗೀತಾ...?" ಅಂತ ಕೇಳುತ್ತ ಪೊನ್ನಿಮೋಳು ಬಂದಳು. ಮಮ್ಮುಟ್ಟಿ ವಿಶೇಷ ಸುದ್ದಿಯೊಂದನ್ನು ತಿಳಿಸುವಂತೆ ಧ್ವನಿ ತಗ್ಗಿಸಿ, "ಪೊನ್ನಿಮೋಳು... ನಿಂಗೊತ್ತುಂಟಾ...ನಿನ್ನ ತಾಯಿ ಮಸೀದಿಯ ಮುಂದೆ ಬೇಡುತ್ತಾ ನಿಂತಿದ್ಲು. ನಮ್ಮ ಕೇರಿಯಲ್ಲಿ ಯಾರಾದ್ರೂ ಹೀಗೆ ಭಿಕ್ಷೆ ಬೇಡೂದು ನಮಗೆಲ್ಲ ನಾಚಿಕೆಯ ವಿಷಯ ಅಲ್ವಾ...?" ಎಂದ. ಪೊನ್ನಿಮೋಳುಳ ಮುಖ ಒಮ್ಮೆಲೇ ಬಿಳಿಚಿ ಕೊಂಡಿತು. "ಹೌದು ಮಮ್ಮುಟ್ಟಿ ಅಮ್ಮ ಭಿಕ್ಷೆ ಬೇಡಿದ್ದು ನಂಗೂ ಗೊತ್ತುಂಟು... ಮತ್ತೆಂತ ಮಾಡೂದು ಹೇಳು? ಬೆಳಗ್ಗಿನಿಂದ ಮಕ್ಳು ಹಸೀತ ದೆಂತ ಒಂದೇ ಸಮನೆ ಹಟಮಾಡ್ತಿದ್ದುವು. ಕೂಲಿ ಕೆಲ್ಸಕ್ಕಾಗಿ ಊರಿಡೀ ಸುತ್ತಿದ್ರೂ ಕೆಲ್ಸ ಸಿಗ್ಲಿಲ್ಲ. ಅಮ್ಮ ನಾಚಿಕೆ ಬಿಟ್ಟು ಭಿಕ್ಷೆ ಬೇಡಿದ್ದರಿಂದ ಇಂದು ನನ್ನೆರಡು ಮಕ್ಳು ತುತ್ತು ಅನ್ನ ಉಂಡು ಬದುಕಿದವು..." ಎಂದವಳೇ ಅಳುತ್ತ ಗುಡಿಸಲೊಳಗೆ ಓಡಿದ್ಲು. ತಾನು ಹೀಗೆಲ್ಲ ಕೇಳಬಾರದಿತ್ತೇನೋ ಎಂದುಕೊಳ್ಳುತ್ತ ಸೈಕಲು ಹತ್ತಿ ಮಮ್ಮುಟ್ಟಿ ಮನೆಕಡೆಗೆ ಹೋದ.

ಮನೆಯೊಳಗೆ ಮಮ್ಮುಟ್ಟಿ ಪ್ರವೇಶಿಸುವಾಗ ಜುಲೇಕಾ ಮತ್ತು ಅಮ್ಮ ಯಾವುದೋ ವಿಷಯದ ಬಗ್ಗೆ ಚರ್ಚಿಸುತ್ತಿದ್ದವರು ತಟ್ಟನೆ ನಿಲ್ಲಿಸಿದರು. ಕುತೂಹಲದಿಂದ ಮಮ್ಮುಟ್ಟಿ ಆ ಬಗ್ಗೆ ವಿಚಾರಿಸಿದಾಗ "ಏನಿಲ್ಲ... ಅದೇ... ಚೆಯ್ಯುಮ್ಮಳ ಮನೆಗೆ ದಿನಾ ಯಾರೋ ಗಂಡಸರು ಬರ್‍ತಿದ್ದಾರಂತೆ ರಾತ್ರಿ ಹೊತ್ತು..." ಮಮ್ಮುಟ್ಟಿಗೆ ಸಿಡಿಲು ಬಡಿದಂತಾಯಿತು. "ಮತ್ತೆ ಅವಳೇ ನ್ಮಾಡ್ಬೇಕು... ತನ್ನೆರಡು ಮಕ್ಕಳನ್ನು ಎಷ್ಟು ದಿನಾಂತ ಉಪವಾಸ ಕೆಡವಿ ಯಾಳು ? ನೀನೊಬ್ಬ ಸಂಪಾದಿಸುವವ ನಮ್ಮನೇಲಿ ಇಲ್ದೆ ಹೋಗಿದ್ರೆ ನಮಗೆ ಯಾವ ಗತಿ ಬರ್‍ತಿತ್ತೋ..." ಅಂತ ಅಮ್ಮ ಗೊಣಗಿದಳು.

ಗುಡಿಸಲುಗೇರಿಯ ಹೆಮ್ಮಕ್ಕಳು ಅರಬರ ಮದುವೆಯ ಸರಕುಗಳಾಗು ತ್ತಿದ್ದರೇ ಹೊರತು ತಮ್ಮ ಮಾನವನ್ನು ಊರಿನವರಿಗೆ ಮಾರುವುದಕ್ಕೆ ತೊಡ ಗಿದ್ದು ಮಮ್ಮುಟ್ಟಿಯ ಅನುಭವಕ್ಕೆ ಬಂದದ್ದು ಇದೇ ಮೊದಲು. ಪೊನ್ನಿ

ಮೋಳುಳ ಮನೆಯಲ್ಲಿ ಕಂಡದ್ದಕ್ಕಿಂತ ಭೀಕರ ಪರಿಸ್ಥಿತಿ ಚೆಯ್ಯಮ್ಮಳ ಮನೆಯಲ್ಲಿರುವುದನ್ನು ಕಲ್ಪಿಸಿಕೊಂಡು ಗರಬಡಿದವನಂತೆ ಮಮ್ಮುಟ್ಟಿ ಕೂತುಬಿಟ್ಟ.

ಮರುದಿನ ಮಮ್ಮುಟ್ಟಿ ಪಾಳಯಂ ಬಸ್ ಸ್ಟಾಂಡಿನ ಮಾರ್ಗವಾಗಿ ಮೀನು ಕೊಂಡು ಹೋಗುವಾಗ ತನ್ನ ಕೇರಿಗೆ ಸೇರಿದ ಎರಡು ಮಕ್ಕಳು ಬಸ್ ನಿಂತ ಕಡೆಯಲ್ಲೆಲ್ಲ ಪ್ರಯಾಣಿಕರ ಮುಂದೆ ನಿಂತು ಅಂಗಲಾಚುವುದು ನೋಡಿದಾಗ ಅತ್ಯಂತ ನೋವಾದರೂ ಅವುಗಳು ಮತ್ತೆ ಬದುಕೋದು ಹೇಗೆ ಎಂದುಕೊಂಡು ಸುಮ್ಮನೆ ಸೈಕಲು ಮೆಟ್ಟುತ್ತ ಹೋದ. ಯುವಕರ ಚಳವಳಿಯ ಭೀಕರ ಪರಿಣಾಮಗಳನ್ನು ಕಣ್ಣಾರೆ ಕಂಡ ಮಮ್ಮುಟ್ಟಿ ಸಿಟ್ಟಿನಿಂದ ಕುದಿಯತೊಡಗಿದ.

# ಮೆರವಣಿಗೆ

ಆ ವರ್ಷದ ಮಳೆಗಾಲ ಹಿಂದಿನಷ್ಟು ಭೀಕರವಾಗಿರದಿದ್ದರೂ ಮಕ್ಕಳ ಅಳು, ಚೀರಾಟ ಗುಡಿಸಲುಗೇರಿ ತುಂಬ ವ್ಯಾಪಿಸಿತ್ತು. ಹೆಚ್ಚು ಹೆಚ್ಚು ಜನ ಹಸಿವು ತಾಳಲಾರದೆ ಭಿಕ್ಷೆ, ಹಾದರ, ಕಳ್ಳತನಗಳಲ್ಲಿ ತೊಡಗಿದರು. ಊರ ಜನ ಇದಕ್ಕೆ ಕಾರಣ ಊಹಿಸುವ ಬದಲು ಗುಡಿಸಲುಗೇರಿಯ ಜನರನ್ನು ಇನ್ನಷ್ಟು ದ್ವೇಷಿಸತೊಡಗಿದರು. ಮಮ್ಮುಟ್ಟಿಯ ಸಂಪಾದನೆಯಿಂದ ಗುಡಿಸಲಿಗೆ ತಂದ ಅಕ್ಕಿಯಲ್ಲಿ ಅಮ್ಮ ಕೈಕಡ ಕೇಳಲಿಕ್ಕೆ ಬಂದವರಿಗೆ "ನಾನೇನು ದಾನದ ಛತ್ರ ಇಟ್ಟಿದ್ದೇನಾ... ಇಲ್ಲಿ ?" ಎಂದು ಗೊಣಗುತ್ತ ಹಂಚುತ್ತಿದ್ದಳು. "ಆ ಹಾಳಾ ದವ್ರು ನಾವು ಹಸಿವಿನಿಂದ ಸಾಯಬೇಕಂತ಼್ೇ ಇಸ್ಟ್ರೈಕು ಮಾಡಿದ್ದು. ಅವರ ಮಕ್ಕಳೂ ಹೀಗೆಯೇ ಉಪವಾಸ ಬಿದ್ದು ಸಾಯಲಿ... ರಬ್ಬೇ..." ಎಂದು 'ಬದ್ದುವಾ' ಮಾಡುತ್ತಿದ್ದಳು.

ಹಾಗೂ ಹೀಗೂ ಮಳೆಗಾಲ ಮುಗಿಯಿತು. ಮಳೆಯೇನೋ ಕರುಣೆ ತೋರಿಸಿತ್ತು. ಬಿರುಗಾಳಿಯೂ ಅಷ್ಟಾಗಿ ಇರಲಿಲ್ಲ. ಬೇಸಿಗೆ ಕಾಲದಲ್ಲಿ ನೊಂದು ಬೆಂದ ಜೀವಗಳನ್ನು ಮತ್ತಷ್ಟು ಹಿಂಸಿಸಲು ಪ್ರಕೃತಿ ಹಿಂದೇಟು ಹಾಕಿತ್ತು. ಹೇಗೋ ಏನೋ ಬದುಕುಳಿದ ಜನ ಬಿದ್ದ ಗುಡಿಸಲುಗಳನ್ನು ಎತ್ತಿಕಟ್ಟಿಕೊಂಡರು. ಕಿತ್ತುಹೋದಲ್ಲೆಲ್ಲ ತೇಪೆಹಾಕಿಕೊಂಡರು. ಕಲ್ಲಿ ಕೋಟೆಯ ಸಂದಿಗೊಂದಿಗಳಲ್ಲಿ ಕಸದ ತೊಟ್ಟಿಗಳಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ಚೀಲ ಗಳು, ತಗಡುಗಳು, ಮರದ ತುಂಡುಗಳು ಕೇರಿಗೆ ಬಂದವು. ಗುಡಿಸಲ ಮಾಡು, ಗೋಡೆಗಳಾದುವು.

ಇನ್ನು ಈ ವರ್ಷ ಏನೋ ಎಂತೋ ಎಂದು ಯೋಚಿಸುತ್ತಿದ್ದಂತೆ ಜನಕ್ಕೆ ಯುವಕ ಸಂಘದ ಹುಡುಗರ ಮೇಲೆ ಸಿಟ್ಟು ಉಕ್ಕಿ ಬರುತ್ತಿತ್ತು. ಒಂದು ದಿನ ಮಧ್ಯಾಹ್ನ ಹಾಜಿಮ ನಫೀಸಳ ತಲೆಯ ಹೇನು ಹೆಕ್ಕುತ್ತ ಗುಡಿ

ಸಲ ಬಾಗಿಲಲ್ಲಿ ಕೂತಿದ್ದಾಗ ಚೆಯ್ಯುಮ್ಮ ಓಡಿ ಬಂದಿದ್ದಳು. "ಹಾಜಿಮು... ಹುಡುಗ್ರು ಈ ವರ್ಷವೂ ಮತ್ತೆ ಇಸ್ಟ್ರೈಕು ಮಾಡ್ತಾರಂತೆ. ಹಾಳಾದವ್ರು ನಮ್ಮನ್ನೇನಂತ ಎಣಿಸಿದ್ದಾರೊ?... ಎರಡು ವರ್ಷ ಈ ತರ ಮಾಡಿದ್ರೆ ಮತ್ತೆ ಅರಬಿ ಮದುವೆಯೇ ನಿಂತುಹೋಗ್ತದೆಂತ ಕೊಚ್ಚಿಕೊಳ್ತಿದ್ದಾರಂತೆ." ಅಂತ ವರ್ತಮಾನ ತಂದಳು.

"ಆ ಹಾಳಾದವ್ರು ಈ ವರ್ಷವೂ ಹಾಗೆಯೇ ಮಾಡಿದ್ರೆ ನಿಂತು ಹೋಗೋದು ನಮ್ಮೆಲ್ಲರ ಜೀವ ಅಷ್ಟೆ. ಅವ್ರೇನಂತ ಎಣಿಸಿದ್ದಾರೆ? ನಮಗೆ ಅನ್ನ ನೀರು ಸಿಗದ ಹಾಗೆ ಒಂದು ವರ್ಷ ಸಿಕ್ಸೆ ಕೊಟ್ಟಿದ್ದು ಸಾಲ್ದೂಂತ ಈ ವರ್ಷವೂ ಹಾಗೆಯೇ ಮಾಡ್ತಾರಂತೆಯಾ...? ಈ ಮರ್ಯಾದಸ್ಥ ಬೇವಾರ್ಸಿಗಳಲ್ಲಿ ಯಾರಂವ ಅರಬರ ರಕ್ತ ಇಲ್ಲದಂವಾ...?" ಅಂತ ಸಿಟ್ಟಿನಿಂದ ಹಾಜಿಮು ಕೂಗಾಡಿದ್ಲು.

ಅಚ್ಚುಮ್ಮ ಎಲ್ಲಿಂದಲೋ ಓಡಿ ಬಂದವಳು "ಹಾಜಿಮಾ... ಆ ದರಿದ್ರ ಹುಡುಗರು ಈ ವರ್ಷವೂ ಇಸ್ಟ್ರೈಕ್ ಮಾಡ್ತಾರಂತೆ. ಈಗ ಅವರ ಆಫೀಸಿನಲ್ಲಿ ಸಭೆ ಸೇರಿದ್ದಾರಂತೆ..." ಅಂದ್ಲು. ಹಾಜಿಮು ತಾನುಟ್ಟ ಮುಂಡನ್ನು ಸರಿಯಾಗಿ ಕಟ್ಟಿಕೊಂಡಳು. ಕುಪ್ಪಸವನ್ನು ಎಳೆದು ಮುಂಡು ಕಟ್ಟಿದ ಗಂಟನ್ನು ಮರೆಮಾಡಿ ತಲೆಗೆ ರುಮಾಲು ಹೊದ್ದುಕೊಂಡಳು. "ನಾವು ಸುಮ್ಮನಿದ್ರೆ ಈ ಕೊಲೆಗಾರರು ನಮ್ಮನ್ನು ಸಜೀವ 'ದಫನ್' ಮಾಡಿಬಿಡ್ತಾರೆ, ಬನ್ರೋ ನನ್ಜಿಂದೆ..." ಎಂದು ನಡೆದಳು.

ಕಣ್ಣಿಗೆ ಬಿದ್ದವರನ್ನೆಲ್ಲ "ಬನ್ರೋ ನಮ್ಮೊಂದಿಗೆ ನೋಡಾಣ ಆ ಹಾಳಾದವ್ರು ಅದೇನು ಮಾಡ್ತಾರಂತ. ಸುಮ್ನೆ ಕೂತಿದ್ರೆ ಅವ್ರು ಮತ್ತೆ ಇಸ್ಟ್ರೈಕ್ ಮಾಡ್ತಾರೆ. ನಾವು ಅನ್ನ ನೀರಿಲ್ಲದೆ ಸಾಯ್ಬೇಕು. ಹೇಗೂ ಸಾಯ್ಬೇಕು. ಇವರನ್ನ ಒಂದು ಕೈ ನೋಡಿಯೇ ಸಾಯೋಣ... ಬನ್ರೋ..." ಎಂದು ಕರೆದಳು. ಇಡೀ ಕೇರಿಯವರೆಲ್ಲರಿಗೂ ಕೇಳುವ ಹಾಗೆ ಹೆಸರು ಹಿಡಿದು ಕರೆದಳು. ಹಾಜಿಮುಳ ಜೊತೆಗೆ ಚೆಯ್ಯುಮ್ಮ ಅಚ್ಚುಮ್ಮ ಹೊರಟರು. ಅವರ ಹಿಂದೆ ಕೇರಿಯ ಹೆಂಗಸರು ತಮ್ಮ ಚಳ್ಳೆ ಪಿಳ್ಳೆಗಳನ್ನೆಲ್ಲ ಕಟ್ಟಿಕೊಂಡು ಹೋದರು. ಕೆಲವರ ತೆಕ್ಕೆಯಲ್ಲಿ ಸಿಂಬಳ ಸುರಿಸುತ್ತಿರುವ ನಗ್ನ ಮಕ್ಕಳು ತಲೆಕೆದರಿಕೊಂಡ ಭಿಕಾರಿಗಳ ದಂಡು ಕಟ್ಟಿಚಿರಾದ ಪೇಟೆಯೊಳಗೆ ನುಗ್ಗಿದಂತೆ ಜನ ಅವಾಕ್ಕಾಗಿ ನೋಡುತ್ತಾ ನಿಂತರು.

ದಂಡು ನೇರವಾಗಿ ಯುವಕ ಸಂಘದ ಮೀಟಿಂಗು ನಡೆಯುವ ಸ್ಥಳಕ್ಕೆ ಹೋದಾಗ ಅವರ ಪ್ರೆಸಿಡೆಂಟ್ ನಜೀರ್ ಅಹ್ಮದ್ ಭಾಷಣ ಕೊಡೂದರಲ್ಲಿ

ತಲ್ಲೀನನಾಗಿದ್ದ. ಹೆಂಗಸರು, ಮಕ್ಕಳು ದಂಡು ಅಲ್ಲಿ ಸೇರಿದ ಕೂಡಲೆ ಗಿಜಿಗಿಜಿ ಗಲಾಟೆ ಶುರುವಾಯಿತು. ಮೀಟಿಂಗು ಸೇರಿದ ಯುವಕರೆಲ್ಲ ಹೊರಗೆ ಇದೇನಪ್ಪಾಂತ ನೋಡುತ್ತಿರುವಾಗಲೇ ಹಾಜಿಮ ಒಳಗೆ ಹೋಗಿ "ಯಾವೋನವ್ನು ನಮ್ಮ ಹೊಟ್ಟೆಗೆ ಹೊಡ್ದು ನಮ್ಮನ್ನೆಲ್ಲ ಅನ್ನ ನೀರಿಲ್ಲದೆ ಕೊಲ್ಲಬೇಕಂತ ಹೊರಟಿರೋ ಕೊಲೆಗಾರ...?" ಅಂತ ಕೇಳಿ ನೇರ ಕಾಳಗಕ್ಕೆ ಇಳಿದಳು. ಇದೇನಂತ ಹುಡುಗರು ಆಶ್ಚರ್ಯಪಡುತ್ತಿದ್ದಂತೆ ಹೆಂಗಸರ ದಂಡು ಒಳಗೆ ನುಗ್ಗಿ ಅವರನ್ನು ಸುತ್ತುಗಟ್ಟಿದ್ದರು. ಚಳ್ಳೆ ಪಿಳ್ಳೆಗಳೆಲ್ಲ ಒಳಗೆ ಬಂದು ಅತ್ತಿತ್ತ ಓಡಾಡತೊಡಗಿದವು.

ಪ್ರೆಸಿಡೆಂಟು ನಜೀರ್ ದಂಗಾಗಿದ್ದ. ಅಲ್ಲೇ ಇದ್ದ ಕಾರ್ಯದರ್ಶಿ ಷರೀಫ್ "ಹಾಗಲ್ಲಮ್ಮಾ... ನಿಮ್ಮೆಲ್ಲರ ಒಳಿತಿಗಾಗಿಯೇ ನಾವು ಹೋರಾಡ್ತಾ ಇರೋದು... ಅರಬಿಗಳು ನಿಮ್ಮನ್ನು ಮದುವೆಯಾಗೋ ರೀತಿ ತಪ್ಪು. ದೊಡ್ಡ ಖಾಜಿಯವ್ರು ಆಗ್ಲೇ ಹೇಳಿದ್ದಾರೆ ಈ ತರದ ನಿಕಾಹ್ ಸರಿಯಲ್ಲಾಂತ. ಇಲ್ಲಿನ ಹುಡುಗಿಯರನ್ನು ಅರಬಿಗಳು ಮದುವೆಯಾಗುವಾಗ ಅವರ ದೇಶದಲ್ಲಿರುವ ಕಾನೂನಿನಂತೆ ನಡೆದುಕೊಳ್ಳಬೇಕು. ಷರೀಯತ್ ಹೇಳಿದಂತೆ ಮಹರ್ ಕೊಟ್ಟು ಮಕ್ಕಳ ಜವಾಬ್ದಾರಿಯನ್ನು ಅವರು ವಹಿಸಿಕೊಳ್ಬೇಕು" ಎಂದ.

"ನೀನು ಬಹಳ ಚಂದ ಮಾತಾಡ್ತೀಯಾ ಹುಡುಗ. ನಿನ್ ಗಿಲೀಟು ಮಾತಲ್ಲ ನಮ್ಗೆ ಬೇಕಾದ್ದು. ನಂಗೆ ಬೇಕಾದ್ದು ಹೊಟ್ಟೆಗೆ ಅನ್ನ" ಎಂದಳು ಅಚ್ಚಮ್ಮ, ಮತ್ತೆ ಅವನು ಸಮಾಜಾಯಿಸಿ ಮಾಡಲಿಕ್ಕೆ ಬಂದಾಗ ಚೆಯ್ಯುಮ್ಮ ಅವನ ಮಾತನ್ನು ಅರ್ಧದಲ್ಲೇ ತಡೆದು, "ಅರಬಿಗಳು ಮದ್ವೆಯಾಗೋದು ನಮ್ಮನ್ನು, ನಿನ್ನೆಂಡ್ತಿಯನ್ನು ಮದ್ವೆಯಾಗೋದಿಕ್ಕೆ ಬರ್ಲಿಲ್ವಲ್ಲಾ ಹಾಳಾದೋನೇ...?" ಅಂತ ರೋಪು ಹಾಕಿದ್ಳು. ತನ್ನ ವಿರೋಧಿಗೆ ತಕ್ಕ ಶಾಸ್ತಿಯಾಯ್ತುಂತ ಇಸ್ಮಾಲಿ ತೊಡೆ ಕುಣಿಸಿ ನಕ್ಕ. ಅದನ್ನು ಕಂಡ ಷರೀಫನ ಗೆಳೆಯ ಅದ್ರಾಮ ಕೋಪದಿಂದ ಎದ್ದುನಿಂತು ಮುಷ್ಟಿ ಬಿಗಿ ಹಿಡಿದು ಚೆಯ್ಯುಮ್ಮಳ ಕಡೆ ತೋರಿಸುತ್ತ "ತಪ್ಪಿ ಮಾತಾಡಿದ್ರೆ ಹಲ್ಲುದುರಿಸಿಯೇನು ಜಾಗ್ರತೆ...!" ಎಂದ. ಹಾಜಿಮ ಚೆಯ್ಯುಮ್ಮಳನ್ನು ಬದಿಗೆ ತಳ್ಳಿ ತಾನು ಅದ್ರಾಮನ ಮುಂದೆ ನಿಂತು. "ಏ... ಹಲ್ಲುದುರಿಸೋ ನನ್ಮಗನೇ... ಅರಬಿಗಳನ್ನು ಮದುವೆಯಾಗೋದನ್ನ ನಾವು ನಿಲ್ಲಿಸ್ತೇವೆ. ನಮಗೆ ದಿನಾ ಅನ್ನ ಹಾಕ್ತೀಯಾ ನೀನು ? ನನ್ನ ಮಗಳನ್ನು ಮದುವೆಯಾಗ್ತಿಯಾ...?" ಅಂತ ಕೇಳಿದಾಗ ಚಳವಳಿಯ ಸೊಕ್ಕೇರಿದ ಹುಡುಗರು ಕಕ್ಕಾಬಿಕ್ಕಿಯಾದರು.

ಇಷ್ಟೆಲ್ಲಾ ಆಗುವಾಗ್ಲೂ ಪೆಚ್ಚಾಗಿ ನಿಂತಿದ್ದ ಪ್ರೆಸಿಡೆಂಟ್ ನಜೀರ್ ಇದ್ದ

ಬದ್ದ ಧೈರ್ಯವನ್ನೆಲ್ಲ ಕೂಡಿಸಿ "ನೋಡಿ ನಾವು ಈ ರೀತಿ ಮಾತಾಡಿ ಏನೂ ಪ್ರಯೋಜ್ನ ಇಲ್ಲ... ಶಾಂತರಾಗಿರಿ... ಇಲ್ಲೇ ಕೂತು ಮಾತಾಡೋಣ ನಿಮ್ದೇನು ಮಾತುಂಟೋ... ಹೇಳಿ... ನಮ್ಮ ಮಾತನ್ನು ಕೇಳಿ..." ಎಂದು ವಿನಂತಿಸಿದ.

"ಎಲ್ರೂ... ಕೂರ್ರೋ... ನೋಡೋಣ ಹತ್ತು ಮಂದಿ ಸೇರಿರೋ ಜಮಾತ್... ಪಂಚಾತ್ಗೆ ಏನು ಮಾಡ್ತಾರೋ ಮಾಡ್ಲಿ. ನ್ಯಾಯ ಆಗ್ಲಿ..." ಅಂತ ಹಾಜಿಮ ತನ್ನ ದಂಡಿಗೆ ಆರ್ಡರು ಕೊಟ್ಲು. ಎಲ್ಲರೂ ಅಲ್ಲಲ್ಲಿ ಜಾಗ ಮಾಡಿಕೊಂಡು ನೆಲದ ಮೇಲೆ ಕೂತರು.

ತಣ್ಣಗಿನ ಸಿಮೆಂಟು ನೆಲ ಕುಂಡೆಗೆ ಸೋಕಿದಂತೆ ನಗ್ನ ಮಕ್ಕಳು ಸಂತಸ ದಿಂದ ಕಣಿದು ಕುಪ್ಪಳಿಸಿದವು. ಅಲ್ಲಿ ಇಲ್ಲಿ ಉಗುಳಿ ಮೇಲೆ ಬೆರಳಾಡಿಸಿ ಗೆರೆಗಳನ್ನೆಳೆದುವು. ಸಣ್ಣವು ಕೆಲವು ಉಚ್ಚೆಹೊಯ್ದು ತಮ್ಮ ಮನೆಯಲ್ಲಿಯ ಹಾಗೆ ಇಂಗಿಹೋಗದೆ ಹರಿಯುವುದ ಕಂಡು ಪಚ ಪಚ ಕಾಲಿನಿಂದ ತುಳಿದು ಆಟವಾಡತೊಡಗಿದುವು. ದೊಡ್ಡವು ಕೆಲವು ಗೋಡೆಯಲ್ಲಿ ನೇತಾಡುತ್ತಿರುವ ಕ್ಯಾಲೆಂಡರುಗಳನ್ನು ನೋಡುತ್ತ ನಿಂತವು.

ನಜೀರ್ ತನ್ನ ಭಾಷಣವನ್ನು ಮತ್ತೆ ಶುರು ಮಾಡಿದ "ನೋಡಿ...ನೀವು ಅರಬರನ್ನು ಮದುವೆಯಾದ್ರೆ ನಿಮ್ಮನ್ನು ಓರ್ವ ಗಂಡ ತನ್ನ ಹೆಂಡತಿಯನ್ನು ನೋಡ್ಕೊಳ್ಳೋ ರೀತಿ ನೋಡ್ಕೊಳ್ಳೋದಿಲ್ಲ. ನಿಮ್ಮ ಮಕ್ಕಳನ್ನು ತಮ್ಮ ಸಂತಾನಗಳೆಂದು ಜವಾಬ್ದಾರಿ ತಕ್ಕೊಳ್ಳೋದಿಲ್ಲ. ಖರ್ಚಿಗೆ ಕೂಡ ಸರಿಯಾಗಿ ಕೊಡೋದಿಲ್ಲ. ನಾವೀಗ ಹೋರಾಡ್ತಿರೋದು ಅವರು ನಿಮ್ಮನ್ನು ಮದುವೆ ಆಗ್ಬಾರ್ದಂತ ಅಲ್ಲ, ನಿಮ್ಮನ್ನು ಧಾರ್ಮಿಕ ನಿಯಮಕ್ಕೆ ಅಂದರೆ 'ಶರೀಯತ್ತಿ'ಗೆ ಸರಿಯಾಗಿ ಮದುವೆಯಾಗ್ಬೇಕು ಅಂತ. ಖಾಜಿ ಸಾಹೇಬರು ಕರಾರು ಹಾಕಿದ ಹಾಗೆ ಮದುವೆ ನಡೆಯಬೇಕಂತ ನಾವು ಹೇಳೋದು..." ಎನ್ನುತ್ತಾ ಕೊರೆಯತೊಡಗಿದಾಗ ಗುಡಿಸಲ ಹೆಂಗಸರು ತಮ್ಮೊಳಗೆ ಗುಸು ಗುಸು ಮಾತಾಡತೊಡಗಿದರು. ಸಹನೆ ಮೀರಿದ ಹಾಜಿಮ ಗುಂಪಿನಲ್ಲಿ ಎದ್ದು ನಿಂತಳು. ಸೊಂಟದ ಮೇಲೊಂದು ಕೈಯಿಟ್ಟುಕೊಂಡು ಇನ್ನೊಂದು ಕೈ ಹಾರಿಸುತ್ತ ಮಾತಾಡತೊಡಗಿದಳು.

"ನಾನು ನಿಮ್ಹಾಗೆ ಓದು ಬರಹ ಕಲ್ತವಳಲ್ಲ. ಆದ್ರೂ ಏನೂ ತಿಳೀದ ಮುಂಡೆ ಮಾತಂತ ತಿಳ್ಕೋ ಬೇಡಿ. ಬದುಕಿನಲ್ಲಿ ಬೆಂದು ಮುಂದ್ದೆಯಾದವ್ರು ನಾವು. ನಮ್ಗೆ ನಿಮ್ಹಾಗೆ ಗಿಲೀಟು ಮಾತಾಡ್ಲಿಕ್ಕೆ ಬರೂದಿಲ್ಲ. ನಿಮ್ಮ ಗಿಲೀಟು ಅರ್ಥ ಆಗೂದು ಇಲ್ಲ. ನಾನು, ನಮ್ಮಮ್ಮ, ನಮ್ಮಜ್ಜಿ ಎಲ್ಲ

ಹುಟ್ಟಿದ್ದೂ ಅರಬರಿಗೇ. ನಾವು ಬೇಕಿದ್ರೆ ನೀವು ಹೇಳಿದ ಹಾಗೆ ಅರಬರನ್ನ ಮದ್ವೆ ಆಗೂದು ಬಿಟ್ಟುಬಿಡ್ತೇವೆ. ಆದ್ರೆ ನಮ್ ಹೊಟ್ಟೆ ಹಸೀತದಲ್ಲಾ ? ಅದನ್ನ ತಣಿಸೋದಕ್ಕೆ ಯಾವ ದಾರಿಯುಂಟು ಹೇಳಿ...? ನಮ್ಮ ಮನೇಲಿ ಹೆಣ್ಣು ಮಕ್ಕಳಿದ್ದಾವಲ್ಲಾ... ಅವ್ರನ್ನ ನಿಮ್ಮಂಥ ಮರ್ಯಾದಸ್ಥರು ಸೇರ್ಕೊಂಡು ಹಾದರಕ್ಹುಟ್ಟಿದೋರಂತ ದೂರ ಮಾಡ್ತೀರಲ್ಲಾ ! ನೋಡೋಣ ನಮ್ಮ ಹೆಣ್ಣುಮಕ್ಕಳನ್ನ ನಿಮ್ಮಲ್ಲಿ ಯಾರೆಲ್ಲ ಮದುವೆಯಾಗ್ಲಿಕ್ಕೆ ತಯಾರಾಗಿದ್ದೀರಿ... ಹೇಳಿ...? ನಮ್ಮ ಈ ಪ್ರಶ್ನೆಗೆ ಉತ್ತರ ಕೊಡಿ. ಇಲ್ವಾದ್ರೆ ಕುಂಡೆಗೊಂದು ಕೈ, ಬಾಯಿಗೊಂದು ಕೈ ಇಟ್ಕೊಂಡು ದೂರ ಹೋಗಿ. ನಮ್‌ಸುದ್ದಿಗೆ ಬರ್ಬೇಡಿ. ನೀವು ಈ ಸಲಾನೂ ನಿಮ್ಮ ಇಸ್ಟ್ರೈಕ್ ಎಲ್ಲಾ ಸುರು ಮಾಡಿದ್ರೆ ನಿಮ್ಮ ಮನೇ ಮುಂದೆ ನಾವೆಲ್ಲ ಬಂದು ಉಪವಾಸ ಕೂತು ಸಾಯ್ತೀವಿ... ಇದು ಖಂಡಿತಾ..." ಅಂತ ಹೇಳಿದ್ಲು. ಅವಳ ಮಾತು ಕೇಳುತ್ತಿದ್ದ ಹುಡುಗರು ತೆಪ್ಪಗೆ ಕೂತಿದ್ರು.

"ಬರ್ರೋ ಹೋಗೋಣ... ಇನ್ಮುಂದೆ ನಮ್ಮ ಸುದ್ದಿಗೇನಾದ್ರೂ ಬಂದ್ರೂಂತಾದ್ರೆ ಅವರ ಮನೆ ಮುಂದೆ ಹೋಗಿ ಪಿರಾಣ ಕಳ್ಕೊಳ್ಳೋಣ..." ಅಂತ ದಾಪುಗಾಲು ಹಾಕುತ್ತ ನಡೆದಳು. ಅವಳ ಹಿಂದೆ ಬಂದ ದಂಡು ಕೂಡ ಅವಳನ್ನು ಹಿಂಬಾಲಿಸಿತು.

ಈ ಘಟನೆಯಿಂದ ಕಕ್ಕಾಬಿಕ್ಕಿಯಾದ ಯುವಕರು ಮತ್ತೆ ಘೋಷಣೆಗಳನ್ನು ಕೂಗಿಕೊಂಡು ಬರಲಿಲ್ಲ. ಚಳವಳಿ ಬಿದ್ದು ಹೋಯಿತು. ಅರಬರ ವಿವಾಹ ವ್ಯವಹಾರಗಳು ಮತ್ತೆ ಕುದುರತೊಡಗಿದವು. ದಲ್ಲಾಳಿಗಳು ಮತ್ತೆ ಚಿಗುರತೊಡಗಿದರು.

## ಒಡೆದ ಕನಸು

ನಫೀಸಾಳಿಗೆ ತನ್ನ ಅಣ್ಣ ಮಮ್ಮುಟ್ಟಿ ಏನೋ ಮುಖ್ಯವಾದ ವಿಷಯ ಮಾತಾಡಲಿಕ್ಕಾಗಿ ಬಂದಿರಬೇಕೆಂಬ ಅನುಮಾನವಾಗಿತ್ತು. ಏಕೋ ಮಂಕಾಗಿದ್ದಾನೆ. ಕೆಲವು ದಿನಗಳ ಹಿಂದೆ ಬಂದವನು ಅದ್ಯಾವುದೋ ಒಬ್ಬ ಹುಡುಗನನ್ನು ನೋಡಿದ್ದೇನೆ. ಪ್ರಯತ್ನ ಮಾಡಬೇಕು ಅಂತಿದ್ದ. ಅದರ ಬಗ್ಗೆ ಏನಾದರೂ ಹೇಳಲಿಕ್ಕೆ ಬಂದಿದ್ದಾನೇನೋ ಎಂದು ಅತ್ತಲೇ ಲಕ್ಷ್ಯಗೊಟ್ಟು ಕೂತಿದ್ದಳು.

ಮದುವೆಯ ವಿಷಯ ಯೋಚನೆಗೆ ತೊಡಗಿದಾಗ ಮತ್ತೆ ಸಲೀಮ ಮೂಡಿಬಂದು ನಫೀಸಳ ಚಿತ್ತವನ್ನು ಅಸ್ತವ್ಯಸ್ತಗೊಳಿಸುತ್ತಿದ್ದ. ಮತ್ತೆ ಮೈನವಿರೇಳುವ ಸಂತಸದ ಕ್ಷಣಗಳು ನೆನಪಾಗುತ್ತವೆ. ತಿಂಗಳ ಹೊಂಬೆಳಕಿನಲ್ಲಿ ತಾನು ಅವನ ಹಿಂದೆ ನಡೆದದ್ದು, ಅವನ ಮಾತುಗಳು ಮರುಕಳಿಸಿ ಸಂತಸದ ಅಲೆಗಳು ಪುಟಿದೇಳುತ್ತವೆ. ಅವನನ್ನು ಮರೆಯಲು ಅದೆಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲೇ ಇಲ್ಲ. ಅವನೊಂದಿಗೆ ತನ್ನ ಮದುವೆಯಾಗೋ ಸಾಧ್ಯತೆ ಇದ್ದಿದ್ದರೆ! ಅಬ್ಬಾ...! ಇದು ಎಣಿಸಲೂ ಸಾಧ್ಯವೇ! ಇಂಥಾ ಹೊಸ ಗಾಳಿಯೊಂದು ತಮ್ಮ ಗುಡಿಸಲಂಗೇರಿಯೊಳಗೆ ಬೀಸಿ ಬರಲು ಸಾಧ್ಯವೇ...? ತಿಂಗಳ ಬೆಳಕಿನಲ್ಲಿ ಕಂಡ ಸಮುದ್ರದ ತೆರೆಗಳು ಕಣ್ಣ ಮುಂದೆ ಮೂಡಿ ಬಂದವು. ತೆರೆಗಳ ಜೊತೆ ಚೆನ್ನಾಟವಾಡಲು ಬೆಳ್ಳಕ್ಕಿಗಳು ಬಂದಿದ್ದವು... ತೆರೆಗಳ ರಭಸಕ್ಕಂಜಿ ಪುರ್ರನೆ ಪುಟಿದೆದ್ದು ಗಗನದತ್ತ ಹಾರಿದವು.

ತನ್ನ ಬಗ್ಗೆ ಸಲೀಮನಾದರೂ ಏನು ಯೋಚಿಸುತ್ತಿರಬಹುದು? ಕೇವಲ ಮನೆಕೆಲಸದ ಹುಡುಗಿ. ಬೇಕಾದ ಹಾಗೆ ಉಪಯೋಗಿಸಿ ಬೇಡಾದಾಗ ಕಿತ್ತೆಸೆಯಬಹುದೆಂದುಕೊಂಡಿದ್ದನೋ...? ಇಲ್ಲ ಸಲೀಮ ಅಂತ ಕಠಿಣ ಮನಸ್ಸಿನವನಲ್ಲ... ಮೃದು ಸ್ವಭಾವದವ. ಹಾಗೆ ಎಣಿಸಿದರೆ ಅವನು ತನ್ನ

ಕೈ ಹಿಡಿದೆಳೆದು ಸಮುದ್ರ ತೀರಕ್ಕೆ ಯಾಕೆ ಕರೆದುಕೊಂಡು ಹೋಗಬೇಕು. ಅಲ್ಲಿ ಅವನು ಸಭ್ಯನಾಗಿ ವರ್ತಿಸಲಿಲ್ಲವೇ? ಅವನೊಂದಿಗೆ ಹೋದಾಗ ತಾನೆಷ್ಟು ಸುಖಪಟ್ಟಿದ್ದೆ... ದಿನವೂ ನೋಡುತ್ತಿದ್ದ ಸಮುದ್ರವೇ ಆದರೂ ಅಂದು ಎಲ್ಲ ಹೊಚ್ಚ ಹೊಸತನವನ್ನು ನೋಡಿದಂತಾಗಿ ವಿಚಿತ್ರವಾದ ಲೋಕಕ್ಕೆ ತನ್ನನ್ನು ಒಯ್ದಿತ್ತು ಎಂದುಕೊಂಡಳು ನಫೀಸ.

ಅಮ್ಮ ಒಮ್ಮೊಮ್ಮೆ ಹೇಳುತ್ತಿರುತ್ತಾಳೆ... 'ಈ ಶ್ರೀಮಂತರಿಗೆ ನಾವೆಲ್ಲ ಓಟೆ ಗೊರಟಿನ ಹಾಗೆ... ಮಾವಿನ ಹಣ್ಣು ತಿಂದು ಓಟೆ ಗೊರಟನ್ನು ಬಿಸಾಡು ವುದಿಲ್ವಾ... ಹಾಗೆಯೇ...' ಇದು ಅವಳ ಬದುಕಿನ ಅನುಭವದ ಮಾತಿರ ಬೇಕು. ತನ್ನನ್ನು ಕೆಲಸದಿಂದ ತೆಗೆದುಹಾಕಿದ್ದು ಸಲೀಮನಿಗೆ ಈಗ ಗೊತ್ತಿ ಲ್ಲದ ವಿಷಯ ಖಂಡಿತಾ ಅಲ್ಲ. 'ಅವಳನ್ನು ಯಾಕೆ ಕೆಲಸದಿಂದ ತೆಗೆದಿರಿ?' ಅಂತ ತಾಯಿಯನ್ನು ಕೇಳುವಷ್ಟಾದರೂ ಅವನ ಬದುಕಿಗೆ ಅವಶ್ಯಕವೆನಿಸಿದ್ದರೆ! ತನ್ನನ್ನು ಖಂಡಿತವಾಗಿಯೂ ಷರೀಫಮ್ಮ ಮತ್ತೆ ಕರೆಸುತ್ತಿದ್ದರು. ಅವನ ಇಷ್ಟದ ವಿರುದ್ಧ ಮನೆಯಲ್ಲಿ ಯಾರೂ ಹೋಗುವವರಿಲ್ಲ ಎನ್ನುವುದು ನಫೀಸ ಳಿಗೆ ತಿಳಿದಿತ್ತು. ಸಲೀಮನಿಗೂ ತಾನೊಂದು ಓಟೆ ಗೊರಟಿನ ಹಾಗೆ ಕಂಡಿರ ಬಹುದೇ? ಎಂದು ಯೋಚಿಸುತ್ತ ಹೋದಹಾಗೆ ತಾನೇಕೆ ಹೀಗೆ ಹುಚ್ಚು ಹುಚ್ಚಾಗಿ ಆಲೋಚಿಸುತ್ತಿದ್ದೇನೆ? ಅವನಿಗೂ ನನಗೂ ಇಷ್ಟು ವ್ಯತ್ಯಾಸ, ಅಂತರಗಳಿರುವಾಗ ತನ್ನ ಕನಸುಗಳೆಲ್ಲ ಬರೀ ಕನಸು ಎಂದುಕೊಂಡು ನಫೀಸ ಅವನನ್ನು ಮರೆಯುವ ಪ್ರಯತ್ನ ಮಾಡುತ್ತಿದ್ದಳು.

ಅಣ್ಣ ಯಾಕೋ ಹಿಂದಿನಂತೆ ಇಲ್ಲ, ಪೆಚ್ಚಾಗಿ ಕುಳಿತಿದ್ದಾನೆ. ಅವನ ಸುತ್ತ ಬೀಡಿಯ ಕೊನೆಯ ತುಂಡುಗಳು ಬಿದ್ದಿದ್ದವು. ಅವನು ಬೀಡಿ ಹೊತ್ತಿ ಸುತ್ತ ಇರುವಾಗ ಒಳಗಿನಿಂದ ಅವನೂ ಉರಿಯುತ್ತಿದ್ದಾನೇನೋ ಅಂತ ನಫೀ ಸಳಿಗೆ ಅನ್ನಿಸಿತ್ತು.

ಬಹಳ ಹೊತ್ತಿನಿಂದ ಮಾತಾಡದೆ ಕೂತಿದ್ದ ಅಣ್ಣನನ್ನು ಅಮ್ಮನೇ ಮಾತಿಗೆಳೆದಳು. "ಹೌದಾ ಮಮ್ಮುಟ್ಟಿ... ಅದ್ಯಾರೋ ಒಬ್ಬ ಹುಡುಗ ನನ್ನು ನಫೀಸಾಳಿಗೆ ನೋಡಿದ್ದೇನಂತ ಹೇಳಿದ್ದಿಯಲ್ಲಾ ಅದೇನಾಯ್ತೋ...?" ಎಂದು ಕೇಳಿ ಅವನ ಉತ್ತರಕ್ಕಾಗಿ ಕಾದಳು. ನಫೀಸಳೂ ಅಣ್ಣನ ಮಾತು ಗಳನ್ನು ಕೇಳಲು ಕಿವಿ ನಿಮಿರಿಸಿಕೊಂಡು ಕೂತಳು.

ಮಮ್ಮುಟ್ಟಿ ಬೀಡಿಯೊಂದನ್ನು ನಿಧಾನವಾಗಿ ಎಳೆದು ಹೊಗೆ ಬಿಡುತ್ತಾ "ಅದು ಕೈತಪ್ಪಿ ಹೋಯ್ತುಮ್ಮಾ..." ಎಂದ. ಬಹಳ ದಿನದಿಂದ ಕಟ್ಟಿದ ಕನ ಸಿನ ಗೋಪುರ ಅವನಾಡಿದ ಕೆಲವೇ ಶಬ್ದಗಳಿಂದ ನುಚ್ಚುನೂರಾಗಿ ಬಿತ್ತು.

ಅಮ್ಮ ಥಟ್ಟನೆ ಹೇಳಿದ್ಲು, "ನೀನು ಹೀಗೆ ಹೇಳ್ತಿ ಅಂತ ನನಗೆ ಗೊತ್ತು. ಒಂದು ವೇಳೆ ನೀನಿದಕ್ಕೆ ಪ್ರಯತ್ನಪಟ್ಟರೂ ನಿನ್ನ ಮಹಾರಾಣಿ ಬಿಡ ಬೇಕಲ್ಲ...?"

ಅಮ್ಮನ ಮಾತಿಗೆ ಅಣ್ಣ ಸಿಟ್ಟಾಗಿ, "ಅಮ್ಮ, ಪ್ರತೀ ಮಾತಿಗೂ ನೀನು ನನ್ನ ಹೆಂಡ್ತಿಯನ್ನು ಅನ್ನೂದು ಬಿಟ್ಟಿಲ್ಲ. ನಮ್ಮ ಕೇರಿಯ ಹೆಣ್ಣುಮಕ್ಕಳನ್ನು ಯಾರು ಮದುವೆಯಾಗ್ತಾರೆ ಹೇಳು? ಒಂದು ವೇಳೆ ಅಪ್ಪಿತಪ್ಪಿ ಯಾರಾದ್ರೂ ಮುಂದೆ ಬಂದ್ರೂ ಈಗಿನ ಕಾಲದಲ್ಲಿ ಹತ್ತು ಪವನು ಚಿನ್ನ, ಹತ್ತು ಹದಿನೈದು ಸಾವಿರ ವರದಕ್ಷಿಣೆ ಇಲ್ಲದೆ ನನ್ನಂತಹ ಮೀನು ವ್ಯಾಪಾರಿ ಕೂಡ ಒಪ್ಪೂದಿಲ್ಲ, ಅದ್ರಮೇಲೆ ನಾವು ಕೋಯ ಮನೆತನದವರಲ್ವಾ? ಒಂದು ಕೋಣೆ ಆಗ್ಬೇ ಕಲ್ಲಾ... ಇದೆಲ್ಲಾ ನಮ್ಮಿಂದ ಸಾಧ್ಯವಾ ಹೇಳು?" ಅಂದ. ಅಮ್ಮ ತೆಪ್ಪ ಗಾಗಿ ಬಿಟ್ಟಳು.

ಅಣ್ಣ ಹೇಳಿದ ಹಾಗೆ ಮದುವೆಯಲ್ಲಿನ ಈ ತರದ ತೊಂದರೆಗಳ ಬಗ್ಗೆ ನಾವು ಯಾರೂ ಯೋಚಿಸಲೇ ಇಲ್ಲ. ಯಾಕೆಂದರೆ ಈ ಕೇರಿಯ ಹೆಮ್ಮಕ್ಕಳು ದೊಡ್ಡವರಾದ ಕೂಡಲೇ ಯಾವನಾದರೊಬ್ಬ ಅರಬನಿಗೆ ನಿಕಾಹ್ ಮಾಡಿ ಕೊಡುವ ಆಲೋಚನೆಯಷ್ಟೇ ಮಾಡುವುದು.

ಅಮ್ಮ ಏನನ್ನೋ ಯೋಚಿಸುತ್ತಿದ್ದವಳು ಒಮ್ಮೆಲೇ ದೃಢನಿರ್ಧಾರ ಮಾಡಿದವಳಂತೆ, "ಅದ್ಯಾಕೆ ಮಮ್ಮುಟ್ಟಿ ನೀನಷ್ಟು ತಲೆಕೆಡಿಸ್ಕೋಬೇಕು? ಹ್ಯಾಗೂ ನಾವಿದರಿಂದ ಪಾರಾಗುವುದು ಸಾಧ್ಯವಿಲ್ಲದಿರುವಾಗ ಯೋಚಿಸಿ ಪ್ರಯೋಜನವೇನು? ಈ ಸಲ ನಫೀಸಳಿಗೂ ಯಾವಾನಾದ್ರೂ ಅರಬನನ್ನು ಹುಡ್ಕೋದು ಒಳ್ಳೇದು..." ಅಂದ್ಲು.

ಅಮ್ಮನ ಮಾತಿನಲ್ಲಿ ಅಡಗಿದ ನೋವು ನಫೀಸಾಳನ್ನು ತಟ್ಟಿತು. ತನ್ನ ಮುಂದಿನ ಬದುಕಿನ ಬಗ್ಗೆ ಯೋಚಿಸುತ್ತಾ ಹೋದಂತೆ ನಫೀಸಾಳ ತಲೆ ಸುತ್ತಿ ಬಂದಂತಾಗಿ ಕೂತಲ್ಲೇ ಕುಬಕ್ಕೊರಗಿದಳು.

ಮಮ್ಮುಟ್ಟಿ ತಲೆಯೆತ್ತಿದವ "ನಾನೂ ಬಂದದ್ದು ಅದೇ ವಿಷಯ ಹೇಳ್ಲಿಕ್ಕೆ. ಹ್ಯಾಗೆ ಹೇಳ್ಲೀಂತ ಯೋಚಿಸುತ್ತಿದ್ದೆ..." ಅಂದ. ಅಮ್ಮ ಮೌನ ವಾಗಿದ್ದಳು. ಮಮ್ಮುಟ್ಟಿ ಮುಂದುವರಿಸಿದ, "ಅಮ್ಮ... ನೀನು ಹೇಳಿ ದಂತೆ ನಾವು ಈ ಅನಿಷ್ಟದಿಂದ ಪಾರಾಗೂದೂ ಸಾಧ್ಯವಿಲ್ಲ. ಈ ತೀರ್ಮಾ ನಕ್ಕೆ ಬಂದೇ ನಾನಿಲ್ಲಿಗೆ ಬಂದದ್ದು. ನಿನ್ನೆ ನಾನು ಮೀನು ಮಾರ್ತಾ ಹೋಗು ವಾಗ ದಾರಿಯಲ್ಲಿ ಅಚ್ಚುಕೋಯ ಸಿಕ್ಕಿದ್ರು, ನಿನ್ನ ತಂಗಿಗೊಬ್ಬ ಒಳ್ಳೆಯ ಅರಬ ಇದ್ದಾನೆ. ಈ ಸಲ ಮದುವೆ ಮಾಡೋಣವಾ ಅಂತ ಕೇಳಿದ.

ನಾನದಕ್ಕೆ ಅಮ್ಮನಿಗೆ ಹೇಳ್ತೀನೆ, ಅವಳೊಪ್ಪಿಗೆ ಕೊಟ್ರೆ ನೋಡೋಣ... ಎಂದಿದ್ದೇನೆ. ನಿನ್ನ ಅಭಿಪ್ರಾಯ ಕೇಳ್ಲಿಕ್ಕೇಂತ್ಲೆ ನಾನೀಗ ಬಂದದ್ದು..." ಎಂದ.

ಮಮ್ಮೂಟ್ಟಿಯ ಮಾತು ಮುಗಿಯುವುದಕ್ಕೆ ಮುಂಚೆಯೇ ಜುಲೇಖ ತನ್ನ ಅರಬ ಗಂಡನ ಜೊತೆಗೆ ರಾತ್ರಿ ತಂಗಿದ್ದವಳು ಮನೆಗೆ ಬಂದಿದ್ದಳು. ಅವಳು ಒಳಗೆ ಬಂದಂತೆ ಅವಳ ಮಕ್ಕಳಿರಡು ಅವಳಿಗೆ ತೆಕ್ಕೆ ಬಿದ್ದವು. ಕೈಯಲ್ಲಿ ಪೊಟ್ಟಣ ಕಟ್ಟಿಸಿಕೊಂಡು ಬಂದ 'ನೆಯ್ಯಪ್ಪ'ಗಳನ್ನು ಅವುಗಳ ಕೈಗಿತ್ತು ಒಂದೆರಡನ್ನು ಹಫ್ಸಾಳ ಮಕ್ಕಳಿಗೂ ಹಂಚಿದಳು. ಮಕ್ಕಳು ನೆಯ್ಯಪ್ಪದ ಚೂರುಗಳನ್ನು ಬಾಯಿಯಲ್ಲಿ ತುಂಬಿಕೊಂಡು ಖುಷಿಯಾಗಿದ್ದವು. ಮಮ್ಮೂಟ್ಟಿಯ ಮಾತುಗಳನ್ನು ಆಗಲೇ ಕೇಳಿಕೊಂಡಿದ್ದ ಜುಲೇಖ ಗಂಭೀರಳಾಗಿದ್ದಳು. ಜ್ವರದಿಂದ ನರಳುತ್ತಿದ್ದ ತನ್ನ ಮಗುವಿನ ಹಣೆ ಮುಟ್ಟಿ ನೋಡಿದಳು. ನಫೀಸಾಳತ್ತ ನೋಡುತ್ತಲೇ ತಾನು ಮೊದಲ ಸಲ ಅರಬಿಯೊಬ್ಬನೊಂದಿಗೆ ನಿಕಾಹ್ ಆದ ದಿನಗಳ ನೆನಪಾಯಿತು. ಕ್ಷಣ ತನ್ನ ಜ್ವರದ ಮಗುವನ್ನು ಮರೆತು ಕೈ ಯಾಂತ್ರಿಕವಾಗಿ ತಂಗಿಯ ಮೈಯನ್ನು ಪ್ರೀತಿಯಿಂದ ತಡವಿತು. ಮೈಮೇಲೆ ಪ್ರೀತಿಯ ಮಳೆ ಬಿದ್ದಂತೆ ನಫೀಸಾಳು ಅದುಮಿಟ್ಟುಕೊಂಡಿದ್ದ ದುಃಖದ ಕಟ್ಟೆಯೊಡೆಯಿತು. ಅಕ್ಕನನ್ನು ತಬ್ಬಿಕೊಂಡು ಗಟ್ಟಿಯಾಗಿ ಅಳತೊಡಗಿದಳು.

"ಏನೇ... ಏನಾಯ್ತೇ ನಿಂಗೆ...?" ಎಂದು ಸಿಟ್ಟಿನಿಂದ ದಬಾಯಿಸಿಕೊಂಡು ಎದ್ದ ಹಾಜಿಮಳ ಕಲ್ಲಾಗಿಸಿಕೊಂಡಿದ್ದ ಮನಸ್ಸು ಕೂಡ ಅಕ್ಕ ತಂಗಿಯರು ತಬ್ಬಿಕೊಂಡು ಅಳುವ ಕ್ರಿಯೆಯೊಳಗಿನ ಮೂಕವೇದನೆ ಅನುಭವಕ್ಕೆ ಬಂದಂತೆ ತಾನೂ ಅಳತೊಡಗಿದಳು. ಅಲ್ಲೆ ನೆಲದ ಮೇಲೆ ಕೂತು ತಲೆಯ ಮೇಲೆ ಕೈಯಿಟ್ಟುಕೊಂಡಳು. "ನಾನು ಇದ್ನೆಲ್ಲಾ ನೋಡ್ತಾ ಇರ್ಬೇಕಂತ್ಲೇ ಏನೋ... ಅಲ್ಲಾಹು ನನ್ನನ್ನು ಕರ್ರೊಳ್ಳದೇ ಬಿಟ್ಟಿದ್ದು... ನನ್ನ ಹೊಟ್ಟೆಯಲ್ಲಿ ಯಾಕಾದ್ರೂ ನೀವು ಹುಟ್ಟಿದ್ರೊ...?" ಎಂದು ಆಕೆ ಅಳುತ್ತಲೇ ಅಂದಳು.

ಒಳಗೊಳಗೆ ನೋವನುಭವಿಸುತ್ತ ಮುದ್ದೆಯಾಗಿ ಕುಕ್ಕರುಕೂತ ಮಮ್ಮೂಟ್ಟಿ ತನ್ನ ಮುಂಡಿಯ ಮೇಲೆ ತಲೆಯಿಟ್ಟಿದ್ದ. ಅವನ ಕಣ್ಣಿನಿಂದ ಇಳಿದ ಕಣ್ಣೀರು ನೆಲವನ್ನು ತೊಯ್ಸಿತ್ತು.

ಎಲ್ಲ ತಣ್ಣಗಾಗುತ್ತ ಬರುವಾಗ ಮಗುವಿನ ಜ್ವರದ ನರಳುವಿಕೆ ಎಲ್ಲರನ್ನೂ ತಟ್ಟಿ ಎಬ್ಬಿಸಿತ್ತು. ಜುಲೇಖಾ, "ಅಮ್ಮಾ ಮಗುವನ್ನು ಡಾಕ್ಟರರಿಗೆ

ತೋರ್ಸೋಣ... ಜ್ವರ ಕಡಿಮೆಯಾಗೋ ಹಾಗೆ ಕಾಣಿಸ್ತಾ ಇಲ್ಲ" ಅಂದಳು. ಹಾಜಿಮ ಎದ್ದು ಮಗುವನ್ನು ಎತ್ತಿಕೊಂಡಳು. ಜುಲೇಖಾ ಮದ್ದಿಗಾಗಿ ಸಣ್ಣ ಬಾಟ್ಲಿಯೊಂದನ್ನು ಹಿಡಿದುಕೊಂಡು ಹೊರಟಳು.

ಅವರಿಬ್ಬರೂ ಹೊರಗೆ ಹೋದಾಗ ನಫೀಸಾಳಿಗೆ ತಾನು ನಿಶ್ಶಕ್ತಳಾದಂತೆ ತನ್ನ ಕೈಕಾಲುಗಳೆಲ್ಲಾ ಹಿಡಿತ ತಪ್ಪಿದ ಹಾಗೆನಿಸಿ ಅಲ್ಲೇ ಬಿಡಿಸಿಟ್ಟ ಚಾಪೆಯ ಮೇಲೆ ಬಿದ್ದುಕೊಂಡಳು.

*                    *                    *

ಹಫ್ಸಾ ಮನೆಗೆ ಬರುವಾಗ ನಫೀಸಾ ಮಲಗಿಯೇ ಇದ್ದಳು. ಮಮ್ಮುಟ್ಟಿ ಕೂತಲ್ಲೇ ಇದ್ದ. ಬೀಡಿಯೊಂದನ್ನು ಹೊತ್ತಿಸಿ ಎಳೆಯುತ್ತಿದ್ದ. ಹಫ್ಸಾ ಒಳಗೆ ಬಂದವಳೇ "ಯಾವಾಗ ಬಂದಿಯೋ ಮಮ್ಮುಟ್ಟಿ? ಅಮ್ಮ ಎಲ್ಲಿ?" ಅಂತ ಕೇಳಿದಳು.

"ಬಂದು ತುಂಬ ಹೊತ್ತಾಯ್ತು, ಜುಲೇಖಾಳ ಮಗುವಿಗೆ ಜ್ವರ ಜೋರಾಗಿತ್ತು. ಅಮ್ಮ ಮತ್ತು ಜುಲೇಖಾ ಮಗುವನ್ನು ಕರ್‍ಕೊಂಡು ಡಾಕ್ಟರರ ಹತ್ರ ಹೋದ್ರು..." ಎಂದ.

"ಜುಲೇಖಾ ಹಾಗಾದ್ರೆ ಆಗ್ಲೇ ಬಂದಿದ್ಲಾ...? ನಂಗೆ ಈವತ್ತು ಲೇಟು. ಆ ಮುದುಕ ಅರಬ ಬೆಳಿಗ್ಗೆನೇ ರಗಳೆ ಮಾಡ್ಲಿಕ್ಕೆ ಸುರುಮಾಡಿದ್ದ. ಅವನ ಹಣದ ಗಂಟು ಬಿಚ್ಚಿಸಬೇಕಾದ್ರೆ ಸಾಕೋಬೇಕಾಗುತ್ತೆ... ಈವತ್ತು ಖರ್ಚಿಗೇನೂ ಇಲ್ಲ ಅಂತ ಹೇಳಿ ಒಂದು ಹತ್ತು ರೂಪಾಯಿ ಬಿಚ್ಚಿಸಬೇಕಾದ್ರೆ ಸಾಕೋಬೇಕಾಯ್ತು ಮಾರಾಯ... ಈ ಅರಬಿ ಭಾಷೆಯೊಂದು ನಮಗೆ ಬರ್‍ತಿದ್ರೆ ಈ ಮಕ್ಕಳನ್ನು ಚೆನ್ನಾಗಿ ಬೋಳಿಸಬಹುದಿತ್ತು. ಆ ಭಾಷೆ ಸ್ವಲ್ಪವೂ ಅರ್ಥವಾಗೂದಿಲ್ಲ. ನಮ್ಮ ಭಾಷೆ ಅವರಿಗೆ ಅರ್ಥ ಆಗೂದಿಲ್ಲ. ಒಟ್ಟಿಗೆ ಪಡ್ಚ ನಾವು..." ಅಂದಳು ಹಫ್ಸಾ.

ಹಫ್ಸಾ ಮಾತಾಡುವಾಗ ಮುಲಾಜು ಮಾಡುವವಳಲ್ಲ, ನೇರ ಮಾತಾಡುವವಳು. ಅರಬ ಹಾಗೆ ಹೇಳಿದ ಹೀಗೆ ಹೇಳಿದ ಅಂತ ಅರಬಿ ಉಚ್ಚಾರವನ್ನು ಅನುಕರಣೆ ಮಾಡಿ ಎಲ್ಲರನ್ನೂ ನಗಿಸುತ್ತಿದ್ದಳು. ಆದರೆ ಇಂದು ಮಾತ್ರ ಮನೆ ತುಂಬ ಕವಿದ ಮೌನ ಅವಳ ಮಾತಿಗೆ ಕಡಿವಾಣ ಹಾಕಿತ್ತು. ಇಲ್ಲಿ ಇಂದೇನೋ ನಡೆದಿದೆ ಎಂಬುದನ್ನು ಕೂಡಲೇ ತಿಳಿದು ಕೊಂಡಳು.

"ಯೇನಾಯ್ತೋ? ಯಾಕೆ ಹೀಗೆ ಸಪ್ಪಗಾಗಿದ್ದಿ? ಅಮ್ಮ ಬಯ್ದ

ಳೇನು...? ಮತ್ತೇನು ಮಾಡ್ಬೇಕು ಮಮ್ಮುಟ್ಟಿ ಅವ್ಳು. ಅದನ್ನೆಲ್ಲ ತಲೆಗೆ ಹಚ್ಚಿಕೊಳ್ಬೇಡ... ಒಂದು ಗ್ಲಾಸು ಚಾನಾದ್ರೂ ಮಾಡಿಕೊಟ್ಟಾ... ಇಲ್ವಾ?" ಅಂತ ಹಫ್ಸಾ ಕೇಳಿದಾಗ ಮಮ್ಮುಟ್ಟಿ "ಏನಿಲ್ಲ..." ಎಂಬಂತೆ ತಲೆಯಾಡಿಸಿದ. "ಅದೇನಿಲ್ವೇ... ನಫೀಸಾಳಿಗೊಬ್ಬ ಅರಬನನ್ನು ಅಚ್ಚುಕೋಯ ನೋಡಿದ್ದಾ ನಂತೆ. ಅದನ್ನು ಅಮ್ಮನಿಗೆ ಹೇಳಿದೆ... ಅದಕ್ಕೆ..." ಎಂದ ಮಮ್ಮುಟ್ಟಿ.

"ಏನ್ಮಾಡೂದು... ನಮ್ಮ ತಕ್‌ದೀರಲ್ಲಿ ಬರ್ದದ್ದು ತಪ್ಪಿಸೋದಿಕ್ಕೆ ಸಾಧ್ಯವಾ...? ಅಮ್ಮನಿಗೆಲ್ಲೋ ಭ್ರಾಂತಿ... ಊರ ಹುಡುಗ ಸಿಕ್ತಾನೆಂತ ಒದ್ದಾಡ್ತಿದ್ದಾಳೆ. ಅದ್ನೆಲ್ಲಾ ನಾನು ಸರಿ ಮಾಡ್ತೇನೆ... ಅಚ್ಚುಕೋಯಾನತ್ರ ಬೇಕಾದ ಏರ್ಪಾಡು ಮಾಡು..." ಎಂದಳು ಹಫ್ಸಾ.

"ಏರ್ಪಾಡೆಲ್ಲ ಮಾಡ್ಬೇಕಾದವ್ರು ನೀವು. ನಾಳೆ ನಾನು ಹೋಗಿ ಅಚ್ಚು ಕೋಯನಿಗೆ ಹೇಳಿಬಿಡ್ತೇನೆ, ಅಮ್ಮ ಒಪ್ಪಿದ್ದಾಳೆಂತ. ಮುಂದಿನದಕ್ಕೆಲ್ಲಾ ನೀವೆ. ನಿಕಾಹ್ ಆಗುವ ದಿನ ಹೇಳಿ, ನಾನು ಬರ್ತೇನೆ..." ಎಂದು ಮಮ್ಮುಟ್ಟಿ ಹೊರಗೆ ನಿಲ್ಲಿಸಿದ್ದ ಸೈಕಲು ಹತ್ತಿ ಹೊರಟ. ಹಫ್ಸಾ ತಮ್ಮನಿಗಾಗಿ ಒಂದು ಚಾ ಮಾಡ್ತೇನೆಂದುಕೊಂಡು ಚಾಪುಡಿ ಡಬ್ಬಿ ಹುಡುಕುತ್ತಿರುವಾಗ ಮಮ್ಮುಟ್ಟಿ ಹೊರಟೇಹೋಗಿದ್ದ.

ಸ್ವಲ್ಪ ಹೊತ್ತಿನಲ್ಲಿ ಜುಲೇಖಾ ಮತ್ತು ಅಮ್ಮ ಮಗುವನ್ನು ಕರ್ಕೊಂಡು ಮನೆಗೆ ಬಂದರು. ಹಫ್ಸಾ ಮಗುವಿನ ಹಣೆಯ ಮೇಲೆ ಕೈಯಿಟ್ಟು "ಡಾಕ್ಟರ ರೇನು ಹೇಳಿದ್ರುಮ್ಮಾ...?" ಅಂತ ಕೇಳಿದ್ಲು. "ತೊಂದರೆ ಇಲ್ಲ, ಜಾಗ್ರತೆ ಮಾಡಿ, ಜ್ವರ ಅಷ್ಟೇ... ಎಂದಿದ್ದಾರೆ. ಮಾತ್ರೆ ಮದ್ದು ಕೊಟ್ರು..." ಅಂದ್ಲು ಜುಲೇಖಾ. ಹಫ್ಸಾ ಅಮ್ಮನಿಗೆ ಮಮ್ಮುಟ್ಟಿ ಹೇಳಿಹೋದ್ದನ್ನು ಹೇಳಿದಳು.

"ಅದೇನು ಮಾಡ್ತಿರೋ ಮಾಡಿ... ನಾನು ಮಾತ್ರ ಈ ಸಲ ಬರೂ ದಿಲ್ಲ... ಎಲ್ಲ ನೀವೇ ನೋಡ್ಕೊಳ್ಳಿ..." ಅಂದ್ಲು ಹಾಜಿಮ.

# ಕವಲು ಕನಸು

ಭೇಪುರಕ್ಕೆ ಹೋಗಿ ಹೆಣ್ಣು ನೋಡಿ ಬಂದ ಸಂಜೆಯಿಂದ ಸಲೀಮನ ಉತ್ಸಾಹವೆಲ್ಲ ಇಂಗಿಹೋದಂತಾಗಿತ್ತು. ಹುಡುಗಿ ತೆಳ್ಳಗೆ ಬೆಳ್ಳಗೆ ಇದ್ದರೂ ಅದೇಕೋ ಸಲೀಮನಿಗೆ ಇಷ್ಟವಾಗಲಿಲ್ಲ. ತನ್ನ ಸಂಗಾತಿಯಾಗುವವಳು ಇವಳಲ್ಲ ಎನಿಸಿತ್ತು. ಅಣ್ಣ ಭೇಪುರದಿಂದ ಬಂದಕೂಡಲೇ ಜಂಬೇದ "ಹುಡುಗಿ ಚೆನ್ನಾಗಿದ್ದಾಳೇನೋ ಅಣ್ಣ...?" ಅಂತ ಕೇಳಿದ್ದಳು. "ಹುಡುಗಿಯೇನೋ ಚೆನ್ನಾಗಿದ್ದಾಳೆ. ಆದ್ರೂ ನಂಗ್ಯಾಕೋ ಇಷ್ಟವಾಗಲಿಲ್ಲ..." ಎಂದಿದ್ದ ಸಲೀಮ್. ಜಂಬೇದ ಇದನ್ನು ಅಮ್ಮನಿಗೆ ತಿಳಿಸಿದ್ದಳು. ಅಮ್ಮ ಬಂದು ಕೇಳಿದಾಗಲೂ ಸಲೀಮ ನೇರವಾಗಿಯೇ ಹೇಳಿಬಿಟ್ಟಿದ್ದ. ಸೈದುಕೋಯ ಇದನ್ನು ತಿಳಿದಾಗ "ಇದಲ್ಲದಿದ್ರೆ ಇನ್ನೊಂದು ನೋಡೋಣ...ಅವನ ಅಭಿಪ್ರಾಯ ಮುಖ್ಯ. ಹೆಣ್ಣು ಮಕ್ಕಳಿಗೇನು ಕಮ್ಮಿ ನಮ್ಮಲ್ಲಿ...?" ಎಂದು ಸುಮ್ಮನಾಗಿದ್ದರು.

ಇತ್ತೀಚೆಗೆ ಸಲೀಮನನ್ನು ಏಕಾಂಗಿತನ ಬಹುವಾಗಿ ಕಾಡಿದಾಗಲೆಲ್ಲ ಕಡಲತೀರಕ್ಕೆ ಹೋಗಿ ತೆಂಗಿನ ಮರಗಳ ನೆರಳಲ್ಲಿ ಮರಳರಾಶಿಯ ಮೇಲೆ ಕೂತಿರುತ್ತಿದ್ದ. ತಂಪಾದ ಗಾಳಿ ಮೈಸೋಕಿದಂತೆ ಉತ್ಸಾಹ ಮೂಡಿದಂತಾಗುತ್ತಿತ್ತು. ಒಮ್ಮೊಮ್ಮೆ ರಾತ್ರಿ ಬಹಳ ಹೊತ್ತಿನ ತನಕ ಅಲ್ಲಿ ಕೂತುಬಿಡುವುದಿತ್ತು. ಬೆಳದಿಂಗಳ ಹೊಂಬೆಳಕಿನಲ್ಲಿ ಮೂಡುವ ತೀರದ ದೃಶ್ಯ ಸಲೀಮನ ಮುಗ್ಧ ಹೃದಯವನ್ನು ಬಹಳಷ್ಟು ಆಕರ್ಷಿಸಿತ್ತು. ಹಾಗೆ ಕೂತಾಗಲೆಲ್ಲ ತನ್ನೊಂದಿಗೆ ಮನಬಿಚ್ಚಿ ಮಾತಾಡಬಲ್ಲ ಸಂಗಾತಿ ಅತ್ಯಂತ ಜರೂರಾಗಿ ಬೇಕೆನಿಸುತ್ತಿತ್ತು. ಬದುಕನ್ನು ಇಡಿಯಾಗಿ ಸವಿಯಬೇಕೆನ್ನುವ ಅದಮ್ಯ ಆಸೆ ಅವನನ್ನು ಬಹಳವಾಗಿ ಕಾಡುತ್ತಿತ್ತು. ತಾನು ಪ್ರೀತಿಸುವ ಸಂಗಾತಿ ತನ್ನ ಸನಿಹವಿರಬೇಕು, ತನ್ನನ್ನು ತುಂಬ ಪ್ರೀತಿಸುತ್ತಿರಬೇಕು. ನನ್ನದೆಂಬುದೆಲ್ಲವನ್ನೂ

ಧಾರೆಯೆರೆಯಬೇಕು, ಎನ್ನುವ ಕನಸುಗಳು ಅವನನ್ನು ಸುಂದರ ಲೋಕಕ್ಕೆ ಒಯ್ಯುತ್ತಿದ್ದುವು.

ಕಡಲತೀರದ ತೆರೆಗಳು ನೊರೆಕಾರುತ್ತ ಕುಣಿಯುತ್ತಿರುವುದನ್ನು ನೋಡಿದಾಗ ನಫೀಸಳೊಂದಿಗೆ ಸಮುದ್ರತೀರಕ್ಕೆ ಬಂದಾಗಿನ ಬೆಳದಿಂಗಳ ರಾತ್ರಿಯು ನೆನಪಾಗುತ್ತಿತ್ತು. ಒಮ್ಮೊಮ್ಮೆ ಅಪ್ಪ ತೋರಿಸಿದಲ್ಲಿಗೆ ಹೆಣ್ಣಿನ ಬೇಟೆಗಾಗಿ ಓಡಾಡುವುದನ್ನು ಬಿಟ್ಟು ನಫೀಸಳನ್ನು ಮದುವೆಯಾಗಬೇಕೆನ್ನುವ ಆಸೆ ಮೂಡುತ್ತಿತ್ತು. ಆದರೆ ಅಪ್ಪ, ಅಮ್ಮ ಅಕ್ಕತಂಗಿಯರು ತನ್ನ ಪರವಾಗಿ ನಿಲ್ಲಲಿಕ್ಕಿಲ್ಲ ಎನ್ನುವ ವಿಚಾರ ಹೊಳೆದಾಗ ಸಲೀಮ ಅಧೀರನಾಗಿಬಿಡುತ್ತಿದ್ದ. ಅಪ್ಪ, ಅಮ್ಮರ ಇಷ್ಟಕ್ಕೆ ವಿರುದ್ಧ ಹೋಗುವ ಛಲ, ಎದೆಗಾರಿಕೆ ಅವನಲ್ಲಿರ ಲಿಲ್ಲ. ಅವನು ಬೆಳೆದ ವಾತಾವರಣವೂ ಸಂಪ್ರದಾಯಬದ್ಧವಾಗಿದ್ದುದರಿಂದ ವಿದ್ಯಾವಂತನೆನಿಸಿದರೂ ಸಂಪ್ರದಾಯದ ಕಟ್ಟುಗಳಿಂದ ಬಿಡಿಸಿಕೊಳ್ಳುವ ಧೈರ್ಯ ಅವನಲ್ಲಿರಲಿಲ್ಲ. ಅದು ಅಗತ್ಯವೆಂದು ಅವನು ಯೋಚಿಸಿರಲಿಲ್ಲ. ಅಪ್ಪ, ಅಮ್ಮನ ಮಾತು ಮೀರುವುದರಿಂದ, ಅವರನ್ನು ನೋಯಿಸುವುದರಿಂದ ತಾನು ಸತ್ತ ನಂತರ ನರಕವೇ ಗತಿ ಎಂಬುದನ್ನು ಕಲಿತವನಿಗೆ ಧಾರ್ಮಿಕ ಪಾಠ ಗಳಲ್ಲಿ ಹೇಳಿದ್ದು ಎಂದೂ ಸುಳ್ಳಾಗದೆಂಬ ದೃಢನಂಬಿಕೆ ಇತ್ತು.

ಸಲೀಮನಿಗೆ ನಫೀಸ ಇಷ್ಟವಾದದ್ದು ಅವಳ ಸೌಂದರ್ಯ ಮತ್ತು ನಯವಾದ ನಡವಳಿಕೆಯಿಂದ. ಆದರೆ ಅವಳು ಗುಡಿಸಲುಗೇರಿಯ ಹುಡುಗಿ ಯೆಂದು ನೆನಪಾಗುತ್ತಲೇ ಅವನ ಮನಸ್ಸು ಮುದುಡಿಕೊಳ್ಳುತ್ತಿತ್ತು. ಕೇರಿಯ ಜನರ ಬಗ್ಗೆ "ಸಂಪ್ರದಾಯಸ್ಥ ಮನೆತನದವರು ಬೆಳೆಸಿಕೊಂಡಿದ್ದ ಭಾವನೆಯನ್ನೇ ಸಲೀಮನೂ ಹೊಂದಿದ್ದನಲ್ಲದೆ ಅವರನ್ನು ಅರಿಯುವ ಪ್ರಯತ್ನವನ್ನು ಅವನು ಮಾಡಿರಲಿಲ್ಲ.

ಹಿಂದೊಮ್ಮೆ ಕಾಲೇಜಿನಲ್ಲಿ ಗೆಳತಿಯೊಬ್ಬಳೊಂದಿಗೆ ಸಲುಗೆ ಬೆಳೆದದ್ದು, ಅದು ಅರ್ಧದಲ್ಲೇ ಕಡಿದು ತನ್ನ ಮನಸ್ಸನ್ನು ಪೀಡಿಸಿದ್ದು ನೆನಪಾದಾಗಲೆಲ್ಲ ಆ ಹುಡುಗಿ ಒಂದು ವೇಳೆ ತನ್ನನ್ನು ಮದುವೆಯಾಗಲು ತಯಾರಾಗಿ ಬಂದಿ ದ್ದರೆ ತನಗೆ ಹೆತ್ತವರನ್ನು ಎದುರಿಸುವ ಧೈರ್ಯವಿತ್ತೆ? ಎಂದುಕೊಳ್ಳುತ್ತಿದ್ದ. ತಾನು ನಫೀಸಳ ಬಗೆಗೆ ಹೀಗೆ ಮುಂದುವರಿದರೂ ಅದೇ ಪರಿಣಾಮ ಎಂದು ಕೊಂಡು ಭಾವನೆಗಳಿಗೆ ಕಡಿವಾಣ ಹಾಕಿಕೊಂಡಿದ್ದ.

ಇಂತಹ ವಿಚಾರ ಸಂಘರ್ಷ ನಡೆದಾಗ ತೀರ ಅಧೀರನಾಗಿಬಿಡುತ್ತಿದ್ದ. ಅವನಿಗೆ ಸಾಂತ್ವನ ನೀಡುತ್ತಿದ್ದುದು ಕಡಲು ತೀರ ಮಾತ್ರ. ಕಡಲಕ್ಕಿಗಳು ತೆರೆ ಗಳ ಮೇಲೆ ತೇಲುತ್ತಾ ದಡಕ್ಕೆ ಅಪ್ಪಳಿಸುವಂತಾಗುವಾಗ ಪುರ್ರನೆ ಹಾರಿ ತಪ್ಪಿಸಿ

ಕೊಳ್ಳುವುದನ್ನು ಕಾಣುತ್ತ ಸಲೀಮ ತನ್ನನ್ನು ತಾನೇ ಮರೆಯುತ್ತಿದ್ದ. ತೆರೆಗಳತ್ತ ಹೋಗಿ ಸಣ್ಣ ಮಗುವಿನಂತೆ ಆಡುತ್ತಿದ್ದ. ನಿಂತಲ್ಲಿಗೆ ನೀರು ಬಂದು ಅವನ ಪಾದಕ್ಕೆ ಬಡಿದಾಗ ಅದರ ತಂಪನ್ನು ಸವಿಯುತ್ತಿದ್ದ. ಮರಳಿನ ನೆಲದೊಳಗೆ ಪಾದ ಹುಗಿಯುತ್ತ ಹೋಗುವಾಗ ಪುಳಕಗೊಳ್ಳುತ್ತಿದ್ದ.

ನಾಲ್ಕೈದು ಕಡೆಯ ಹೆಣ್ಣುಗಳನ್ನು ನೋಡಿಬಂದರೂ ಒಂದೂ ಸಲೀಮನಿಗೆ ಒಪ್ಪಿಗೆಯಾಗಲಿಲ್ಲ. ಅಪ್ಪ ಅಮ್ಮ ಒಳಗೊಳಗೇ ಅಸಹನೆಯಿಂದ ಕುದಿಯುತ್ತಿದ್ದರು. ಜುಬೇದಳಿಗೆ ಅಣ್ಣನ ಮದುವೆಯೆಂದರೆ ಅತ್ಯಂತ ಸಂಭ್ರಮದ ವಿಷಯವಾಗಿತ್ತು. ಅವನು ಹೀಗೆ ಹೆಣ್ಣುಗಳನ್ನು ನೋಡುತ್ತಾ ಹೋಗುವುದು, ಒಪ್ಪಿಗೆಯಾಗಲಿಲ್ಲ ಎನ್ನುವುದು ಅವಳ ಅನುಮಾನಕ್ಕೆ ಪುಷ್ಟಿಯೊದಗಿಸಿತ್ತು. ಅವನು ಮದುವೆಯಾಗಬಯಸಿದ್ದು ನಫೀಸಳನ್ನೇ ಇರಬಹುದೇ ಎಂಬ ಸಂಶಯ ಬಲವಾಗಿ ಕಾಡಿತ್ತು. ಒಂದೆರಡು ಸಲ ಜುಬೇದಾ, ನಫೀಸ ಮನೆಕೆಲಸ ಬಿಟ್ಟಿದ್ದರ ಬಗ್ಗೆ ಹೇಳಿ ಅವನ ಮನಸ್ಸನ್ನು ಕೆದಕಿನೋಡಲು ಪ್ರಯತ್ನಿಸಿದ್ದಳು. ಅವನು ಯಾವ ಪ್ರತಿಕ್ರಿಯೆಯನ್ನೂ ತೋರಿಸಿರಲಿಲ್ಲ. ನಫೀಸಾ ಕೆಲಸ ಬಿಟ್ಟನಂತರ ಕೆಲವು ದಿನ ಬೆಳಗ್ಗಿನ ಚಾಕ್ಕಾಗಿ ಕೂಗಾಡಿದ್ದ. ತನ್ನ ವಸ್ತುಗಳೆಲ್ಲ ಸರಿಯಾಗಿ ಸಿಗುತ್ತಿಲ್ಲವೆಂದು ರೇಗಿದ್ದ. ತನ್ನ ರೂಮನ್ನು ಚೊಕ್ಕಟವಾಗಿಡೂದಿಲ್ಲ. ತಾನೆಂದರೆ ಮನೆಯವರಿಗೆಲ್ಲ ಅಸಡ್ಡೆ ಎಂದು ಗೊಣಗುತ್ತಿದ್ದ. ಇದನ್ನು ಕಂಡು ಜುಬೇದಾ ನಫೀಸ ಮಾಡುತ್ತಿದ್ದ ಕೆಲಸಗಳನ್ನು ಮಾಡುವ ಪ್ರಯತ್ನ ಮಾಡುತ್ತಿದ್ದಳು. ಒಮ್ಮೊಮ್ಮೆ ಅವಳ ಮಗು ವೆದ್ದು ಅಳತೊಡಗಿದರೆ ಅರ್ಧದಲ್ಲೇ ಬಿಟ್ಟು ಮಗುವಿನ ಹತ್ತಿರ ಹೋಗಬೇಕಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಸಲೀಮ ಮನೆಯವರ ಮೇಲೆ ರೇಗಾಡುತ್ತಿದ್ದ. "ಈ ಮನೆಯಲ್ಲಿ ಯಾರೂ ಇಲ್ವಾ... ನನ್ನ ಬಟ್ಟೆಯೆಲ್ಲಿ. ಒಂದೂ ಸರಿಯಾಗಿ ಸಿಗ್ತಾ ಇಲ್ಲ..." ಅಂತ ಅವನೊಮ್ಮೆ ಕೂಗಾಡಿದಾಗ ಅಮ್ಮ ಬಂದು "ನಿನ್ನ ಬಟ್ಟೆಗಳನ್ನು ನೀನೇ ಹೊಂದಿಸಿಕೊಳ್ಳಬೇಕು. ಅದಕ್ಕೆ ಮನೆಯವರಿಗೆಲ್ಲ ಬಯ್ದರೆ ಆಗ್ತದಾ...?" ಅಂತ ಸಿಟ್ಟಾಗಿ ಬಯ್ದಳು.

ಅಣ್ಣನ ಈಗೀಗಿನ ಕೂಗಾಟ, ರೇಗಾಟಗಳನ್ನೆಲ್ಲ ನೋಡಿದಾಗ ಅವನಿಗೆ ನಫೀಸಳನ್ನು ಕೆಲಸದಿಂದ ಬಿಡಿಸಿದ್ದು ಇಷ್ಟವಿರಲಿಲ್ಲ ಎಂಬುದು ಜುಬೇದಳಿಗೆ ಖಾತ್ರಿಯಾಗಿತ್ತು. ಆದರೂ ಬಾಯಿ ಬಿಟ್ಟು ಅವಳ ಬಗ್ಗೆ ಅವನೇನೂ ಹೇಳಿರಲಿಲ್ಲ. ಜುಬೇದಳಿಗೆ ಒಮ್ಮೊಮ್ಮೆ "ನಿಂಗೆ ನಫೀಸಳನ್ನು ಮದುವೆಯಾಗುವ ಮನಸ್ಸುಂಟಾ?" ಅಂತ ಕೇಳಬೇಕೆನಿಸಿದರೂ ಈ ರೀತಿಯ ಚೇಷ್ಟೆ ಮಾತು ಕೂಡ ಅವಳಿಗೆ ಅಸಹನೀಯವಾಗಿತ್ತು. ಅವನೇನಾದರೂ ಹೌದೆಂದರೆ

ಅದನ್ನು ತಾನು ಎದುರಿಸಲಾರೆನೆಂದು ಜುಬೇದಾ ಅಂದುಕೊಂಡಿದ್ದಳು. ಅಣ್ಣ ನೇನಾದರೂ ನನಗೆ ಈ ವಿಷಯದಲ್ಲಿ ನೀನು ಸಹಾಯ ಮಾಡು ಅಂತ ಅಂದರೆ ಅಣ್ಣನನ್ನು ಬಿಡಲಿಕ್ಕೂ ಅಲ್ಲ. ಹೆತ್ತವರನ್ನು ಬಿಡಲಿಕ್ಕೂ ಅಲ್ಲ.

ನಫೀಸ ನೋಡಲಿಕ್ಕೆ ಚೆನ್ನಾಗಿದ್ದಾಳೆ. ಗುಣವೂ ಕೂಡ. ಮನೆಯವರಿಗೆಲ್ಲ ಹೊಂದಿಕೊಳ್ಳುವಂತಾ ಹುಡುಗಿ. ಆದರೆ ಆ ಕೇರಿಯ ಹುಡುಗಿಯನ್ನು ಅಣ್ಣ ಮದುವೆಯಾದರೆ ಜನ ಏನೆಂದಾರು ? ತನ್ನ ಗಂಡನ ಮನೆಯವರೂ ಛೀ... ಥೂ... ಅನ್ನದಿರುತ್ತಾರೆಯೇ ? ಅಕ್ಕ, ಭಾವಂದಿರು ಕೂಡ ಒಪ್ಪಲಿಕ್ಕಿಲ್ಲ. ಅಂತೂ ಈ ಸಂದಿಗ್ಧದಿಂದ ಪಾರುಮಾಡೆಂದು ದಿನವೂ ಅಲ್ಲಾಹುವಿನೊಡನೆ ಜುಬೇದ ಪ್ರಾರ್ಥನೆ ಮಾಡುತ್ತಿದ್ದಳು.

ಸೈದುಕೋಯರಿಗೆ ಮಗ ಇತ್ತೀಚೆಗೆ ನೋಡಿದ ಹುಡುಗಿಯರಲ್ಲಿ ಯಾರನ್ನೂ ಒಪ್ಪಿಕೊಳ್ಳದೆ ಹೋದದ್ದು ಪೇಚಿಗಿಟ್ಟುಕೊಂಡಿತ್ತು. ಹೆಣ್ಣಿನ ಕಡೆಯವರಿಗೆ ಯಾರಿಗೂ ಸ್ಪಷ್ಟವಾದ ಮಾತುಕೊಡದೆ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ ಹಾಗಾಗಿತ್ತು. ನಫೀಸ ಮತ್ತು ಸಲೀಮರ ಬಗ್ಗೆ ಸಂಶಯ ಬೆಳೆಯುತ್ತ ಹೋಗುತ್ತಿದ್ದಂತೆ ಒಂದು ದಿನ ಮಗನನ್ನು ಕರೆದು ಹತ್ತಿರ ಕೂರಿಸಿಕೊಂಡು ಮಾತಿಗಿಳಿದರು. "ನೋಡು ಮಗಾ... ನಮಗೂ ಪ್ರಾಯವಾಗ್ತಾ ಬಂತು. ಇರುವ ಒಬ್ಬನೇ ಮಗನ ಮದುವೆ ನೋಡಬೇಕೆಂಬುದು ನಮ್ಮಾಸೆ..." ಎಂದಾಗ ಸಲೀಮ ಸುಮ್ಮನಿದ್ದ.

ಪರೀಥಮ್ಮ ಗಂಡನ ಮಾತಿಗೆ ದನಿಗೂಡಿಸುತ್ತಾ "ಅಲ್ಲಾ... ಮಗ, ಹೆಣ್ಣುಮಕ್ಕಳನ್ನು ನೋಡುತ್ತಾ ಹೋಗೂದು. ಅವರನ್ನು ಒಪ್ಪಿಗೆಯಾಗಲಿಲ್ಲಾಂತ ತಿರಸ್ಕರಿಸೂದು ಇದೆಲ್ಲ ಹೆಣ್ಣು ಹೆತ್ತವರ ಮನಸ್ಸನ್ನು ನೋಯಿಸುವ ಕೆಲಸ ಅಲ್ವಾ...? ಅಲ್ಲಾಹು ಮೆಚ್ಚುವಂತಾದ್ದಲ್ಲ. ನಮಗೂ ಹೆಣ್ಣುಮಕ್ಕಳಿದ್ದಾರೆ ಅನ್ನೂದು ಮರೆಯಲಿಕ್ಕಾಗ್ತದಾ ?" ಎಂದರು. ಸಲೀಮ ಏನೋ ಹೇಳಲಿಕ್ಕೆ ಪ್ರಯತ್ನಿಸಿದಾಗ ಅಪ್ಪ ತಡೆದು, "ಸಲೀಮ್... ನೋಡು... ನಿನ್ನ ಒಳಿತಿಗಾಗಿಯೇ ನಾವು ಹೇಳ್ತಾ ಇರೋದು. ಈ ನೋಡಿದ ಹುಡುಗಿಯರಲ್ಲಿ ಯಾರನ್ನಾದರೂ ಒಬ್ಬಳನ್ನು ಆರಿಸಿಕೋ... ಸುಮ್ಮನೆ ನಮ್ಮನ್ನು ನೋಯಿಸಬೇಡಪ್ಪ. ಇವ್ರೆಲ್ಲಾ ಒಳ್ಳೆಯ ಕುಟುಂಬದವರೇ..." ಎಂದಾಗ ಸಲೀಮನಿಗೇನೂ ತೋಚದೆ ಕೂತಿದ್ದ.

"ಅದ್ಯಾಕೆ ನೀ ಮಾತಾಡೂದಿಲ್ಲ, ಮದುವೇನೇ ಬೇಡಾಂತಿದ್ದಿಯೋ ಇಲ್ಲ ಬೇರೆಲ್ಲಾದ್ರೂ ನಿನ್ನ ಮನಸ್ಸಿದೆಯೋ..." ಅಂತ ಸೈದುಕೋಯ ಮಗನ ಮನ

ಸ್ಸನ್ನು ತಿಳಿಯುವ ಪ್ರಯತ್ನ ಮಾಡಿದರು. "ಇಲ್ಲ... ಹಾಗೇನಿಲ್ಲ..." ಎಂದು ಸಲೀಮು ತೊದಲಿದ.

"ಹಾಗಾದರೆ ಸರಿಯಾದೊಂದು ಉತ್ತರ ಕೊಡು...ಇಲ್ಲವಾದರೆ ಹೆಣ್ಣು ಹೆತ್ತವರ ಮುಂದೆ ನಾವು ತಲೆ ತಗ್ಗಿಸಬೇಕಾಗ್ತದೆ..." ಎಂದರು. ಸಲೀಮು ಸ್ವಲ್ಪ ಹೊತ್ತು ಯೋಚಿಸಿದವ "ನೀವು ಹೇಳಿದ ಹಾಗೆ... ಆಗ್ಲಿ..." ಎಂದ.

ಸೈದುಕೋಯ ಮತ್ತು ಅವರ ಹೆಂಡತಿಗೆ ಮಗನ ಮಾತುಕೇಳಿ ಸಂತೋಷವಾದರೂ ತೋರಿಸಿಕೊಳ್ಳದೆ, "ಹಾಗಾದರೆ ಭೇಪುರದ ಸುಲೇಮಾನ್ ಹಾಜಿಯುವರಿಗೆ ಮಾತು ಕೊಡಲಾ...?" ಅಂತ ಕೇಳಿದರು. ಸಲೀಮ್ ಸ್ವಲ್ಪ ಅಸಹನೆಯಿಂದ ಎತ್ತರದ ದನಿಯಲ್ಲೇ ಹೇಳಿದ, "ಆಗ್ಲೇ ಹೇಳಿದ್ನಲ್ಲಾ. ನಿಮ್ಮ ಅಭಿಪ್ರಾಯದಂತೆ ಆಗ್ಲೀಂತ... ನೀವು ಏನು ಹೇಳ್ತಿರೋ ಅದಕ್ಕೆ ನನ್ನ ಒಪ್ಪಿಗೆ ಇದೆ..." ಮತ್ತೆ ಸಲೀಮು ಅಲ್ಲಿ ನಿಲ್ಲಲಿಲ್ಲ. ಎದ್ದು ಸರಸರನೆ ತನ್ನ ಕೋಣೆಗೆ ಹೋದ.

ಸೈದುಕೋಯ ಮತ್ತೆ ತಡಮಾಡಲಿಲ್ಲ. ಹೆಂಡತಿಯ ಕಡೆ ಗೆಲುವಿನ ನೋಟ ಬೀರುತ್ತಾ ಚಪ್ಪಲಿ ಕಾಲಿಗೆ ಸಿಕ್ಕಿಸಿಕೊಂಡು ಹೊರಗೆ ಹೊರಟರು.

ಷರೀಫಮ್ಮ ಜುಬೇದಾಳ ಕೋಣೆಗೆ ಹೋಗಿ, "ಅಂತೂ ಕೊನೆಗೂ ಸಲೀಮ್ ಭೇಪುರದ ಹುಡುಗಿಯನ್ನು ಒಪ್ಪಿದ... ನಾನೇನೋಂತಿದ್ದೆ..." ಎಂದರು. ಜುಬೇದಾಳಿಗೆ ಅಣ್ಣನ ಈ ಬದಲಾವಣೆಯಿಂದ ಆಶ್ಚರ್ಯ ವಾದರೂ ಒಂದು ದೊಡ್ಡ ಆತಂಕದಿಂದ ಪಾರಾದ ಸಂತೋಷ ಮೂಡಿತು.

*   *   *

ಸಂಜೆ ಜುಲೇಖಾ ಅರಬ ತಂಗುವ ಹೋಟೆಲಿಗೆ ಹೊರಡುವ ವೇಳೆ ಯಾದಾಗಲೂ ಜ್ವರ ಇಳಿದಿರಲಿಲ್ಲ. ಅವಳು ಕಂಗಾಲಾಗಿದ್ದಳು. ನಫೀಸ ಮಲಗಿದಲ್ಲೇ ಅಳುತ್ತ ಬಿದ್ದಿದ್ದಳು. ಹಾಜಿಮ ತಲೆಗೆ ಕೈಯಿಟ್ಟು ಕಂಬ ಕ್ಕೊರಗಿ ಕೂತಿದ್ದಳು. ಹಫ್ಸಾ ಮಾತ್ರ ಆಗಾಗ ಇವರೆಲ್ಲರ ಜೊತೆ ಮಾತ ನಾಡುವ ಪ್ರಯತ್ನ ಮಾಡುತ್ತಿದ್ದಳು. ಮನೆಯಲ್ಲಿ ಹಿರಿಯರೆಲ್ಲ ಮೌನ ವಾಗಿರೂದನ್ನು ಕಂಡ ಮಕ್ಕಳು ಹೆದರಿ ಮೂಲೆಯಲ್ಲಿ ಕೂತು ಪಿಳಿಪಿಳಿ ನೋಡುತ್ತಿದ್ದವು. ಕೇರಿಯ ಗುಡಿಸಲುಗಳಲ್ಲಿ ಎಂದಿನ ಜಗಳ ಗಲಾಟೆ ಮಕ್ಕಳ ಕೂಗುಗಳು ಕೇಳಿ ಬರುತ್ತಿದ್ದವಾದರೂ ಹಾಜಿಮಳ ಮನೆಯಲ್ಲಿ ಸ್ಮಶಾನ ಮೌನ ಕವಿದಿತ್ತು.

ಮಗು ಜ್ವರದಿಂದ ಒಂದೇ ಸಮನೆ ನರಳುತ್ತಿತ್ತು. ಜುಲೇಖ ಡಾಕ್ಟ

ರರು ಹೇಳಿದಂತೆ ತಣ್ಣೀರಿನ ಪಟ್ಟಿಮಾಡಿ ಮಗುವಿನ ಹಣೆಯ ಮೇಲೆ ಇಡು ತ್ತಿದ್ದಳು. ಪಟ್ಟಿ ಕ್ಷಣಮಾತ್ರದಲ್ಲಿ ಒಣಗಿ ಹೋಗುತ್ತಿತ್ತು. ಪುನಃ ತಣ್ಣೀರಿನ ಪಟ್ಟಿ ಇಡುತ್ತಾ ಜುಲೇಖ ಕಣ್ಣುಮುಚ್ಚಿಕೊಂಡು ನರಳುವ ಮಗುವನ್ನೇ ನೋಡುತ್ತಾ ಕೂತಿದ್ದಳು. ಮಗು ಉಸಿರಾಟದ ತೊಂದರೆಯಿಂದ ಗುರ್ರ್... ಗುರ್ರ್... ಸದ್ದು ಮಾಡುತ್ತಿತ್ತು. ಎದೆಗೂಡು ಎದ್ದೆದ್ದು ಬೀಳುತ್ತಿತ್ತು.

"ಅಕ್ಕಾ... ಮತ್ತೊಮ್ಮೆ ಡಾಕ್ಟರರ ಹತ್ರ ಹೋಗಿ ಮಗುವನ್ನು ತೋರಿಸಿ ಬರೂದು ಒಳ್ಳೆಯದಲ್ವಾ? ಮಗು ಹೇಗೆ ಉಸಿರಾಡ್ತಾ ಇದೆ ನೋಡು..." ಎಂದಳು ಹಫ್ಸಾ. ಜುಲೇಖಾ 'ಹೂಂ...' ಅಂದಳಷ್ಟೇ.

"ನೀವೆಲ್ಲ ಹೂಂ... ಊಹೂಂ... ಅಂತ ಬಾಯಿ ಬಾರದವರ ಹಾಗೆ ಯಾಕೆ ಮಾಡ್ತೀರೋ... ಯಾಕೆ ಹೀಗೆ ಆಕಾಶ ಕಳಚಿ ಬಿದ್ದ ಹಾಗೆ ದಿಗಿಲು ಪಡ್ತಿದ್ದೀರೋ... ನಂಗೊಂದೂ ಗೊತ್ತಾಗೂದಿಲ್ಲಪ್ಪ... ಕಷ್ಟ ಬಂದಿರೋದು ಇದೇ ಮೊದಲನೇ ಸಲಾನಾ... ಹಿಂದೆಂದೂ ಕಷ್ಟಪಡದವರ ಹಾಗೆ ಯಾಕ್ಮಾಡ್ತೀರಿ? ಡಾಕ್ಟರರ ಹತ್ರ ಕರ್ಕೊಂಡು ಹೋಗ್ತೀರೋ ಇಲ್ಲ ಮಗುವನ್ನ ಹೀಗೆ ಸಾಯೋಕ್ಬಿಡ್ತಿರೋ" ಎಂದಳು ಹಫ್ಸಾ ಸ್ವಲ್ಪ ಸಿಟ್ಟಾಗಿಯೇ.

ಜುಲೇಖಾ ಉಕ್ಕಿಬಂದ ಕಣ್ಣೀರನ್ನು ಸೆರಗಿನಿಂದ ಒರೆಸಿಕೊಳ್ಳುತ್ತಾ "ಇದ್ದ ಹಣವನ್ನ ಡಾಕ್ಟರರಿಗೆ ಆಗ್ಲೇ ಕೊಟ್ಟೆ...ಇನ್ನು ಹಣಕ್ಕೆಲ್ಲಿ ಹೋಗ್ಲಿ...?" ಅಂದಳು.

ಹಫ್ಸಾ ಮೆತ್ತಗಾದಳು. ಏನು ಮಾಡೂದು? ತನ್ನ ಹತ್ತಿರ ಇದ್ದ ಹಣವೆಲ್ಲಾ ಆಗ್ಲೇ ಅಕ್ಕಿ ಸಾಮಾನು ತರ್ಲಿಕ್ಕೆಂತ ಖರ್ಚಾಯ್ತು. ಅಮ್ಮನ ಹತ್ತಿರ ಏನಾದ್ರೂ ಉಂಟಾಂತ ಕೇಳ್ಬೇಕೆಂದುಕೊಡಳು. ಕಲ್ಲಿನಂತೆ ಕೂತ ಹಾಜಿಮಳನ್ನು ಹಫ್ಸಾ ಕರೆದಳು. "ಅಮ್ಮಾ... ಹೀಗೆ ತಲೆಗೆ ಕೈಹೊತ್ತು ಕೂತ್ರೆ ಆಯ್ತಾ...? ಮಗೂಗೆ ಜ್ವರ ಜೋರಾಗಿ ಬರ್‍ತಾ ಇದೆ. ಹಣ ಇಲ್ಲಾಂತ ಜುಲೇಖ ಹೇಳ್ತಿದ್ದಾಳೆ, ಡಾಕ್ಟರರ ಹತ್ರ ಹೋಗ್ಲಿಕ್ಕೆ..." ಅಂದ್ಲು.

ಸ್ವಲ್ಪ ಹೊತ್ತು ಮೌನವಾಗಿದ್ದ ಹಾಜಿಮ ಮೆಲ್ಲನೆ ಎದ್ದು ತನ್ನ ಹಳೇ ಟ್ರಂಕಿನ ಬಾಗಿಲು ತೆರೆದು ಹುಡುಕತೊಡಗಿದಳು. ಬಟ್ಟೆ ಚಿಂದಿಯಲ್ಲಿ ಕಟ್ಟಿದ್ದ ಪುಟ್ಟ ಗಂಟನ್ನು ಬಿಚ್ಚಿದಾಗ ಅದರೊಳಗೆ ಹತ್ತುರೂಪಾಯಿಯ ನೋಟೊಂದು ಮುದುಡಿ ಕೂತಿತ್ತು. ಅದನ್ನು ಬಿಡಿಸಿ ತಂದು ಜುಲೇಖಾಳ ಕೈಗಿಟ್ಟಳು.

"ಹೋಟ್ಲಿಗ್ಹೋಗ್ಲಿಕ್ಕೆ ಹೊತ್ತಾಗ್ತಾ ಬಂತು. ಬೇಗ ಹೋಗಿ ಡಾಕ್ಟರರಿಗೆ ತೋರ್ಸಿ ಬರೋಣ, ಬಾ..." ಎಂದು ಹಫ್ಸಾ ಮಗುವನ್ನೆತ್ತಿಕೊಂಡಳು. ಜುಲೇಖಾ ಅವಳನ್ನು ಹಿಂಬಾಲಿಸಿದಳು.

ಡಾಕ್ಟರರು ಪರೀಕ್ಷಿಸಿದವರು "ಮಗುವಿಗೆ ನ್ಯೂಮೋನಿಯಾ ಆಗಿದೆ. ಈಗ್ಲೇ ಆಸ್ಪತ್ರೆಗೆ ಸೇರಿಸಿದ್ರೆ ಒಳ್ಳೆಯದು" ಎಂದಾಗ ಜುಲೇಖಾ "ಹಣಕ್ಕೇನು ಮಾಡ್ಲಿ ರಬ್ಬೇ..." ಎಂದುಕೊಂಡಳು. ಹಫ್ಸಾ ಕೂಡ ಯೋಚನೆ ಮಾಡ್ತಾ ನಿಂತಾಗ ಡಾಕ್ಟರರಿಗೆ ಪರಿಸ್ಥಿತಿಯು ಅರ್ಥವಾಗಿ, "ನೋಡಿ, ಈಗ ನಾನು ಇಂಜೆಕ್ಷನ್, ಮದ್ದು ಕೊಡ್ತೇನೆ. ರಾತ್ರಿ ಎಲ್ಲಾದ್ರೂ ಜೋರಾದ್ರೆ ಕೂಡ್ಲೆ ಆಸ್ಪತ್ರೆಗೆ ಸೇರಿಸಬೇಕು" ಅಂದರು. ಹಫ್ಸಾ ಅವರು ಕೊಟ್ಟ ಮದ್ದು ತೆಗೆದು ಕೊಂಡಳು. ಅಮ್ಮ ಕೊಟ್ಟ ಹತ್ತು ರೂಪಾಯಿ ಡಾಕ್ಟರರ ಫೀಸಿಗೆ ಸರಿ ಯಾಯಿತು. ಇಬ್ಬರೂ ಮಗುವನ್ನು ಕರೆದುಕೊಂಡು ಬೇಗ ಬೇಗನೆ ಮನೆಗೆ ಬಂದರು. ಹಫ್ಸಾ ಹೋಟೆಲಿಗೆ ಹೊರಟು ಹೋಗುವಾಗ "ನಫೀಸಾ... ಮಗುವನ್ನು ಸ್ವಲ್ಪ ಚೆನ್ನಾಗಿ ನೋಡ್ಕೊ". ಎಂದಳು "ಜುಲೇಖಾ... ನೀನೀವತ್ತು ಹೋಟ್ಲಿಗೆ ಹೋಗದಿದ್ರೂ ಪರವಾಗಿಲ್ಲ... ನಾನು ಬೇಕಾದ್ರೆ ಹೇಳಿಕಳಿಸ್ತೇನೆ ನಿನ್ನ ಗಂಡನಿಗೆ..." ಅಂತ ಹಫ್ಸಾ ಹೇಳಿದಾಗ ಜುಲೇಖಾ ಏನೂ ಅನ್ನಲಿಲ್ಲ. ನಫೀಸ ಮಗುವನ್ನು ಚಾಪೆಯ ಮೇಲೆ ಮಲಗಿಸಿ ಹಣೆಗೆ ತಣ್ಣೀರ ಪಟ್ಟಿ ಇಡೂದರಲ್ಲಿ ಮಗ್ನಳಾದಳು. ಮಗುವಿನ ನರಳುವಿಕೆ ಕ್ಷಣ ಕ್ಷಣಕ್ಕೂ ಹೆಚ್ಚುತ್ತ ಮನೆ ತುಂಬ ಭಯದ ವಾತಾವರಣ ಮೂಡಿಸಿತ್ತು.

ಜುಲೇಖ ಸ್ವಲ್ಪ ಹೊತ್ತು ಸುಮ್ಮನಿದ್ದವಳು ತಟ್ಟನೆ ಎದ್ದು ಸೀರೆ ಬದಲಾಯಿಸಿದ್ದನ್ನು ಕಂಡ ಹಾಜಿಮ, "ನೀನು ಮಗುವನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಟ್ಲಿಗೆ ಹೋಗದಿದ್ರೆ ಆ ಅರಬನೇನೂ ಸಾಯೂದಿಲ್ಲ..." ಅಂತ ವ್ಯಂಗ್ಯವಾಗಿ ಹೇಳಿದಾಗ ಜುಲೇಖಾ "ಇಲ್ಲಮ್ಮ... ಕೈಯಲ್ಲಿ ಹಣ ಬೇಕಲ್ಲ? ಮಗುವನ್ನೆಲ್ಲಿಯಾದ್ರೂ ಆಸ್ಪತ್ರೆಗೆ ಸೇರಿಸ್ಬೇಕಾಗಿ ಬಂದ್ರೆ ಏನ್ಮಾಡೂದು? ಅರಬಿ ಯತ್ರ ಕೇಳಿದ್ರೆ ಯೇನಾದ್ರೂ ಕೊಡ್ತಾನೋ ನೋಡ್ತೇನೆ..." ಅಂದ್ಲು. ಹಾಜಿಮ ಮತ್ತೆ ಮೌನವಾದ್ಲು.

ಮನೆಯಿಂದ ಜುಲೇಖಾ ಹೊರಬಿದ್ದಾಗ ಇನ್ನೊಂದು ಯೋಚನೆ ಮುತ್ತಿತು. ಅವಳಿಗೆ ಈ ಅರಬನ ಜೊತೆಗೆ ನಿಕಾಹ್ ಆಗುವಾಗ ಮಗು ಇದೆ ಅಂತ ಹೇಳಿರಲಿಲ್ಲ. ಅವಳು ಮಗುವೊಂದರ ತಾಯಿಯೆಂದು ಅರಬ ತಿಳಿದರೆ ಖಂಡಿತ ಮದುವೆಯಾಗುವುದಿಲ್ಲ ಎನ್ನೂದು ಗೊತ್ತು. ಒಂದು ವೇಳೆ ಒಪ್ಪಿದರೂ ಮಹರಿನ ಮೊತ್ತಕ್ಕೆ ಖೋತಾ ಬೀಳುತ್ತಿತ್ತು. ಈಗ ಅರಬನಿಂದ ಹಣ ಪಡೆಯುವ ಬಗೆ ಹೇಗೆ ಎಂದು ಯೋಚಿಸತೊಡಗಿದ್ಲು. 'ನನ್ನ ತಾಯಿಗೆ ಸೌಖ್ಯವಿಲ್ಲ, ಸಹಾಯ ಮಾಡು' ಅಂತ ಕೇಳೋದೇ ಸರಿಯೆಂದುಕೊಂಡಳು. ಅವನಿಗೆ ಗೊತ್ತಾಗುವಂತೆ ಹೇಗೆ ತಿಳಿಸೂದು?

ಎಂಬ ಪ್ರಶ್ನೆ ಮಾಡಿದಾಗ ಹಾವಭಾವಗಳಿಂದ ಒಂದೆರಡು ಅರಬಿ ಪದಗಳನ್ನು ಬಳಸಿ ಹೇಗಾದರೂ ತಿಳಿಸಬೇಕೆಂದು ಒಳಗೊಳಗೇ ತೀರ್ಮಾನಿಸಿಕೊಂಡಳು.

ಜುಲೇಖಾ ಹೋಟೇಲಿನ ಮಹಡಿ ಹತ್ತಿ ಕೋಣೆಗೆ ಬೀಗ ಹಾಕಿರುವುದನ್ನು ಕಂಡಾಗ ಕ್ಷಣ ದಂಗಾದಳು. "ಅರಬಿ ಎಲ್ಲಾದ್ರೂ ಪರಾರಿಯಾಗಿರಬಹುದೇ ?" ಎಂಬ ಅನುಮಾನ ಕಾಡತೊಡಗಿತು. ಅಲ್ಲಿಯು ಕಸಗುಡಿಸುತ್ತಿದ್ದ ಹುಡುಗನನ್ನು "ಈ ಕೋಣೆಯು ಅರಬಿ ಎಲ್ಲಿ ಹೋಗಿದ್ದಾರೆ ನಿಂಗೆ ಗೊತ್ತುಂಟಾ ?" ಅಂತ ಕೇಳಿದಳು. "ಎಲ್ಲೋ ಹೊರಗೆ ಹೋಗಿರ್ಬೇಕು..." ಅಂತ ಹೇಳಿ ಹುಡುಗ ತನ್ನ ಕೆಲಸ ಮುಂದುವರಿಸಿದ. ಸ್ವಲ್ಪ ಹೊತ್ತು ಸುಮ್ಮನಿದ್ದ ಜುಲೇಖಾ, "ಒಂದು ಉಪಕಾರ ಮಾಡ್ತಿಯಾ... ಆಫೀಸಲ್ಲಿ ಏನಾದ್ರೂ ಹೇಳಿಹೋಗಿದ್ದಾರಂತ ಸ್ವಲ್ಪ ವಿಚಾರಿಸಿ ಹೇಳ್ತಿಯಾ...?" ಅಂತ ಕೇಳಿದಾಗ ಹುಡುಗ ಸಿಡಿಮಿಡಿಗೊಂಡು "ನೀನೇ ಹೋಗಿ ಕೇಳಮ್ಮ... ನಂಗೆ ಕೆಲ್ಸ ತುಂಬ ಇದೆ..." ಎಂದ. ಇನ್ನು ಆಫೀಸಿಗೆ ಹೋಗಿ ವಿಚಾರಿಸುವುದೇ ಸರಿ ಎಂದುಕೊಂಡು ಆಕಡೆ ಹೋಗುವಾಗ ಪರಿಚಿತ ರೂಮ್ ಬಾಯ್ ಸಿಕ್ಕಿದ. ನಕ್ಕ. "ಅರಬಿ ಹೊರಗೆ ಹೋಗಿದ್ದಾನೆ. ಅಚ್ಚುಕೋಯ ಮಧ್ಯಾಹ್ನ ಬರುವಾಗ ಕ್ಯಾಬರೆ ಶೋ ಟಿಕೇಟು ತಂದಿದ್ದಾನಂತೆ. ಕಲ್ಲಿಕೋಟೆಯಲ್ಲಿ ಅದಕ್ಕೇನು ಕಮ್ಮಿ ? ಎಲ್ಲಾ ತೋರಿಸ್ತಾರೆ ಅಂತ ಕೋಯ ಹೇಳಿದ್ದ. ಅರಬಿ ಬಾಯಲ್ಲಿ ನೀರೂರಿರಬೇಕು. ನೀನು ಬರ್ಲಿಕ್ಕೆ ಲೇಟಾಯ್ತುಂತ ಚಡಪಡಿಸುತ್ತಿದ್ದ. ಬಂದ್ರೆ ನಿನ್ನನ್ನು ನಿಲ್ಲಲಿಕ್ಕೆ ಹೇಳಿ ಹೋಗಿದ್ದಾನೆ..." ಎಂದ. ಜುಲೇಖಾ ರೂಮ್ ಬಾಯ್ ಮಾತಿಗೆ ಪೆಚ್ಚಾಗಿ ನಕ್ಕಳು. ಹಿಂದೊಮ್ಮೆ ಹಾಗೆಯೇ ಕ್ಯಾಬರೆ ಶೋ ನೋಡಿದ ಅರಬ ರಾತ್ರಿ ಕೊಟ್ಟ ಹಿಂಸೆಯ ನೆನಪಾಯಿತು. ಜೊತೆಗೆ ನರಳುತ್ತಿರುವ ಮಗುವಿನ ಚಿತ್ರ ಕಣ್ಣಮುಂದೆ ನಿಂತಿತು. ಅರಬ ಗಂಡನನ್ನು ಕಾಯುತ್ತಾ ಜುಲೇಖ ನಿಂತಳು.

# ನೋವಿನ ಸೆಲೆ

ಮಧ್ಯರಾತ್ರಿ ಮೀರುವವರೆಗೂ ಮಗುವಿನ ನರಳಾಟದಿಂದಾಗಿ ನಫೀಸಳಿಗೆ ನಿದ್ದೆ ಬಂದಿರಲಿಲ್ಲ. ಬೆಳಗಿನ ಜಾವದಲ್ಲಿ ನಿದ್ದೆ ಬಂದು ಥಕ್ಕನೆ ಎಚ್ಚರಗೊಂಡಳು. ಮಗುವಿನ ಮೈಮೇಲೆ ಕೈಹಾಕಿದಾಗ ತಣ್ಣಗಿತ್ತು. ಒಮ್ಮೆಲೇ ಜ್ವರ ಬಿಟ್ಟೇನೋ ಎಂದು ಕ್ಷಣ ಸಂತೋಷವಾಯಿತಾದರೂ ಅನುಮಾನದಿಂದ ಎದ್ದು ದೀಪವನ್ನು ಸ್ವಲ್ಪ ದೊಡ್ಡದು ಮಾಡಿ ನೋಡಿದಳು. ಮಗುವಿನ ಉಸಿರಾಟ ಆಗಲೇ ನಿಂತುಹೋಗಿತ್ತು! ನಫೀಸ ಗಟ್ಟಿಯಾಗಿ ಅಮ್ಮನನ್ನು ಕೂಗಿ ಎಬ್ಬಿಸಿದಳು. ಹಾಜಿಮ ಎದ್ದು ಬಂದು ಮಗುವಿನ ಎದೆ, ಮೂಗಿನ ಹತ್ತಿರ ಕೈಹಿಡಿದು ನೋಡಿ ಅಲ್ಲೇ ಕುಸಿದು ಕೂತಳು. ನಫೀಸ ಮತ್ತೊಮ್ಮೆ ಮಗುವನ್ನು ಮುಟ್ಟಿ ನೋಡುತ್ತಿರುವಾಗ ಹಾಜಿಮಾ, "ಏನೂ ಪ್ರಯೋಜನ ಇಲ್ಲ...ಎಲ್ಲ ಮುಗಿದು ಹೋಯ್ತು ಮಗಾ..." ಅಂದ್ಲು. ನಫೀಸಾಳ ಕಣ್ಣಲ್ಲಿ ನೀರುಕ್ಕಿ ಬಂತು.

ಹಾಜಿಮ ಮಗುವಿನ ಮುಖ ಮುಚ್ಚುವಂತೆ ವಸ್ತ್ರವೊಂದನ್ನು ಹೊದಿಸಿದಳು. ತಟ್ಟೆಯೆಂಡೆಯಲ್ಲಿದ್ದ ಊದುಬತ್ತಿ ಪೊಟ್ಟಣದಿಂದ ಕಡ್ಡಿಗಳನ್ನು ತೆಗೆದು ಹೊತ್ತಿಸಿಟ್ಟಳು. ಮನೆಯೊಳಗೆ ಊದುಬತ್ತಿಯ ಸುವಾಸನೆ ಹರಡಿತು. ಮಕ್ಕಳೆಲ್ಲ ಒಂದೊಂದಾಗಿ ಎದ್ದವು. ಸಣ್ಣವು ಎದ್ದು ಅಳತೊಡಗಿದವು. ಎಂದಿನಂತೆ ಹಾಜಿಮ ಮಕ್ಕಳಿಗೆ ಬಯ್ಯಲಿಲ್ಲ. ನಫೀಸ ಅಳುತ್ತಿರುವ ಮಕ್ಕಳನ್ನು ಮಲಗಿಸಲು ಪ್ರಯತ್ನಪಟ್ಟಳು. ಅವಳು ಆಗಾಗ ಕಣ್ಣೀರು ಸುರಿಸುವುದು ಕಂಡ ಮಕ್ಕಳಿಗೆ ನಿದ್ದೆ ಬರಲಿಲ್ಲ. ಪಿಳಿ ಪಿಳಿ ಕಣ್ಣು ಬಿಟ್ಟುಕೊಂಡು ಅಜ್ಜಿಯನ್ನು ಮತ್ತು ಚಿಕ್ಕಮ್ಮನನ್ನೇ ನೋಡುತ್ತಿದ್ದವು. ಅಜ್ಜಿ ಎಂದಿನಂತೆ ಸಿಡುಕು ಮೋರೆ ತೋರದೆ ಮೆತ್ತಗಾಗಿರುವುದು ಕಂಡು ಮುಯ್ಯದ್ದಿ ಎದ್ದು ಕಣ್ಣುಜ್ಜುತ್ತಾ ಬಂದು ಅವಳ ತೊಡೆಯ ಮೇಲೇರಿ

ಕೂತ. ಹಾಜಿಮ ಮಯ್ಯದ್ದಿಯ ಬೆನ್ನು ನೇವರಿಸಿ ಮುದ್ದುಮಾಡಿದಳು. ಅವಳಿಗರಿವಿಲ್ಲದೆಯೇ ಅವಳ ಕಣ್ಣೀರು ತೊಟ್ಟಿಕ್ಕತೊಡಗಿತ್ತು.

"ನಫೀಸಾ... ಅಲ್ಲಿ ಅಚ್ಚುಮ್ಮನನ್ನು ಕೂಗಿ ಎಬ್ಬಿಸು. ಅವಳು ಇಲ್ಲ ದಿದ್ದರೆ ಕೋಯಾಮುನನ್ನು ಕರೆ. ಜುಲೇಖಾಳಿಗೆ ಸುದ್ದಿ ಮುಟ್ಟಿಸಬೇಕಲ್ಲ..." ಅಂದ್ಲು ಹಾಜಿಮ. ನಫೀಸ ಎದ್ದು ಹೊರ ಬಂದು ಅಚ್ಚುಮ್ಮನ ಗುಡಿಸಲು ಕಡೆ ಹೋಗಿ "ಅಚ್ಚುಮ್ಮಾ..." ಅಂತ ಕೂಗಿದ್ಲು. ಒಳಗಿನಿಂದ ಉತ್ತರ ಬರದ್ದು ಕಂಡು ಅವಳು ಹೋಟ್ಲಿಗೆ ಹೋಗಿರಬೇಕು ಎಂದುಕೊಂಡಳು. ಕೋಯಾಮುನ ಗುಡಿಸಲ ಮುಂದೆ ಹೋಗಿ ಅವನನ್ನು ಕೂಗಿದಾಗ ಕೋಯಾಮು ಹೊರಗೆ ಬಂದ. "ಕೋಯಾಮು, ಜುಲೇಖಾಳ ಮಗು ತೀರಿಹೋಯ್ತು. ಅವಳು ಹೋಟ್ಲಿಗೆ ಹೋಗಿದ್ದಾಳೆ. ಅವಳಿಗೆ ಸುದ್ದಿ ತಿಳಿಸ್ಲಿಕ್ಕೆ ಅಮ್ಮ ನಿನ್ನನ್ನು ಕರ್ಕೊಂಬಾ ಅಂದ್ಲು" ಎಂದಳು ನಫೀಸಾ. "ನೀ ಮನೆಗೆ ಹೋಗು, ನಾನು ಅಂಗಿ ಹಾಕ್ಕೊಂಡು ಬೇಗ ಬರ್ತೇನೆ..." ಎಂದು ಕೋಯಾಮು ಮನೆಯೊಳಗೆ ನಡೆದ.

ಕೋಯಾಮು ಹಾಜಿಮಳ ಗುಡಿಸಲೊಳಗೆ ಬರುವಾಗ ಊದುಬತ್ತಿಯ ಸುವಾಸನೆ ಮೂಗಿಗೆ ಹೊಡೆಯುತ್ತಿತ್ತು. ಎದ್ದು ಕೂತ ಮಕ್ಕಳು ತೂಕಡಿ ಸುತ್ತಿದ್ದವು. ಹಾಜಿಮ ಮತ್ತು ನಫೀಸ ಮೌನವಾಗಿ ಕೂತಿದ್ದರು. ಮಗು ವಿನ ಶವವನ್ನು ಮಧ್ಯದಲ್ಲಿ ಮಲಗಿಸಿದ್ದರು. ಮುಖದ ಮೇಲಿಂದ ವಸ್ತ್ರ ವನ್ನು ಸರಿಸಿ ಕೋಯಾಮು ಸಂಪ್ರದಾಯದಂತೆ ಮುಖ ನೋಡಿದ. "ಅಲ್ಲಾಹುವಿನ ಇಚ್ಛೆಯ ಮುಂದೆ ನಾವೇನು ಮಾಡ್ಲಿಕ್ಕೆ ಸಾಧ್ಯ..." ಎಂಬ ವಿಷಾದ ವ್ಯಕ್ತಪಡಿಸಿದ. ಹಾಜಿಮಳತ್ತ ನೋಡುತ್ತ "ಯಾವ ಹೋಟ್ಲು ?" ಅಂತ ಕೇಳಿದ. ಹಾಜಿಮ "ಶೋರ್ ಹೋಟ್ಲು. ರೂಂ ನಂಬರ್ ಹದಿ ನೇಳು" ಅಂದ್ಲು. "ಮಮ್ಮುಟ್ಟಿಗೆ ತಿಳ್ಸೋದು ಬ್ಯಾಡ್ವಾ...?" ಅಂತ ಕೋಯಾಮು ಕೇಳಿದಾಗ "ಅವನಿಗೆ ಹೇಳ್ಬೇಕಲ್ಲ... ಮತ್ತೆ ದಫನ ಮಾಡೋದು ಹ್ಯಾಗೆ ? ಜುಲೇಖಾಳಿಗೆ ಮೊದ್ಲು ಹೇಳಿ ಬಾ, ನಂತರ ಮೀನು ಏಲಂ ಹಾಕ್ತಾರಲ್ಲಾ ಕಡ್ಲು ಬದಿಯಲ್ಲಿ...? ಅಲ್ಲಿಗೆ ಹೋದ್ರೆ ಮಮ್ಮುಟ್ಟಿ ಸಿಕ್ತಾನೆ. ಬೆಳಿಗ್ಗೆ ಬೇಗ ಬರ್ತಾನೆ ಅವ್ನು..." ಅಂದ್ಲು ಹಾಜಿಮ. "ಸರಿ..." ಎಂದು 'ಶೋರ್ ಹೋಟೇಲು ರೂಂ ನಂಬರ್ ಹದಿನೇಳು' ಎಂದು ಉರುಹಾಕುತ್ತ ಕೋಯಾಮು ಹೊರಟ.

ಹೊರಗೆ ಬೆಳಗ್ಗಿನ ಜಾವದ ಕಡಲು ತೀರದ ಲವಲವಿಕೆ ಮೂಡುವ ಸನ್ನಾಹ ನಡೆದಿತ್ತು. ಕೋಳಿಗಳ ಕೂಗಿನ ಜೊತೆಗೆ ಬೆಸ್ತರ ರಾಗದ ಇಂಪಾದ

ಕರೆ ಪೈಪೋಟಿ ನಡೆಸುತ್ತಿತ್ತು. ತೆಂಗಿನ ಮರಗಳ ಸೋಗೆಗಳೆಡೆಗಳಲ್ಲಿ ಗೂಡು ಕಟ್ಟಿದ ಕಾಗೆಗಳು ಎಚ್ಚತ್ತು ಬೆಳಗಾಯಿತೇನೋ ಎಂದುಕೊಂಡು ಕೂಗುತ್ತ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸುವ ಸನ್ನಾಹದಲ್ಲಿದ್ದವು. ತಣ್ಣಗಿನ ತಂಗಾಳಿ ಮೈಸೋಕಿದಂತೆ ಕೋಯಾಮುನಿಗೆ ಉಲ್ಲಾಸವೆನಿಸಿತ್ತು. ಹತ್ತು ಹೆಜ್ಜೆ ಇಡುವಷ್ಟರಲ್ಲಿ ಕುಟ್ಟಿಚಿರಾದ ಮಸೀದಿಯಿಂದ ಸುಬಹ್ ನಮಾಜಿನ ಕರೆ "ಅಲ್ಲಾಹು ಅಕ್ಬರ್..." ಸುಶ್ರಾವ್ಯವಾಗಿ ಕೇಳಿಬಂತು. "ಅಲ್ಲಾಹುವಿನ ಕರೆಗೆ ಯಾವುದಾದ್ರೂ ಇದಿರಾ...?" ಎಂದುಕೊಂಡು ಭಾವುಕನಾಗಿ 'ಮರ್ ಹಬಾ... ಮರ್‌ಹಬಾ...' ಅಂದುಕೊಂಡ. ತನ್ನೆರಡು ಕೈಗಳ ಬೆರಳು ಗಳನ್ನು ಕಣ್ಣಿಗೊತ್ತಿಕೊಂಡು ಮತ್ತೆ ತುಟಿಗಳಿಗೆ ತಾಗಿಸಿ ಸಂಪ್ರದಾಯದಂತೆ ಚುಂಬಿಸಿಕೊಂಡ. ಕೋಯಾಮುನಿಗೆ ಅಲ್ಪ ಸ್ವಲ್ಪ ಧಾರ್ಮಿಕ ಜ್ಞಾನವೂ ಇತ್ತು. ಅರಬೀ ಮದ್ರಸದಲ್ಲಿ ಕಲಿತದ್ದು. ಬಾಂಗ್ ಕರೆ ಕೇಳಿದಾಗ ಮೌನ ವಾಗಿ ನಿಂತು ಆಲಿಸಬೇಕು. ಚಲಿಸುವುದು, ಮಾತಾಡುವುದು, ಸಲ್ಲ ಎಂಬುದು ಗೊತ್ತಿತ್ತಾದರೂ ಈಗಿನ ಪರಿಸ್ಥಿತಿಯಲ್ಲಿ ನಿಲ್ಲುವುದು ಹೇಗೆ ಸಾಧ್ಯ? ಅಲ್ಲಾಹು ನಿರಾಕಾರನಾಗಿರುವವನೂ ಕಣ್ಣಿಲ್ಲದೆ ಎಲ್ಲ ಕಾಣುವವನೂ ಕಿವಿ ಯಿಲ್ಲದೆ ಎಲ್ಲ ಕೇಳಿಸಿಕೊಳ್ಳುವವನೂ ಆಗಿರುವಾಗ ತನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಲ್ಲ ಎಂದುಕೊಂಡು ಬೇಗ ಬೇಗನೆ ಹೋಟೇಲ್ ಶೋರ್ ಕಡೆ ನಡೆದ.

ಹೋಟೇಲಿನ ಹೊರ ಆವರಣದ ಬಾಗಿಲು ಹಾಕಿತ್ತು. ಒಳಗೆ ಹೋಗೂ ದಿದ್ದರೆ ಗೋಡೆ ಹಾರಿಯೇ ಹೋಗಬೇಕು. ಕಾವಲುಗಾರನೆಲ್ಲಾದ್ರೂ ಕಾಣ್ತಾನೋ ನೋಡೋಣ ಅಂತ ಹುಡುಕಾಡಿದ. ಕಾವಲುಗಾರ ಬೆಳಗಿನ ಜಾವವಾದ್ದರಿಂದ ಎಲ್ಲೋ ಹೋಗಿರಬೇಕೆಂದುಕೊಂಡ. ಆವರಣದ ಗೋಡೆ ಹಾರಿ ಹೋದರೂ ಹೋಟೆಲಿನೊಳಗೆ ಪ್ರವೇಶಿಸುವುದು ಕಷ್ಟ. 'ಇಲ್ಲಿಂ ದಲೇ ಹೆಸರು ಹಿಡಿದು ಕೂಗಿದರೆ ಹೇಗೆ' ಎಂಬ ಯೋಚನೆ ಹೊಳೆಯು ತ್ತಲೇ ತಡಮಾಡದೆ ಗಟ್ಟಿಯಾಗಿ "ಜುಲೇಖಾ..." ಎಂದು ಕೂಗಿ ಕರೆಯತೊಡ ಗಿದ.

ಜುಲೇಖಾಳಿಗೆ ನಿದ್ದೆ ಸರಿಯಾಗಿ ಬಂದಿರಲಿಲ್ಲ. ಮಗುವನ್ನೇ ನೆನೆ ಯುತ್ತ ಮಲಗಿದ್ದಳು. ಗಂಡ ಅರಬ ಗಡದ್ದಾಗಿ ಗೊರಕೆ ಹೊಡೆಯುತ್ತ ನಿದ್ರಿಸಿದ್ದ. ಬೆಳಗಿನ ಜಾವದಲ್ಲಿ ಮೆಲ್ಲಗೆ ಮಂಪರು ಬಂದಿತ್ತು. ತನ್ನನ್ನು ಯಾರೋ ಕೂಗುತ್ತಿರುವುದು ಕೇಳಿಸಿದಾಗ ಥಟ್ಟನೆ ಎದ್ದು ಕೂತಳು. ಕೋಣೆಯ ಬಾಗಿಲನ್ನು ಮೆಲ್ಲನೆ ತೆರೆದು ಹೊರಗೆ ಬಂದು ನಿಂತಳು. ಮಹ

ಡಿಯ ಮೇಲಿಂದ ಕೆಳಗೆ ತನ್ನನ್ನು ಕೂಗಿದವರಿಗಾಗಿ ಇಣುಕಿದಳು. ಮಸು ಗತ್ತಲೆಯಲ್ಲಿ ಆವರಣದ ಹೊರಗೆ ನಿಂತ ಕೋಯಾಮು ಕಂಡುಬಂದ. ಜುಲೇಖಾ ಅಲ್ಲಿಂದಲೇ ಕೂಗಿದಳು. "ಏನು ಕೋಯಾಮು...?" ನಿಂತಲ್ಲಿಂದಲೇ ಕೋಯಾಮು ಉತ್ತರಿಸಿದ, "ನೀನು ಬೇಗ ಮನೆಗೆ ಬರ್ಬೇಕಂತೆ... ನಿನ್ನಮ್ಮ ಹೇಳಿದ್ದಾಳೆ... ನಿನ್ನ ಮಗು..." ಎಂದು ತಡೆದ. "ಏನೋ ಯೇನಾಯ್ತೋ... ನನ್ನ ಮಗುವಿಗೆ...?" ಅಂತ ಗಡಬಡಿಸಿ ಜುಲೇಖಾ ಕೇಳಿದಾಗ, "ನೀನು ಕೆಳಗಿಳಿದು ಬಾ... ನಾನೆಲ್ಲ ಹೇಳ್ತೇನೆ..." ಎಂದ ಕೋಯಾಮು. ಅಲ್ಲಿಂದಲೇ ಗಾಬರಿಗೊಂಡು ಅನಾಹುತ ಮಾಡಿಕೊಂಡಾಳೆಂದು ಜಾಗ್ರತೆ ವಹಿಸಿಕೊಂಡ.

ಜುಲೇಖಾ ಗಾಬರಿಗೊಂಡು "ನಾನೀಗ್ಲೇ ಬರ್ತೇನೆ... ನಿಲ್ಲು..." ಎನ್ನುತ್ತಾ ಮಹಡಿಯಿಂದ ಕೆಳಗಿಳಿದಳು. ಆದರೆ ಮುಖ್ಯದ್ವಾರಕ್ಕೆ ಬೀಗ ಹಾಕಿತ್ತು. ಅಲ್ಲೆಲ್ಲೂ ಯಾರ ಸುಳಿವೂ ಇದ್ದಂತಿರಲಿಲ್ಲ. ಮತ್ತೆ ಮಹಡಿ ಹತ್ತಿ ಬಂದಳು. "ಕೋಯಾಮು... ಅಲ್ಲಿ ಯಾರಾದ್ರೂ ಕಾಣ್ತಾರಾ ನೋಡು..." ಎಂದು ಕೂಗಿ ಹೇಳಿದಳು. ಕೋಯಾಮು ಅತ್ತಿತ್ತ ಇಣುಕಿದವ "ಇಲ್ಲಿ ಯಾರೂ ಕಾಣ್ತಾ ಇಲ್ವಲ್ಲ... ಜುಲೇಖಾ..." ಎಂದ.

ಜುಲೇಖಾ ಅತ್ತಿತ್ತ ನಡೆಯುತ್ತ ಚಡಪಡಿಸಿದಳು. ಮುಂದೇನೂ ದಾರಿಕಾಣದೆ ಒಂದನೆಯ ಮಹಡಿ ಮೇಲಿಂದ ಕೆಳಗೆ ಹಾರಿಬಿಟ್ಟಳು! ಕೋಯಾಮು ನಿಂತಲ್ಲೇ ಚೀರಿದ... ಮಹಡಿ ಹತ್ತು ಹನ್ನೆರಡಡಿ ಎತ್ತರ ವಿದ್ದುದರಿಂದ ಹೆಚ್ಚೇನೂ ಪೆಟ್ಟಾಗಿರ್ಲಿಕ್ಕಿಲ್ಲ ಎಂದುಕೊಂಡ ಕೋಯಾಮು ಆವರಣದ ಗೋಡೆ ಹಾರಿದ. ಜುಲೇಖಾ ಬಿದ್ದಲ್ಲಿಂದ ಮೇಲೇಳುವ ಪ್ರಯತ್ನ ಮಾಡುತ್ತಿದ್ದಳು. "ಸ್ವಲ್ಪ ಕೈಹಿಡಿ... ಕೋಯಾಮು..." ಎಂದಳು ನರಳುತ್ತ. ಕೋಯಾಮು ಕೈಹಿಡಿದೆತ್ತುವಾಗ "ಯಾ ಅಲ್ಲಾಹ್..." ಎಂದು ಸಣ್ಣಗೆ ಚೀರಿದಳು. ಕಾವಲುಗಾರ ಎಲ್ಲಿದ್ದವನೋ "ಯಾರು... ಯಾರು..." ಎನ್ನುತ್ತ ಓಡಿಬಂದ. ಕೋಯಾಮು ಕ್ಷಣ ಹೆದರಿದ. "ಜುಲೇಖಳ ಮಗು ತೀರಿಹೋಯ್ತು. ಅದಕ್ಕೆ ಹೇಳ್ಲಿಕ್ಕೆ ಬಂದೇ... ನೀವ್ಯಾರೂ ಇಲ್ಲದ್ದು ನೋಡಿ ಗಡಿಬಿಡಿಯಲ್ಲಿ ಅವಳು ಮಹಡಿಮೇಲಿಂದ ಹಾರಿಬಿಟ್ಟಳು..." ಎಂದ ಕೋಯಾಮು.

ಕಾವಲುಗಾರ ಅವಳನ್ನು ಪರೀಕ್ಷಿಸುತ್ತ "ನೀನು ಎರಡನೇ ಮಹಡಿ ರೂಮ್ ನಂಬರ್ ಹದಿನೇಳರ ಅರಬನ ಹೆಂಡತಿ ಅಲ್ವಾ...?" ಅಂತ ಕೇಳಿದ.

ಜುಲೇಖ ಕ್ಷೀಣ ದನಿಯಲ್ಲಿ "ಹೌದು... ಕೆಳಗೆ ಬಾಗಿಲಿಗೆ ಬೀಗ ಹಾಕಿತ್ತು... ನನ್ನ ಮಗು..." ಎನ್ನುತ್ತ ಅತ್ತಳು.

"ನಿಂಗೇನು ಜೀವ ಎಳೀತಿತ್ತು ಹಾರ್ಲಿಕ್ಕೆ ? ಸ್ವಲ್ಪ ಕಾದಿದ್ರೆ ನಾ ಬರ್ತಾ ಇರ್ಲಿಲ್ವಾ. ನಾನು ಪಾಯಿಕಾನೆ ಕಡೆ ಹೋಗಿದ್ದೆ. ಸ್ವಲ್ಪ ನಿಂತಿದ್ರೆ ಏನಾ ಗ್ತಿತ್ತು ? ಮಗು ಹೋದ್ರೆ ನೀ ಬದ್ಕೋದು ಬ್ಯಾಡ್ವಾ ? ಸೊಂಟ ಮುರಿ ದ್ಕೋದ್ರೆ ಮತ್ತೆ ಹ್ಯಾಗೆ ಬದುಕುತ್ತಿ...?" ಅಂತ ಕಾವಲುಗಾರ ಜೋರು ಮಾಡಿದ. ಮೂಲೆಯಲ್ಲೆಲ್ಲೋ ಮಲಗಿದ್ದ ರೂಮ್ ಬಾಯ್ ಕೂಡ ಎದ್ದು ಬಂದಿದ್ದ. "ಅವಳ ಗಂಡ ಅರಬನಿಗೆ ಹೇಳಿ ಬರ್ತೇನೆ..." ಎಂದು ಓಡಿದ. ಜುಲೇಖ ನೋವಿನಿಂದ ನರಳುತ್ತಾ "ಅವರಿಗೆ ಹೇಳಿ ಏನೂ... ಪ್ರಯೋಜ್ನ ಇಲ್ಲ ಕೋಯಾಮು ಹೋಗೋಣ... ನನಗೇನೂ ಆಗಿಲ್ಲ... ನನ್ನ ಮಗುವನ್ನೊಮ್ಮೆ ನನಗೆ ತೋರಿಸು ಕೋಯಾಮು..." ಎಂದು ಕಣ್ಣೀರಿಟ್ಟಳು. ಕೋಯಾಮು ಅವಳನ್ನು ಆತುಹಿಡಿದುಕೊಂಡು ನಡೆದ. ಕಾವಲುಗಾರ ಗೇಟಿನ ಬಾಗಿಲು ತೆರೆದ. ಅವರು ಹೋದ ನಂತರ ಕಾವಲು ಗಾರ ಗೇಟಿನ ಬಾಗಿಲು ಹಾಕುತ್ತ "ಯಜಮಾನ್ರಿಗೆ ಸುದ್ದಿ ತಿಳಿದ್ರೆ... ಏನು ಗತಿ !" ಎಂದುಕೊಂಡು ಹೆದರಿದರೂ, "ಹುಡುಗಿಯ ಮಗು ತೀರಿಹೋಗಿದೆ ಯಂತೆ..." ಎಂದು ಭಯವನ್ನು ಅದುಮಿಕೊಂಡ. ರೂಮ್ ಬಾಯ್ ಅರಬನಿಗೆ ತಿಳಿಸಲೆಂದು ಹೋದವನು ತಿರುಗಿಬಾರದೆ ಇರುವುದನ್ನು ಕಂಡು ಪೆಚ್ಚುನಗೆ ನಕ್ಕ. ಬೀಡಿಯೊಂದನ್ನು ಹೊತ್ತಿಸಿ ಈ ಹೆಮ್ಮಕ್ಕಳ ಬದುಕಿನ ಬಗ್ಗೆ ಯೋಚಿಸುತ್ತ ನಿಟ್ಟುಸಿರುಬಿಟ್ಟ.

ಮಗುವನ್ನೊಮ್ಮೆ ನೋಡಬೇಕೆಂಬ ಹಟದಿಂದ ಹೇಗೊ ಏನೋ ತನ್ನ ನೋವನ್ನು ನುಂಗಿಕೊಂಡ ಜುಲೇಖ ಕೋಯಾಮುನ ಸಹಾಯದಿಂದ ಗುಡಿಸ ಲೊಳಗೆ ಬಂದಳು. ಅವಳ ಅವಸ್ಥೆ ಕಂಡು ಹಾಜಿಮ ಮತ್ತು ನಫೀಸಾ ಗಾಬರಿಗೊಂಡರು. ಕೋಯಾಮು ನಡೆದದ್ದನ್ನು ಹೇಳಿದ. ಹಾಜಿಮ, ನೀವೆಲ್ಲ ಯಾಕೆ ಹೀಗೆ ಮಾಡ್ತೀರೋ..." ಎಂದು ಗೋಳಾಡಿದಳು. ಜುಲೇಖ ಅಲ್ಲೇ ಮಗುವಿನ ಶವದ ಹತ್ತಿರ ಬಿದ್ದುಕೊಂಡಂತೆ ಕೂತವಳು ಮಗುವನ್ನೇ ನೋಡುತ್ತ ಮುಟ್ಟುತ್ತ ಚುಂಬಿಸುತ್ತ ಅಳತೊಡಗಿದಳು.

ಕೋಯಾಮು ಮಮ್ಮುಟ್ಟಿಯನ್ನು ಕರೆಯಲಿಕ್ಕೆಂದು ಅಲ್ಲಿಂದ ಓಡಿದ. ಮೀನು ಹರಾಜು ಮಾಡುವ ಧಕ್ಕೆಯಲ್ಲಿ ಆಗಲೇ ಜನ ಸೇರಿದ್ದರು. ಬೆಳಗ್ಗಿನ ಜಾವದಲ್ಲಿ ಹಿಡಿದು ತಂದ ಮೀನಿನ ಹರಾಜು ಆಗಲೇ ಶುರುವಾಗಿತ್ತು. ಸೈಕಲ್ಲು ಮೀನು ವ್ಯಾಪಾರಿಗಳ ತಂಡ ಪೈಪೋಟಿಗಿಳಿದಿತ್ತು. ಮಮ್ಮುಟ್ಟಿ

ಯನ್ನು ಕಂಡ ಕೋಯಾಮು ಕರೆದ. "ಜುಲೇಖಳ ಮಗು ತೀರಿಹೋಯ್ತು... ನಿನ್ನಮ್ಮ ನಿನ್ನನ್ನು ಕರ್‍ಕೊಂಬರ್‍ಲಿಕ್ಕೆ ಹೇಳಿದ್ದಾಳೆ..." ಎಂದ. ಮಮ್ಮುಟ್ಟಿ ಕ್ಷಣ ಕಸಿವಿಸಿಗೊಂಡು "ಹೋಗೋಣ..." ಎಂದು ತನ್ನ ಸೈಕಲ್ಲು ಹತ್ತಿದ. ಕ್ಯಾರಿಯರಿನಲ್ಲಿ ಕಟ್ಟಿದ ಬುಟ್ಟಿಯನ್ನು ಬಿಚ್ಚಿ ಕೈಯಲ್ಲಿ ಹಿಡಿದುಕೊಂಡು ಹತ್ತಿ ಕೂತ ಕೋಯಾಮು. ಮಮ್ಮುಟ್ಟಿ ಸೈಕಲ್ಲು ಮೆಟ್ಟುತ್ತ "ಮಸೀದಿಗೆ ಕೊಡುವ ಮಂತಿಗೆ ಎಷ್ಟು ಬಾಕಿ ಉಂಟೋ ಏನೋ..." ಎಂದುಕೊಂಡ. ಈಗ ಹೆಣ ದಫನ ಮಾಡುವ ಮುಂಚೆ ಬಾಕಿ ಸೆಟ್ಲಾಗಬೇಕಲ್ಲಾ... ಇಲ್ಲದಿದ್ರೆ ಜಮಾತಿನವ್ರು ಬಿಡ್ತಾರಾ ?!

ಜೇಬಿನಲ್ಲಿ ಮೀನು ವ್ಯಾಪಾರಕ್ಕೆಂದು ಇಟ್ಟುಕೊಂಡಿದ್ದ ಹಣವಿತ್ತು. ಮಮ್ಮುಟ್ಟಿಗೆ ಸ್ವಲ್ಪ ಧೈರ್ಯವಾಯಿತು. ವ್ಯಾಪಾರಕ್ಕೆಂತ ಮೊದ್ಲು ಹಣ ಕೊಟ್ಟಿದ್ದೂ ಜುಲೇಖಾಳೇ. ಅವಳ ಹಣವನ್ನೇ ಕೊಟ್ಟಂತಾಯ್ತು. ನಾಳಿನ ವ್ಯಾಪಾರಕ್ಕೇನಾದ್ರೂ ಮಾಡಿದ್ರೆ ಸರಿ... ಎಂದುಕೊಂಡ.

ಮಮ್ಮುಟ್ಟಿ ಮನೆಯೊಳಗೆ ಹೋದಾಗ ಜುಲೇಖಾಳ ಸಂಗತಿ ತಿಳಿದು "ನಿಂಗೇನು ಮಲಾಮತ್ ಹಿಡ್ದದ್ದು ? ತಲೆ ಸರಿಯಿಲ್ವಾ. ಅಷ್ಟು ಎತ್ತರದಿಂದ ಹಾರ್‍ಲಿಕ್ಕೆ...?" ಎಂದು ಗದರಿದ. ಜುಲೇಖ ಶುಷ್ಕ ನಗೆ ನಕ್ಕಳು. ಮೊದಲು ಹಟದಿಂದ ಜುಲೇಖ ನೋವು ನುಂಗಿಕೊಂಡಿದ್ದರೂ ಈಗೀಗ ಸೊಂಟದಲ್ಲಿ ನೋವು ಹೆಚ್ಚು ಹೆಚ್ಚಾಗುತ್ತಾ ಬಂದಂತೆ ಕಂಡುಬಂತು. ಸರಿಯಾಗಿ ಕೂತು ಕೊಳ್ಳಲಾರದೆ ಮಲಗಿಕೊಂಡೇ ಇದ್ದಳು. ನೋವಾದಾಗಲೆಲ್ಲ ಹಲ್ಲುಕಚ್ಚಿ ಕೊಂಡು ಸಹಿಸಿಕೊಳ್ಳತೊಡಗಿದ್ದಳು. ಮಮ್ಮುಟ್ಟಿ ಜುಲೇಖಳ ಪರಿಸ್ಥಿತಿ ಕಂಡು ಒಳಗೊಳಗೇ ನೊಂದುಕೊಂಡ. ಮೊದಲು ಶವ ದಫನ ಮಾಡುವ ವಿಲೇವಾರಿ ಮಾಡಿ ನಂತರ ಜುಲೇಖಳನ್ನು ಆಸ್ಪತ್ರೆಗೆ ಕರ್‍ಕೊಂಡು ಹೋಗ್ಬೇ ಕೆಂದುಕೊಂಡ. ಕೋಯಾಮುನನ್ನು ಕರೆದುಕೊಂಡು ಮಸೀದಿಯ ಕಡೆ ನಡೆದ.

ಆಗ್ಲೇ ಗಂಟೆ ಹತ್ತು ಕಳೆದಿತ್ತು. ಖಾಜಿ ಸಾಹೇಬರು ಮಸೀದಿಯೊಳಗೆ ಇರಲಿಲ್ಲ. ಮುತವಲ್ಲಿ ಖಾದರ್ ಹಾಜಿಯವರು ಪುಣ್ಯಕ್ಕೆ ಅಲ್ಲೇ ಇದ್ದರು. ಮಮ್ಮುಟ್ಟಿ ಸಲಾಂ ಮಾಡಿದ. ಖಾದರ್ ಹಾಜಿ ಮರು ಸಲಾಂ ಮಾಡಿದವರು "ಏನು...?" ಅಂತ ಕೇಳಿದರು. "ಅಕ್ಕನ ಮಗು ತೀರಿಹೋಯ್ತು" ಅಂದ ಮಮ್ಮುಟ್ಟಿ.

"ಇನ್ನಲಿಲ್ಲಾಹಿ, ವ ಇನ್ನ ಅಲೈಹಿ ರಾಜಿಊನ್" ಎಂದು ಹೇಳುತ್ತ ಜಮಾತಿನ ಮಂತಿಗೆ ಪುಸ್ತಕ ಎತ್ತಿತಂದು ತಿರುವುತ್ತ ಕೂತರು. "ಇಪ್ಪತ್ತೆಂಟು

ರೂಪಾಯಿ ಬಾಕಿ ಉಂಟಲ್ಲ..." ಎಂದರು. ಮಮ್ಮುಟ್ಟಿ ಮರು ಮಾತಾಡದೆ ಜೇಬಿನಿಂದ ಹಣ ಎಣಿಸಿ ಅವರ ಮುಂದೆ ಹಿಡಿದ. ಹಾಜಿಯವರು ರಶೀದಿ ಬರೆದುಕೊಟ್ಟರು. "ಹಾರೆ ಪಿಕ್ಕಾಸು ತೆಗ್ಸಿ ಕೊಡ್ತೇನೆ... ಬನ್ನಿ" ಎಂದು ಹೊರಗೆ ಕರೆದೊಯ್ದು ಖಬರಸ್ಥಾನದ ಮೂಲೆಯ ಜಾಗವೊಂದನ್ನು ತೋರಿಸಿದರು.

ಮಗುವಿನ 'ದಫನ' ಕಾರ್ಯ ಮುಗಿಸಿ ಗುಡಿಸಲ ಕಡೆ ಹಿಂತಿರುಗಿದಾಗ ಸಂಜೆ ನಾಲ್ಕು ಗಂಟೆಯಾಗಿತ್ತು.

ಹಾಜಿಮ ಮಾಡಿಟ್ಟ ಗಂಜಿಯನ್ನು ಉಂಡು ಕೋಯಾಮು ಮತ್ತು ಮಮ್ಮುಟ್ಟಿ ಜುಲೇಖಾಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಬಗ್ಗೆ ಕಾರ್ಯೋನ್ಮುಖರಾದರು. ಜುಲೇಖ ಎದ್ದು ನಿಲ್ಲುವ ಸ್ಥಿತಿಯಲ್ಲಿರಲಿಲ್ಲ. ಆಗಾಗ ನೋವಿನಿಂದ ನರಳುತ್ತಿದ್ದಳು. ಕೋಯಾಮು ಹೊರಗೆ ಹೋಗಿ ರಿಕ್ಷಾ ಮಾಡಿಕೊಂಡು ಬಂದ. ಇಬ್ಬರ ಆಸರೆಯಲ್ಲಿ ಜುಲೇಖಾ ರಿಕ್ಷಾದಲ್ಲಿ ಮಲಗಿದಂತೆ ಒರಗಿ ಕೂತಳು.

ಆಸ್ಪತ್ರೆಯಲ್ಲಿ ಡಾಕ್ಟರರು ಪರೀಕ್ಷಿಸಿ "ಸೊಂಟದ ಎಲುಬಿಗೆ ಪೆಟ್ಟಾಗಿದೆ. ಆದ್ದರಿಂದಲೇ ನೋವು. ಹದಿನೈದು ದಿನ ಆಸ್ಪತ್ರೆಯಲ್ಲೇ ಮಲಗಿರಬೇಕು" ಎಂದಾಗ ಮಮ್ಮುಟ್ಟಿಗೆ 'ಹಣಕ್ಕೇನು ಮಾಡೋದು ?' ಎಂಬ ಯೋಚನೆ ಮುತ್ತಿತು. ಕೋಯಾಮು "ನನ್ಹತ್ರ ಇದ್ದ ಹಣ ಎಲ್ಲಾ ಖರ್ಚಾಯ್ತು ಮಾರಾಯ. ಇನ್ನು ಆಸ್ಪತ್ರೆ ಖರ್ಚಿಗೇನ್ಮಾಡೂದೂ" ಅಂತ ಗೊಣಗಿದ. "ಇವ್ಳ ಗಂಡ ಅರಬಿ ಇದ್ದಾನಲ್ಲ. ಅವನ ಹತ್ರ ಕೇಳಿದ್ರೆ ಹೇಗೆ ?" ಎಂದು ಕೋಯಾಮು ತನ್ನ ಸಲಹೆಯನ್ನು ಮುಂದಿಟ್ಟ. ಈ ಅರಬರು ತಮ್ಮ ಹೆಂಡಂದಿರ ಬಗ್ಗೆ ಎಷ್ಟು ದಯಾದಾಕ್ಷಿಣ್ಯ ಹೊಂದಿದವರು ಅಂತ ಕೋಯಾಮುಗೆ ಚೆನ್ನಾಗಿ ಗೊತ್ತಿತ್ತು.

ಒಮ್ಮೆ ಕೋಯಾಮುನ ಅಕ್ಕನಿಗೆ ಜ್ವರ ಬಂದಾಗ ಅವಳ ಅರಬಿ ಗಂಡ ನೂರು ರೂಪಾಯಿಯನ್ನು ದಲ್ಲಾಳಿಯ ಮುಖಾಂತರ ಕಳುಹಿಸಿಕೊಟ್ಟಿದ್ದ. ಕೆಲವು ದಿವಸಗಳ ನಂತರ ಗುಣಮುಖಳಾಗಿ ಅವನು ತಂಗಿದ ಹೋಟೆಲಿಗೆ ಹೋದಾಗ ಅವನ ಕೋಣೆಯಲ್ಲಿ ಇನ್ನೊಂದು ಹೆಣ್ಣಿರುವುದು ಕಂಡು ಅವಳು ಹಿಂತಿರುಗಿ ಬಂದಿದ್ದಳು. ಅರಬಿ ಇವಳಿಲ್ಲದಿದ್ದಾಗ ಅದೇ ಕೇರಿಯ ಕುಂಞಾತುಮ್ಮಳನ್ನು ಮದುವೆಯಾಗಿದ್ದ. ಕೋಯಾಮುನ ಅಕ್ಕ ಹೋಟೆಲಿನಿಂದ ಹಿಂತಿರುಗಿ ಬಂದವಳೇ ಕುಂಞಾತುಮ್ಮ ಮತ್ತು ಅವಳ ತಾಯಿಯೊಂದಿಗೆ ಜಗಳಾಡಿ ಹೊಡೆದಾಟದವರೆಗೂ ಹೋಗಿತ್ತು. ಕೋಯಾಮು ತನ್ನ ಅಕ್ಕನಿಗೆ

"ಅವಳ ತಪ್ಪಿಲ್ಲ ನೋಡು... ಈ ಅರಬರಿಗೆ ನೀನು ಗುಣವಾಗಿ ಬರುವವರೆಗೆ ಕಾಯೋದಕ್ಕಿಂತ ಮಂಡೆಮಾರಿಯಾಗಿತ್ತು ?" ಎಂದು ಸಮಾಧಾನ ಮಾಡಿದ್ದ. ದಲ್ಲಾಳಿಯೊಂದಿಗೆ ಅಕ್ಕ ಹೋಗಿ ಮಾತಾಡಿದಾಗ ಮತ್ತೆ ಅರಬಿ "ನಿನ್ನನ್ನು ಹದಿನೈದು ದಿವಸ ಸುಮ್ಮನೆ ಕಾದು ಕೂತಿರ್ಲಿಕ್ಕೆ ಹೇಗೆ ಸಾಧ್ಯ ? ಸುಮ್ಮನೆ ಕೂತು ಮೇಲೆ ನೋಡ್ಲಿಕ್ಕಲ್ಲ ಅವರು ತಮ್ಮ ದೇಶದಿಂದ ಇಲ್ಲಿಗೆ ಬಂದದ್ದು..." ಎಂದಿದ್ದ. ಅವಳಿಗೆ ಎರಡು ಮದುವೆಯಿಂದಲ್ಲಿ ಚೆನ್ನಾಗಿ ಗಿಟ್ಟಿತ್ತು. "ನೀನು ಹಾಳಾಗಿ ಹೋಗ್ತೀ..." ಎಂದು ಕೋಯಾಮುನ ಅಕ್ಕ ಅವನಿಗೆ ಶಾಪ ಕೊಟ್ಟಿದ್ದಳು. ದಲ್ಲಾಳಿ ನಗುತ್ತಲೇ ಅದನ್ನು ಸ್ವೀಕರಿಸಿದ್ದ. ಮನೆಗೆ ಬಂದು ಅವಳು ದಿಕ್ಕು ತೋಚದಂತೆ ಕೂತಿದ್ದಳು.

ಜುಲೇಖ ಕೂಡ ಅದೇ ತರ ಆಗ್ತಾಳೆ. ಇವಳಿನ್ನು ಗುಣಮುಖಳಾಗಿ ಹಿಂತಿರುಗುವಾಗ ಅವನು ಬೇರೆಯವರನ್ನು ನಿಕಾಹ್ ಆಗಿರುತ್ತಾನೆ. ಈ ಬಡ ಹೆಮ್ಮಕ್ಕಳ ನೆತ್ತರನ್ನು ಹೀರಿ ಸುಖಪಡುವ ಈ ಸೂಳೇ ಮಕ್ಕಳನ್ನು ಹೀಗೆಯೇ ಬಿಡಬಾರದು. ನಿಕಾಹ್ ಆದ ಹೆಂಡತಿ ಸಾಯೋ ಸ್ಥಿತಿಯಲ್ಲಿದ್ದರೂ ಸುಖ ಪಡುವ ರಾಕ್ಷಸರನ್ನು ಬಿಡಕೂಡದು, ಎಂದುಕೊಂಡ ಕೋಯಾಮು. "ನೋಡು ಮಮ್ಮುಟ್ಟಿ ನನ್ನ ಜೊತೆಗೆ ಬಾ... ಎಲ್ಲಿಗೆ ಏನು ಅಂತ ಕೇಳ ಕೂಡದು. ದುಸರಾ ಮಾತಾಡಕೂಡ್ದು. ನಾನು ಹೇಳಿದ ಹಾಗೆ ಕೇಳಬೇಕು" ಅಂತ ಹೇಳಿ ಕೈಹಿಡಿದು ಎಳೆದಂತೆ ಮಮ್ಮುಟ್ಟಿಯನ್ನು ಕರ್ಕೊಂಡು ಹೊರಟ.

ರಿಕ್ಷಾ ಮಾಡಿಕೊಂಡು ಇಬ್ಬರೂ ಶೋರ್ ಹೋಟೇಲಿನ ಮುಂದೆ ಹೋಗಿ ಇಳಿದರು. ಮಮ್ಮುಟ್ಟಿ ಸುಮ್ಮನೆ ಕೋಯಾಮುನನ್ನು ಹಿಂಬಾಲಿಸಿದ. "ನಾನೀಗ ಜುಲೇಖಾಳ ಗಂಡ ಅರಬನ ಕೋಣೆಯೊಳಗೆ ನಿನ್ನನ್ನು ಕರ್ಕೊಂಡು ಹೋಗ್ತೇನೆ. ನೀನು ಮಾತ್ರ ನಾ ಹೇಳಿದ ಹಾಗೇ ಕೇಳಬೇಕು" ಎಂದ ಕೋಯಾಮು. "ಛೇ...ನೀನೀಗ ಇದಕ್ಕಾ ನನ್ನನ್ನು ಕರ್ಕೊಂಬಂದದ್ದು? ಯಾಕೆ ಇನ್ನೊಂದು ಗಲಾಟೆ... ಎಲ್ಲಾದ್ರೂ ಸಾಲಗೀಲ ಮಾಡಿದ್ರೂ ಪರ್ವಾಗಿಲ್ಲ..." ಎಂದು ರಾಗ ಎಳೆದ ಮಮ್ಮುಟ್ಟಿ. "ನಂಗೊತ್ತು ನೀ ಹೀಗೆ ರಾಗ ಎಳೀತಿ ಅಂತ. ಹೀಗೆಲ್ಲಾ ನಾವು ಮೆತ್ತಗಾಗಿರೋದ್ರಿಂದ್ಲೇ ಅವರು ನಮ್ಮ ಮೇಲೆ ಸವಾರಿ ಮಾಡ್ತಾ ಇರೂದು. ಅವನು ಅವಳ ಗಂಡ ಅಲ್ವಾ ? ಅವಳನ್ನು ಚೆನ್ನಾಗಿ ನೋಡ್ಕೊಳ್ಳೋ ಜವಾಬ್ದಾರಿ ಅವನಿಗಿರಬೇಕೋ ಬೇಡವಾ ? ಬರೀ ಮಲಕೊಳ್ಳೋಕೆ ಮಾತ್ರ ಹೆಂಡ್ತೀನಾ ?" ಎಂದು ಕೋಯಾಮು ಹೇಳಿದಾಗ, ಮಮ್ಮುಟ್ಟಿ "ಅವರವರ ಕರ್ಮ ಅವರಿಗೆ. ನಮ್ಗೆ ಯಾಕೆ..." ಎಂದ.

"ನಾವೇನೂ ಅನ್ಯಾಯಂ ಮಾಡ್ತಾ ಇಲ್ಲ. ಅವನ ಜವಾಬ್ದಾರಿ ಅವನಿಗೆ ತಿಳ್ಕೋದು. ಅವನು ಜುಲೇಖಾಳ ಸಹಾಯಂಕ್ಕೆ ಬಾರದೆ ಇದ್ರೆ ನಾನು ಬಿಡೋದಿಲ್ಲ. ನನ್ನಕ್ಕನಿಗಾದದ್ದು ಜುಲೇಖಾಳಿಗೆ ಆಗಲಂ ಬಿಡೂದಿಲ್ಲ..." ಎಂದ ಕೋಯಾಮು. ಅವನ ಸ್ಪಷ್ಟ ನೇರ ಮಾತಿಗೆ ಮಮ್ಮುಟ್ಟಿ ಏನೂ ಉತ್ತರಿಸಲಾಗದೆ ಅವನ ಹಿಂದೆಯೇ ಹೋದ.

ಎರಡನೇ ಮಹಡಿಯ ಹದಿನೇಳನೇ ನಂಬರ್ ಕೋಣೆಯಲ್ಲಿ ಜುಲೇಖಾಳ ಗಂಡ ಅರಬ ಹೋಟೇಲಿನ ಮೇಲ್ವಿಚಾರಕನೊಬ್ಬನೊಂದಿಗೆ ಮಾತಾಡುತ್ತಾ ಕೂತಿದ್ದ. ಇವರು ಕೋಣೆಯೊಳಗೆ ಬಂದಂತೆ ಮೇಲ್ವಿಚಾರಕ ಕೋಣೆಯಿಂದ ಹೊರಡುವವನಿದ್ದ. ಕೋಯಾಮು ಅವನನ್ನು ನಿಲ್ಲಿಸಿ "ನಮಗೆ ಈ ಅರಬಿಯು ಜೊತೆ ಮಾತಾಡಬೇಕು. ನಮಗೆ ಅರಬಿ ಭಾಷೆಯಾಗಲೀ ಇಂಗ್ಲೀಷ್ ಆಗ್ಲಿ ಬರೂದಿಲ್ಲ. ನೀವು ಸ್ವಲ್ಪ ಸಹಾಯಂ ಮಾಡ್ಬೇಕು..." ಎಂದು ವಿನಂತಿಸಿದ. "ನಾನು ಹೆಚ್ಚು ಹೊತ್ತು ನಿಂತ್ರೆ ನನ್ನ ಕೆಲಸ ಆಗ್ಬೇಕಲ್ಲ... ಅದೇನು ಹೇಳ್ಬೇಕೋ. ಬೇಗ ಹೇಳಿ..." ಎಂದ ಮೇಲ್ವಿಚಾರಕ.

"ನೋಡಿ ಇವರ ಹೆಂಡ್ತಿ ಜುಲೇಖ ಬಿದ್ದು ಆಸ್ಪತ್ರೆ ಸೇರಿದ್ದಾಳೆ. ಆ ಬಗ್ಗೆ ಇವರಿಗೆ ತಿಳಿಸೋದಿಕ್ಕೆ ನಾವು ಬಂದದ್ದು" ಎಂದ ಕೋಯಾಮು. ಮೇಲ್ವಿಚಾರಕ ತರ್ಜುಮೆ ಮಾಡಿ ಅರಬನಿಗೆ ತಿಳಿಸಿದ. ಅರಬ "ಅದಕ್ಕೆ ನಾನೇನ್ಮಾಡ್ಬೇಕು ? ಅವಳಿಗೆ ಮಳಿಗೆಯಿಂದ ಹಾರೂಂತ ನಾನು ಹೇಳಿದ್ನೇನು ?" ಎಂದ ಒರಟಾಗಿ.

"ಅದೇನೋ... ನೀವು ಹೇಳೋದು ಸರಿ... ಅವಳು ಹಾಗೆ ಮಾಡ್ಬಾರ್ದಾಗಿತ್ತು. ಆದರೆ ಈಗ ಆಸ್ಪತ್ರೆಯಲ್ಲಿದ್ದಾಳೆ. ಅವಳ ಖರ್ಚಿಗೆ ಹಣ ಬೇಕಾಗಿದೆ..." ಎಂದ ಮಮ್ಮುಟ್ಟಿ– ಶಾಂತಿಯುತವಾಗಿ ಬಂದ ಕಾರ್ಯ ಮುಗಿಯಲಿ ಅನ್ನೋ ಆಸೆಯಿಂದ.

"ಅದೆಲ್ಲಾ ನೀವು ನಂಗೆ ಹೇಳೂದು ಬೇಡ. ನಾನೇನಾದ್ರೂ ಕೊಡಬೇಕಂತ ನಿಶ್ಚಯ ಮಾಡಿದ್ರೆ ಅಚ್ಚುಕೋಯನ ಮುಖಾಂತರ ಕಳಿಸ್ತೇನೆ..." ಎಂದ ಅರಬಿ.

ದಲ್ಲಾಳಿಯ ಮುಖಾಂತರ ಕಳ್ಸಿದ್ರೆ ಕಳ್ಸಿದ ಇಲ್ಲದಿದ್ರೆ ಇಲ್ಲ ಅಂತ ಕೋಯಾಮುನಿಗೆ ಗೊತ್ತು. ಕೋಯಾಮು ಸಿಟ್ಟಿನಿಂದ ಕಣ್ಣು ಕೆಂಪಗೆ ಮಾಡಿ "ಬಂದವನು ಮಮ್ಮುಟ್ಟಿ. ಜುಲೇಖಾಳ ಅಣ್ಣ. ಅವನೇ ಈಗ ಅವಳನ್ನು ಆಸ್ಪತ್ರೆಗೆ ಸೇರಿಸಿ ಬಂದದ್ದು. ಸುಮ್ಮನೆ ಖರ್ಚಿಗೆ ಹಣ ಕೊಡ್ತಿಯಾದ್ರೆ ಕೊಡು. ಇಲ್ಲ

ವಾದ್ರೆ ನೀನು ಹೊಡ್ಡು ಮಾಳಿಗೆಯಿಂದ ಕೆಳಗೆ ನೂಕಿದ್ದು ಅಂತ ಪೋಲೀಸ್ ಕಂಪ್ಲೇಂಟು ಕೊಡ್ತೇವೆ" ಎಂದು ಬೆದರಿಸಿದ.

ಅರಬ್ಬ ಕಕ್ಕಾಬಿಕ್ಕಿಯಾದ. ಏನಾದ್ರೂ ಕಂಪ್ಲೆಂಟು ಕೊಟ್ಟರೆ ಈ ಪರಿಚಯವಿಲ್ಲದ ದೇಶದಲ್ಲಿ ಏನು ಮಾಡಬೇಕು. ನಮ್ಮ ದೇಶಕ್ಕೆಲ್ಲಿಯಾದ್ರೂ ದೂರು ಹೋದರೆ ಮಾನವಾಗಿ ಬದ್ಕೋದು ಹೇಗೆ ? ಎಂದು ಕಂಗಾಲಾದ. ಕೂಡಲೇ ಜೇಬಿನಿಂದ ಒಂದು ಸಾವಿರ ರೂಪಾಯಿ ಎಣಿಸಿ ಮಮ್ಮೂಟ್ಟಿಯ ಕೈಗಿತ್ತ. ಕೋಯಾಮು ಗೆದ್ದ ಸಂತೋಷದಿಂದ ಮಮ್ಮೂಟ್ಟಿಯನ್ನು ಕರೆದು ಕೊಂಡು ಕೋಣೆಯ ಹೊರಗೆ ಬಂದ. "ಬೇಗ ಈ ಹಣವನ್ನು ಜುಲೇಖಾಳ ಕೈಗಿಟ್ಟು ಬಿಡೋಣ..." ಎಂದ ಕೋಯಾಮು. ಮಮ್ಮೂಟ್ಟಿ ಕೃತಜ್ಞತೆಯಿಂದ ಮೂಕನಾಗಿದ್ದ !

# ಒಂದಾಗದ ಹೃದಯುಗಳು

ಸಲೀಮನ ಮದುಂವೆಯು ಸುದ್ದಿ ಕುಟ್ಟಿಚಿರಾದ ಗುಡಿಸಲುಗೇರಿಯಲ್ಲಿ ಲವಲವಿಕೆ ಮೂಡಿಸಿತ್ತು. ಕೋಯಾವು, ಅಚ್ಚುಮ್ಮ, ಚೆಯ್ಯುಮ್ಮ, ಸಾರಮ್ಮ ಮುಂತಾದವರೆಲ್ಲ ಸಂಜೆ ಮರಳರಾಶಿಯ ಮೇಲೆ ಕೂತು ಪಟ್ಟಾಂಗ ಹೊಡೆಯುವಾಗ ಹಾಜಿಮ ಹೊತ್ತು ತಂದ ಬಿಸಿಬಿಸಿ ಸುದ್ದಿ ಈ ಹೊಸ ವಾತಾವರಣಕ್ಕೆ ಕಾರಣವಾಗಿತ್ತು.

ಕೋಯಾವು ಸೈದುಕೋಯಾರ ಮೊದಲ ಮಗಳ ಮದುವೆಯನ್ನು ಜ್ಞಾಪಿಸಿಕೊಂಡಿದ್ದ. ಆಗ ಅವನು ಹನ್ನೆರಡು ವರ್ಷದ ಹುಡುಗನಾಗಿದ್ದನಂತೆ. "ಅದೆಂಥಾ ಮದುವೆ! ಅಬ್ಬಾ... ನಾನು ಊಟಕ್ಕೆ ಕೂತದ್ದು ಮೊದಲನೆ ಮಜ್ಲೀಸಿನಲ್ಲೇ 'ಗಂಡಿನ ಕಡೆಯುವ್ರು ಮತ್ತು ವಿಶೇಷ ಅತಿಥಿಗಳು ಮಾತ್ರ' ಎಂದು ಸರಬರಾಜಿಗೆ ನಿಂತವ್ರು ಹೇಳುತ್ತಿದ್ದಹಾಗೆ ನಾನು ಜನರ ಮಧ್ಯೆ ನುಗ್ಗಿ ಹೋಗಿದ್ದೆ" ಅಂತ ಕೋಯಾಮು ಹೇಳಿದಾಗ ಕುಂಞಾಲಿ ಮಧ್ಯೆ ತಡೆದು "ಯಾರಿಗೂ ಗೊತ್ತಾಗ್ಲಿಲ್ವಾ.. ನೀನ್ಯಾರೂಂತ?" ಎಂದು ಕೇಳಿದ. ಕೋಯಾಮು ಮತ್ತಷ್ಟು ಉತ್ಸಾಹದಿಂದ ತನ್ನ ಸಾಹಸದ ಕತೆ ಮುಂದುವರಿಸಿದ, "ಗೊತ್ತಾದರೇನಾಯ್ತು? ಅಬೂಬಕ್ಕರ್ ಇಲ್ವಾ. ಸೈಕಲ್ ಅಂಗ್ಡಿಯಿಂದ ಅವ್ನು ಸರಬರಾಜಿಗೆ ನಿಂತಿದ್ದ. ಅವ್ನು ನನ್ನ ಗುರ್ತು ಹಿಡ್ಡಿದ್ದ. ಆದ್ರೆಂತ ಮಾಡೂದು 'ಮಂಜ್ಲೀಸ್'ನಲ್ಲಿ ಕೂತವನನ್ನು ಎಬ್ಬಿಸ್ಲಿಕ್ಕಾಗ್ತದಾ? ಗಂಡಿನ ಕಡೆಯುವ್ರು ಎದುರಿಗೆ ಸಣ್ಣತನ ತೋರಿಸ್ಲಿಕ್ಕಾಗ್ತದಾ? ನನ್ನ ಹತ್ತಿರ ಬಂದು ದುರುದುರು ನೋಡಿದ. ನಾನು ಸುಮ್ನೆ ಟೇಬಲ್ ಮೇಲೆ ಕೈಯಿಟ್ಟು ಕುರ್ಚಿ ಮೇಲೆ ಕೂತಿದ್ದೆ." ಸಾಹಸದ ಕತೆ ಕೇಳ್ತಾ ಇದ್ದ ಕುಂಞಾಲಿ ಮರಳಿನಲ್ಲಿ ಕುಂಡೆ ಬದಲಾಯ್ಸಿ ಕೂತ. ಮುಂದಿನದ್ದು ಅತ್ಯಂತ ರುಚಿಕರವಾದ್ದು...

ಕೋಯಾಮಂ ಹೇಳೂದಕ್ಕೆ ಮುಂಚೆಯೇ ಕೆಲವರು ಊಹಿಸಿಬಿಟ್ಟು ಬಾಯಲ್ಲಿ ನೀರೂರಿತ್ತು!.

"ಕೂತಿದ್ದ ಹಾಗೆ... ಬಂತು... ಎಂತದಂತಿ? ಎಣಿಸಿದ್ರೆ ಈಗ್ಲೂ ಮೈ ಜುಮ್ಮೆಂತದೆ! ಇಡೀ ಇಡೀ ಕೋಳಿ ಕಾಲಿನ ತೊಡೆ ಎಣ್ಣೆಲಿ ಕರ್‍ದದ್ದು. ಬಿರಿಯಾನಿ, ಆಡಿನ ಮಾಂಸದ ಮಸಾಲ, ಮೊಸರು ಹಾಕಿದ ಕಚ್ಚುಂಬರಿ, ಹಪ್ಪಳ. ಅಬ್ಬಾ ಒಂದೇ ಎರಡೆ! ತಿಂದದ್ದೇ ತಿಂದದ್ದು ಮಾರಾಯ್ರೆ! ಕಂಡೀಲಿಕ್ಕಿಂತ ನೀರಿನ ಗ್ಲಾಸು ಎತ್ತಿದೆ... ಅದು ನೀರಲ್ಲ ಮಾರಾಯ್ರೆ ತಾಜಾ ಲಿಂಬೆಹಣ್ಣಿಂದು ಶರಬತ್ತು!" ಎನ್ನುತ್ತಾ ಕೋಯಾಮು ಬಾಯಿ ಚಪ್ಪರಿಸಿದ.

ಎಲ್ಲರ ಮುಂದೆಯೂ ಬಿರಿಯಾನಿ, ತಂದೂರಿ, ಕಚ್ಚುಂಬರಿ, ಹಪ್ಪಳ ಬಂದು ನಿಂತಂತಾಗಿತ್ತು. ಅಚ್ಚುಮ್ಮ ಕೇಳಿದ್ಲು, "ಹೌದ, ಕೋಯಾಮು ಆ ಕೋಳಿ ಎಣ್ಣೇಲಿ ಕರ್‍ದದ್ದು... ಹ್ಯಾಗಿರ್ತದಾ?"

ಕೋಯಾಮು ಅವಳನ್ನು ಇನ್ನಷ್ಟು ಕುತೂಹಲಕ್ಕೀಡು ಮಾಡುತ್ತ, "ಅದೆಂತ ಹೇಳ್ತಿ ಅಚ್ಚುಮ್ಮ. ಅದನ್ನು ತಿಂದು ನೋಡಬೇಕು. ಅದೆಷ್ಟು ರುಚಿ ಅಂತಿ! ಮಸಾಲೆ ಗಿಸಾಲೆ ಎಲ್ಲಾ ಹಾಕಿ ಒಳ್ಳೆ ನಾಯರ್ ಹೋಟ್ಲು ನೀರುಳ್ಳಿ ಬಜೆ ಇಲ್ವಾ ಹಾಗಾಗ್ತದೆ! ನಾನು ತಿಂದದ್ದೇ ತಿಂದದ್ದು!" ಅಂದ.

ಚೆಯ್ಯುಮ್ಮಳಿಗೆ ಅಸೂಯೆಯಾಯ್ತು. ಅವಳು ಕೇಳಿದ್ಲು, "ಅದೆಂತಾ ಬಂಡಲ್‌ಬಿಡ್ತಿಯಾ ಕೋಯಾಮು...? ಅಂದು ನಾನು ಕೂಡ ಆ ಮದುವೆಗೆ ಹೋಗಿದ್ದೆ. ನಮ್ಮ ಮಜ್ಲಿಸು ಊಟಕ್ಕೆ ಕೂತಾಗ ಬಂದದ್ದು ಬರೀ ಬಿರಿಯಾನಿ ಅದೂ ಬರೀ ಮೂಳೆಗಳದ್ದು. ಚೂರುಪಾರು ಮಾಂಸದ ತುಂಡಿತ್ತು ಅಷ್ಟೆ..."

"ನಿಂಗೆಂತಾ ಗೊತ್ತು...? ಕೊನೆಯ ಮಜ್ಲಿಸಲ್ಲಿ ನೀ ಕೂತಿದ್ಯೋ ಏನೋ... ಗಂಡಿನ ಕಡೆಯವ್ರು ಕೂತಿದ್ದ ಮೊದಲನೇ 'ಮಜ್ಲಿಸ'ಲ್ಲಿ ನಾ ಕೂತದ್ದು ಅಂತೇನೆ..." ಎಂದ ಕೋಯಾಮು ಸ್ವಲ್ಪ ಸಿಟ್ಟಾಗಿಯೇ.

ಮುಂದುಕಿ ಸಾರಮ್ಮ ಅಲ್ಲೇ ಕೂತಿದ್ದವ್ಳು, "ಅದೆಲ್ಲ ದೊಡ್ಡ ಮನುಷ್ಯರ ಮನೆ ಮದುವೇನೇ ಹಾಗೆ. ಗಂಡಿನ ಕಡೆಯವ್ರಿಗೆ, ದೊಡ್ಡ ಮುಂಡಾಸಿನವ್ರಿಗೆಲ್ಲ ಇಸೇಸ ಇದ್ದದ್ದೇ... ಇಲ್ಲದೆ ಇದ್ರೆ ಅದೆಂತಾ ಮದ್ವೆ?" ಅಂತ ಅಂದ್ಲು.

ಅಷ್ಟರಲ್ಲಿ ದೊಡ್ಡ ಹುಂಜವೊಂದು ಹೇಂಟೆಯನ್ನು ಪ್ರಣಯೋನ್ಮತ್ತನಾಗಿ ಅಟ್ಟಿಸಿಕೊಂಡುಬಂತು. ಹೇಂಟೆ ಜಿಗಿದು, ಹಾರಾಡಿ, ಕಂಪ್ಸಳಿಸಿ ಅತ್ತಿತ್ತ

ಓಡಾಡಿ ತಪ್ಪಿಸ್ಕೊಳ್ಳೋದಕ್ಕೆ ಪ್ರಯತ್ನ ಮಾಡಿತ್ತು. ಇವ್ರೆಲ್ಲ ಕೂತಿದ್ದ ಜಾಗಕ್ಕೆ ಓಡಿಬಂದು 'ಕ್ಕೊ... ಕ್ಕೊ...' ಎನ್ನುತ್ತಾ ಹಾರಿ ತಪ್ಪಿಸ್ಕೊಳ್ಳೋ ದಿಕ್ಕೆ ಹೋಯ್ತಾದ್ರೂ ಹುಂಜ ಬಿಡದೆ ಬೆನ್ನು ಹತ್ತಿ ಹಾರಿ ಕೂತವ್ರೆಲ್ಲ ಗಲಿ ಬಿಲಿಗೊಳ್ಳುವಂತೆ ಮಾಡಿತ್ತು. ಮಾತು ಮದುವೆಯಿಂದ ಕೋಳಿಗಳ ಕಡೆ ಹೊರಳಿತು.

ಅಚ್ಚುವಮ್ಮ ಕೋಯಾಮುನನ್ನು ನೋಡುತ್ತಾ "ಅದೆಂತ ಶೈತಾನ್ ಹುಂಜವನ್ನು ಬೆಳೆಸಿದ್ಯೋ ಕೋಯಾಮು ? ನನ್ನ ಹೇಂಟೆಯನ್ನು ಒಂದು ಹೊತ್ತೂ ನಿಲ್ಲೋದಿಕ್ಕೆ ಬಿಡೋದಿಲ್ಲ..." ಅಂದ್ಲು ಸ್ವಲ್ಪ ಸಿಟ್ಟಿನಿಂದ್ಲೇ. ಬೆಳಗ್ಗಿನಿಂದ ಅಚ್ಚುವಮ್ಮಳ ಮನೆಯಂಗ್ಳೆಲ್ಲಾ ಕೋಳಿದ್ದೇ ಗಲಾಟೆ. ಮನೆ ಯೊಳಗೆ, ಮಾಡಿನ ಮೇಲೆ ಕುಣಿದು ಹಾರಿ ಅಟ್ಟಿಸಿಕೊಂಡು ಹೋಗುವ ಗಲಾಟೆ ಕೇಳಿ ಅವಳ ತಲೆ ಚಿಟ್ಟುಹಿಡಿದಂತಾಗಿತ್ತು. ಓಡಿಸಿ ಓಡಿಸಿ ಸುಸ್ತಾ ಗಿತ್ತು.

"ನಾನೇಕೆ ಕಟ್ಟಿಹಾಕ್ಲಿ... ನೀನೇ ಹೇಂಟೆಯನ್ನು ಕೂಡಿಹಾಕು. ಇಲ್ಲ ದಿದ್ರೆ ಬಿರಿಯಾನಿ ಮಾಡು. ನಮ್ಮನ್ನೂ ಕರಿ, ನಾವೆಲ್ಲ ಬರ್ತೇವೆ ಬೇಕಾದ್ರೆ..." ಅಂದ ಕೋಯಾಮು. ಅಲ್ಲೆಲ್ಲ ನಗೆ ಅಲೆಯೆದ್ದಿತು. "ಬಿರಿಯಾನಿ ಬೇಡ ಮಾರಾಯ್ತಿ ಮಸಾಲೆಹಾಕಿ ಎಣ್ಣೇಲಿ ಕರ್ದಿಡು. ನನ್ನನ್ನು ಕರೀಲಿಕ್ಕೆ ಮರೀ ಬ್ಯಾಡ..." ಅಂತ ಮುದುಕಿ ಸಾರಮ್ಮ ಬೊಚ್ಚುಬಾಯಿ ಚಪ್ಪರಿಸುತ್ತ ಅಂದ್ಲು. ಚೆಯ್ಯುಮ್ಮಳೂ ದನಿಗೂಡಿಸಿದ್ಲು. "ಸಾಯೋ ಮುದುಕಿಯ ಆಸೆ ಅಲ್ವಾ ! ಹಾಗೆಯೇ ಮಾಡು ಅಚ್ಚುವಮ್ಮ, ತಿಂದು ಸಾಯ್ಲಿ. ನನ್ನನ್ನು ಕರೀಲಿಕ್ಕೆ ಮಾತ್ರ ಮರಿಬ್ಯಾಡ..." ಅಚ್ಚುವಮ್ಮನ ಗಂಟಿಕ್ಕಿದ ಮುಖದಲ್ಲೂ ನಗೆಯುಕ್ಕಿ ಬಂತು. "ಯಾರದ್ದೋ ಪುಣ್ಯಾತ್ಮರ ಮನೆಯಲ್ಲಿ ತಂದೂರಿ ಯಾಗುವ ಕೋಳಿಗಳ ಬಗ್ಗೆ ನಮ್ಮ ತಮಾಷೆ..." ಅಂತ ಮುದುಕಿ ಸಾರಮ್ಮ ಗೊಣಗಿದ್ಲು.

ಮದುವೆಯ ಊಟದ ಕತೆ ಕೇಳುತ್ತ ಖುಷಿಯಾಗಿ ಕೂತಿದ್ದ ಪುತ್ತು ಮೋಳು, ಪಾತು, ಅದ್ರಾಮ, ಅಂದುಂಞ್ ಮುಂತಾದ ಮಕ್ಕಳಿಗೆಲ್ಲ ಆ ಕೋಳಿಗಳನ್ನು ಬಡಿದು ಕೊಲ್ಲುವಷ್ಟು ಸಿಟ್ಟು ಬಂದಿತ್ತು. "ಇದೊಂದು ಸತ್ತ ಕೋಳಿಗಳು ಬಂದದ್ದಲ್ಲದಿದ್ರೆ 'ಕೋಯಾಮಾತ' ಎಲ್ಲಾ ಹೇಳ್ತಿದ್ದ" ಅಂದ್ಲು ಪಾತು. ಅದ್ರಾಮ ಕೋಯಾಮುನನ್ನು ಮೆತ್ತಗೆ ಮುಟ್ಟುತ್ತ ಕೇಳಿದ "ಕೋಯಾಮಾತಾ ಯಾವಾಗ ಮದುವೆ...?"

"ಅಯ್ಯೋ ಪೋರ್ರಿ, ನನ್ನ ಮದುವೇನಾ...? ಯಾವಾಗಾಂತ ಹೇಳ್ಲಿ,

ಹೆಣ್ಣು ಸಿಕ್ಕಿದಾಗ..." ಅಂತ ಕೋಯಾಮು ತಮಾಷೆ ಮಾಡಿದ. ಅಲ್ಲೆಲ್ಲ ಗೊಳ್ಳೆಂಬ ನಗೆ ಎದ್ದಿತು. ಅದ್ರಾಮ ಬಿಡದೆ "ಅಲ್ಲ ಕೋಯಾಮಾತ, ಸೈದುಕೋಯಾರ ಮದುವೆ..." ಎಂದ. "ಅಲ್ವೊ ಮರಿ, ಸೈದುಕೋಯರಿಗೆ ಮದುವೆ ಅಲ್ವೋ, ಅವರ ಮಗನ ಮದುವೆ" ಅಂತ ಕುಂಞಾಲಿ ಸರಿ ಮಾಡಿದ. ಮತ್ತಷ್ಟು ನಗೆಯುಕ್ಕಿತು.

ಹಾಜಿಮ ಕೊಟ್ಟ ಸುದ್ದಿಯಲ್ಲಿ ಮದುವೆ ಯಾವತ್ತಂತ ಹೇಳಿರಲಿಲ್ಲವಾದ್ದರಿಂದ ಸರಿಯಾಗಿ ಯಾವ ದಿನ ಮದುವೆ ಅನ್ನೋದು ಯಾರಿಗೂ ತಿಳಿದಿರಲಿಲ್ಲ. ಸೈದುಕೋಯಾರ ಮನೆಯ ಮುಂದೆ ಚಪ್ಪರ ಹಾಕುತ್ತಿರೂದು, ಪಾತ್ರೆಗಳಿಗೆ ಕಲಾಯಿ ಹಾಕಿಸುತ್ತಿರೂದು ಕಂಡ ಕುಂಞಾಲಿಯೇ ಹೇಳಿದ. "ಆದಷ್ಟು ಬೇಗ ಇರ್ಬೇಕು..."

ಮಕ್ಕಳೆಲ್ಲ ಮದುವೆಗೆ ಹೋಗ್ಬೇಕು, ಮೊದಲನೆ ಪಂಕ್ತಿಗೇ ಹೋಗಿ ಕೂರಬೇಕೆನ್ನೊ ಆಲೋಚನೆಯಲ್ಲಿ ಮುಳುಗಿದ್ದರು. ಅಲ್ಲೆ ಕೋಯಾಮುನ ಗುಡಿಸಲು ಕಡೆಯಿಂದ ಕೆಟ್ಟ ವಾಸನೆ ಬಂತು. ಎಲ್ಲರೂ ಮೂಗಿಗೆ ಕೈ ಹಿಡಿದು ಅತ್ತ ನೋಡಿದರು. ಕೊಳಚೆ ಗುಂಡಿಯನ್ನು ಕೋಳಿಗಳು ಕೆದಕತೊಡಗಿದ್ದುವು. ಚೆಯ್ಯುಮ್ಮ ಅತ್ತ ನೋಡಿ ಕೋಳಿಗಳ ಗುರುತುಹಿಡಿದು, "ನೋಡು ಕೋಯಾಮು, ನಿನ್ನ ಹುಂಜ ಹೇಂಟೆಗಳೊಂದಿಗೆ ಹೇಗೆ ಕೆಸರು ಕೆದುಕುತ್ತಾ ಇದೆ ನೋಡು..." ಅಂತ ತಮಾಷೆ ಮಾಡಿದ್ಲು. ಕೋಯಾಮು ಕಲ್ಲೊಂದನ್ನು ಅವುಗಳತ್ತ ಬಿಸಾಡಿ 'ಹಚಾ ಹಚಾ...' ಅಂತ ಓಡಿಸಿದ. ಅಲ್ಲಿಂದ ಎಲ್ಲರೂ ಚದುರಿದರು.

ಗುಡಿಸಲುಗೇರಿಯಲ್ಲಿ ಸಲೀಮನ ಮದುವೆಯ ಬಗ್ಗೆ ಮಾತಾಡುತ್ತಿದ್ದಾಗ ಸೈದುಕೋಯರ ಮನೆಯಲ್ಲಿ ಮದುವೆಯ ಸಡಗರ ತುಂಬಿತ್ತು. ಮದುವೆಯ ಮೂರುದಿನಗಳ ಮುಂಚೆಯೇ ಮನೆಯಲ್ಲಿ ಸಂಬಂಧಿಕರು ತುಂಬಿದ್ದರು. ಅರೆಯುವುದು, ಹುಡಿಮಾಡುವುದು, ಕಲ್ಲು ಹೆಕ್ಕುವುದು, ಮೊದಲಾದ ಕೆಲಸಗಳಲ್ಲಿ ಹೆಂಗಸರು ತೊಡಗಿದ್ದರೆ ಗಂಡಸರು ಚಪ್ಪರ ಕಟ್ಟುವುದು, ಅಲಂಕರಿಸುವುದು, ಕುರ್ಚಿ ಮೇಜುಗಳನ್ನು ಹೊಂದಿಸುವ ಕೆಲಸಗಳಲ್ಲಿ ಮಗ್ನರಾಗಿದ್ದರು. ಮಕ್ಕಳ ಹಿಂಡು ಚಪ್ಪರದ ಅಲಂಕಾರದಲ್ಲಿ ತೊಡಗಿದ್ದವರ ಕೈಯಲ್ಲಿ ಚಿತ್ರ ವಿಚಿತ್ರ ರೂಪು ತಾಳುವ ಬಣ್ಣದ ಕಾಗದಗಳನ್ನು ನೋಡುವುದಕ್ಕೆ ಮತ್ತು ಮಾಂಸಕ್ಕಾಗಿ ಕಟ್ಟಿಹಾಕಿದ್ದ ಆಡುಗಳನ್ನು ನೋಡುವುದಕ್ಕೆ ಹಿಂಡುಕಟ್ಟಿ ನಿಂತಿದ್ದವು.

ಸಲೀಮ ತನ್ನ ಕೋಣೆಯಲ್ಲಿ ಸಂಬಂಧಿಕ ಗೆಳೆಯರೊಂದಿಗೆ ಅದೂ

ಇದೂ ಮಾತಾಡುತ್ತ ಕೂತಿರುತ್ತಿದ್ದ. ಷರೀಫಮ್ಮ, ಜುಬೇದ ಅಲ್ಲಿ ಇಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದರು. ಸೈದುಕೋಯರು ಹೊರ ಕೆಲಸದ ವ್ಯವಸ್ಥೆಗಾಗಿ ಅತ್ತಿತ್ತ ಓಡಾಡುತ್ತಿದ್ದರು. ಹಾಜಿಮ ದೈನಂದಿನ ಊಟದ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಾದ್ದರಿಂದ ಸಲೀಮನ ಮದುವೆ ಮುಗಿಯುವ ತನಕ ಹೆಚ್ಚುಹೊತ್ತು ಸೈದುಕೋಯಾರ ಮನೆಯಲ್ಲೇ ನಿಲ್ಲಬೇಕಾಗಿತ್ತು.

ಮದುವೆಯ ಮುಂಚಿನ ದಿನ ಷರೀಫಮ್ಮ ಹಾಜಿಮಳಿಗೆ ಹೊಸತೊಂದು ನೂಲಿನ ಮುಂಡು, ರುಮಾಲು ಮತ್ತು ಕುಪ್ಪಸ, ನಫೀಸಳಿಗೆ ಒಂದು ಸೀರೆ, ಕೊಟ್ಟಿದ್ದಳು. ಹಾಜಿಮ ಇದರಿಂದ ಅತ್ಯಂತ ಸಂತೋಷಪಟ್ಟಳಾದರೂ ನಫೀಸ ತಾಯಿ ತಂದ ಸೀರೆಯನ್ನು ಶೂನ್ಯ ದೃಷ್ಟಿಯಿಂದ ನೋಡಿದ್ದಳು. ಇತ್ತೀಚೆಗೆ ನಫೀಸಾ ಮಾತಾಡುವುದನ್ನೇ ಕಡಿಮೆಮಾಡಿಬಿಟ್ಟಿದ್ದಳು. ಅಮ್ಮ ಮನೆಯಲ್ಲಿಲ್ಲದ್ದರಿಂದ ಮನೆ ಕೆಲಸವನ್ನೆಲ್ಲ ಅವಳೇ ನೋಡಿಕೊಳ್ಳಬೇಕಾಗಿತ್ತು. ಅಕ್ಕಂದಿರ ಮಕ್ಕಳನ್ನು ನೋಡಿಕೊಳ್ಳುವುದು, ಅವರ ಬಟ್ಟೆಗಳನ್ನು ಒಗೆಯುವುದು, ಜುಲೇಖಾಳಿಗೆ ಊಟ ಕಳುಹಿಸೋದು ಇವೇ ಮುಂತಾದ ಕೆಲಸಗಳನ್ನು ಮಾಡುತ್ತಿದ್ದಳು. ಬಿಡುವಾದಾಗಲೆಲ್ಲ ಸಮುದ್ರ ತೀರದ ಮರಳು ನೆಲದಲ್ಲಿ ಕೂತು ಅಲೆಯೆಬ್ಬಿಸುವ ಕಡಲು ಮತ್ತು ದಿಗಂತವನ್ನು ನೋಡುತ್ತಿರುತ್ತಿದ್ದಳು.

"ಮದುವೆಯ ದಿನ ನಫೀಸಳನ್ನು ಬರ್ಲಿಕ್ಕೆ ಹೇಳು..." ಅಂತ ಜುಬೇದ ಮತ್ತು ಷರೀಫಮ್ಮ ಇಬ್ಬರೂ ಹಾಜಿಮಳಿಗೆ ಹೇಳಿದ್ದರು. ಹಾಜಿಮ ಬಂದು "ನಫೀಸಾ... ನೀನು ಮದುವೆಯ ದಿನ ಬರಬೇಕಂತ ಜುಬೇದ ಹೇಳಿದ್ದಾಳೆ... ಷರೀಫಮ್ಮ ಕೂಡ ಹೇಳಿದ್ದಾರೆ ಮಗಾ..." ಅಂದಿದ್ದಳು. ನಫೀಸಾ 'ಹೂಂ...' ಅಂದ್ಲು ಅಷ್ಟೆ. ಹಾಜಿಮಳಿಗೆ ಮಗಳಿಗೆ ಹೊಸ ಸೀರೆ ಉಡಿಸಿ ಮದುವೆ ಮನೆಯ ತುಂಬ ಓಡಾಡಿಸುವ ಆಸೆ. ಮದುವೆಯ ದೊಡ್ಡ ದೊಡ್ಡ ಮನೆಯ ಹೆಂಗಸರು ರಾಶಿ ರಾಶಿ ಚಿನ್ನ ಕುತ್ತಿಗೆಯಲ್ಲಿ ಹಾಕಿಕೊಂಡು ಬರುತ್ತಾರೆ, ಅವರೆಲ್ಲ ನನ್ನ ಮಗಳನ್ನು ನೋಡಬೇಕು. ಬಡ ಹುಡುಗಿಯಾದರೂ ಎಷ್ಟು ಸುಂದರಿಯಾಗಿದ್ದಾಳೆಂತ ಮೂಗಿನ ಮೇಲೆ ಬೆರಳಿಟ್ಟುಕೊಂಡು ಅಸೂಯೆ ಪಡಬೇಕು. ಅವಳ ಚಂದ ಕಂಡಾದರೂ ಯಾರಾದರೊಬ್ಬ ಪುಣ್ಯಾತ್ಮರು ತಮ್ಮ ಮನೆ ತುಂಬಿಸಿಕೊಳ್ಳುವ ಮನಸ್ಸು ಮಾಡಿದರೆ ತಾನೆಷ್ಟು ಸಂತೋಷ ಪಡುತ್ತಿದ್ದೆ !

ನಫೀಸ ಅಮ್ಮನ ಮಾತುಗಳಿಗೆ ಕಿವಿಕೊಡಲಿಲ್ಲ. ಮದುವೆಯ ದಿನ

ಹಾಜಿಮ ಕರೆದಾಗ "ಈ ಮಕ್ಕಳನ್ನೆಲ್ಲ ಯಾರು ನೋಡ್ಕೊಳ್ಳೋದು ? ಆಸ್ಪತ್ರೆಯಲ್ಲಿರುವ ಜುಲೇಖಾಳಿಗೆ ಗಂಜಿ ಯಾರು ಮಾಡಿಕೊಡೋದು ? ನೀನು ಹೋಗಮ್ಮ, ನಾನಿಲ್ಲೇ ಇರ್ತೀನೆ" ಎಂದು ಬಿಟ್ಟಳು. ಮದುವೆ ಮುಗಿದ ಸಂಜೆ ಹಾಜಿಮ ಹಿಂತಿರುಗಿ ಬಂದಾಗ ಷರೀಫಮ್ಮ ಕಟ್ಟಿಕೊಟ್ಟ ಬಿರಿಯಾನಿ, ಸಿಹಿ ತಿಂಡಿ ಮನೆಗೆ ತಂದಿದ್ದಳು. "ಇದನ್ನು ನಫೀಸಳಿಗೆ ಕೊಡು ಅಂತ ಷರೀಫಮ್ಮ ಕಟ್ಟಿಕೊಟ್ರು. ನಾವು ಬಡವರಾದ್ರೂ ನಮ್ಮ ಮೇಲೆ ಅವರಿಗೆಷ್ಟು ಪಿರೀತಿ ಇದೆ ನೋಡು, ಒಳ್ಳೆ ಮನುಷ್ಯರು..." ಅಂದ್ಲು ಹಾಜಿಮ. ನಫೀಸ ಬಿರಿಯಾನಿಯನ್ನು ಮಕ್ಕಳಿಗೆಲ್ಲ ಹಂಚಿಕೊಟ್ಟಳು. ಒಂದು ತುತ್ತನ್ನು ತಾನೂ ಬಾಯಿಗಿಟ್ಟಳಾದರೂ ತಿನ್ನಲಾಗದೆ ತನ್ನ ಪಾಲನ್ನೂ ಮಕ್ಕಳಿಗೇ ಹಂಚಿದಳು. ಹಾಜಿಮ ಮದುವೆ ಮನೆಯ ಕೆಲಸ ಇನ್ನೂ ಮುಗಿದಿಲ್ಲ ಅಂತ ಮತ್ತೆ ಸೈದುಕೋಯರ ಮನೆ ಕಡೆ ಹೋದಳು.

ಹಾಜಿಮ ಮದುವೆ ಮುಗಿಸಿ ಮನೆಗೆ ಬಂದವಳು ವಾರವಿಡೀ ಮನೆಗೆ ಬಂದವರೊಡನೆಲ್ಲ ಮದುವೆಯ ವಿಷಯ ಹೇಳಿದ್ದೇ ಹೇಳಿದ್ದು. ಮದುವೆಯ ಊಟ, ಉಪಚಾರ, ಕುಟ್ಟಿಚಿರಾದ ಗುಡಿಸಲುಗೇರಿಯ ಜನರಿಗೂ ಹೊಟ್ಟೆ ತುಂಬ ಊಟ ಹಾಕಿದ ಸೈದುಕೋಯರ ಔದಾರ್ಯ, ಮದುಮಗಳ ಚಿನ್ನಾಭರಣಗಳ ಬಗ್ಗೆ ಮನೆ ಮಂದಿಯೊಡನೆ, ನೆರೆಹೊರೆಯವರೊಂದಿಗೆ ಎಷ್ಟು ಹೇಳಿದರೂ ಅವಳಿಗೆ ತೃಪ್ತಿಯೇ ಇರಲಿಲ್ಲ. ಅವಳ ಬಾಯಿಯಲ್ಲಿ ಸಲೀಮನ ಬಗ್ಗೆ ಏನಾದ್ರೂ ಬರುತ್ತದೇನೋ ಅಂತ ನಫೀಸ ಕಾತರಳಾಗಿದ್ದಳು. "ಮದುಮಗ ಎಷ್ಟು ಮಂದ್ವಾಗಿದ್ದಾನೆಂದ್ರೆ...! ಮದುಮಗಳೆಷ್ಟು ಪುಣ್ಯ ಮಾಡಿದ್ದಾಳೋ..." ಅಂತ ಮಾತಿನ ಮಧ್ಯೆ ಒಮ್ಮೆ ಅಮ್ಮ ಹೇಳಿದಳು. ತನ್ನ ಬಗ್ಗೆ ಏನಾದ್ರೂ ಅಮ್ಮನ ಜೊತೆ ಮಾತನಾಡಿದ್ದಾನೋ ಎಂದು ಕೇಳಿ ತಿಳಿಯುವ ಕುತೂಹಲ ನಫೀಸಳಲ್ಲಿ ಮೂಡಿತ್ತಾದರೂ ಕೇಳುವ ಧೈರ್ಯ ಸಾಲದೆ ತಡೆದುಕೊಂಡಿದ್ದಳು. ತನ್ನ ಬಗ್ಗೆ ಅವ್ನೇನಂತ ಕೇಳಬೇಕು ? ತನಗೂ ಅವನಿಗೂ ಏನು ಸಂಬಂಧ ? ಬರೀ ಮನೆ ಕೆಲಸದಾಕೆ... ಅಷ್ಟೆ! ಅವನ ನೆನಪಿನಲ್ಲಿ ನಾನು ಹೇಗೆ ಉಳಿಯಲು ಸಾಧ್ಯ? ಎಂಬ ಪ್ರಶ್ನೆಗಳು ಅವಳಲ್ಲಿ ಮೂಡಿ, ಪೆಚ್ಚಾಗಿ ಮುದುಡಿಕೊಳ್ಳುತ್ತಿದ್ದಳು.

* * *

ಸಲೀಮ ಮದುವೆಯ ಬಗ್ಗೆ ಹೆಚ್ಚು ಲವಲವಿಕೆಯಿಂದೇನೂ ಇರಲಿಲ್ಲ. ಅವನಿಗೆ ತನ್ನ ಮದುವೆ ಎಂಬ ಸಂತೋಷಕ್ಕಿಂತ ತಾನು ಮದುವೆಯಾಗೂದ

ರಿಂದ ತನ್ನ ತಂದೆ ತಾಯಿ, ಸಹೋದರಿಯರ ಸಂತೋಷಕ್ಕೆ ಕಾರಣನಾಗಿದ್ದೇನೆಂಬ ತೃಪ್ತಿ ಹೆಚ್ಚು ಮುಖ್ಯವಾಗಿತ್ತು. ಪ್ರತಿಯೊಂದನ್ನೂ ಅವರು ಹೇಳಿದ ಹಾಗೆ ಕರಾರುವಾಕ್ಕಾಗಿ ಪಾಲಿಸಿದ. ಸೈದುಕೋಯ ತನ್ನ ಮಗನ ಬಗ್ಗೆ ಹೆಮ್ಮೆ ಪಟ್ಟುಕೊಂಡಿದ್ದರು.

ಮದುವೆಯಾದ ಎರಡು ದಿನಗಳ ನಂತರ ಒಂದು ದಿನ ಷರೀಫಮ್ಮ ಸೈದುಕೋಯರನ್ನು ಕರೆದು ಪಿಸುದನಿಯಲ್ಲಿ "ನೋಡಿ ನಮ್ಮ ಸೊಸೆಗೆ ನೂರು ಪವನು ಬಂಗಾರ ಹಾಕಿಕೊಡ್ತೇನೆಂತಲ್ವಾ ಹಾಜಿಯುವರು ಹೇಳಿದ್ದು ? ಬಂಗಾರ ಹಾಕಿದ್ದು ಒಂದಿಪ್ಪತ್ತು ಪವನು ಇರಬಹುದು. ಮತ್ತೆಲ್ಲ ರೋಲ್ಡು ಗೋಲ್ಡಿಂದು" ಅಂತ ಅಂದರು. ಸೈದುಕೋಯ ಹೆಂಡತಿಯ ಮಾತು ಕೇಳಿ ದಂಗಾದರು. 'ಇದ್ಯಾಕೆ ಅವರು ಹೀಗೆ ಮಾಡಿದ್ದು ? ಮಗಳು ಹೇಗೂ ಕೋಯಾ ಮನೆತನದ ಸಂಪ್ರದಾಯದಂತೆ ತವರು ಮನೆಯಲ್ಲೇ ಇರುತ್ತಾಳೆ ತಾನೇ ಎಂಬ ಅಸಡ್ಡೆಯಿಂದ ಇರಬಹುದೆ ? ಈ ತರ ಅವರು ಮಾಡಿದ್ದರಿಂದ ತಮ್ಮ ಮಾತನ್ನೆಲ್ಲ ಪಾಲಿಸಿದ ತಮ್ಮ ಒಬ್ಬನೇ ಮಗನಿಗೆ ನಾವು ಅನ್ಯಾಯ ಮಾಡಿದಂತಾಗಲಿಲ್ಲವೇ ? ಹೀಗೆ ಮಾಡುವ ಮುಂಚೆ ನನ್ನಿಂದ ಅಷ್ಟು ಬಂಗಾರ ಹಾಕಲಿಕ್ಕೆ ಸಾಧ್ಯವಿಲ್ಲಾಂತ ಹಾಜಿಯುವರು ನನ್ನ ಕಡೆ ಹೇಳಬಹುದಿತ್ತಲ್ಲಾ ! ಎಂದೆಲ್ಲಾ ಯೋಚನೆಗಳು ಅವರನ್ನು ಮುತ್ತತೊಡಗಿದಾಗ ತಲೆ ಚಿಟ್ಟು ಹಿಡಿದಂತಾಯಿತು. ಷರೀಫಮ್ಮ ಮಗನನ್ನು ಕರೆದು ಕೂಡ ಈ ವಿಷಯುವನ್ನು ತಿಳಿಸಿದರು. ಆದರೆ ಸಲೀಮ ಮಾತ್ರ "ಅದೆಲ್ಲ ನಂಗೊತ್ತಿಲ್ಲಮ್ಮಾ... ನೀವಾಯ್ತು ನಿಮ್ಮ ಸೊಸೆಯಾಯ್ತು..." ಎಂದು ಬಿಟ್ಟ.

ಷರೀಫಮ್ಮನಿಗೆ ಬೀಗರು ಮಾತಿಗೆ ತಪ್ಪಿದ ಬೇಸರಕ್ಕಿಂತ ಈಗಾಗಲೇ ಈ ವಿಷಯ ಸಂಬಂಧಿಕರಿಗೆಲ್ಲಾ ತಿಳಿದುಬಿಟ್ಟಿದ್ದು ಹೆಚ್ಚು ವ್ಯಥೆಗೆ ಕಾರಣವಾಗಿತ್ತು. ತಮ್ಮ ತರವಾಡಿನಲ್ಲೇ ಈ ತರ ಹಿಂದೆ ಆದದ್ದಿಲ್ಲ. ತಮ್ಮ ಮಾನ ಮರ್ಯಾದೆಗೆಲ್ಲ ಜನ ಮೂರ್ಕಾಸು ಬೆಲೆ ಕಟ್ಟಿದರಲ್ಲಾಂತ ಚಿಂತಿಸತೊಡಗಿದರು. ಸೈದುಕೋಯರೊಂದಿಗೆ "ಹಾಜಿಯುವರೊಂದಿಗೆ ಈ ವಿಷಯ ಮಾತಾಡಿ, ನಮ್ಮ ಮರ್ಯಾದೆ ಎಲ್ಲಾ ಹೋಯ್ತು..." ಎಂದು ಗೋಗರೆದಿದ್ದಾದರೂ ಸೈದುಕೋಯ ಅವರು ಆ ಬಗ್ಗೆ "ನಾನೇನಂತ ಹೇಳೂದು... ಅವರೆಲ್ಲ ತಿಳಿದವರು. ತಿಳಿದೂ ತಿಳಿದೂ ಮಾತಿಗೆ ತಪ್ಪಿದ್ರೇನು ಮಾಡ್ಲಿಕ್ಕಾಗ್ತದೆ ?" ಎಂದು ಕೈಕಟ್ಟಿ ಕೂತಾಗ ಷರೀಫಮ್ಮ ಇನ್ನಷ್ಟು ಕಂಗಾಲಾಗಿದ್ದರು. ಸಂಬಂಧಿಕರಲ್ಲಿ ಅನೇಕರು, "ನಿಮ್ಮ ಮಗನನ್ನು ಅತ್ತೆ ಮನೆಗೆ ಹೋಗಲು ಬಿಡಬೇಡಿ, ಆಗ ತನ್ನಷ್ಟಕ್ಕೆ ಹಾಜಿಯುವರು ಬಗ್ಗುತ್ತಾರೆ" ಅಂತ

ಸಲಹೆ ನೀಡಿದರು. ಆದರೆ ಷರೀಫಮ್ಮನಾಗ್ಲಿ ಸೈದುಕೋಯಾರಾಗ್ಲಿ ಹೀಗೆ ಹಿಂಸಿಸಲು ತಯಾರಿರಲಿಲ್ಲ. ಇನ್ನೊಂದು ರಾದ್ಧಾಂತದಿಂದ ತನ್ನ ಮಗನ ಬದುಕು ನರಕವಾಗೂದು ಬೇಡ ಅಂತ ಸುಮ್ಮನಿದ್ದರು. ಮದುವೆಯ ದಿನ ಇದ್ದ ಸಂತಸ, ನೆಮ್ಮದಿ ನಂತರ ಉಳಿಯಲಿಲ್ಲ.

ಸಲೀಮ್ ಮನೆತನದ ಸಂಪ್ರದಾಯದಂತೆ ಅತ್ತೆ ಮನೆಗೆ ಸಂಜೆ ಹೋಗಿ ಬೆಳಗ್ಗಿನ ಜಾವ ಹಿಂತಿರುಗಿ ಬರುತ್ತಿದ್ದವನು ಒಂದು ದಿನ ಎಲ್ಲೂ ಹೋಗದೆ ಮನೆಯಲ್ಲೇ ಇದ್ದು ಬಿಟ್ಟ. ಷರೀಫಮ್ಮ "ಏನು ಮಗಾ... ಭೇಪುರಕ್ಕೆ ಹೋಗೂದಿಲ್ವಾ...?" ಅಂತ ಕೇಳಿದರು. "ಇಲ್ಲಮ್ಮ ತಲೆನೋಯುತ್ತದೆ. ನಾಳೆ ಹೋಗ್ತೇನೆ..." ಎಂದ. ಆದರೆ ಮರುದಿವಸವೂ ಹೋಗದೆ ಮನೆಯಲ್ಲೇ ಉಳಿದದ್ದನ್ನು ಕಂಡ ಷರೀಫಮ್ಮನೇ ಕೇಳಿದರು. ಸಲೀಮ್ ಹೇಳಿದ. "ಅಮ್ಮಾ... ನಾವ್ಯಾಕೆ ಅವಳನ್ನು ಇಲ್ಲಿಗೇ ಕರೆತರಬಾರದು ? ಅಲ್ಲಿಗೆ ಸಂಜೆ ಹೋಗೋದು ಬೆಳಿಗ್ಗೆ ಬರೂದೆಲ್ಲ ರಗಳೆ... ನಂಗಿಷ್ಟವಿಲ್ಲ." ಷರೀಫಮ್ಮನಿಗೆ ಸಂಪ್ರದಾಯ ಮುರಿಯುವ ಇಲ್ಲವಿಲ್ಲದಿದ್ದರೂ ಸೊಸೆಗೆ ಹಾಕುವಂತಹ ಚಿನ್ನ ಹಾಕದಿರುವುದಕ್ಕೆ ಇದೊಳ್ಳೆ ಉಪಾಯ ಅಂತ "ಈವತ್ತು ನೀನು ಹೋಗು ಮಗಾ... ಈ ಮಾತನ್ನ ನಿನ್ನ ಹೆಂಡತಿಗೆ ಹೇಳು. ಅವಳು ಇಲ್ಲಿರಲಿಕ್ಕೆ ಒಪ್ಪಿದರೆ ನಮ್ಮದೇನೂ ಅಭ್ಯಂತರ ಇಲ್ಲ..." ಅಂದರು.

ಸಲೀಮ್ ಒಲ್ಲದ ಮನಸ್ಸಿನಿಂದಲೇ ಎದ್ದು ಭೇಪುರಕ್ಕೆ ಹೋದ. ರಾತ್ರಿ ತನ್ನ ಹೆಂಡತಿ ಆಯೆಂಷಾಳೊಂದಿಗೆ "ನೀನು ಇಲ್ಲಿರೂದು, ನಾನು ದಿನಾ ಇಲ್ಲಿಗೆ ಬಂದು ಹೋಗೂದು ಯಾಕೋ ನಂಗಿಷ್ಟವಿಲ್ಲ. ಆದ್ದರಿಂದ ನೀನು ನಮ್ಮ ಮನೆಯಲ್ಲಿ ಬಂದಿರೋದು ವಾಸಿ ಅಂತ ನಂಗನ್ನಿಸ್ತದೆ..." ಎಂದ. ಅವಳು "ಅಪ್ಪನತ್ರ ಕೇಳಿ ಹೇಳ್ತೇನೆ..." ಅಂದ್ಲು. "ಅವರತ್ರ ಎಂತ ಕೇಳೂದು? ನಾನು ಹೇಳ್ತಿದ್ದೇನೆ... ನನ್ನೊಂದಿಗೆ ನನ್ನ ಮನೆಗೆ ಬರಬೇಕು ನೀನು...ನಾನು ಗಂಡನ ಮನೆಗೆ ಹೋಗಿರ್ತೇನೆಂತ ಹೇಳಿ ಸೀದಾ ನನ್ನ ಜೊತೆ ಬಾ..." ಎಂದ ಸಲೀಮ್. ಅವನ ಮಾತುಗಳು ಅವನಿಗೆ ತಿಳಿಯದಂತೆ ಗಡುಸಾಗಿತ್ತು. ಆಯೆಂಷಾಳ ಕಣ್ಣಲ್ಲಿ ನೀರು ಚಿಮ್ಮಿ ಬಂತು. ಸಲೀಮ್ ತನ್ನ ಹಾಸಿಗೆಯಲ್ಲಿ ಒರಗಿಕೊಂಡ, ಸಂತೈಸಲು ಹೋಗಲಿಲ್ಲ.

ಬೆಳಿಗ್ಗೆ ಅವನು ಹೊರಡುವಾಗ ಆಯೆಂಷಾಳೇ ಹೇಳಿದಳು. "ನಾನು ಈವತ್ತು ನಿಮ್ಮ ಮನೆಗೆ ಬರ್ತೇನೆ. ಅಮ್ಮನತ್ರ ಹೇಳಿದ್ದೇನೆ, ಯಾರನ್ನಾದ್ರೂ ಕರ್ಕೊಂಡು ಬರ್ತೇನೆ." ಸಲೀಮ "ಹೂಂ..." ಎಂದಷ್ಟೆ ಹೇಳಿದ.

ಸಲೀಮನಿಗೆ ತನ್ನ ಹೆಂಡತಿ ಮನೆಗೆ ಬರ್ತಾಳೆಂತ ತಿಳಿದು ತುಸು ಸಮಾ

ಧ್ಯಾನವಾಯಿತು. ಅವಳು ತನ್ನ ಎದುರಿಗಿದ್ದರೂ ಒಂಥರ ಬೆಪ್ಪನಂತಾಗುತ್ತಿದ್ದ ತನ್ನ ಬಗ್ಗೆ ಒಮ್ಮೊಮ್ಮೆ ಆಶ್ಚರ್ಯ ಪಟ್ಟುಕೊಳ್ಳುತ್ತಿದ್ದ. ಇಪ್ಪತ್ತೆಂಟನೆಯ ಪ್ರಾಯದಲ್ಲೇ ಹೀಗಾದರೆ ಹೇಗೆ ಎಂದುಕೊಳ್ಳುವುದೂ ಇತ್ತು. ಮದುವೆಗೆ ಮುಂಚೆ ತನ್ನ ಕನಸುಗಳನ್ನೆಲ್ಲ ನೆನೆದುಕೊಂಡರೆ ಈಗಲೂ ರೋಮಾಂಚನ ಗೊಳ್ಳುವಂತಾದ್ದು. ಆದರೆ ಆಯೆಷಾಳನ್ನು ಕಂಡರೆ ಮಾತಾಡಬೇಕಂತ ಅನ್ನಿಸುತ್ತಲೇ ಇರಲಿಲ್ಲ. ಅವರು ಜೊತೆಯಲ್ಲಿದ್ದಾಗಲೂ ಅಷ್ಟೇ. ಒಂದೆರಡು ಮಾತುಗಳಲ್ಲೇ ಮುಗಿದು ಬಿಡುತ್ತಿತ್ತು, ಆಯೆಷಾ ತಾನು ಬಂದ ಕೂಡಲೇ ಮನೆ ತುಂಬ ಚಿಗರೆಯಂತೆ ಓಡಾಡುವುದು, ಸಂಭ್ರಮ ಪಡುವುದನ್ನು ಕಂಡಾಗ ತಾನೇಕೆ ಹೀಗೆ ಮಾಡುತ್ತೇನೆಂತ ನೊಂದುಕೊಳ್ಳುತ್ತಿದ್ದ. ಏಕಾಂತ ದಲ್ಲಿ ಮತ್ತೆ ಎಂದಿನಂತೆ ವಿರಾಗಿಯಂತಾಗುತ್ತಿದ್ದ. ಹೆತ್ತವರ ಸಂತೋಷಕ್ಕಾಗಿ ಮದುವೆಗೆ ಒಪ್ಪಿಕೊಂಡದ್ದು ತನ್ನ ತಪ್ಪಾಯಿತೇನೋ ಎಂದುಕೊಳ್ಳುತ್ತಿದ್ದ. ತನಗೆ ಬೇಕಿದ್ದವಳು ಇವಳಲ್ಲ ಎಂದುಕೊಂಡು ಒಳಗೊಳಗೆ ಕೊರಗತೊಡಗಿದ್ದ. ಅವಳೊಡನೆ ಹೃದಯ ಬಿಚ್ಚಿಕೊಳ್ಳಲಾಗದೆ ಚಡಪಡುತ್ತಿದ್ದ. ಆಯೆಷಾ ಕೂಡಾ ಮಾತಾಡದೆ ಮೌನವಾಗಿದ್ದದ್ದೇ ಹೆಚ್ಚು. ಒಮ್ಮೊಮ್ಮೆ ಏಕಾಂತದಲ್ಲಿ ಸಲೀಮನ ಮುಖ ನೋಡುತ್ತ ಕೂತು ಬಿಡುತ್ತಿದ್ದಳು. ಹಾಗೆ ಕೂತಿರುವಾಗ ಸಲೀಮನಿಗೆ ಮೈತುಂಬ ಮುಳ್ಳುಗಳು ಚುಚ್ಚಿದ ಅನುಭವವಾಗಿ ಅವನಿಗೆ ತಿಳಿಯದಂತೆ ಅವನ ಮಾತುಗಳು ಕಹಿಯಾಗಿ ಬಿಡುತ್ತಿದ್ದವು. "ಯಾಕೆ ಹಾಗೆ ನನ್ನನ್ನು ತಿನ್ನೋಹಾಗೆ ನೋಡ್ತಾ ಇರೂದು... ದೀಪ ಆರಿಸಿ ಮಲಕ್ಕೋ ಬಾರ್ದಾ...?" ಎನ್ನುತ್ತಿದ್ದ. ಹೀಗಾಗಿ ಅವನ ಸಾಮೀಪ್ಯದಲ್ಲಿ ಮಾತಿಗಿಂತ ಆಯೆಷಾ ಅಳುತ್ತಿದ್ದದ್ದೇ ಹೆಚ್ಚು.

# ಕಾದಿರುವಳು ಹುಡುಗಿ

ಆಯೆಷಾ ಕುಟ್ಟಿಚಿರಾಕ್ಕೆ ಬರುವಾಗ ಸಲೀಮ್ ಮನೆಯಲ್ಲೇ ಇದ್ದ. ಜುಬೇದ ಅವಳನ್ನು ತುಂಬ ಲವಲವಿಕೆಯಿಂದ ಸ್ವಾಗತಿಸಿದಳು. ಷರೀಫಮ್ಮ ತನ್ನ ಎಂದಿನ ಗಾಂಭೀರ್ಯದಿಂದಲೇ ಮಾತನಾಡಿದರು. "ಮನೆಯಲ್ಲೆಲ್ಲಾ ಸೌಖ್ಯ ತಾನೆ...?" ಎಂದು ವಿಚಾರಿಸುವಾಗ ಅವರ ಕಣ್ಣೆಲ್ಲ ಅವಳ ಕುತ್ತಿಗೆ, ಕೈಯಲ್ಲಿರುವ ಚಿನ್ನಾಭರಣಗಳನ್ನೇ ತೂಗಿ ನೋಡುತ್ತಿತ್ತು. ಮದುವೆಗೆ ಹಾಕಿಕೊಂಡ ಚಿನ್ನವೇ, ಹೆಚ್ಚೇನೂ ತರಿಸಿಲ್ಲ.

ಜುಬೇದ ನಗುತ್ತ ಅತ್ತಿಗೆಯೊಂದಿಗೆ ತಮಾಷೆ ಮಾತಾಡುತ್ತ ಅವಳ ಹ್ಯಾಂಡ್ ಬ್ಯಾಗನ್ನು ಸಲೀಮನ ಕೋಣೆಯೊಳಗಿಟ್ಟಳು. ಯಾವುದೋ ಕಾದಂಬರಿಯನ್ನು ಓದುತ್ತಿದ್ದ ಸಲೀಮ ತಲೆಯೆತ್ತಿ ನೋಡುವಾಗ ಆಯೆಷಾ ಕೋಣೆಯೊಳಗೆ ಬಂದುಬಿಟ್ಟಿದ್ದಳು. ಅವಳ ಕುತ್ತಿಗೆ, ಕೈಗಳಲ್ಲಿ ಹೇರಿಕೊಂಡಿದ್ದ ಚಿನ್ನಾಭರಣಗಳನ್ನು ನೋಡಿದಾಗ 'ಇಷ್ಟು ಚಿನ್ನ ಸೊಸೆ ಹಾಕಿಕೊಂಡಿದ್ದರೂ ಇನ್ನೂ ತೃಪ್ತಿಯಾಗಿಲ್ಲವೇ ಅಮ್ಮನಿಗೆ?' ಎಂದುಕೊಂಡ. ಹೆಂಡತಿಯತ್ತ ಒಂದು ಕಿರುನಗೆ ಬೀರಿದ. ಮತ್ತೆ ಪುಸ್ತಕದಲ್ಲಿ ಮಗ್ನನಾದ. ಆಯೆಷಾ ಜುಬೇದಾಳ ಜೊತೆ ಮಾತಾಡಲು ಹೋದಳು.

ಷರೀಫಮ್ಮ ಮಾತಿನ ಮಧ್ಯೆ "ನಿನ್ನ ಚಿನ್ನಾಭರಣಗಳನ್ನು ಸ್ವಲ್ಪ ತೋರಿಸು..." ಅಂತ ಆಯೆಷಾಳನ್ನು ಕೇಳಿದಾಗ ಅವಳು ತನ್ನ ಕೈಯಲ್ಲಿದ್ದ ಬಳೆಗಳು, ಕುತ್ತಿಗೆಯಲ್ಲಿದ್ದ ನೆಕ್ಲೆಸ್ ಎಲ್ಲ ತೆಗೆದುಕೊಟ್ಟಳು. ಪರೀಕ್ಷಿಸುತ್ತಿದ್ದಂತೆ ಷರೀಫಮ್ಮನ ಕಣ್ಣುಗಳು ಸಿಟ್ಟಿನಿಂದ ಉರಿಯತೊಡಗಿತ್ತು. ಜುಬೇದ ಸೂಕ್ಷ್ಮವಾಗಿ ಇದನ್ನು ಕಂಡುಕೊಂಡವಳು ತನ್ನ ತಾಯಿಯನ್ನು ಕೋಣೆಯಿಂದ ಹೊರಗೆ ಕರೆದುಕೊಂಡು ಹೋಗಿ "ಅಮ್ಮಾ ನೀನು ಆಯೆಷಾಳಿಗೆ ನೋಯುವಂತೆ ಮಾತಾಡಿದ್ರೆ ನನ್ನಾಣೆ... ಅವಳ ತಂದೆ ಮಾಡಿದ ತಪ್ಪಿಗೆ ಅವಳಿಗೆ

ಶಿಕ್ಷೆನಾ..." ಎಂದಳು. ಷರೀಫಮ್ಮ ಕೂಡ ಸಭ್ಯತೆಯನ್ನು ಮೀರಲಾಗದೆ ಮೌನವಾಗಿದ್ದು ಸಿಟ್ಟನ್ನು ನುಂಗಿಕೊಂಡಳು. ತನ್ನೆಲ್ಲ ಸಿಟ್ಟನ್ನು ಆಯೆಷಾಳ ತಂದೆಯನ್ನು ಬೈಯುವುದರಲ್ಲಿ ತೀರಿಸಿಕೊಂಡಳು.

ಆಯೆಷಾ ಗಂಡನ ಮನೆಗೆ ಬಂದ ಮರುದಿವಸ ಸ್ವತಃ ಸುಲೇಮಾನ್ ಹಾಜಿಯವರೇ ಭೇಪುರದಿಂದ ತಮ್ಮ ಹಸಿರು ಅಂಬಾಸಿಡರ್ ಕಾರಲ್ಲಿ ಸೈದು ಕೋಯಾರ ಮನೆಗೆ ಬಂದರು. ಸಲೀಮ್ ಆ ದಿನ ಮನೆಯಲ್ಲಿರಲಿಲ್ಲ. ಕಾಲೇಜೊಂದರಲ್ಲಿ ಇಂಟರ್‌ವ್ಯೂ ಇದೆ ಅಂತ ಹೋಗಿದ್ದ. ಹಾಜಿಯವರನ್ನು ಸೈದುಕೋಯ ಒಳಗೆ ಸ್ವಾಗತಿಸಿದರು.

ಷರೀಫಮ್ಮ ಒಳಗೊಳಗೆ "ಹೇಗೆ ಮುಖ ಇಟ್ಕೊಂಡು ನಮ್ಮಲ್ಲಿ ಬಂದ್ನೋ...ಇಂತಹ ಮಾನಗೆಟ್ಟ ಹಾಜಿ ಅಂತ ಮೊದ್ಲು ತಿಳಿದಿರುತ್ತಿದ್ದರೆ ಈ ಸಂಬಂಧ ಯಾರಿಗೆ ಬೇಕಿತ್ತು..." ಎಂದುಕೊಂಡರಾದರೂ ಊಟದ ಮೇಜಿನ ಮೇಲೆ ತಮ್ಮ ಶ್ರೀಮಂತಿಕೆಯನ್ನು ಅದ್ದೂರಿಯಲ್ಲೇ ಪ್ರದರ್ಶಿಸಿದರು. ಬಣ್ಣ ಬಣ್ಣದ ಪಿಂಗಾಣಿ ಪಾತ್ರೆಗಳಲ್ಲಿ ಅಂದವಾಗಿ ಜೋಡಿಸಿದ ಹಲ್ವಾ, ಲಾಡುಗಳು, ದೊಡ್ಡ ಬಾಳೆಹಣ್ಣುಗಳು, ಬಾಳೆಕಾಯಿ ಚಿಪ್ಸ್, ಖಾರ ಚೌಚೌ ಜೊತೆಗೆ ಹಾಲಿನ ಖೀರು ತಂದಿಟ್ಟರು. ಹಾಜಿ ಅದೂ ಇದೂ ಮಾತಾಡುತ್ತ ಲಾಡಿನ ಪಾತ್ರೆಯಿಂದ ಒಂದೊಂದೇ ಖಾಲಿ ಮಾಡತೊಡಗಿದರು. ಐದಾರು ಲಾಡು, ಮೂರು ತುಂಡು ಹಲ್ವಾ ತಿಂದು ಹಾಲಿನ ಖೀರಿನ ಲೋಟಕ್ಕೆ ಚಮಚೆ ಹಾಕಿ ತಿರುಗಿಸುತ್ತ ಗೋಡಂಬಿ ದ್ರಾಕ್ಷೆಗಳನ್ನು ಹೆಕ್ಕಿ ಮೆಲ್ಲತೊಡಗಿದರು. "ನಂಗೆ ಸ್ವೀಟೆಂದ್ರೆ ತುಂಬ ಪ್ರೀತಿ..." ಅಂದರು ಸುಲೇಮಾನ್ ಹಾಜಿ. "ಹಾಜಿ ಎಷ್ಟು ಚಾಲೂಕಿದ್ದಾನೆ! ಸಿಹಿ ಮೂತ್ರ ರೋಗ ಇನ್ನೂ ಶುರುವಾಗಿಲ್ಲ ವೇನೋ!" ಎಂದುಕೊಂಡರು ಸೈದುಕೋಯ.

ತೃಪ್ತಿಯ ತೇಗು ಬಿಡುತ್ತ ಧಡೂತಿ ದೇಹದ ಸುಲೇಮಾನ್ ಹಾಜಿ ಯವರು ಆರಾಮ ಖುರ್ಚಿಯಲ್ಲಿ ಬಿದ್ದುಕೊಂಡು "ನಮ್ಮ ಮದುಮಂಗ ಎಲ್ಲಿ...?" ಎಂದರು. ಕೋಯ ಮನೆತನದ ಸಂಪ್ರದಾಯದಂತೆ ಅಳಿಯ ಮುದುಕನಾಗುವವರೆಗೂ ಮದುಮಂಗನೆಂತಲೇ ಸಂಬೋಧಿಸಲ್ಪಡುವುದು. ತನ್ನ ಮಗನನ್ನೇ ಅವರು ಕೇಳುತ್ತಿರುವುದೆಂತ ಸೈದುಕೋಯ ತಿಳಿದುಕೊಂಡು "ಅವನಿಗೆ ಕಾಲೇಜಿನಿಂದ ಇಂಟರ್‌ವ್ಯೂಗೆ ಬಂದಿದೆ. ಅದಕ್ಕೆ ಹೋಗಿದ್ದಾನೆ" ಎಂದರು. "ಕೆಲ್ಸ ಸಿಗಬಹುದಾ..." ಅಂತ ಹಾಜಿಯವರು ಕೇಳಿದಾಗ "ಎಲ್ಲಾ ಅಲ್ಲಾಹುವಿನ ಇಚ್ಛೆ! ಅವನ ಇಚ್ಛೆಯಿದ್ದರೆ ಸಿಗಬಹುದು" ಎಂದರು ಸೈದುಕೋಯ. ಹೌದು ಹೌದೆಂದು ಹಾಜಿಯವರು ತಲೆಯಾಡಿಸಿ,

"ಅವನು ಬರೂದು ತಡಾ ಉಂಟೇನೋ, ನಾನು ಬಂದದ್ದು ಆಯಿಷಾಳನ್ನು ಕರ್‍ಕೊಂಡು ಹೋಗ್ಲಿಕ್ಕೆ" ಎಂದರು. ಸೈದುಕೋಯ ಕ್ಷಣ ಸುಮ್ಮನಿದ್ದವರು "ಅವಳನ್ನು ಇಲ್ಲಿಯೇ ಇರಲಿ ಅಂತ ಸಲೀಮ್ ಕರ್‍ಕೊಂಡು ಬಂದದ್ದು..." ಎಂದರು.

"ಅದೆಲ್ಲ ಹೇಗಾಗುತ್ತದೆ... ಕೋಯ ಮನೆತನದಲ್ಲಿ ಈ ತರ ರಿವಾಜಿ ಮುರಿಯೋದು ಎಂತದ್ದು ಸೈದುಕೋಯಾ... ಈ ಕಲ್ತ ಮಕ್ಳು ಹುಚ್ಚು ಹುಚ್ಚಾಗಿ ಏನೆಲ್ಲಾ ಹೇಳ್ತಾವೆಂತ ನಾವು ಹಿರಿಯರು ಕೂಡಾ ಹೇಳುವುದಾ ?" ಎಂದು ಸ್ವಲ್ಪ ಖಾರವಾಗಿಯೇ ಅಂದರು.

ಸೈದುಕೋಯರವರೂ ತಣ್ಣಗಿದ್ದವರು ಸ್ವಲ್ಪ ಬಿಸಿಯೇರಿದರು. ಷರೀಫಮ್ಮನೂ ಒಳಗೆ ಕೂತು ಇವರ ಸಂಭಾಷಣೆಯನ್ನು ಬಾಗಿಲ ಪರದೆಯ ಎಡೆಯಲ್ಲಿ ನಿಂತು ಕೇಳುತ್ತಿದ್ದರು. "ಅದೆಲ್ಲಾ ಬಿಡಿ ಹಾಜಿಯವರೇ... ನೀವು ಹೇಳಿದಷ್ಟು ಚಿನ್ನ ನಿಮ್ಮ ಮಗಳಿಗೆ ಹಾಕಿದ್ದೀರಾ...?" ಅಂತ ಸೈದು ಕೋಯ ಕೇಳಿಯೇಬಿಟ್ಟರು. ಕ್ಷಣ ತಬ್ಬಿಬ್ಬಾದ ಸುಲೇಮಾನ್ ಹಾಜಿ ತನ್ನ ಬಣ್ಣವೆಲ್ಲ ಆಗ಼್ೇ ಬಯಲಾಗಿರಬೇಕೆಂದುಕೊಂಡು ಸ್ವಲ್ಪ ಜಾಣ್ಮೆಯಿಂದ ಉತ್ತರಿಸಿದರು. "ಮದುವೆಯೆಂದರೆ ಸ್ವಲ್ಪ ಹೆಚ್ಚು ಕಡಿಮೆ ಆಗುವಂತಾದ್ದೇ, ಅದೇನಾದ್ರೂ ಹೆಚ್ಚು ಕಮ್ಮಿ ಆಗಿದ್ರೆ ಮುಂದೆ ಸರಿಮಾಡೋಣ..."

ಒಳಗಿದ್ದ ಷರೀಫಮ್ಮ ತಟ್ಟನೆ "ಹಾಗಿದ್ರೆ ಹಾಜಿಯವರು ಗಿಲೀಟಿನ ಆಭರಣ ಎಲ್ಲಾ ಮದುಮಗಳಿಗೆ ಹಾಕಿ ಕಣ್ಣಿಗೆ ಮಣ್ಣು ಹಾಕುವ ಪ್ರಯತ್ನ ಮಾಡ್ಬಾರ್‍ದಾಗಿತ್ತು... ನಮ್ಮ ಮರ್ಯಾದೆ ಎಲ್ಲ ಹೋಯ್ತು..." ಎಂದರು.

ಷರೀಫಮ್ಮನ ಮಾತು ಕಿವಿಗೆ ಬಿದ್ದಕೂಡಲೇ ಹಾಜಿಯವರಿಗೆ ಸಿಟ್ಟು ನೆತ್ತಿಗೇರಿತ್ತು ! ಒಂದು ಹೆಣ್ಣು ಹೆಂಗಸು ಭೇಪುರದ ಸುಲೇಮಾನ್ ಹಾಜಿ ಯವರನ್ನು ಕೆಣಕುವುದೆಂದರೆ ! "ನೋಡಿ ಸೈದುಕೋಯ, ನಾವು ಗಂಡಸ್ರು ಮಾತಾಡುವಾಗ ಮಧ್ಯೆ ಹೆಂಗಸರು ಮಾತಾಡೂದು ಇದೆಂತ ನಾಚಿಕೆಗೇಡು ? 'ಇಸ್ಲಾಮು' ಜನ ಈ ತರ ! ಅದೂ ಶ್ರೇಷ್ಠ ಕೋಯಾ ತರವಾಡಿನಲ್ಲಿ ?" ಅಂತ ನಯವಾಗಿ ಕೆಣಕಿದರು. ಸೈದುಕೋಯಾರಿಗೂ ತನ್ನ ಹೆಂಡತಿ ಪ್ರವೇಶಿ ಸಿದ್ದು ತಪ್ಪೆನಿಸಿತ್ತು. ಆದರೆ ಅದನ್ನು ಈಗ ಹೊರಗೆಡವಿದರೆ ಹಾಜಿಯವರೇ ಗೆದ್ದುಬಿಡಬಹುದೆಂದುಕೊಂಡು, "ಅವಳು ಹೇಳಿದ್ದು ಸತ್ಯವಾಗಿದ್ದರೆ ತಪ್ಪು ಅವಳದ್ದಲ್ಲ..." ಎಂದರು.

ಒಂದು ಹೆಂಗಸಿನ ಮುಂದೆ ಹಾಜಿಯವರು ಮಾತಿನಲ್ಲಿ ಸೋಲುವು ದೆಂದರೆ...! ಲಾಹವ್‌ಲ ವಲಾಕುವ್ವತ್ ! ಭೇಪುರದ ಹಾಜಿ ಸಿಟ್ಟಿ

ನಿಂದ ಕಿಡಿಕಿಡಿಯಾದರು. "ಈಗ ನಾನು ನನ್ನ ಮಗಳನ್ನು ಕರ್ಕೊಂಡು ಹೋಗ್ತೇನೆ. ನಮ್ಮದು ಕೋಯ ಮನೆತನ. ಅದರ ಸಂಪ್ರದಾಯದಂತೆ ಹೆಣ್ಣನ್ನು ಗಂಡನ ಮನೆಯಲ್ಲಿ ನಿಲ್ಲಿಸೋದು ಸಾಧ್ಯವಿಲ್ಲ. ಇದನ್ನು ನಿಮ್ಮ ಮಗನಿಗೂ ಹೇಳಿ. ನೀವು ಮಗನನ್ನು ನಮ್ಮಲ್ಲಿಗೆ ಕಳುಹಿಸಿ ಕೊಡಿ..." ಅಂತ ಎದ್ದುನಿಂತ ಹಾಜಿಯವರು "ಆಯಿಷಾ... ಬಾ... ಭೇಪುರಕ್ಕೆ ಹೋಗೋಣ..." ಎಂದರು. ಅಗ್ಲೇ ಅಳುತ್ತ ಕೂತಿದ್ದ ಆಯಿಷಾ ತಬ್ಬಿಬ್ಬಾದಳು. ತಾನು ಹೋಗದಿದ್ದರೆ ತಂದೆಯ ಸಿಟ್ಟಿಗೆ ಬಲಿಯಾಗುತ್ತೇನೆಂದು ಹೆದರಿ ತನ್ನ ಹ್ಯಾಂಡ್ ಬ್ಯಾಗನ್ನು ಹಿಡ್ಕೊಂಡು ಹೊರಟೇಬಿಟ್ಟಳು. ಅಳುತ್ತಲೇ ಅತ್ತೆ ಮಾವಂದಿರೊಂದಿಗೆ "ಹೋಗಿ ಬರ್ತ್ತೇನೆ..." ಎಂದಳು. ಅವರಿಬ್ಬರೂ ಮಾತಾಡಲೇ ಇಲ್ಲ. ಜುಬೇದ ಮಾತ್ರ ಏನು ಮಾಡುವುದೆಂತ ತಿಳಿಯದೆ ಗಲಿಬಿಲಿಗೊಂಡು ಅತ್ತಿಗೆಯನ್ನು ತಬ್ಬಿಕೊಂಡು "ಅಣ್ಣ ಬರುವವರೆಗಾದ್ರೂ ನಿಲ್ಲಿ ಅತ್ತಿಗೆ... ಅವನಿಗೆ ಸಿಟ್ಟು ಬಂದರೆ ಮತ್ತೆ ನಿಮ್ಮಲ್ಲಿಗೆ ಬರ್ಲಿಕ್ಕಿಲ್ಲ..." ಎಂದಳು. ಆಯಿಷಾ ಜುಬೇದಳ ಮಾತಿಗೆ ಬೆಚ್ಚಿ ಬಿದ್ದಳು. ಹಾಜಿಯವರು ಅಗ್ಲೇ ಮನೆಯಿಂದ ಹೊರಗೆ ಹೋಗಿ ಕಾರಿನಲ್ಲಿ ಕೂತು ಬಿಟ್ಟಿದ್ದರು. ಬಾಲ್ಯದಿಂದ ಅಪ್ಪನಿಗೆ ಹೆದರಿಕೊಂಡೇ ಬೆಳೆದಿದ್ದ ಆಯಿಷಾ ಅವರ ಮಾತೇ ಮುಖ್ಯವೆಂದು ತಿಳಿದು ಅಳುತ್ತಲೇ ಕಾರಿನೊಳಗೆ ಬಂದು ಕೂತಳು. ಕಾರು ಭರ್ರನೆ ಹೋಯಿತು.

ಸಂಜೆ ಸಲೀಮ ಮನೆಗೆ ಬಂದಾಗ ಮೌನ ಕವಿದಿತ್ತು. ತಿಂಡಿ ಚಾವನ್ನು ಮೇಜಿನ ಮೇಲೆ ತಂದಿಟ್ಟ ಷರೀಫಮ್ಮನೊಂದಿಗೆ "ಎಲ್ಲಮ್ಮಾ... ಆಯಿಷಾ ತೋರ್ತಾ ಇಲ್ಲ?" ಅಂತ ಕೇಳಿದ. "ಅವಳಾಗ್ಲೇ ಅವಳಪ್ಪನ ಜೊತೆ ಭೇಪುರಕ್ಕೆ ಹೋದ್ಲು..." ಅಂದರು ಷರೀಫಮ್ಮ. ಸಲೀಮ್ ಆಶ್ಚರ್ಯದಿಂದ "ಅವಳೊಂದಿಗೆ ಇಲ್ಲೇ ಇರು. ಭೇಪುರಕ್ಕೆ ಯಾವತ್ತಾದರೊಮ್ಮೆ ಹೋದ ರಾಯ್ತೆಂತ ಹೇಳಿದ್ದೆ, ಅವಳೂ ಒಪ್ಪಿದ್ಲು..." ಎಂದ. "ಅವಳು ನಮ್ಮ ಮಾತ್ಯಾಕೆ ಕೇಳ್ತಾಳೆ? ಅವಳಪ್ಪ ಬಂದ, ಹೊರಟುಬಿಟ್ಲು. ನಿಂಗೆ ಹೆಂಡ್ತಿ ಬೇಕಾದ್ರೆ ಭೇಪುರಕ್ಕೆ ಹೋಗ್ಬೇಕಂತೆ..." ಎಂದರು ಷರೀಫಮ್ಮ ನಂಜು ಬೆರಸಿದ ಮಾತಿನಿಂದ ಮಗನನ್ನು ರೇಗಿಸುತ್ತ.

ಷರೀಫಮ್ಮನ ಮಾತಿನಿಂದ ಸಲೀಮನಿಗೆ ತನ್ನ ಹೆಂಡತಿಯ ಮೇಲೆ ಅಸಾಧ್ಯ ಕೋಪ ಬಂತು. ಒಳಗೊಳಗೇ ಕುದಿಯತೊಡಗಿದ. ಚಾವನ್ನು ಕುಡಿದು ಕಪ್ಪನ್ನು ಮೇಜಿನ ಮೇಲಿಡುತ್ತಾ "ಸರಿ... ನಾನು ಅವರ ಮನೆಗೆ

ಹೋಗುವ ತನಕ ಅವಳು ಅಲ್ಲೇ ಇರಲಿ..." ಅಂದ ಏನೋ ನಿರ್ಧಾರಕ್ಕೆ ಬಂದವನಂತೆ.

ಮುಂದುವೆಯು ಸಮಯಂದಲ್ಲಿ ಮತ್ತು ನಂತರ ಬಿಟ್ಟು ಬಿಟ್ಟಿದ್ದ ಸಮುದ್ರ ತೀರದ ಒಡನಾಟ ಸಲೀಮನಿಗೆ ಮತ್ತೆ ಬೇಕೆನಿಸಿತ್ತು. ಒಂಟಿಯಾದಾಗಲೆಲ್ಲ ಅಸ್ತವ್ಯಸ್ತಗೊಳ್ಳುವ ಮನಸ್ಸಿಗೆ ಸಮಾಧಾನ ದೊರೆಯುತ್ತಿದ್ದುದು ಅಲ್ಲೇ. ಜುಬೇದಾಳಿಂದ ಆಯೆಷಾ ಮನೆಯಿಂದ ಹೊರಡುವಾಗಿನ ಘಟನೆಯ ವಿವರ ತಿಳಿದು ಸಲೀಮ್ ಮತ್ತಷ್ಟು ನೊಂದುಕೊಂಡ. ತನ್ನ ಹೆತ್ತವರಿಗಾಗಲಿ ಆಯೆಷಾಳ ಹೆತ್ತವರಿಗಾಗಲಿ ಮಕ್ಕಳ ಹಿತದ ಚಿಂತೆ ಇಷ್ಟೇ ಇರಬೇಕು. ಇವರೆಲ್ಲ ನಮ್ಮ ಮೇಲೆ ತೋರುವ ಪ್ರೀತಿಯ ಮಿತಿಯೂ ಇದೇ ಇರಬೇಕು. ಇವರೆಲ್ಲ ಹಿರಿಯರೆನಿಸಿಕೊಳ್ಳೋದು ಬರೇ ವಯಸ್ಸು ಮಾತ್ರದಿಂದಲ್ಲದೆ ಬುದ್ಧಿಯಿಂದ ಖಂಡಿತಾ ಅಲ್ಲ. ತಮ್ಮ ಒಣ ಪ್ರತಿಷ್ಠೆಗಾಗಿ ತಮ್ಮನ್ನೊಂದು ಆಟದ ವಸ್ತುವನ್ನಾಗಿ ಮಾಡಿಕೊಂಡದ್ದು ಸಲೀಮನ ಗಮನಕ್ಕೆ ಬಂದಾಗ ಅವನಲ್ಲಿ ಹಿರಿಯರ ಮೇಲಿನ ಭಯಭಕ್ತಿ ಕ್ಷೀಣವಾಗತೊಡಗಿತು. ಜೊತೆಗೆ ತನ್ನ ಹೆಂಡತಿಗೆ ತನ್ನ ಮೇಲೆ ವಿಶ್ವಾಸವಿಲ್ಲದಿರೂದನ್ನೂ ನೆನಸಿಕೊಂಡ. ಅಪ್ಪ ಕರೆದರೇನಾಯ್ತು? ಗಂಡ ಬಂದನಂತರ ಹೋಗೋಣಾಂತ ಅವಳೇಕೆ ಹೇಳಲಿಲ್ಲ? ಎಂದೆಲ್ಲಾ ಯೋಚಿಸಿ ಸುಸ್ತಾದಾಗ ಸಮುದ್ರ ತೀರದ ತಂಗಾಳಿ ಮನಸ್ಸಿಗೆ ತಂಪೆರಚುತ್ತಿತ್ತು. ಮರಳ ದಂಡೆಯ ಮೇಲೆ ಕುಳಿತು ತೆರೆಗಳೊಂದಿಗೆ ಸೆಣಸಾಡುವ ಬೆಸ್ತರ ದೋಣಿಯನ್ನೇ ತದೇಕಚಿತ್ತನಾಗಿ ನೋಡುತ್ತ ಇದ್ದ.

* * *

ಜುಲೇಖ ಆಸ್ಪತ್ರೆಯಿಂದ ಮನೆಗೆ ಬಂದಳಾದರೂ ಇನ್ನೂ ಸರಿಯಾಗಿ ನಡೆಯುವ ಸ್ಥಿತಿಯಲ್ಲಿರಲಿಲ್ಲ. ಡಾಕ್ಟರರು ಅವಳು ಇನ್ನೂ ಕೆಲವು ದಿನ ಆರಾಮು ಪಡೆಯಬೇಕೆಂಬ ಸಲಹೆ ನೀಡಿದ್ದರು. ಮಮ್ಮುಟ್ಟಿ ಆಗಾಗ ಬಂದು ಅವಳ ಆರೋಗ್ಯದ ಬಗ್ಗೆ ವಿಚಾರಿಸಿ ಹೋಗುತ್ತಿದ್ದ. ಕೆಲವೇ ದಿನಗಳಲ್ಲಿ ಮತ್ತೆ ಬಂದವನು ಹಾಜಿಮಾಳೊಂದಿಗೆ "ಅಮ್ಮ... ನಾಳೆ ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ಶೋರ್ ಹೋಟೇಲಿನ ರೂಮ್ ನಂಬರ್ ಹತ್ತಕ್ಕೆ ಹೋಗಬೇಕಂತೆ. ಅಚ್ಚುಕೋಯ ಅಲ್ಲಿಗೆ ಬರ್ತಾರಂತೆ..." ಎಂಬ ಸುದ್ದಿ ತಿಳಿಸಿ ಅಲ್ಲಿ ನಿಲ್ಲದೆ ಹೋಗಿದ್ದ. ಈ ಸುದ್ದಿ ತಿಳಿಸಿದ ನಂತರ ನಫೀಸಳ

ಮುಖ ನೋಡಲಾಗದೆ ಮಮ್ಮೂಟ್ಟಿ ಓಡಿದ್ದು ಅಂತ ಹಾಜಿಮಾಳಿಗೆ ತಿಳಿದಿತ್ತು. ಹಾಜಿಮಾ ಜುಲೇಖಾ ಮತ್ತು ಹಫ್ಸಾರಿಗೆ ಮಮ್ಮೂಟ್ಟಿ ಹೇಳಿಹೋದ ವಿಷಯ ವನ್ನು ತಿಳಿಸಿ ತಲೆಯ ಮೇಲೆ ಕೈಹೊತ್ತು ಕೂತಳು. ಇದನ್ನೆಲ್ಲ ಕೇಳಿದ ನಫೀಸ ಕಲ್ಲಿನಂತೆ ಕೂತಿದ್ದಳು.

ಮರುದಿನ ಬೆಳಿಗ್ಗೆ ಹಫ್ಸಾ ನಫೀಸಳಿಗೆ ತನ್ನದೊಂದು ಒಳ್ಳೆಯ ಸೀರೆ ಉಡಿಸಿ ತಾಯಿಯ ಅನುಮತಿ ಪಡೆದು ಶೋರ್ ಹೋಟೆಲಿಗೆ ಹೊರ ಟರು. ಹೋಟೆಲಿನ ಮುಂದೆ ಹತ್ತು ಹನ್ನೆರಡು ಹೆಂಗಸರು ಆಗಲೇ ಬಂದು ನಿಂತಿದ್ದರು. ತಲೆಯ ಮೇಲಿಂದ ಮುಖ ಕಾಣುವ ಹಾಗೆ ಸೆರಗು ಹೊದ್ದುಕೊಂಡು ನಫೀಸಾ ಮತ್ತು ಹಫ್ಸಾರೂ ಒಂದು ಬದಿಯಲ್ಲಿ ಕಾದು ನಿಂತರು.

ನಫೀಸಾ ತಲೆಯೆತ್ತಿ ಉಳಿದ ಹೆಮ್ಮಕ್ಕಳ ಕಡೆ ನೋಡಿದಳು. ತನ್ನಂ ತೆಯೇ ಬಂದಿದ್ದ ಈ ಹೆಮ್ಮಕ್ಕಳಲ್ಲಿ ಹೆಚ್ಚಿನವರು ಇಪ್ಪತ್ತರ ಹರೆಯದವರು. ಎಲ್ಲಾ ಮುಖಗಳೂ ಕಳಾಹೀನ. ಇವರಲ್ಲಿ ಯಾರಾದರೊಬ್ಬರನ್ನು ಅರಬ ಆರಿಸಿಕೊಳ್ಳುತ್ತಾನೆ. ಉಳಿದವರ ಗತಿ? ಇನ್ನೊಂದು ಹೋಟೇಲಿಗೋ ಅಥವಾ ಇನ್ನೆಲ್ಲೋ ಹೋಗಿ ಮತ್ತೆ ಹೀಗೆಯೇ ನಿಂತುಕೊಳ್ಳುತ್ತಾರೆ. ತನ್ನನ್ನು ಆರಿಸದೆ ಹೋದರೆ ತಾನು ಕೂಡ ಅಷ್ಟೇ ಎಂದುಕೊಂಡಾಗ ನಫೀಸ ಳಿಗೆ ದುಃಖ ಒತ್ತರಿಸಿ ಬಂತು. ನೆಲವನ್ನು ನೋಡುತ್ತ ದುಃಖವನ್ನು ಅದುಮಿ ಕೊಳ್ಳಲು ಪ್ರಯತ್ನಿಸಿದಳು.

ಅಲ್ಲಿ ನಿಂತವರಿಗೆಲ್ಲ ಇವಳು ಹೊಸಬಳೆಂಬುದು ಆಗಲೇ ತಿಳಿದು ಹೋಗಿತ್ತು. ಈ ಕೆಂಪು ಬಿಳಿ ಬಣ್ಣದ, ದುಂಡು ಮುಖದ ಚೆಲುವೆ ತಮ್ಮೊಂದಿಗೆ ಪೈಪೋಟಿಗಿದ್ದಾಳೆಂಬುದು ತಿಳಿಯುತ್ತಲೇ ಕೆಲವರು ಅಸೂಯೆ ಯಿಂದ ಮೂತಿ ತಿರುಗಿಸಿದರು.

ಸ್ವಲ್ಪ ಹೊತ್ತಿನಲ್ಲೇ ಅಚ್ಚುಕೋಯನ ಫಿಯೆಟ್ ಗಾಡಿ ಭರ್ರೆಂದು ಹೋಟೆಲಿನ ಆವರಣದೊಳಗೆ ಪ್ರವೇಶಿಸಿತು. ಗಾಡಿಯಿಂದ ಕೆಳಗಿಳಿದವನೇ ಒಮ್ಮೆ ಗಂಭೀರವಾಗಿ ಸುತ್ತ ನೋಡಿದ. ಕೈಯಲ್ಲಿದ್ದ ತ್ರಿಬಲ್ ಫೈವ್ ಸಿಗ ರೇಟ್ ಪ್ಯಾಕೆಟಿನಿಂದ ಸಿಗರೇಟೊಂದನ್ನು ತೆಗೆದು ಲೈಟರಿನಿಂದ ಬೆಂಕಿ ಹಾರಿಸಿ ಹಚ್ಚಿ ದಮ್ಮೆಳೆದು ಬಿಡುತ್ತ ಒಳಗೆ ಹೋದ. ಹಿಂದೆ ಕಾಯುತ್ತಿದ್ದ ಹೆಮ್ಮಕ್ಕ ಳೆಲ್ಲ ಅವನನ್ನು ಹಿಂಬಾಲಿಸಿದ್ದುವು.

ಹರೆಯದ ಹೆಮ್ಮಕ್ಕಳ ಸಾಲು ಹೋಟೆಲೊಳಗೆ ಪ್ರವೇಶಿಸುವಾಗ ಅಲ್ಲಿದ್ದವರ ತುಂಟ ದೃಷ್ಟಿಗಳು ಹಿಂಬಾಲಿಸಿದವು. ಅವರ ಗುಸುಗುಸು

ಮಾತು ನಗೆ ಅಲ್ಲೆಲ್ಲಾ ತುಂಬಿತ್ತು. ನಾಚಿ ನೀರಾದ ಹೆಮ್ಮಕ್ಕಳು ರೂಮ್ ನಂಬರ್ ಹತ್ತರ ಮುಂದೆ ಜಮಾಯಿಸಿದರು. ಅಚ್ಚುಕೋಯ ರೂಮಿನೊಳಗೆ ಹೋದ.

## ಯಾರು, ಯಾರಿಗೆ ?

ಮುಸ್ತಫಾ ಖಾಲಿದ್‌ಬಿನ್ ಅಖ್ತರ್ ಒಳಗೆ ಸೋಫದಲ್ಲಿ ಕೂತಿದ್ದ. ಅವನ ಮುಂದೆ ಟೀಪಾಯಿಯಲ್ಲಿ ಹಾಲು ಹಾಕದ ಕಪ್ಪು ಬಣ್ಣದ ಚಾ, ತುಂಬಿದ ಗ್ಲಾಸಲ್ಲಿ ಹೊಗೆಯಾಡುತ್ತಿತ್ತು. ಅಚ್ಚುಕೋಯ ಒಳಗೆ ಬಂದ ವನೇ 'ಅಸ್ಸಲಾಂ ಅಲೈಕುಂ' ಎಂದ. ಅರಬ ಕಲ್ಲಿಕೋಟೆಯಲ್ಲಿ ಇಡಿಸಿದ್ದ ಹೊಸ ಹಲ್ಲಿನ ಸೆಟ್ಟನ್ನು ಕಚ್ಚಿ ದವಡೆಯೊಳಗೆ ತೂರಿಸುತ್ತ "ವ ಅಲೈಕುಂ ಸಲಾಂ" ಎಂದ. ತನ್ನ ಮುಂದಿದ್ದ ಚಾ ತುಂಬಿದ ಗ್ಲಾಸನ್ನು ಅಚ್ಚುಕೋಯರ ಮುಂದಿಟ್ಟ. ಅಚ್ಚುಕೋಯ ಕೃತಜ್ಞತೆ ಸಲ್ಲಿಸುತ್ತ ಚಾವನ್ನು ಹೀರತೊಡ ಗಿದ.

ಅಚ್ಚುಕೋಯನಿಗೆ ಅರಬರ ಈ ತರದ ಚಾ ಎಂದರೆ ಬಲು ಇಷ್ಟ. ಹಾಲು ಹಾಕದೆ ನಿಂಬೆರಸ, ದಾಲ್ಚೀನಿ, ಏಲಕ್ಕಿಪುಡಿ ಸಕ್ಕರೆ ಹಾಕಿದ ಘಮ ಘಮಿಸುವ ಈ ಚಾ ಅತ್ಯಂತ ರುಚಿಕರವಾದದ್ದೆಂದು ಅವನ ಅಭಿಪ್ರಾಯ. ಈ ಚಾ ಕುಡಿದ ನಾಲಗೆಗೆ ಮನೆಯಲ್ಲಿ ಹೆಂಡತಿ ಮಾಡಿಕೊಡುವ ಚಾ ಏನೇನೂ ರುಚಿಸುವುದಿಲ್ಲ. 'ಕುಡಿದರೆ ಅಂತಹ ಚಾ ಕುಡೀಬೇಕು, ಇದರಲ್ಲೇನಿದೆ ಮಣ್ಣು' ಅನ್ನುತ್ತಿದ್ದ.

ಅರಬನಿಗೆ ಅಚ್ಚುಕೋಯ ಏನೂ ಮಾತಾಡದೆ ಚಾ ಹೀರುತ್ತಾ ಕುಳಿ ತಿರುವಾಗ ಚಪಲ ತಡ್ಕೊಳ್ಳಲಾಗಲಿಲ್ಲ. "ಹೇಳಿದ ಕೆಲಸವೇನಾಯ್ತು ?" ಅಂತ ಕೇಳಿದ. ಅಚ್ಚುಕೋಯ ಕಣ್ಣು ಮಿಟುಕಿಸಿ ಕಿರುನಗೆ ಬಿರುತ್ತಾ "ಸ್ವರ್ಗದಲ್ಲಿರ್‍ತಾರಲ್ಲಾ ಹೂರುಲ್ಲೀನ್ ಅನ್ನೋ ಅಪ್ಸರೆಯರು ಅಂಥಾ ಹೆಣ್ಣನ್ನು ಕರೆತಂದಿದ್ದೇನೆ...ಕೈ ತೊಳೆದು ಮುಟ್ಟಬೇಕು. ಕೆಂಪು ಹಳದಿ ನಿಮ್ಮ ಲೆಬನಾನಿ ಸೇಬು..." ಎಂದ.

ಅರಬ ಖುಷಿ ತಡ್ಕೊಳ್ಳಲಾರದೆ ಫಕ ಫಕನೆ ನಕ್ಕ. ಸರಿಯಾಗಿ ದವಡೆ

ಯಲ್ಲಿ ಕೂರದ ಹೊಸ ಹಲ್ಲಿನ ಸೆಟ್ಟು ಪುಳುಕ್ಕನೆ ಬಾಯಿಯಿಂದ ಹೊರ ಬಂದಾಗ ಪೆಚ್ಚಾದ. ಡೆಂಟಿಸ್ಟ್ ಡಾಕ್ಟರನಿಗೆ ಹಿಡಿಶಾಪ ಹಾಕುತ್ತ ಸೆಟ್ಟನ್ನು ದವಡೆಯೊಳಗೆ ಪುನಃ ತಳ್ಳಿದ. ಅಚ್ಚುಕೋಯನಿಗೆ ಅರಬನ ಆತುರ ಕಂಡು ನಗೆ ಬಂದರೂ ತಡೆದುಕೊಂಡ. ಇದೇ ಸರಿಯಾದ ಸಮಯವೆಂದು ವ್ಯವಹಾರದ ಮಾತು ಶುರುಮಾಡಿದ. "ಷೇಖ್ ಈ ಸಲ ಸ್ವಲ್ಪ ಕೈ ಸಡಿಲು ಬಿಡಬೇಕಾಗುತ್ತದೆ. ಹಕ್ಕಿ ಅಂತಾದ್ದು. ಹೊಸತು..." ಎಂದ.

ಅಚ್ಚುಕೋಯ ತನ್ನನ್ನು 'ಷೇಖ್' ಎಂದು ಕರೆದಾಗಲೆಲ್ಲ ಅರಬನಿಗೆ ರೋಮಾಂಚನವಾಗುತ್ತಿತ್ತು. ತನ್ನ ದೇಶದಲ್ಲಿ ತಾನೊಬ್ಬ ಸಾಮಾನ್ಯನೆನಿಸಿ ದರೂ ಇಲ್ಲಿಯವರಿಗೆ ಅರಬರೆಲ್ಲರೂ 'ಷೇಖ್'ಗಳೇ. ಒಳಗೊಳಗೆ ಖುಷಿ ಪಟ್ಟ. ಕೈಹಿಡಿಯಲು ಬಂದ ಅಪ್ಸರೆ ಎಷ್ಟು ಸುಂದರಿ ಇರಬಹುದು ಎಂಬು ದನ್ನು ಕಲ್ಪಿಸಿಕೊಳ್ಳುತ್ತಿರುವಾಗ ಅರಬನಿಗೆ ಕಚುಕುಳಿ ಇಟ್ಟಂತಹ ಅನುಭವ ವಾಗುತ್ತಿತ್ತು. "ಹುಡುಗಿ ನೀವು ಹೇಳಿದ ಹಾಗಿದ್ದರೆ ಐದು ಸಾವಿರ ಇಂಡಿಯನ್ ರುಪೀಸ್ ಕೊಡ್ತೇನೆ..." ಎಂದ.

ಅಷ್ಟು ಸುಲಭದಲ್ಲಿ ಅಚ್ಚುಕೋಯ ಒಪ್ಪಲು ತಯಾರಿರಲಿಲ್ಲ. 'ಕಡಿಮೆ ಯೆಂದರೆ ಹದಿನೈದು ಸಾವಿರ ಕೊಡಬೇಕು. ಷೇಖ್ ಖಾಲಿದ್ ಬಿನ್ ಅಖ್ಬರ್ ಅರಬ ದೇಶದ ಅತ್ಯಂತ ಶ್ರೀಮಂತನೆಂದು ಹೇಳಿದ ಮೇಲೆಯೇ ಅವಳು ನಿಮ್ಮ ಹತ್ತಿರ ಬರಲು ಒಪ್ಪಿದ್ದು. ನೀವು ಅವಳನ್ನೊಮ್ಮೆ ನೋಡಿದರೆ ಗೊತ್ತಾ ಗ್ತದೆ. ಮಾಷ ಅಲ್ಲಾಹ್... ಯಾರೂ ಮುಟ್ಟದಿರುವ ಅಪರಂಜಿ ಹೆಣ್ಣು..." ಎಂದ.

ಅರಬನ ಬಾಯಿಯಲ್ಲಿ ನೀರೂರಿತು. "ಇನ್ ಷಾ ಅಲ್ಲಾಹ್... ಕೊಡೋಣ... ಹುಡುಗಿಯನ್ನೊಮ್ಮೆ ತೋರಿಸಿ" ಎಂದು ಅವಸರ ಮಾಡಿದ.

ತನ್ನ ಜೇಬಿಗೆ ಹತ್ತು ಸಾವಿರವಾದರೂ ತುಂಬಿಕೊಳ್ಳಬೇಕೆಂತ ಲೆಕ್ಕ ಹಾಕುತ್ತ ಖುಷಿಯಾಗಿ ಹೊರಗೆ ಹೋದ ಅಚ್ಚುಕೋಯ ಹೊರಗೆ ನಿಂತಿದ್ದ ಹೆಂಗಸರಲ್ಲಿ ಹಫ್ಸಾ ಮತ್ತು ನಫೀಸರನ್ನು ಬಿಟ್ಟು ಉಳಿದೆಲ್ಲರನ್ನು ಹೋಗಲು ಹೇಳಿದ. ಹೆಂಗಸರು ಗೊಣಗುತ್ತ ಹೋದರು. "ಹಫ್ಸಾ... ನಿನ್ನ ತಂಗಿ ಯನ್ನು ಕರ್ಕೊಂಡು ರೂಮಿನೊಳಗೆ ಬಾ..." ಎಂದ ಅಚ್ಚುಕೋಯ.

ಈಗ ಹಫ್ಸಾಳ ಸರದಿ. ಈ ಸಮಯದಲ್ಲಿ ಸ್ವಲ್ಪ ಕಡಕ್ಕಾಗಿದ್ರೆ ಮಾತ್ರ ಬೇಳೆ ಬೇಯುತ್ತದೆ. ಇಲ್ಲದಿದ್ದರೆ ಇಡಿಯಾಗಿ ನುಂಗುವ ಜ್ವಾಲೆ ಅಚ್ಚು ಕೋಯನದ್ದು ಅಂತ ಅನುಭವದಿಂದ ಅವಳಿಗೆ ತಿಳಿದಿತ್ತು. ನಫೀಸಾ ಈ

ವ್ಯವಹಾರಕ್ಕೆ ಹೊಚ್ಚ ಹೊಸಬಳಾದ್ದರಿಂದ ಅತ್ಯಂತ ಹೆಚ್ಚು ಮಹರ್ ಸಿಗೋದು ಈಗಲೇ. ಮುಂದೆ ಎಷ್ಟಾದರೂ ಅಷ್ಟೆ.

"ಕೋಯ... ಈ ಸಲ ಕಮ್ಮಿ ಹಣಕ್ಕೆ ಒಪ್ಪೂದಿಲ್ಲ" ಅಂದಳು ಹಫ್ಸಾ. ಉಳಿದ ಹೆಂಗಸರನ್ನು ಹಿಂದಕ್ಕೆ ಕಳುಹಿಸುವ ಮುಂಚೆನೇ ತಾನು ಹಫ್ಸಾಳ ಜೊತೆ ವ್ಯವಹಾರದ ಮಾತು ಆಡಬೇಕಿತ್ತು. ನಾನು ದುಡಿಕಿದೆ ಎಂದು ಕೈಕೈ ಹಿಸುಕಿಕೊಂಡ ಅಚ್ಚುಕೋಯ. "ಅದೆಲ್ಲ... ನಂತರ ನೋಡೋಣಲ್ಲಾ..." ಎಂದ. ಅವನ ಬೆಣ್ಣೆ ಮಾತಿಗೆ ಮರುಳಾಗುವವಳು ಹಫ್ಸಾ ಅಲ್ಲ "ನಂತರದ್ದು ನಂತರ. ಈಗದ್ದು ಈಗ್ಲೇ ಆಗ್ಬೇಕಲ್ಲಾ... ಕೋಯಾ..." ಅಂದಳು, ಹಫ್ಸಾ. ಇವಳು ಇವಳಮ್ಮನಂತಲ್ಲ. ಬಹಳ ಚೂಟಿಯಾಗಿದ್ದಾಳೆನಿಸಿತು ಅಚ್ಚುಕೋಯಿನಿಗೆ. "ಅದೆಷ್ಟು ಕೊಡಬೇಕು ಹೇಳು ಮಾರಾಯ್ತಿ... ಹೇಳು" ಎಂದ ಕೋಯ ಸಿಟ್ಟು ನಟಿಸುತ್ತ. "ಐದು ಸಾವಿರಕ್ಕೆ ಒಂದು ಪೈಸೆ ಕಮ್ಮಿಯಾದ್ರೂ ಸಾಧ್ಯವಿಲ್ಲ. ಮತ್ತೆ ನಿಕಾಹದ ಖರ್ಚೆಲ್ಲ ನಿಮ್ಮದೇ..." ಎಂದಳು ಹಫ್ಸಾ.

'ಮತ್ತೂ ಹತ್ತು ಸಾವಿರ ಜೇಬಲ್ಲಿ ಉಳಿಯುತ್ತದೆ' ಎಂದುಕೊಂಡ ಅಚ್ಚುಕೋಯ. ಹೋದರೆ ಒಂದೆರಡು ನೂರು ನಿಕಾಹ ಮಾಡುವ ಮೌಲ್ವಿಗೆ ಹೋಗಬಹುದು, ಉಳಿದದ್ದು ಪೂರ್ತಿ ಲಾಭ. ಈಗ ಚೌಕಾಸಿ ಗಿಳಿದರೆ ಕೆಲಸ ಕೆಡುತ್ತದೆ ಎಂದುಕೊಂಡು, "ಹೂಂ... ಒಳಗೆ ಬನ್ನಿ ಹಾಗಾದ್ರೆ..." ಎಂದ.

ಕೆಲಸ ಇಷ್ಟು ಸುಲಭದಲ್ಲಿ ಮುಗಿದದ್ದು ಕಂಡಾಗ ಹಫ್ಸಾಳನ್ನು ಇನ್ನೊಂದು ಸಂಶಯ ಕಾಡಿತು. ಒಂದೋ ಅರಬ ಮುದಿಯನಿರಬೇಕು, ಇಲ್ಲ ಶ್ರೀಮಂತನಿರಬೇಕು. ಶ್ರೀಮಂತನಾಗಿದ್ದರೆ ತನ್ನ ಮಗಳಿಗೆ ಸಂಬಂಧ ಕುದುರಿಸೊ ಪೈಕಿ ಈ ಅಚ್ಚುಕೋಯಾನದ್ದು. ಎಲ್ಲೋ ಮುದಿಯನೇ ಇರಬೇಕು ಎಂದುಕೊಂಡು ಒಳಗೆ ಕಾಲಿಟ್ಟಳು. ತನ್ನ ಊಹೆ ನಿಜವಾದದ್ದು ಕಂಡು ಅರಬನನ್ನು ಕೆಕ್ಕರಿಸಿ ನೋಡಿದಳು. ನಫೀಸ ತಲೆತಗ್ಗಿಸಿ ಇದಾವುದರ ಕಡೆಗೂ ಗಮನ ಕೊಡದೆ ಹಫ್ಸಾಳ ಮಗ್ಗುಲಲ್ಲಿ ಮುದುಡಿ ಕೂತಳು.

ಅರಬನ ಕಣ್ಣು ಆಮೂಲಾಗ್ರವಾಗಿ ನಫೀಸಳ ದೇಹವಿಡೀ ಹರಿಯಿತು. ತಾನು ಎಣಿಸಿದ್ದಕ್ಕಿಂತ ಹೆಚ್ಚು ಸುಂದರಿ ಎಂದು ಖುಷಿಯಾಗಿದ್ದ. ಮಿಸ್ ಸುಂದರಿಯರಿಗಿಂತ ಮಿಗಿಲಾದ ಸುಂದರಿಯರು ಈ ಬಡ ಭಾರತದೇಶದಲ್ಲೂ ಇದ್ದಾರಲ್ಲಾ ಎಂದು ಆಶ್ಚರ್ಯಪಟ್ಟು "ಸುಬ್ಹಾನಲ್ಲಾಹ್" ಎಂದು

ಉದ್ಗರಿಸಿದ. ಈ ಸಲ ಅರಬ ತನ್ನ ಹಲ್ಲಿನ ಸೆಟ್ಟಿನ ಬಗ್ಗೆ ಜಾಗರೂಕ ನಾಗಿದ್ದ.

"ಹೇಗೆ... ಒಪ್ಪಿಗೆಯಾ ಷೇಖ್...?" ಅಂತ ಅಚ್ಚುಕೋಯ ಕೇಳಿದಾಗ ಅರಬ "ಅಲ್ ಹಮ್ದುಲಿಲ್ಲಾಹ್..." ಎಂದು ಒಪ್ಪಿ ಬಿಟ್ಟ. ಅಚ್ಚುಕೋಯನಿಗೆ ಹತ್ತು ಸಾವಿರ ರೂಪಾಯಿ ಒಮ್ಮೆಲೇ ಜೇಬಿಗಿಳಿದ ಸಂತೋಷದಲ್ಲಿ ಕುಣಿದು ಕುಪ್ಪಳಿಸುವಂತಾಗಿತ್ತು. ಐದು ಸಾವಿರ ಎಡ್ವಾನ್ಸು ಈಗ್ಲೇ ಪಡ್ಕೊಳ್ಬೇಕು. ಹೀಗೆಯೇ ಈ ವರ್ಷ ಹದಿನೈದು ಇಪ್ಪತ್ತು ನಿಕಾಹ್ ನಡೆದರೆ ಸಾಕು. ದೇವರು ನಡೆಸಿದರೆ ಈ ವರ್ಷ ತನ್ನ ಹಿರಿಯ ಮಗಳನ್ನು ಲಕ್ಷ ರೂಪಾಯಿ ವರದಕ್ಷಿಣೆ ಕೊಟ್ಟು ಡಾಕ್ಟರನೊಬ್ಬನಿಗೆ ನಿಕಾಹ್ ಮಾಡಿಕೊಡಬೇಕೆಂದು ಒಳಗೊಳಗೆ ಲೆಕ್ಕಹಾಕಿಕೊಂಡ.

"ಹಫ್ಸಾ... ಈ ಯುವಕ ಸಂಘದ ಹುಡುಗರು ಮತ್ತು ದೊಡ್ಡ ಮಸೀದಿಯ ಖಾಜಿಯವರ ಉಪದ್ರದಿಂದಾಗಿ ಪೊಲೀಸರು ನಮ್ಮ ಮೇಲೆ ಕಣ್ಣಿಟ್ಟಿದ್ದಾರೆ. ಹೋಟೇಲಿನವ್ರು ಈ ರಗಳೆ ಬೇಡಾಂತ ಇಲ್ಲಿ ನಿಕಾಹ್ ಮಾಡೂದಕ್ಕೆ ಅಡ್ಡಿ ಮಾಡ್ತಾರೆ. ಅದಕ್ಕಾಗಿ ಈವತ್ತು ರಾತ್ರಿ ಹನ್ನೆರಡು ಗಂಟೆಯ ಹೊತ್ತಿಗೆ ನಿಮ್ಮ ಮನೆಗೆ ನಾವು ಬರುತ್ತೇವೆ. ನಿನ್ನಣ್ಣ ನಿಕಾಹ್ ಮಾಡಿಕೊಡ್ಲಿಕ್ಕೆ ಬರ್ಲಿಕ್ಕೆ ಹೇಳಿಕಳಿಸು. ನೀವು ತಯಾರಾಗಿರಿ... ಹಣದ ವಿಲೇವಾರಿ ಎಲ್ಲ ಅಲ್ಲೇ..." ಎಂದ ಕೋಯ. ಹಫ್ಸಾ 'ಹೂಂ' ಎಂದು ನಫೀಸಳನ್ನು ಕರೆದುಕೊಂಡು ಅಲ್ಲಿಂದ ಹೊರಟಳು. ಅರಬನ ಕಣ್ಣು ಅವರು ಮರೆಯಾಗುವ ತನಕ ಹಿಂಬಾಲಿಸಿತು.

* * *

ರಾತ್ರಿ ಹನ್ನೆರಡು ಗಂಟೆಯ ಹೊತ್ತಿಗೆ ಸರಿಯಾಗಿ ಅಚ್ಚುಕೋಯನ ಬಿಳಿ ಫಿಯೆಟ್ ಕಾರು ಬೀಚ್ ರೋಡಿನಲ್ಲಿ ಬಂದು ಹಾಜಿಮಳ ಮನೆಯ ಮುಂದೆ ನಿಂತಿತು. ಎಲ್ಲಾ ಗುಡಿಸಲುಗಳಲ್ಲಿ ದೀಪ ಆರಿಸಲಾಗಿದೆಯೇ ಎಂಬುದನ್ನು ಖಾತ್ರಿ ಮಾಡಿಕೊಳ್ಳುತ್ತಾ ಕೋಯ ಕಾರಿನಿಂದ ಕೆಳಗಿಳಿದ. ಅರಬನೂ ಒಬ್ಬ ಮುಲ್ಲಾನೂ ಕೆಳಗಿಳಿದರು. ಕೋಯ ತನ್ನನ್ನು ಯಾರಾದರೂ ನೋಡುತ್ತಿರಬಹುದೇ ಎಂಬುದನ್ನು ಪರೀಕ್ಷಿಸಲು ಸುತ್ತ ನೋಟ ಬೀರಿದ. ಯಾರೂ ನೋಡ್ತಾ ಇಲ್ಲ. ಸದ್ಯ ಮರ್ಯಾದೆ ಉಳಿಯಿತು ಎಂದು ಸಮಾಧಾನ ಪಟ್ಟುಕೊಳ್ಳುತ್ತಾ ಹಾಜಿಮಳ ಗುಡಿಸಲೊಳಗೆ ಹೋದರು.

ಇವರೆಲ್ಲ ಗುಡಿಸಲೊಳಗೆ ಹೋದಾಗ ಮಮ್ಮುಟ್ಟಿ ನಕ್ಕು ಸ್ವಾಗತಿಸಲಿಲ್ಲ.

ಸಲಾಂ ಕೂಡಾ ಹೇಳಲಿಲ್ಲ. ಅಲ್ಲಿದ್ದ ಸೀಮೇ ಎಣ್ಣೆ ದೀಪವನ್ನು ಸ್ವಲ್ಪ ದೊಡ್ಡದು ಮಾಡಿದ ಅಷ್ಟೆ.

ನಫೀಸಾ ತನ್ನ ಅಕ್ಕಂದಿರ ಜೊತೆಗೆ ಒಂದು ಮೂಲೆಯಲ್ಲಿ ಕೂತಿದ್ದಳು. ಹಾಜಿಮ ಕೋಣೆಯಲ್ಲಿ ಕೂತು ಎಲ್ಲೋ ನೋಡುತ್ತಿದ್ದಳು.

ಮಮ್ಮುಟ್ಟಿ ಆಗಂತುಕರನ್ನೊಮ್ಮೆ ನೋಡಿದ. ಅರಬ ತಕ್ಕಮಟ್ಟಿಗೆ ದಷ್ಟಪುಷ್ಟ ದೇಹದ ಕೊಬ್ಬಿದ ಮುದುಕ. ತನ್ನ ಸಾಂಪ್ರದಾಯಿಕ ಬಿಳಿ ನಿಲು ವಂಗಿ ತೊಟ್ಟಿದ್ದ, ತಲೆಗೆ ರುಮಾಲು ಕಟ್ಟಿಕೊಂಡಿದ್ದ. ಹಲ್ಲಿನ ಸೆಟ್ಟು ಇಟ್ಟು ಕೊಂಡಿರಬೇಕು, ಆಗಾಗ ಕಚ್ಚಿ ಸರಿಪಡಿಸಿಕೊಳ್ಳುತ್ತಿದ್ದ. ದಾಡಿಯನ್ನು ನೀಟಾಗಿ ಕಸಿಮಾಡಿಕೊಂಡಿದ್ದ. ಅವನ ದುಂಡಗಿನ ಮುಖದಲ್ಲಿ ಎದ್ದು ಕಾಣುತ್ತಿರುವುದು ಹೊಳೆಯುವ ಕರ್ರಗಿನ ಎರಡು ಕಣ್ಣುಗಳು ಮತ್ತು ಉದ್ದ ಮೂಗು. ಅಲ್ಲೇ ಅವನ ಸನಿಹದಲ್ಲಿ ಕೂತು ತುಂಡು ತುಂಡು ಅರಬಿ ಶಬ್ದ ಗಳನ್ನು ಜೋಡಿಸುತ್ತ ಪಿಸುದನಿಯಲ್ಲಿ ಉದ್ದ ಕಡ್ಡಿಯಂತಹ ನರಪೇತಲ ಮುಲ್ಲಾ ಕೂತಿದ್ದ. ಕ್ಷೀಣ ಉದ್ದುದ್ದ ಕೈಗಳು, ಕಾಲುಗಳು, ಗುಳಿಬಿದ್ದ ಕೋಲು ಮುಖ, ಉದ್ದನೆಯ ಬಿಳಿದಾಡಿ, ಅವನು ಮಾತಾಡುವಾಗಲೆಲ್ಲ ಅವನ ದಾಡಿ ಕುಣಿಯುತ್ತಿದ್ದು ಅತ್ಯಂತ ತಮಾಷೆಯ ವ್ಯಕ್ತಿಯಾಗಿ ಕಾಣು ತ್ತಿದ್ದ. ಅವನ ತೇಪೆ ಹಾಕಿದ ಬಿಳಿ ಷರ್ಟ್, ಶುಭ್ರಬಿಳಿ ಮುಂಡು ಅವನ ಬಡತನ ಸಾರುತ್ತಿತ್ತು. ಮಮ್ಮುಟ್ಟಿ "ಏಲೂ ಮಾಡ್ಕೊಂಡು ಬರ್ಲಿಯಾ...?" ಅಂತ ಕೋಯನನ್ನು ಕೇಳಿದ. ಮುಲ್ಲಾ ಮತ್ತು ಅರಬನ ಕಡೆ ನೋಡುತ್ತಾ ಕೋಯ "ಆಗ್ಬಹುದಲ್ಲಾ..." ಅಂದ. ಅರಬ ಹೋಟೇಲಲ್ಲಿಯೋ ಏಲೂ ಮುಗಿಸಿ ಬಂದು ಸುಂದರ ಗುಂಗಿನಲ್ಲಿದ್ದವ ಎಚ್ಚತ್ತ "ಆದಷ್ಟು ಬೇಗ ಪೂರೈ ಸಿದರೆ ಒಳ್ಳೆದಲ್ವಾ..." ಅಂದ ಮುಲ್ಲಾ ದಾಡಿ ನೀವಿದ.

ಮಮ್ಮುಟ್ಟಿ ಒಂದು ತಂಬಿಗೆ ನೀರಿನಿಂದ ಶಾಸ್ತ್ರೋಕ್ತವಾಗಿ ಕೈಕಾಲು ತೊಳೆದು 'ಏಲೂ' ಮುಗಿಸಿದ. ನಫೀಸಳ ಬಳಿಗೆ ಹೋಗಿ "ನಫೀಸ, ನಿನ್ನನ್ನು ಐದು ಸಾವಿರ ರೂಪಾಯಿ ಮಹರಿಗೆ ಮುಸ್ತಫಾ ಖಾಲಿದ್ ಬಿನ್ ಅಖ್ತರ್‌ರವರಿಗೆ ನಾನು ನಿನ್ನನ್ನು ನಿಕಾಹ್ ಮಾಡಿಕೊಡುವುದು ನಿನಗೆ ಒಪ್ಪಿ ಗೆಯಾ...?" ಅಂತ ಕೇಳಿದ. ಯಾಂತ್ರಿಕವಾಗಿ ಮೂರು ಬಾರಿ ಕೇಳಿದ. ಸಹೋದರಿಯರ ನಿಕಾಹದಲ್ಲಿ ಭಾಗಿಯಾಗಿ ಪಳಗಿದ ಮಮ್ಮುಟ್ಟಿಗೆ ಇಂದು ಮಾತ್ರ ಒಂಥರಾ ಅಳುಕು ಒಳಗೊಳಗೆ, ನಫೀಸಳಿಗೆ ತಾನೇನೂ ಮಾಡಲಾಗ ಲಿಲ್ಲವಲ್ಲ... ಒಂದು ಊರಿನ ಹುಡುಗನನ್ನು ಹುಡುಕಿ ಮದುವೆ ಮಾಡಿಸಿ

ಕೊಡಲಿಕ್ಕಾಗಲಿಲ್ಲವಲ್ಲಾ ಎಂಬ ವ್ಯಥೆ ಮತ್ತೆ ಕಾಡಿತ್ತು. ಜುಲೇಖ 'ಹೂಂ... ಹೇಳೇ' ಎಂದು ನಫೀಸಳನ್ನು ಪೀಡಿಸತೊಡಗಿದಳು. ನಫೀಸ ತನ್ನ ಮುಂದಿನ ಭೀಕರ ಬದುಕಿನ ಬಗ್ಗೆ ಯೋಚಿಸುತ್ತ ಕೂತಿದ್ದವಳು ಜುಲೇಖಾಳ ಮಾತು ಕೇಳಿ ಗಟ್ಟಿಯಾಗಿ ನಿಟ್ಟುಸಿರು ಬಿಟ್ಟಳು. ಅದನ್ನೇ ತಪ್ಪು ತಿಳಿದ ಜುಲೇಖ "ನಫೀಸಾ ಒಪ್ಪಿದ್ಲು ಮಮ್ಮುಟ್ಟಿ..." ಅಂದ್ಲು. ನಫೀಸಾ ನಿರ್ವಿಕಾರಳಾಗಿ ಕೂತಿದ್ಲು.

ಮಹರಿನ ಹಣ ನಿಕಾಹ್ ಮುಗಿಯುವ ಮುಂಚೆಯೇ ನೀಡುವುದು ಇಲ್ಲಿನ ಪದ್ಧತಿ. ಮಮ್ಮುಟ್ಟಿ ನಿಕಾಹಕ್ಕೆ ಅರಬನ ಕೈಯು ಮೇಲೆ ಕೈಯಿಡುವ ಮೊದಲು ಕೋಯನ ಮುಖ ನೋಡಿದ. ಅರಬನ ಜೇಬಿನಿಂದ ನೂರು ರೂಪಾಯಿಗಳ ಕಂತೆಯೊಂದು ಅಚ್ಚುಕೋಯನ ಕೈ ಸೇರಿತು. ಅಲ್ಲಿಂದ ಎದ್ದು ಕೋಯ ಮೂಲೆಯ ಮರೆಗೆ ಹೋಗಿ ಎಣಿಸಿ ಒಂದು ಭಾಗವನ್ನು ತಂದು ಹಫ್ಸಾಳ ಕೈಗಿತ್ತ, 'ನಿಕಾಹ್ ಆಗ್ಲಿ...' ಎಂದ ಕೋಯ.

ಹಫ್ಸಾ ಹಣವನ್ನು ಅಡುಗೆ ಕೋಣೆಯಲ್ಲಿ ಕೂತಿದ್ದ ತಾಯಿಯ ಕೈಗೆ ಕೊಟ್ಟಳು. "ಪೂರಾ... ಐದು ಸಾವಿರ..." ಅಂದ್ಲು ಹಫ್ಸಾ. ಹಾಜಿಮ ಚಕಿತಳಾದಳು. ಅವಳ ಜೀವಮಾನದಲ್ಲೇ ಇಷ್ಟು ಮಹರ್ ಪಡೆದದ್ದು ಗೊತ್ತಿರಲಿಲ್ಲ. ಒಂದೇ ಮೊತ್ತಕ್ಕೆ ಐದು ಸಾವಿರ ಸಿಗೂದೂ ಇದೇ ಮೊದಲು. ಎರಡೋ ಮೂರೋ ಸಾವಿರ ಕೈಸೇರಿದರೆ ದೊಡ್ಡದು. ಅದರಲ್ಲೂ ದಲ್ಲಾಳಿಯ ಕಮೀಷನು, ನಿಕಾಹದ ಖರ್ಚು ಕಳೆದು ಕೈಗೆ ಸಿಗೂದು ಅರ್ಧದಷ್ಟು ಮಾತ್ರ. ಆದರೆ ಇಂದು ಪೂರ್ತಿ ಐದು ಸಾವಿರ! ಈ ಅರಬ ಒಳ್ಳೆಯವನಿರಬೇಕು. ನಫೀಸಳ ಈ ಅದೃಷ್ಟದಿಂದ ತಮ್ಮ ಉದ್ಧಾರವಾದೀತೇನೋ ಎಂಬ ಆಸೆಯೊಂದು ಮಿಂಚಿದಾಗ ಅವನನ್ನು ನೋಡುವ ತೀವ್ರ ಆಸಕ್ತಿಯುಂಟಾಯಿತು. ಹಾಜಿಮ ಅಡುಗೆ ಕೋಣೆಯಿಂದ ಎದ್ದು ಹೊರಗೆ ಬಂದು ಇಣುಕಿದಳು.

ಆಗಲೇ ಮುಲ್ಲಾ ನಿಕಾಹ್ ಹೇಳಿಕೊಡಲು ಶುರುಮಾಡಿದ್ದ. ಮಮ್ಮುಟ್ಟಿ ಅರಬನ ಕೈಯ ಮೇಲೆ ತನ್ನ ಕೈಯಿಟ್ಟಿದ್ದ. ಮುಲ್ಲ ತನ್ನ ಕೀರಲು ಧ್ವನಿಯಲ್ಲಿ "ವಸವ್ವಜ್‌ತುತ... ವ ಅಂಖಹತ್ ಕ..." ಶುರು ಮಾಡಿದ್ದ. ಇಣುಕಿ ನೋಡುತ್ತಿದ್ದ ಹಾಜಿಮ ಮೈ ಮೇಲೆ ಆವಾಹನೆಯಾದವರ ಹಾಗೆ ಚಿಟ್ಟನೆ ಚೀರಿದಳು. "ಈ ನಿಕಾಹ್ ನಿಲ್ಸೀ..."

ಮುಲ್ಲಾನ ಗಂಟಲಲ್ಲೆ ನಿಕಾಹ್ ನಿಂತುಬಿಟ್ಟಿತು. ಇವಳಿಗೇನಾದ್ರೂ ಸೈತಾನ ಬಡೀತೋ... ಎಂಬಂತೆ ಎಲ್ಲರೂ ಹಾಜಿಮಳನ್ನೇ ನೋಡತೊಡ

ಗಿದರು. ಹಾಜಿಮ ಅರಬ ಕೂತಲ್ಲಿಗೆ ಬಂದು, "ಇವ್ನು ನನ್ನ ಗಂಡ... ಇವ್ನು ನನ್ನನ್ನು ನಿಕಾಹ ಆದವ್ನು. ನನ್ನ ನಫೀಸಾಳ ಖಾಸ ತಂದೆ..." ಎಂದಳು ಗಟ್ಟಿಯಾಗಿ.

ಅಲ್ಲೊಂದು ಸಿಡಿಲು ಬಂದು ಅಪ್ಪಳಿಸಿದಂತಾಗಿತ್ತು. ಮಮ್ಮುಟ್ಟಿ ಸಿಟ್ಟಿನಿಂದ ನಿಕಾಹಕ್ಕಾಗಿ ಕೈ ಹಿಡಿದ ಅರಬನ ಕೈ ಕೊಡವಿದ. ಮುಲ್ಲಾ ಎದ್ದೆನೋ ಬಿದ್ದೆನೋ ಎಂದು ಹೊರಗೆ ಓಡುತ್ತ... "ಯಾ ರಬ್ಬನಾ...ನನ್ನಿಂದ ಎಂಥಾ ದೊಡ್ಡ ಪಾಪದ ಕೆಲ್ಸ ಮಾಡಿಸಿದ್ದ ಈ 'ಇಬ್ಲೀಸಾ' ಕೋಯಾ! 'ಖಿಯಾಮ' ಹತ್ತಿರ ಬಂತು. ಲೋಕಕ್ಕೆ ಬೆಂಕಿಯ ಮಳೆ ಸುರಿಯೋದಕ್ಕೆ ದಿನಗಳು ದೂರವಿಲ್ಲ..." ಎಂದ ಗಾಬರಿಯ ಧ್ವನಿಯಲ್ಲಿ.

ಅಚ್ಚುಕೋಯ ಗರಬಡಿದವನಂತೆ ಕೂತಿದ್ದ. ತನ್ನ ಜೀವನದಲ್ಲೇ ಹೀಗಾದದ್ದಿಲ್ಲ. ಇದೆಲ್ಲ ಏನು ನಡೆಯುತ್ತಿದೆ ಏನ್ನೊಂದು ಸರಿಯಾಗಿ ತಿಳಿಯದ ಅರಬ ಹೆದರಿ "ಏನು... ಏನಾಯ್ತು..." ಎಂದು ಅರಬಿ ಭಾಷೆಯಲ್ಲಿ ಅಚ್ಚುಕೋಯನನ್ನು ಕೇಳಿದ. ಅಚ್ಚುಕೋಯ ಅವನನ್ನು ಕರೆದುಕೊಂಡು ಹೊರಗೆ ಹೋಗಿ ಕಾರಿನೊಳಗೆ ಕೂರಿಸಿದ. ತಾನೂ ಒಳಗೆ ಕೂತು ನಡೆದದ್ದನ್ನು ತಿಳಿಸಿದ.

ಕ್ಷಣ ಆಶ್ಚರ್ಯಗೊಂಡ ಅರಬ ತನ್ನ ಹದಿನೈದು ಸಾವಿರ ದಂಡವಾಯ್ತಲ್ಲಾ ಎಂದುಕೊಂಡು "ಹುಡುಗಿಯ ತಾಯಿಯಾದ್ರೂ ಪರವಾಗಿಲ್ಲವಿತ್ತು..." ಅಂತ ರಾಗ ಎಳೆಯತೊಡಗಿದ್ದ. ಕೋಯ ಗಾಡಿ ಸ್ಟಾರ್ಟ್ ಮಾಡಿ "ಅದೆಲ್ಲಾ ನಾಳೆ ನೋಡೋಣ. ನೀವೀಗ ರೂಮಿನಲ್ಲಿ ಮಲಗಿ..." ಎಂದು ಕಾರು ಸ್ಟಾರ್ಟ್ ಮಾಡಿದ.

ಮಮ್ಮುಟ್ಟಿಗೆ ಅಲ್ಲಿ ನಿಲ್ಲಲು ಮನಸ್ಸಾಗದೆ ಎಲ್ಲೋ ಹೋದ. ನಫೀಸಾ ಇದ್ದಕ್ಕಿದ್ದಂತೆ ಗಟ್ಟಿಯಾಗಿ ನಗತೊಡಗಿದಳು. ಜೋರಾಗಿ ಬಿದ್ದು ಬಿದ್ದು ನಕ್ಕಳು. ಜುಲೇಖ ಅವಳನ್ನೇ ನೋಡುತ್ತಿರುವಾಗ ನಫೀಸಾ ನಗುತ್ತಲೇ ಹೇಳಿದ್ಲು: "ಅಮ್ಮ ನಿಂಗೆಲ್ಲೋ ಭ್ರಾಂತಿ... ತಂದೆಯಾದರೇನಂತೆ? ನೀವೆಲ್ಲ ಮದುವೆಯಾದ ಅರಬರಲ್ಲಿ ನಿಮ್ಮ ಅಪ್ಪಂದಿರು ಇದ್ದಿರಲಿಲ್ಲಾ ಅನ್ನೋ ಗ್ಯಾರಂಟಿಯೇನು?"

ಅವಳ ಈ ಪ್ರಶ್ನೆಯನ್ನು ಉತ್ತರಿಸಲಾಗದೆ ಇವಳಿಗೆ ಹುಚ್ಚು ಹಿಡಿದಿರಬಹುದೇ ಎಂದು ಅನುಮಾನ ಪಡುತ್ತ ಎಲ್ಲರೂ ಭಯಗೊಂಡು ನಿಂತಿದ್ದರು!

ಹಾಜಿಮಳ ಕೈಯಲ್ಲಿದ್ದ ನೋಟುಗಳ ಕಂತೆ ಅವಳಿಗರಿವಿಲ್ಲದಂತೆ ಕೆಳಕ್ಕೆ ಬಿದ್ದು ಚೆಲ್ಲಾಪಿಲ್ಲಿಯಾಯ್ತು! ಹಫ್ಸಾ ಕಣ್ಣೀರಿಡುತ್ತಲೇ ನೆಲದಲ್ಲಿ ಬಿದ್ದಿದ್ದ ನೋಟುಗಳನ್ನು ಒಂದೊಂದಾಗಿ ಹೆಕ್ಕಿ ಆರಿಸತೊಡಗಿದ್ದಳು.

# ತಲಾಕ್ ನಾಮಾ

ಹಾಜಿಮ ನಾಲ್ಕೈದು ದಿನಗಳಿಂದ ಮನೆಕೆಲಸಕ್ಕೆ ಬಾರದ್ದರಿಂದ ಷರೀಫಮ್ಮನೇ ಎಲ್ಲ ಕೆಲಸಗಳನ್ನು ಮಾಡಬೇಕಿತ್ತು. 'ಈ ಹಾಜಿಮ ಎಲ್ಲಿ ಸತ್ತಳು...?' ಎಂದು ಗೊಣಗುತ್ತ ರಾಶಿರಾಶಿ ಕೆಲಸಗಳನ್ನು ಮಾಡಬೇಕಿತ್ತು. "ಅವಳು ಬಾರದಿದ್ದರೆ ಸಾಯ್ಲಿ. ಬೇರೆ ಯಾರನ್ನಾದ್ರೂ ನೋಡಿ" ಎಂದು ಸೈದುಕೋಯರಿಗೆ ಆಗ್ಲೇ ಹೇಳಿದ್ದರು. ಆದರೆ ಮನೆಕೆಲಸಕ್ಕೆ ಜನ ಸಿಗೂದು ಅಷ್ಟು ಸುಲಭವಿರಲಿಲ್ಲ. ಯಾರ ಹತ್ತಿರವೋ ಹೇಳಿಟ್ಟಿದ್ದೇನೆ. ಒಳ್ಳೆಯ ಜನವನ್ನು ಮಾಡಿಕೊಡ್ತೀನೆಂದಿದ್ದಾರೆ. ಒಂದೆರಡು ದಿನಗಳಲ್ಲೇ ಬರಬಹುದು ಎಂದಿದ್ದರು ಸೈದುಕೋಯ ಷರೀಫಮ್ಮರನ್ನು ಸಮಾಧಾನ ಪಡಿಸುತ್ತ. ಜುಬೇದ ಕೂಡ ಷರೀಫಮ್ಮನಿಗೆ ಮನೆಕೆಲಸದಲ್ಲಿ ಸಹಾಯ ಮಾಡುತ್ತಾಳಾದರೂ ಅವಳ ಮಗುವಿನ ಆರೈಕೆಯನ್ನೂ ನೋಡಿಕೊಳ್ಳಬೇಕಾದ್ದರಿಂದ ಹೆಚ್ಚು ಕೆಲಸ ಮಾಡಲಾಗುತ್ತಿರಲಿಲ್ಲ. ಮನೆಕೆಲಸದ ಒತ್ತಡದಿಂದ ಸುಸ್ತಾಗುತ್ತಿದ್ದ ಷರೀಫಮ್ಮನಿಗೆ ತಮ್ಮ ಮಗ ಸಲೀಮನ ಬದುಕಿನ ಬಗೆಗಿನ ಯೋಚನೆ ಸೇರಿಕೊಂಡು ಮಾನಸಿಕವಾಗಿ ಬಳಲಿ ಬೆಂಡಾಗುತ್ತಿದ್ದರು. ತಮ್ಮ ಪ್ರೀತಿಯ ಮಗನ ಬಾಳನ್ನು ತಾವೇ ಹಾಳು ಮಾಡಿಬಿಟ್ಟೆವಲ್ಲಾ ಎನ್ನುವ ಕೊರಗು ಅವರನ್ನು ಹಿಂಡಿ ಹಿಪ್ಪೆ ಮಾಡಿಬಿಟ್ಟಿತ್ತು.

ಸಲೀಮನಿಗೆ ಕಾಲೇಜೊಂದರಲ್ಲಿ ಕೆಲಸ ಸಿಕ್ಕಿದ ತಿಂಗಳೊಂದರೊಳಗೆ ತನ್ನ ಹೆಂಡತಿ ಆಯಿಷಾಳಿಗೆ 'ತಲಾಕ್' ಕೊಟ್ಟುಬಿಟ್ಟಿದ್ದ. ಅವಳಿಗೆ ಕೊಡಬೇಕಾದ ಮಹರಿನ ಹಣವನ್ನೂ ಕಳುಹಿಸಿಕೊಟ್ಟಿದ್ದ. ತಲಾಕ್ ಕೊಡುವ ದಿನ ಸಲೀಮ್ ಎಂದಿನಂತೆ ತಣ್ಣಗಿದ್ದ. ತನ್ನ ಕಾಲೇಜಿನ ಕೆಲಸಗಳನ್ನು ಎಂದಿನಂತೆ ಮಾಡಿದ್ದ. ಆದರೆ ಸೈದುಕೋಯ ಮತ್ತು ಷರೀಫಮ್ಮ ಇಬ್ಬರೂ ಉದ್ವೇಗದಿಂದ ಶಥಪಥ ತಿರುಗುತ್ತಿದ್ದರು. ತಮ್ಮ 'ತರವಾಡಿ'ನಲ್ಲಿ ತಲಾಕ್ ಕೊಡುತ್ತಿರೂದು

ಇದೇ ಮೊದಲು. ಈ ಭೇಪುರದ ಹುಡುಗಿಯನ್ನು ಸಲೀಮ್‌ನಿಗೆ ತಂದದ್ದು ನಮ್ಮ ಶನಿ. ಸಲೀಮ್ ತನಗೆ ಇಷ್ಟವಿಲ್ಲಾಂತ ಹೇಳಿದ್ರೂ ಒತ್ತಾಯ ದಿಂದಲೇ ಮದುವೆ ಮಾಡಿಸಿಬಿಟ್ಟಿದ್ದೆವು. ಬೇರೆ ಯಾವ ಹುಡುಗಿಯನ್ನಾ ದರೂ ಅವನು ಮದುವೆಯಾಗುತ್ತಿದ್ದರೆ ಸುಖಿಯಾಗಿರುತ್ತಿದ್ದ. ತಮ್ಮಿಂ ದಾಗಿಯೇ ತಮ್ಮ ಮಗನ ಬಾಳು ಹಾಳಾಯ್ತು. 'ತಲಾಕ್' ಕೊಟ್ಟು ನಮ್ಮ ಮನೆತನಕ್ಕೆ ಕೆಟ್ಟ ಹೆಸರು ಬಂತು ಎಂದು ಸೈದುಕೋಯ ಕೊರಗುತ್ತಿದ್ದರು. ಸುಲೇಮಾನ್ ಹಾಜಿಯವರ ನೆನಪಾದಾಗಲೆಲ್ಲ ಅವರಿಗೆ ಸಿಟ್ಟು ಉಕ್ಕಿ ಬರು ತ್ತಿತ್ತು.

ಅಂದು ಪನಿಯಂಕರಾದ ಸತ್ತಾರ್ ಸೇಟ್‌ರವರ ಮಗಳ ಮದುವೆಗೆ ಸೈದುಕೋಯ ಹೋಗಿದ್ದರು. ಅಲ್ಲಿಗೆ ಭೇಪುರದ ಸುಲೇಮಾನ್ ಹಾಜಿ ಯವರು ಕೂಡ ಬಂದಿದ್ದರು. ಪರಸ್ಪರ ಒಬ್ಬರನ್ನೊಬ್ಬರು ನೋಡಿದ್ದರೂ ಮಾತಾಡಿಸಲಿಲ್ಲ. ಮಗಳನ್ನು ಸೈದುಕೋಯಾರ ಮನೆಯಿಂದ ಕರೆದು ಕೊಂಡು ಹೋಗಿ ತಿಂಗಳುಗಳು ಕಳೆದರೂ ಸಲೀಮ್ ಭೇಪುರಕ್ಕೆ ಬರಲಿಲ್ಲವೆನ್ನು ವುದು ಹಾಜಿಯವರ ಸಿಟ್ಟಿಗೆ ಕಾರಣವಾಗಿತ್ತು. ಮಗ ಅವರಲ್ಲಿಗೆ ಹೋಗದೆ ಇರುವುದರಿಂದ ಹಾಜಿಯ ಅಹಂಕಾರಕ್ಕೆ ತಕ್ಕ ಶಾಸ್ತಿಯಾಯಿತೆಂದು ಒಳ ಗೊಳಗೆ ಗೆಲುವಿನಿಂದ ಸೈದುಕೋಯ ಬೀಗಿ ಕುಳಿತಿದ್ದರು. ಮದು ವೆಯ ಚಪ್ಪರದಲ್ಲಿ ಇಬ್ಬರೂ ಅನತಿ ದೂರದಲ್ಲೇ ಕೂತು ಪರಿಚಯಸ್ಥ ರೊಂದಿಗೆ ಅದೂ ಇದೂ ಮಾತಾಡುತ್ತಿದ್ದರಾದರೂ ಪರಸ್ಪರ ಕಣ್ಣೆತ್ತಿ ನೋಡುವ ಪ್ರಯತ್ನ ಕೂಡ ಮಾಡಿರಲಿಲ್ಲ. ಸೈದುಕೋಯ ನಗುತ್ತ ಎಲ್ಲ ರೊಂದಿಗೂ ಮಾತಾಡುತ್ತಿರುವಾಗ ಸುಲೇಮಾನ್ ಹಾಜಿ ಮುಖ ಗಂಟಿಕ್ಕಿ ಕೂತಿದ್ದರು.

ನಿಕಾಹ್ ಮುಗಿದಾಗ ಎಲ್ಲರೂ ಒಬ್ಬೊಬ್ಬರಾಗಿ ಮದುಮಗನ ಕೈ ಹಿಡಿದು ಸಲಾಂಕೊಟ್ಟು ಸಂಪ್ರದಾಯದಂತೆ ಅಪ್ಪಿಕೊಂಡು ಅಭಿನಂದಿಸಿದರು. ಸಿಹಿ ಹಂಚುತ್ತಾ ಸ್ವಯಂಸೇವಕರು ಬಂದಾಗ ಜೊತೆಯಲ್ಲೇ ಸತ್ತಾರ್‌ಸೇಟ್ ಎಲ್ಲರ ಯೋಗಕ್ಷೇಮ ವಿಚಾರಿಸುತ್ತ ಬಂದರು. ಸೈದುಕೋಯರ ಬಳಿಗೆ ಬಂದು ಮಾತಾಡಿಸಿ ಎಡಗಡೆ ತಿರುಗಿದಾಗ ಅನತಿ ದೂರದಲ್ಲೇ ಕೂತಿದ್ದ ಸುಲೇಮಾನ್ ಹಾಜಿಯವರನ್ನು ಕಂಡು "ಏನು ಹಾಜಿಯವರು ದೂರ ಕೂತಿದ್ದೀರಲ್ಲಾ, ನಿಮ್ಮ ಬೀಗರು ಇಲ್ಲೇ ಕೂತಿದ್ದಾರೆ... ನೋಡಿಲ್ವಾ...?" ಎಂದರು ಇವರ ನಡುವಿನ ವೈಮನಸ್ಸು ತಿಳಿಯದ ಸತ್ತಾರ್‌ಶೇಟ್. ಅವಕಾಶ ಕಾಯುತ್ತಿದ್ದ ಸುಲೇಮಾನ್ ಹಾಜಿಯವರಿಗೆ ಸುಸಂದರ್ಭ ಒದಗಿ

ದಂತಾಯಿತು. "ಎಂಥಾ ಬೀಗರು ಸೇಟ್? ನಪುಂಸಕ ಮಂಗನಿಗೆ ನನ್ನ ಚಿನ್ನ ದಂತಾ ಮಗಳನ್ನು ಬಲಿಕೊಟ್ಟ ಸಂಬಂಧವಾ ಈ ಬೀಗ ಅನ್ನೋದು?" ಎಂದು ಗಟ್ಟಿಯಾಗೆ ಅಂದುಬಿಟ್ಟರು.

ಅಲ್ಲಿ ನೆರೆದವರೆಲ್ಲ ತಿರುಗಿ ಇವರನ್ನೇ ನೋಡತೊಡಗಿದರು. ಸತ್ತಾರ್ ಶೇಟ್ ತಾನು ಯಾಕಾದರೂ ಈ ಮನುಷ್ಯನನ್ನು ಮಾತಾಡಿಸಿದೆನೋ ಎಂದು ಪೆಚ್ಚಾದರು. ಸೈದುಕೋಯ ಅಸಾಧ್ಯ ಸಿಟ್ಟಿನಿಂದ ಕುದಿಯತೊಡಗಿದರು. ಮದುವೆಯ ಚಪ್ಪರದಲ್ಲಿ ಈ ರೀತಿ ತನಗೆ ಹಾಜಿ ಅಪಮಾನ ಮಾಡುತ್ತಾನೆಂತ ಸೈದುಕೋಯ ಎಣಿಸಿರಲಿಲ್ಲ. ಸೇರಿದ ಜನರೆಲ್ಲ ತನ್ನತ್ತಲೇ ನೋಡುತ್ತಿರು ವಂತೆ ಭಾಸವಾಗಿ ಕೂತಲ್ಲೇ ಚಡಪಡಿಸಿದರು. ಅವನಿಗೆ ಸರಿಯಾದ ಉತ್ತರ ಕೊಟ್ಟು ಇನ್ನಷ್ಟು ಗಲಾಟೆ ಮಾಡೂದರಿಂದ ತನ್ನ ಗೌರವಕ್ಕೇ ಕುಂದು ಎಂಬ ಸಭ್ಯತೆಯಿಂದ ಮೌನವಾಗಿದ್ದ ಸೈದುಕೋಯರಿಗೆ ಅಲ್ಲಿ ಹೆಚ್ಚು ಹೊತ್ತು ನಿಲ್ಲಲಾಗಲಿಲ್ಲ. ಮದುವೆಯ ಊಟಕ್ಕೆ ಕೂಡ ನಿಲ್ಲದೆ ಅಲ್ಲಿಂದ ಹೊರ ಟರು.

ಮನೆಗೆ ಹೋದವರೇ ಷರೀಫಮ್ಮನನ್ನು ಕರೆದು "ನೋಡು ಆ ಹಾಜಿಯ ಧೈರ್ಯ... ಮದುವೆ ಮನೆಯಲ್ಲಿ ಎಲ್ಲರೆದುರಿಗೆ ನಮ್ಮ ಮಾನ ಮೂರ್ಕಾಸು ಮಾಡಿಬಿಟ್ಟ. ನನ್ನ ಮಗ ನಪುಂಸಕನಂತೆ. ಎಂಥಾ 'ಇಬ್ಲೀಸಿನ' ಕೈಯೊಳಗೆ ಸಿಕ್ಕಿಬಿದ್ದೆವು ನಾವು? ಆ ಹಾಜಿಮಳ ಮಗಳನ್ನಾದರೂ ನಮ್ಮ ಸಲೀಮ್ ಮದುವೆಯಾಗಿದ್ದರೆ ನಮಗಿಷ್ಟು ಅವಮಾನವಾಗುತ್ತಿರಲಿಲ್ಲ. ಈ ದಗಲ ಬಾಜಿ ಹಾಜಿಯ ಮಗಳನ್ನು ಮದುವೆಯಾದ್ದರಿಂದ ನಮ್ಮ ತರವಾಡಿಗೇ ಅನಿಷ್ಟ ತಗಲಿದಂತಾಯ್ತು. ಈ ಹಾಜಿಗೆ ಬುದ್ಧಿ ಕಲಿಸಲೇಬೇಕು. ನಮ್ಮ ಸಲೀಮನೇನೂ ಮುದುಕ ಅಲ್ಲ. ಎಲ್ಲೂ ಹೆಣ್ಣು ಸಿಗಬಹುದು. ಅವನ ಮಗ ಳಿಗೆ ಈಗಿಂದೀಗ್ಲೆ 'ತಲಾಕ್' ಕೊಡಿಸಬೇಕು" ಎಂದರು.

ಷರೀಫಮ್ಮ ಕೂಡ ಅದನ್ನೇ ಈಗೀಗ ಯೋಚಿಸುತ್ತಿದ್ದರು. ತಮ್ಮ ಮಗ ಮದುವೆಯಾಗಿ ಕೂಡ ಸನ್ಯಾಸಿಯಂತೆ ಬದುಕೂದು ಕಂಡಾಗ ಕರುಳು ಹಿಂಡಿದಂತಾಗುತ್ತಿತ್ತು. ಅವನು ಆಯೆಷಾಳಿಗೆ ತಲಾಕ್ ಕೊಟ್ಟುಬಿಡೂದೇ ಒಳ್ಳೇದು. ಬೇರೆಲ್ಲಿಯಾದ್ರೂ ಹೆಣ್ಣು ಸಿಗಬಹುದು. ಸಲೀಮ್ ನಪುಂಸಕ ನಂತ ಹೇಳಿ ಆ ಮಾನಗೆಟ್ಟ ಹಾಜಿ ಬಹಿರಂಗವಾಗಿ ನಮ್ಮ ಮರ್ಯಾದೆಯನ್ನು ಹರಾಜಿಟ್ಟಿದ್ದಕ್ಕೆ ಇದು ಸರಿಯಾದ ಮದ್ದು. "ಅವನ ಮಗಳಿಗೆ ಇನ್ನೊಬ್ಬ ಯಾರಾದರೂ ಬಕರಾ ಸಿಗಬಹುದು. ಅವನ ಗಿಲೀಟು ಮಾತಿಗೆ ಮರುಳಾಗುವ

ಗುಲಾಮನಾಗಿರಲು ನಮ್ಮ ಸಲೀಮನಿಗೆ ಸಾಧ್ಯವಾಗ್ಲಿಕ್ಕಿಲ್ಲ" ಎಂದರು ಷರೀ ಫಮ್ಮ ಸೈದುಕೋಯರಿಗೆ ಉತ್ತೇಜನ ನೀಡುತ್ತಾ.

ಸಂಜೆ ಕಾಲೇಜಿನಿಂದ ಸಲೀಮ್ ಬಂದಾಗ ಸೈದುಕೋಯ ಕರೆದು "ನೋಡು ಸಲೀಮ್, ನಾನು ಸತ್ತಾರ್‌ಶೇಟ್‌ರ ಮಗಳ ಮದುವೆಗೆ ಹೋಗಿದ್ದೆ. ಅಲ್ಲಿ ಎಲ್ಲರ ಎದುರಿಗೆ ಭೇಪುರದ ಹಾಜಿ ನಮ್ಮನ್ನು ಅವಮಾನಿಸಿದ. ನಾವು ಯಾವುದೋ ಅನಿಷ್ಟ ಘಳಿಗೆಯಲ್ಲಿ ಅವನ ಮಗಳನ್ನು ನಿನಗೆ ತರಲು ನಿಶ್ಚಯ ಮಾಡಿದ್ದು, ಇದಕ್ಕೇನಾದ್ರೂ ಮಾಡ್ಬೇಕಲ್ಲಾ...?" ಎಂದರು.

ಸಲೀಮು ತಣ್ಣಗಿದ್ದ. ಅಪ್ಪ ಸಿಟ್ಟಿನಿಂದ ಕುದಿಯುತ್ತಿರುವುದನ್ನು ಕಂಡು ಆಯಿಷಾಳ ಅಪ್ಪ ತುಂಬ ಅವಮಾನ ಮಾಡಿರಬೇಕು. ಇಲ್ಲದಿದ್ದರೆ ಹೀಗೆಲ್ಲ ಸಿಟ್ಟು ಮಾಡ್ಕೊಳ್ಳೋದು ಅವರದ್ದು ಎಂದಿನ ಸ್ವಭಾವವಲ್ಲ ಎಂದು ಕೊಂಡ. "ಅದೇನು ಮಾಡ್ಬೇಕಪ್ಪಾ ನೀವೇ ಹೇಳಿ. ನಾನಾಗ್ಲೆ ನಿಮ್ಗೆ ಹೇಳಿದ್ದೆ, ನಂಗೆ ಹುಡುಗಿ ಇಷ್ಟವಿಲ್ಲಾಂತ. ನೀವು ಒತ್ತಾಯ ಮಾಡಿದ್ರಿ..." ಎಂದ.

ಸೈದುಕೋಯ ಖಿನ್ನರಾಗಿ "ಹೌದು ಮಗಾ... ಎಲ್ಲ ತಪ್ಪೂ ನಮ್ಮದೇ. ನಿನ್ನಿಷ್ಟಕ್ಕೆ ವಿರುದ್ಧವಾಗಿ ಆ ಹುಡುಗಿಯನ್ನು ತರಲು ಮನಸ್ಸು ಮಾಡಿದ್ದು ನಮ್ಮ ದೊಡ್ಡ ತಪ್ಪು. ಹೀಗೆಲ್ಲಾ ಆಗ್ತದೆಂತ ನಮಗೇನು ಗೊತ್ತು? ಅವ ನೀಗ ನಿನ್ನನ್ನು ಎಲ್ಲರೆದುರಿಗೆ ನಪುಂಸಕನೆಂತ ಹೇಳಿದ್ದಾನೆ. ಇದರರ್ಥ ಅವನ ಮಗಳಿಗೆ ನಿನ್ನ ಅಗತ್ಯವಿಲ್ಲಾಂತ ಅಲ್ವಾ...? ಇದೇ ಕಾರಣ ಮುಂದೆ ಮಾಡಿ ಕೊಂಡು ಅವನು ತನ್ನ ಮಗಳ ಮೂಲಕ ನಿನಗೆ 'ತಲಾಕ್' ಕೊಡಿಸಲಿಕ್ಕೂ ಸಾಕು. ಹೀಗಾದರೆ ನಾವು ಮತ್ತಷ್ಟು ತಲೆತಗ್ಗಿಸಬೇಕಾಗುತ್ತದೆ. ಆದ್ದರಿಂದ ನೀನೇ ತಲಾಕ್ ಕೊಟ್ಟುಬಿಡೋದು ಒಳ್ಳೆಯದು."

ಸಲೀಮನಿಗೆ ಆಯಿಷಾಳ ಮೇಲೆ ಎಳ್ಳಷ್ಟೂ ಪ್ರೀತಿ ಇರದಿದ್ದರೂ 'ತಲಾಕ್' ಎಂದರೆ ಎಷ್ಟು ಅವಮಾನಕಾರಿ ಕೆಲಸವೆನ್ನೂದು ತಿಳಿದಿತ್ತು. ತಮ್ಮ ಸಮಾಜದಲ್ಲಿ ತಿಳುವಳಿಕೆಯುಳ್ಳವರು ಯಾರೂ ತಲಾಕ್ ಕೊಡೂದು ಒಂದು ಒಳ್ಳೆಯ ಕೆಲಸವೆಂತ ಪರಿಗಣಿಸೂದಿಲ್ಲ. 'ಮೊದಲನೆಯ ಹೆಂಡತಿಗೆ ತಲಾಕ್ ಕೊಟ್ಟವ'ನೆಂಬ ಕಳಂಕ ತನ್ನ ಮೇಲೆ ಜೀವಮಾನವಿಡೀ ಇರುತ್ತದೆ. ಮನೆತನದ ಮರ್ಯಾದೆಗೆ ಕೂಡ ಕುಂದು. ಮುಂದೆ ತಮ್ಮೊಂದಿಗೆ ಸಂಬಂಧ ಬೆಳೆಸುವವರೆಲ್ಲ ಎರಡೆರಡು ಬಾರಿ ಆಲೋಚಿಸಬೇಕಾಗುತ್ತದೆ. ಈಗ ತಾನು ಆಯಿಷಾಳಿಗೆ ತಲಾಕ್ ಕೊಡೂದು ಸರಿಯಾ? ಎಂದು ಯೋಚಿಸಿದಾಗ ಅವಳ ತಪ್ಪೇನು? ಎಂಬ ಪ್ರಶ್ನೆ ಧುತ್ತನೆ ಅವನ ಮುಂದೆ ಮೂಡಿಬಂತು. ತನ್ನನ್ನು

ಒಲಿಸಲು ಶ್ರಮಪಡುತ್ತಿದ್ದ ಆಯೆಷಾಳ ಮುಗ್ಧ ಮುಖ ತನ್ನ ಮುಂದೆ ಬಂದು ನಿಂತಂತಾಯಿತು. ಅವಳಪ್ಪನ ಉದ್ಧಟತನಕ್ಕೆ ಪ್ರತಿಯಾಗಿ ಈ ಮುಗ್ಧ ಹೆಣ್ಣಿಗೆ ತಾನು ಶಿಕ್ಷೆ ಕೊಡುತ್ತಿಲ್ಲವಷ್ಟೇ ? ಎಂದುಕೊಂಡಾಗ ಸಲೀಮ ಅಸ್ತವ್ಯಸ್ತಗೊಂಡ.

ಒಂದು ವೇಳೆ ತಾನು ಅಪ್ಪನ ಮಾತಿಗೆ ಒಪ್ಪದೆ ತಲಾಕ್ ಕೊಡಲು ನಿರಾಕರಿಸಿದರೂ ತಾನು ಆಯೆಷಾಳೊಂದಿಗೆ ಸಂಸಾರ ಹೂಡುವುದು ಸಾಧ್ಯವೇ ? ಎನ್ನೂದನ್ನು ಯೋಚಿಸುತ್ತ ಹೋದಂತೆ ಇದು ಅಸಾಧ್ಯವೆನಿಸಿತು. ಹಾಗಂತ ಅವಳು ತನ್ನ ತವರು ಮನೆಯಲ್ಲಿ ಅಂತ ದೂರವಾಗಿದ್ದುಕೊಂಡು ಎಷ್ಟು ಸಮಯ ಇರಬಹುದು ? ಇದರಿಂದ ಅವಳಿಗಾಗಲೀ ತನಗಾಗಲೀ ಒಳಿತಂತೂ ಖಂಡಿತಾ ಆಗೂದಿಲ್ಲ. ಅವಳಿಗೆ ತನ್ನ ಮೇಲೆ ವಿಶ್ವಾಸವಿರುತ್ತಿದ್ದರೆ ತಂದೆಯ ಮಾತನ್ನು ಧಿಕ್ಕರಿಸಿ ತನ್ನಲ್ಲಿಗೆ ಬರುತ್ತಿದ್ದಳು ಎಂದುಕೊಳ್ಳುವಾಗ ಅವಳಿಗೆ ತನ್ನಲ್ಲಿ ವಿಶ್ವಾಸ ಮೂಡುವ ರೀತಿಯಲ್ಲಿ ತಾನು ನಡೆದುಕೊಂಡಿದ್ದೇನೇ ? ಅನ್ನೋ ವಿಚಾರವೂ ಬಂತು. ಹೆತ್ತವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸಂಸಾರ ಹೂಡಿದರೂ ತಮ್ಮೊಳಗೆ ಪರಸ್ಪರ ಪ್ರೀತಿ ವಿಶ್ವಾಸವಿಲ್ಲದಿರೋದರಿಂದ ಬಾಳಿನಲ್ಲಿ ಖಂಡಿತವಾಗಿಯೂ ನೆಮ್ಮದಿ ಇರಲಿಕ್ಕಿಲ್ಲ. ಅವಳು ಬೇರೆ ಯಾರನ್ನಾದರೂ ಮದುವೆಯಾಗಿ ಸುಖವಾಗಿರಲಿ. ತನ್ನ ಬಗ್ಗೆ ಕೊರಗುತ್ತ ಕಾಲ ಕಳೆಯುವುದು ಬೇಡ. ಇದಕ್ಕೆ 'ತಲಾಕ್' ಕೊಡುವುದೇ ಸರಿಯಾದ ಮಾರ್ಗ ಎಂಬ ತೀರ್ಮಾನಕ್ಕೆ ಬಂದ.

ಅಂದೇ ರಾತ್ರಿ 'ಇಷಾ' ನಮಾಜ್ ಮುಗಿದನಂತರ ಸಲೀಮ್ ಮತ್ತು ಸೈದುಕೋಯ ಕುಟ್ಟಿಚಿರಾದ ಜುಮ್ಮಾ ಮಸೀದಿಯ ಖಾಜಿಯವರನ್ನು ಭೇಟಿಯಾದರು. ಸೈದುಕೋಯ ತನ್ನ ಮಗ ಅವನ ಹೆಂಡತಿಗೆ 'ತಲಾಕ್' ಕೊಡಬೇಕಂತ ನಿಶ್ಚಯಿಸಿ ಬಂದಿದ್ದಾನೆಂತ ಖಾಜಿಯವರಿಗೆ ತಿಳಿಸಿದರು. ಖಾಜಿಯವರು ಗಂಭೀರವಾಗಿ ಅಲ್ಲೇ ಕೂತರು. ಅವರನ್ನೂ ಕೂರಲು ಹೇಳಿದರು. "ಸಲೀಮ್, ನಿನ್ನಪ್ಪ ಹೇಳ್ತಾ ಇರೂದು ಸತ್ಯವಾ ? ಈ ಪ್ರಶ್ನೆಯನ್ನು ನಾನು ನಿನಗೆ ಯಾಕೆ ಕೇಳ್ತಾ ಇದ್ದೇನೆಂದ್ರೆ ಈ ತಲಾಕ್ ಅನ್ನೂದು ಸ್ವ–ಇಚ್ಛೆಯಿಂದ ಸ್ಪಷ್ಟವಾಗಿ ಹೇಳಬೇಕು. ಇಲ್ಲವಾದರೆ ಖಾಜಿಯಾದ ನಾನು ಸತ್ತನಂತರ ಅಲ್ಲಾಹ್‌ನಿಗೆ ಉತ್ತರ ಕೊಡಬೇಕಾಗ್ತದೆ" ಎಂದರು ಖಾಜಿಯವರು. ಸಲೀಮ್ ಒಂದು ಕ್ಷಣ ಸುಮ್ಮನಿದ್ದು ಮತ್ತೆ ಹೇಳಿದ. "ಹೌದು ನಾನು ನನ್ನ ಹೆಂಡತಿ ಆಯೆಷಾಳಿಗೆ ತಲಾಕ್ ಕೊಡಬೇಕಂತ ನಿಶ್ಚಯ ಮಾಡಿದ್ದೇನೆ."

"ನೋಡಿ ನೀವೆಲ್ಲ ತಿಳಿದವರು. ಆದರೂ ನನ್ನ ಕರ್ತವ್ಯ ಅಂತ ನಾನಿ

ದನ್ನು ಹೇಳ್ತಿದ್ದೇನೆ... ತಲಾಕನ್ನು ಸಿಟ್ಟು ಮತ್ತು ಉದ್ವೇಗದಿಂದ ಇರುವ ಸಂದರ್ಭದಲ್ಲಿ ಕೊಟ್ಟರೆ ಅಲ್ಲಾಹು ಕುರಾನಿನಲ್ಲಿ ಕೊಟ್ಟ ನಿಯಮಕ್ಕೆ ವಿರುದ್ಧ ವಾಗುತ್ತದೆ. ಸರಿಯಾಗಿ ಯೋಚಿಸಿ ತಲಾಕ್ ಕೊಡಬೇಕು. 'ತಲಾಕ್' ಅನ್ನೋದು ಅಲ್ಲಾಹು ನಮಗೆ ಕಲ್ಪಿಸಿಕೊಟ್ಟ ವಿಧಿಗಳಲ್ಲಿ ನನಗೆ ಅತ್ಯಂತ ಅಪ್ರಿಯವಾದದ್ದೆಂತ ಮುಹಮ್ಮದ್ ನಬಿ 'ಸಲ್ಲಲ್ಲಾಹು ಅಲೈಹಿವ ಸಲ್ಲಮ್' ರವರೇ ಹೇಳಿದ್ದಾರೆ. ಆದ್ದರಿಂದ ತುಂಬ ಯೋಚಿಸಿ ಕಟ್ಟಕಡೆಯ ಅಸ್ತ್ರವನ್ನಾಗಿ ತಲಾಕನ್ನು ಉಪಯೋಗಿಸಿಕೊಳ್ಳಬೇಕು" ಎಂದರು ಸಲೀಮನ ಮುಖವನ್ನು ನೋಡುತ್ತಾ.

ಈ ನಿಯಮಗಳನ್ನೆಲ್ಲ ತಿಳಿದಿದ್ದ ಸೈದುಕೋಯ ಖಾಜಿಯವರು ಸಮಯ ವ್ಯರ್ಥ ಮಾಡುತ್ತಿದ್ದಾರೆ ಎಂದುಕೊಂಡರು. ಇವರು ಹೀಗೆ ಹೇಳುವುದು ಕೇಳಿ ಸಲೀಮ್ ತನ್ನ ಅಭಿಪ್ರಾಯವನ್ನೆಲ್ಲಾದರೂ ಬದಲಾಯಿಸಿದರೆ? ಅನ್ನೋ ಅನುಮಾನ ಅವರಲ್ಲಿ ಮೂಡಿತು. "ಖಾಜಿಯವರೇ, ನಾನು ತುಂಬ ಆಲೋಚನೆ ಮಾಡಿಯೇ ಈ ನಿರ್ಧಾರಕ್ಕೆ ಬಂದಿದ್ದೇನೆ" ಎಂದು ಸಲೀಮ್ ಹೇಳಿದಾಗ ಸೈದುಕೋಯ ಸಮಾಧಾನಗೊಂಡರು.

"ಸರಿ ಹಾಗಾದರೆ, ಈಗ ನೀನು ಕೊಡ್ತಾ ಇರೋದು ಒಂದನೇ ತಲಾಕ್. ಎರಡನೇ ತಲಾಕ್ ಅಥವಾ ಮೂರನೆಯದ್ದೋ? ಅಂದರೆ ಒಂದನೇ, ಎರಡನೇ, ತಲಾಕ್‌ಗಳನ್ನು ಕೊಟ್ಟರೆ ಮುಂದೆ ಇಷ್ಟಪಟ್ಟರೆ ಮರು ನಿಕಾಹ್ ಆಗಬಹುದು. ಮೂರನೆಯದೂ ಕೊಟ್ಟುಬಿಟ್ಟರೆ ಮುಂದೆ ಮರು ನಿಕಾಹ್ ಆಗೋದು ಸುಲಭವಲ್ಲ. ಅವಳು ಇನ್ನೊಬ್ಬನೊಂದಿಗೆ ಮದುವೆ ಯಾಗಿ ಮತ್ತೆ ತಲಾಕ್ ಪಡೆದ ನಂತರವೇ ಸಾಧ್ಯ..." ಎಂದರು ಖಾಜಿ ಯವರು.

"ನಾನು ಮೂರು ತಲಾಕನ್ನೂ ಕೊಡುತ್ತಾ ಇದ್ದೇನೆ" ಎಂದ ಸಲೀಮ. ಖಾಜಿಯವರ ಮಾತುಗಳನ್ನು ಕೇಳುತ್ತ ಇದ್ದ ಸೈದುಕೋಯರಿಗೆ 'ಇದೆಲ್ಲಾ ತಮಗೆ ತಿಳಿದಿದೆ ನೀವೇನೂ ಹೇಳಬೇಕಾಗಿಲ್ಲ' ಎಂದು ಹೇಳಬೇಕೆನಿಸಿದರೂ ತನಗೆ ಅವರಿಂದ ಸಿಗುವ ಉತ್ತರ "ನನ್ನ ಕರ್ತವ್ಯ ಅದು ಹೇಳೂದು" ಅಂತ ಅನ್ನೂದು ಗೊತ್ತಿದ್ದರಿಂದ ಸುಮ್ಮನಾಗಿದ್ದರು.

"ಇದು ಬರಹದ ಮೂಲಕ ಭೇಪುರದ ಸುಲೇಮಾನ್ ಹಾಜಿಯವರ ಮಗಳು ಆಯಿಷಾಳಿಗೆ ತಲಪಬೇಕು. ಅದಕ್ಕಾಗಿ ನಿಮ್ಮ ಹತ್ತಿರ ಬಂದದ್ದು" ಎಂದರು ಸೈದುಕೋಯ. ಇಲ್ಲದಿದ್ದರೆ ತಮ್ಮ ಹತ್ತಿರ ಬರುವ ಜರೂರು ಇರ ಲಿಲ್ಲವೆನ್ನುವ ಅರ್ಥ ಬರುವ ಹಾಗೆ.

ಖಾಜಿಯವರು 'ಸರಿ...' ಎಂದು ತಲಾಕ್ ನಾಮಾ ಬರೆದುಕೊಟ್ಟರು. ಅದಕ್ಕೆ ಸಲೀಮ್ ತನ್ನ ಸಹಿ ಹಾಕಿದ. ನಮಾಜಿಗೆಂದು ಮಸೀದಿಗೆ ಬಂದ ಇಬ್ಬರನ್ನೂ ಕರೆದು ಸಾಕ್ಷಿ ಹಾಕಿಸಿದರು. ಅದನ್ನು ಮಹರಿನ ಹಣದ ಜೊತೆಗೆ ಪೋಸ್ಟಿನಲ್ಲಿ ಕಳುಹಿಸುವ ತೀರ್ಮಾನಕ್ಕೆ ಬಂದರು.

# ಸಮಾಗಮ

ಆಯೆಂಷಾಳಿಗೆ ತಲಾಕ್ ಕೊಟ್ಟ ದಿನ ಸಲೀಮನಿಗೆ ಹಗುರ ಅನುಭವ ವಾದರೂ ನೆಮ್ಮದಿ ಇರಲಿಲ್ಲ. ಕಾಲೇಜಿನಲ್ಲಿರುವಷ್ಟು ವೇಳೆ ಸಹೋದ್ಯೋಗಿ ಗಳೊಂದಿಗೆ, ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಾ, ಇದನ್ನೆಲ್ಲ ಮರೆಯು ತ್ತಿದ್ದನಾದರೂ ಮನೆಗೆ ಬಂದಾಗ ಅವನ ಮನಸ್ಸು ಅಶಾಂತಿಯಿಂದ ತೊಯ್ದಾಡುತ್ತಿತ್ತು. ತನ್ನ ಕೋಣೆಗೆ ಹೋಗಿ ಯಾವುದಾದರೂ ಪುಸ್ತಕ ವನ್ನು ಓದಲೆಂದು ಬಿಡಿಸಿದಾಗಲೂ ಆಯೆಂಷಾಳ ಮುಗ್ಧ ಮುಖ ತೇಲಿ ಬಂದು ಅವಳು ತನ್ನನ್ನು ಒಲಿಸಲಿಕ್ಕಾಗಿ ಪ್ರಯತ್ನ ಪಟ್ಟಿದ್ದು ತಾನು ಸಿಡುಕಿ ದಾಗಲೆಲ್ಲ ನೋವಿನಿಂದ ಮುಖ ಮುದುಡಿಕೊಂಡದ್ದು ನೆನಪಿಗೆ ಬಂದು ಅಪ ರಾಧಿ ಪ್ರಜ್ಞೆ ಕಾಡುತ್ತಿತ್ತು. ತಾನು ದುಡುಕಿದೆನೇನೋ ಎಂದುಕೊಳ್ಳುವಾಗ ಕೊನೆಗೊಂದು ಸಾರಿಯಾದರೂ ಅವಳ ಅಭಿಪ್ರಾಯ ಕೇಳಿ ತಿಳಿದುಕೊಂಡ ನಂತರ ತಲಾಕ್ ಕೊಡಬಹುದಿತ್ತೇನೋ ಎಂದುಕೊಂಡ. ಅವಳನ್ನು ಮದುವೆ ಯಾದದ್ದು ತನ್ನ ಮೊದಲನೆಯ ತಪ್ಪು. ನನಗೆ ಇಷ್ಟವಿಲ್ಲ ಅಂತ ನೇರವಾಗಿ ಹೇಳಿ ಪಟ್ಟು ಹಿಡಿದಿದ್ದರೆ ಈ ಮದುವೆಯೇ ಆಗುತ್ತಿರಲಿಲ್ಲ. ಹೆತ್ತವರನ್ನು ಸಂತೋಷಪಡಿಸುವುದು ಮಗನಾದ ತನ್ನ ಕರ್ತವ್ಯವಾದರೂ ಸ್ವಂತ ಬದುಕಿನ ದುರಂತಕ್ಕೆ ನಾಂದಿ ಮಾಡಿಕೊಂಡು ಅವರನ್ನು ತೃಪ್ತಿಪಡಿಸೋದು ಎಷ್ಟು ಸರಿ ಯಾದದ್ದು ? ಈ ರೀತಿ ನರಳುವುದಕ್ಕಿಂತ ಇಷ್ಟಪಟ್ಟವಳನ್ನು ಮದುವೆಯಾಗಿ ದ್ದರೆ ಸುಖವಾಗಿರಬಹುದಿತ್ತು.

ಆದರೆ ತಾನು ಇಷ್ಟಪಟ್ಟದ್ದು ನಫೀಸಳನ್ನು. ನಫೀಸ ಮನೆಕೆಲಸದ ಹುಡುಗಿ. ಅದೂ ಗುಡಿಸಲುಗೇರಿಯ ಕಡು ಬಡ ಹುಡುಗಿ. ಮರ್ಯಾದ ವಂತರ ಕುಟುಂಬದವಳಲ್ಲ. ತಾನೆಲ್ಲಿಯಾದರೂ ಬಾಯಿಬಿಟ್ಟು ನಫೀಸಳನ್ನು ಮದುವೆಯಾಗುತ್ತೇನೆಂತ ತನ್ನ ಹೆತ್ತವರ ಮುಂದೆ ಹೇಳಿದ್ದರೆ! ಮುಂದಿನ

ರಾದ್ಧಾಂತವನ್ನು ಊಹಿಸಿಕೊಂಡೇ ತನ್ನ ಮನದಾಸೆಯನ್ನು ಸಲೀಮ್ ಅದುಮಿಕೊಂಡಿದ್ದ. ಈಗ ಹೆತ್ತವರ ಇಷ್ಟ ಪ್ರಕಾರ ನಡೆದು ಆದದ್ದಾದರೂ ಏನು? ಮನೆತನದ ಮರ್ಯಾದೆ, ಮಾನ ಅಂತ ಕೂಗಿಕೊಂಡ ದೊಡ್ಡ ಮನೆತನದ ಸಂಬಂಧ ಮಾಡಿಕೊಂಡು ಸಿಕ್ಕಿದ್ದಾದರೂ ಏನು? ಈಗೆಲ್ಲ ಮುಗಿಯಿತು. ತನ್ನ ಬಾಳು, ಆ ಮುಗ್ಧ ಹುಡುಗಿ ಆಯೆಷಾಳ ಬಾಳು ಎಲ್ಲ ಹಾಳಾಯ್ತು. ಒಂದು ಲೆಕ್ಕದಲ್ಲಿ ತಾನು ತಲಾಕ್ ಕೊಟ್ಟದ್ದೂ ಒಳ್ಳೆಯದಾಯ್ತು. ಹಾಜಿಯವರು ಸೇಡು ತೀರಿಸಿಕೊಳ್ಳಲಿಕ್ಕಾದರೂ ಆಯೆಷಾಳಿಗೆ ಒಂದು ಒಳ್ಳೆಯ ಗಂಡು ನೋಡಿ ಮದುವೆ ಮಾಡದೆ ಬಿಡಲಿಕ್ಕಿಲ್ಲ. ಹೀಗಾದರೂ ಅವಳು ಸುಖವಾಗಿದ್ದರೆ ತನಗೆ ನೆಮ್ಮದಿ ಎಂದುಕೊಂಡ ಸಲೀಮ್.

ಈಗ ಮತ್ತೆ ಸಮುದ್ರ ತೀರದ ಒಡನಾಟ ಸಲೀಮನಿಗೆ ಹೆಚ್ಚು ಪ್ರಿಯವೆನಿಸತೊಡಗಿತ್ತು. ಮನೆಯಲ್ಲಿರೂದಕ್ಕಿಂತ ಹೆಚ್ಚು ವೇಳೆ ಸಮುದ್ರ ತೀರಕ್ಕೆ ಹೋಗಿ ಕಳೆಯುತ್ತಿದ್ದ. ಸಂಜೆ ಕಾಲೇಜಿನಿಂದ ಮನೆಗೆ ಬಂದವನೇ ಬಟ್ಟೆ ಬದಲಾಯಿಸಿ ಯಾವುದಾದರೊಂದು ಪುಸ್ತಕ ಹಿಡಿದುಕೊಂಡು ಸಮುದ್ರ ತೀರದ ಕಡೆ ಹೋಗುತ್ತಿದ್ದ. ಮನೆಯಲ್ಲಿ ಸಿಗದ ನೆಮ್ಮದಿಯನ್ನು ಕಡಲ ತೀರದಲ್ಲಿ ಅರಸುತ್ತಿದ್ದ.

ಸಮುದ್ರ ತೀರದ ಮರಳು ನೆಲದಲ್ಲಿ ಉದ್ದಕ್ಕೂ ನಡೆಯುತ್ತಿರುವಾಗಲೆಲ್ಲ ನಫೀಸ ನೆನಪಿಗೆ ಬರುತ್ತಿದ್ದಳು. ಅವಳ ನೆನಪು ಬಂದು ತನ್ನ ಚಿತ್ತ ಕದಡುತ್ತದೆಂಬ ಕಾರಣಕ್ಕಾಗಿಯೇ ಅವನು ಇತ್ತೀಚೆಗೆ ಸಮುದ್ರ ತೀರದತ್ತ ಹೋಗುವ ಮನಸ್ಸು ಮಾಡಿರಲಿಲ್ಲ. ಅವಳ ನೆನಪಾದಾಗಲೆಲ್ಲ ತಾನು ಹೇಡಿ ಎನಿಸುತ್ತಿತ್ತು. ಧೈರ್ಯದಿಂದ ಹೆತ್ತವರನ್ನು ಎದುರಿಸುತ್ತಿದ್ದರೆ ನಫೀಸಳೊಂದಿಗೆ ತನ್ನ ಮದುವೆಯಾಗುತ್ತಿತ್ತು. ಸ್ವಲ್ಪ ಸಮಯ ಅವರೆಲ್ಲ ಹಾರಾಡುತ್ತಿದ್ದರು. ಅದನ್ನೆದುರಿಸಿದ್ದರೆ ಮುಂದೆ ಎಲ್ಲ ತಣ್ಣಗಾಗಿಬಿಡುತ್ತಿತ್ತು. ಇವನೇನೂ ಧರ್ಮ ವಿರುದ್ಧವಾದದ್ದು ಮಾಡಿಲ್ಲವೆಂದುಕೊಂಡು ಎಲ್ಲರೂ ರಾಜಿಯಾಗುತ್ತಿದ್ದರು. ಖಾಜಿಯುವರು ಮತ್ತು ಧಾರ್ಮಿಕ ಮುಖಂಡರು ತಮ್ಮನ್ನು ಖಂಡಿತವಾಗಿಯೂ ವಿರೋಧಿಸುತ್ತಿರಲಿಲ್ಲ. ಅವರೆಲ್ಲ ಇದರಲ್ಲಿ ತಪ್ಪೇನಿಲ್ಲ ಎಂದು ತಮ್ಮ ಜೊತೆಗಿರುತ್ತಿದ್ದರೆನ್ನೂದು ಸಲೀಮನಿಗೆ ತಿಳಿದಿತ್ತಾದರೂ ಈ ಖಾಜಿ ಮೌಲ್ವಿಗಳೆಲ್ಲ ಸ್ಥಳೀಯ ಸಂಪ್ರದಾಯಗಳು 'ದೀನ್' 'ಷರೀಯತ್ತು' ಗಳಿಗೆ ಸರಿಹೊಂದದಿದ್ದರೂ ಅವನ್ನು ಸರಿಪಡಿಸುವ ಗೋಜಿಗೆ ಹೋಗದಿರುವುದರಿಂದಲೇ ಇದು ಬೆಳೆದಿರುವುದು ಎಂದುಕೊಂಡ. ತಮ್ಮ ಮಗ ಮಾಡಿದ್ದೇನೂ ದೊಡ್ಡ ತಪ್ಪಲ್ಲಾಂತ ಹೆತ್ತವರು ಕಂಡುಕೊಂಡ ಕೂಡಲೇ

ತಮ್ಮ ಜೊತೆಯಲ್ಲಿ ಅನ್ಯೋನ್ಯರಾಗಿರುತ್ತಿದ್ದರು. ಆದರೆ ಇದೆಲ್ಲ ಯೋಚಿಸು ವಷ್ಟು ತಾಳ್ಮೆ ಧೈರ್ಯ ಅಂದು ತನ್ನಲ್ಲಿ ಉಂಟಾಗದಿರುವುದಕ್ಕೆ ತನ್ನನ್ನೇ ಹಳಿದುಕೊಳ್ಳತೊಡಗಿದ. ಹೆತ್ತವರ ಮತ್ತು ಸಂಪ್ರದಾಯಗಳ ಹಿಡಿತದಿಂದ ಮೂಡಿದ ಭಯ ಸ್ವಲ್ಪ ಸ್ವಲ್ಪವೇ ಕಡಿಮೆಯಾಗುತ್ತ ಬಂದು ಸಲೀಮ ಹೆಚ್ಚು ವಾಸ್ತವದತ್ತ ವಾಲತೊಡಗಿದ.

*　　　　*　　　　*

ನಿಕಾಹ್ ಅವಾಂತರ ನಡೆದ ಮರುದಿನ ಹಾಜಿಮಳಿಗೆ ಅಚ್ಚುಕೋಯ ನಿಂದ ಹೋಟೆಲಿಗೆ ಬರಲು ಕರೆ ಬಂದಿತ್ತು. ಹಾಜಿಮ ಕ್ಷಣ ಹೊತ್ತು ಯೋಚಿಸಿದವಳು ಇದ್ದದ್ದರಲ್ಲಿ ತನ್ನ ಒಳ್ಳೆಯ ಮುಂಡು ಕುಪ್ಪಸ ತೊಟ್ಟು ಕೊಂಡಳು. ಅವರು ಬಿಟ್ಟುಹೋದ ಐದು ಸಾವಿರ ರೂಪಾಯಿಯನ್ನು ಕರವಸ್ತ್ರದಲ್ಲಿ ಕಟ್ಟಿ ಕೈಯಲ್ಲಿ ಹಿಡಿದುಕೊಂಡಳು. ಅವಳು ಸಿಂಗರಿಸಿಕೊಳ್ಳು ವಾಗ ಎಂದಿನಂತಿರುತ್ತಿದ್ದರೆ ಹಫ್ಸಾ ತಮಾಷೆ ಮಾಡಿ ನಗುತ್ತಿದ್ದಳೇನೋ, ಆದರೆ ಇಂದು ಎಲ್ಲರೂ ಗರಬಡಿದವರಂತೆ ಕೂತುಬಿಟ್ಟಿದ್ದರಿಂದ ಅವಳು ಮನೆಯಿಂದ ಹೊರಡುವಾಗಲೂ ಯಾರೂ ತುಟಿ ಬಿಚ್ಚಿರಲಿಲ್ಲ. 'ಇನ್ನೇನು, ಆ ಐದು ಸಾವಿರ ರೂಪಾಯಿಯನ್ನು ಮರಳಿ ಪಡೆಯುವುದಕ್ಕಾಗಿ ಅಚ್ಚು ಕೋಯ ಮತ್ತು ಅರಬಿ ಹೇಳಿ ಕಳುಹಿಸಿರಬೇಕು ಎಂದುಕೊಂಡಳು ಹಫ್ಸಾ. 'ನಾನು ಹೋಗಿ ಬರುತ್ತೇನೆ' ಎಂದು ಹಾಜಿಮ ಮನೆಯಿಂದ ಹೊರಟಳು.

ಶೋರ್ ಹೋಟೇಲಿನೊಳಗೆ ಹೋದಾಗ ರೂಮ್ ನಂಬರ್ ಹತ್ತ ರಲ್ಲಿ ಅಚ್ಚುಕೋಯನ ಪರಿಚಿತ ದನಿ ಕೇಳಿಸಿ ನಿಂತಳು. ಅಚ್ಚುಕೋಯ ಅವ ಳನ್ನು ಒಳಗೆ ಕರೆದ. ಹಾಜಿಮ ಒಳಗೆ ಹೋದವಳೇ ತನ್ನ ಕೈಯಲ್ಲಿದ್ದ ಕರವಸ್ತ್ರದ ಗಂಟನ್ನು ಬಿಚ್ಚಿ ನೋಟುಗಳನ್ನು ಅರಬನ ಮುಂದಿಟ್ಟಳು. ಅದೇಕೋ ಅವಳ ಕಣ್ಣಲ್ಲಿ ನೀರು ಚಿಮ್ಮಿತ್ತು. ಅರಬ ಕಸಿವಿಸಿಗೊಂಡು, "ಛೇ... ಛೇ... ನಾನು ನಿನ್ನನ್ನು ಕರ್ದದ್ದು ಇದಕ್ಕಲ್ಲ. ನಿನ್ನೆ ರಾತ್ರಿ ನನ್ನಿಂದ ಎಷ್ಟು ದೊಡ್ಡ ಪಾಪದ ಕೆಲಸವಾಗುತ್ತಿತ್ತು ನೋಡು! ಅಲ್ಲಾಹು ನನ್ನನ್ನು ಖಂಡಿತವಾಗಿಯೂ ಕ್ಷಮಿಸುತ್ತಿರಲಿಲ್ಲ. ಅಲ್ಲಾಹು ದೊಡ್ಡವನು, ಅವನು ನಮ್ಮನ್ನೆಲ್ಲ ಪಾರುಮಾಡಿದ. ನಾನು ನಿಮ್ಮೆಲ್ಲರಿಂದ ಕ್ಷಮೆ ಕೇಳಬೇಕು. ರಾತ್ರಿ ಯಿಡೀ 'ತೌಬಾ' ಹೇಳಿ ಅಲ್ಲಾಹುನಿಂದ ಕ್ಷಮೆಯಾಚನೆ ಮಾಡಿದ್ದೇನೆ..." ಎಂದ. ಹಾಜಿಮ ಪಿಳಿಪಿಳಿ ಅರಬನನ್ನೇ ನೋಡುತ್ತಿದ್ದಳು. ಅವನು ಹೇಳು ತ್ತಿದ್ದದ್ದನ್ನು ಅಚ್ಚುಕೋಯ ತರ್ಜುಮೆ ಮಾಡಿ ಹೇಳುತ್ತಿದ್ದ. ಅಚ್ಚು

ಕೋಯ ತನ್ನ ಪರವಾಗಿಯೂ "ಹಾಜಿಮ... ನಾನು ಕೂಡ ದೊಡ್ಡ ತಪ್ಪು ಮಾಡುತ್ತಿದ್ದೆ! ನಿಂಗಾದ್ರೂ ನಿನ್ನ ಗಂಡನ ಗುರ್ತ ಆಯ್ತಲ್ಲಾ, ಅದೇ ನೋಡು ಅಲ್ಲಾಹುವಿನ ಪವಾಡ ಅಂದ್ರೆ! ನಮ್ಮನ್ನೆಲ್ಲ ದೊಡ್ಡ ಪಾಪದಿಂದ ಪಾರುಮಾಡಿದ..." ಎಂದಾಗ ಹಾಜಿಮ ಇವರೆಲ್ಲ ಎಷ್ಟು ಒಳ್ಳೆಯವರು! ತಾನು ವೃಥಾ ಇವರ ಬಗ್ಗೆ ಸಂಶಯ ಪಡುತ್ತಿದ್ದೆನಲ್ಲಾ ಎಂದುಕೊಂಡು ಕೂತಿದ್ದಳು.

"ನೋಡು ಹಾಜಿಮ, ಈ ಹಣ ಮತ್ತೊಂದು ಹತ್ತು ಸಾವಿರ, ನಾನು ಹಿಂದೆ ಕೊಟ್ಟಿದ್ದು. ಎಲ್ಲಾ ಸೇರಿ ಒಟ್ಟು ಹದಿನೈದು ಸಾವಿರ ರೂಪಾಯಿ ನಫೀಸಳ ಹೆಸರಿನಲ್ಲಿ ಬ್ಯಾಂಕಿನಲ್ಲಿಡಬೇಕಂತ ತೀರ್ಮಾನ ಮಾಡಿದ್ದೇವೆ. ಒಂದು ಒಳ್ಳೆಯ ಹುಡುಗನನ್ನು ಹುಡುಕಿ ಅವಳಿಗೆ ಮದುವೆ ಮಾಡಿಸಿಕೊಡಬೇಕು, ಎಲ್ಲಾ ಅಲ್ಲಾಹು ಮಾಡೂದು ಒಳ್ಳೇದಕ್ಕೇ ನೋಡು..." ಎಂದು ಅಚ್ಚು ಕೋಯ ಹೇಳಿದ.

ಹಾಜಿಮ ಇವರ ಮಾತುಗಳನ್ನು ಕೇಳಿ ಆನಂದಪರವಶಳಾಗಿದ್ದಳು. ಅರಬ ಹಾಜಿಮಳನ್ನೇ ನೋಡುತ್ತಿದ್ದ. ಹಿಂದೊಮ್ಮೆ ಈ ದೇಶಕ್ಕೆ ಬಂದಾಗ ಇವಳನ್ನು ಮದುವೆಯಾದದ್ದು, ಸುಖಿಸಿದ್ದು ನೆನಪಿಗೆ ಬಂತು. ಈಗ ಮುಂಚಿಗಿಂತ ಸ್ವಲ್ಪ ದಪ್ಪಗಾಗಿದ್ದಾಳೆ ಅಷ್ಟೆ. ಅದೇ ದುಂಡು ಮುಖ, ಎತ್ತರದ, ಗೌರವರ್ಣದ ದೇಹ, ಗುಂಗುರು ಕೂದಲು, ಚುರುಕು ಕಣ್ಣುಗಳು, ಮುಂಚಿನಂತೆ ಸೌಂದರ್ಯವತಿ ಎನಿಸದಿದ್ದರೂ ಪರವಾಗಿಲ್ಲ ಎನಿಸಿತು. ಅರಬ ತನ್ನನ್ನೇ ನೋಡುತ್ತಿರುವುದನ್ನು ಕಂಡು ಹಾಜಿಮ ನಾಚಿದಳು. ಗಲ್ಲ ಕೆಂಪೇರಿತು. ಅರಬ ಅಚ್ಚುಕೋಯನಿಗೆ ಸನ್ನೆ ಮಾಡಿದ. ಅಚ್ಚುಕೋಯ ನಕ್ಕು ಸಲಾಂ ಹೇಳಿ ಹೊರಟ. ಅರಬ ಕೋಣೆಯ ಬಾಗಿಲಿಗೆ ಕದವಿಕ್ಕಿದ.

*   *   *

ಸಂಜೆಯ ನಂತರ ಮನೆಯಲ್ಲಿ ಉಳಿಯುವವರು ಮಕ್ಕಳು, ಜುಲೇಖ ಮತ್ತು ನಫೀಸ. ಹಫ್ಸಾ ಮತ್ತು ಹಾಜಿಮ ಸಂಜೆಯಾದ ಕೂಡಲೇ ಹೋಟೇಲಿಗೆ ಹೊರಟುಬಿಡುತ್ತಿದ್ದರು. ಜುಲೇಖ ಈಗ ಹಿಂದಿನಂತೆ ನಡೆಯತೊಡಗಿದ್ದಳಷ್ಟೇ. ಇನ್ನೂ ಗಂಡ ತಂಗಿರುವ ಹೋಟೇಲಿಗೆ ಹೋಗಲು ಶುರು ಮಾಡಿರಲಿಲ್ಲ. ಅಡುಗೆ ಕೆಲಸಗಳನ್ನು ಈಗ ಅವಳೇ ನೋಡಿಕೊಳ್ಳುತ್ತಿದ್ದಳು. ನಫೀಸ ದಿನಕ್ಕೆ ಒಮ್ಮೆಯೋ ಎರಡು ಸಾರಿಯೋ ಯಾರಾದರೂ ಮಾತಾಡಿಸಿದರೆ ಮಾತ್ರ ಮಾತಾಡುತ್ತಿದ್ದಳು. ಇಲ್ಲವೇ ಸುಮ್ಮನೇ ಕೂತುಬಿಡು

ತ್ತಿದ್ದಳು. ಒಮ್ಮೊಮ್ಮೆ ತಮ್ಮ ಮನೆಯ ಹಿಂಭಾಗದಲ್ಲಿದ್ದ ತೆಂಗಿನ ಗಿಡ ವೊಂದರ ನೆರಳಲ್ಲಿ ಸಮುದ್ರ ನೋಡುತ್ತ ಕೂತುಬಿಡುತ್ತಿದ್ದಳು. ಊಟ ಕೂಡ ಸರಿಯಾಗಿ ಮಾಡದೆ ಅವಳು ಸೊರಗಿದ್ದಳು. ಹಾಜಿಮ ಹೋಟೇಲಿ ನಿಂದ ಬಂದವಳು "ನಿನ್ನ ತಂದೆ ನಿನ್ನ ಮದುವೆಗಾಗಿ ಹಣ ಬ್ಯಾಂಕಿನಲ್ಲಿಡುತ್ತಾ ರಂತೆ, ಹಣವೊಂದಿದ್ದರೆ ಗಂಡು ಸಿಗೋದೇನೂ ಕಷ್ಟವಲ್ಲ ಬಿಡು. ತಪ್ಪು ಯಾರು ಮಾಡೂದಿಲ್ಲ. ಕೆಟ್ಟ ಗಳಿಗೆಯಲ್ಲಿ ಅವರಿಂದ ತಪ್ಪಾಯ್ತು. ನೀನು ಅದನ್ನೇ ಹಚ್ಚಿಕೊಂಡು ಕೊರಗುತ್ತ ಕೂತರೆ ನಾನೇನು ಮಾಡಬೇಕು... ಹೇಳು..." ಎಂದು ಉಕ್ಕಿ ಬಂದ ಕಣ್ಣೀರೊರಸಿಕೊಂಡಿದ್ದಳು. ನಫೀಸಾ ಶೂನ್ಯ ದೃಷ್ಟಿಯಿಂದ ಅಮ್ಮನತ್ತ ನೋಡಿದ್ದಳು.

ಒಂದು ಸಂಜೆ ಜುಲೇಖ ಎಂದಿನಂತೆ ಅಡುಗೆ ಕೋಣೆಯಲ್ಲಿದ್ದಾಗ ಯಾರೋ ಹೊರಗಿನಿಂದ ಕೂಗಿ ಕರೆದಂತಾಗಿತ್ತು. ಅವಳು ಎದ್ದು ಬಂದು ಬಾಗಿಲು ತೆರೆದಾಗ ಹೊರಗೆ ಸಲೀಮ್ ನಿಂತಿದ್ದ. "ಒಳಗೆ ಬರಲಾ... ಸ್ವಲ್ಪ ನಫೀಸಳೊಂದಿಗೆ ಮಾತಾಡೋ ಕೆಲ್ಸ ಇದೆ..." ಎಂದ. ಇವನ್ಯಾಕೆ ಇಲ್ಲಿಗೆ ಬಂದ...? ಸಭ್ಯರೆನಿಸಿಕೊಂಡವರ್‍ಯಾರೂ ಈ ಗಂಡಿಸಲು ಕೇರಿಗೆ ಬರುವುದು ಕೂಡ ಘನತೆಗೆ ಕುಂದು ಎಂದುಕೊಂಡಿರುವಾಗ ಸೈದುಕೋ... ರ ಮಗ ನಮ್ಮ ಮನೆ ಬಾಗಿಲಲ್ಲಿ ನಿಂತಿದ್ದಾನಲ್ಲಾ ! ಅಂತ ಆಶ್ಚರ್ಯ ಪ...ಡುತ್ತ ನಿಂತ ಜುಲೇಖಾಳಿಗೆ ತನ್ನ ತಪ್ಪಿನ ಅರಿವಾಗಿ "ಬನ್ನಿ... ಬನ್ನಿ..." ಎ...ದು ಕರೆ ದಳು. ಸಲೀಮ್ ಒಳಗೆ ಬಂದ.

ನಫೀಸ ಸಲೀಮನನ್ನು ಕಂಡು ತಟ್ಟನೆ ಎದ್ದು ... ತಳು. ಪರಪುರುಷ ಸಲೀಮ್ ನಫೀಸಳನ್ನು ನೋಡುತ್ತಾ ...ನ್ನು ತಲೆಯ ಮೇಲೆಳೆದು ನಿಂತಳು. "ತುಂಬ ಸೊರಗಿ ಹೋಗಿದ್ದಾಳೆ..." ಎಂದುಕೊಂಡ. ಅವಳ ಕಣ್ಣುಗಳು ನೇರವಾಗಿ ಅವನನ್ನೇ ನೋಡಿತು. ಅವಳ ನೋಟದ ತೀಕ್ಷ್ಣತೆಯನ್ನು ಎದುರಿಸಲಾಗದೆ ಸಲೀಮ ದೃಷ್ಟಿ ಬದ ಲಾಯಿಸಿದ. ಜುಲೇಖ ಅಲ್ಲೇ ಇದ್ದ ಮರದ ಪೆಟ್ಟಿಗೆಯೊಂದಕ್ಕೆ ವಸ್ತ್ರ ಹಾಸಿ "ಕೂತ್ಕೊಳ್ಳಿ" ಎಂದು ತನ್ನ ತಲೆಯ ಮೇಲೆ ಸೆರಗೆಳೆದು ನಿಂತಳು.

"ಸ್ವಲ್ಪ ನಾವಿಬ್ಬರೂ ಹೊರಗೆ ಹೋಗಿ ಮಾತಾಡಬಹುದೆ" ಅಂತ ಸಲೀಮ್ ಯಾಚನೆಯ ಧ್ವನಿಯಲ್ಲಿ ಜುಲೇಖಾಳನ್ನು ಕೇಳಿದಾಗ ಅವಳು ನಫೀಸಳ ಹತ್ತಿರ ಹೋಗಿ "ಅದೇನೋ ಮಾತಾಡ್ಬೇಕಂತಿದ್ದಾರಲ್ಲ. ಅವರ ಜೊತೆ ಹೋಗಿ ಬಾ..." ಅಂದ್ಲು. ಜುಲೇಖಾಳಿಗೆ ಸೈದುಕೋಯರ ಮಗನಿಗೆ ನಮ್ಮ ನಫೀಸಳೊಂದಿಗೇನು ಮಾತು ಅಂತ ಅನ್ನಿಸಿದರೂ ಮನೆ ಕೆಲಸಕ್ಕೆ

10]

ಈಗ ಅಮ್ಮ ಕೂಡಾ ಹೋಗ್ತಾ ಇಲ್ಲ. ಅದಕ್ಕೇ ಇರಬೇಕೆಂದುಕೊಂಡು ಸಮಾಧಾನಪಟ್ಟುಕೊಂಡಳು. ಇಲ್ಲಿ ಹೀಗೆ ನಫೀಸಾ ಸುಮ್ಮನೆ ಕೂರುವುದಕ್ಕಿಂತ ಅವರ ಮನೆ ಕೆಲಸ ಮಾಡುತ್ತಿದ್ದರೆ ಸ್ವಲ್ಪ ಗೆಲುವಾದಾಳು ಎಂದುಕೊಂಡಳು. ನಫೀಸ ಮೆಲ್ಲನೆ ಹೆಜ್ಜೆಯಿಡುತ್ತಾ ಸಲೀಮನನ್ನು ಹಿಂಬಾಲಿಸಿದಳು. ಮನೆಯ ಹಿಂಭಾಗಕ್ಕೆ ಹೋಗಿ ಸಮುದ್ರ ತೀರದತ್ತ ನಡೆದರು. ಅಲ್ಲಿ ನೆಲದ ಮೇಲೆ ಸಲೀಮ್ ಕೂತ. ನಫೀಸ ನಿಂತೇ ಇದ್ದಳು. "ಕೂತ್ಕೋ..." ಎಂದ ಸಲೀಮ್. ಅವಳು ಸ್ವಲ್ಪ ದೂರದಲ್ಲೇ ಕೂತು ತಂಗಾಳಿಗೆ ಹಾರುವ ಸೆರಗನ್ನು ತಲೆಯ ಮೇಲೆ ಸರಿಯಾಗಿ ಹೊದ್ದುಕೊಂಡಳು.

"ನಫೀಸ... ನನ್ನ ಹೆಂಡತಿಗೆ ನಾನು ತಲಾಕ್ ಕೊಟ್ಟೆ... ನಾನು ಅವಳನ್ನು ಮದುವೆಯಾದದ್ದೇನೋ ಹೌದು. ಆದರೆ ಅವಳ ಮೇಲೆ ನನಗೆ ಎಳ್ಳಷ್ಟೂ ಪ್ರೀತಿ ಉಂಟಾಗಲಿಲ್ಲ. ಸುಮ್ಮನೆ ಅವಳನ್ನು ನೋಯಿಸೋದು ಬೇಡಾಂತ ತಲಾಕ್ ಕೊಟ್ಟುಬಿಟ್ಟೆ..." ಅಂತ ಸಲೀಮ್ ಹೇಳಿದ. ನಫೀಸ ಮೌನವಾಗಿ ಅವನ ಮಾತನ್ನು ಕೇಳುತ್ತಿದ್ದಳು. ಸಲೀಮ್ ಮುಂದುವರಿಸಿದ[illegible]. "ನಫೀಸಾ... ನಾನು ನಿನ್ನನ್ನು ಪ್ರೀತಿಸುತ್ತೇನೆ. ಇದು ಇಂದು ತಟ್ಟನೆ ಮೂ[illegible]ಡಿ ಬಂದ ಅಭಿಪ್ರಾಯವಲ್ಲ. ಹಿಂದೊಮ್ಮೆ ಬೆಳದಿಂಗಳ ರಾತ್ರಿ ನಾವಿಬ್ಬರೂ [illegible] ಇದೇ ಸಮುದ್ರ ತೀರಕ್ಕೆ ಬಂದಿದ್ದೆವಲ್ಲಾ... ಅಂದೇ ನಾನು ನಿನ್ನನ್ನು ಪ್ರೀತಿಸತೊ[illegible]ಡಗಿದ್ದೆ. ನೀನು ಮನೆಯೊಳಗೆ ಹೋಗುವಾಗ ಇದನ್ನೇ ಹೇಳಬೇಕೆಂದಿದ್ದೆ. [illegible]ನು ಆಗ್ಲೇ ಮನೆಯೊಳಗೆ ಹೋಗಿಬಿಟ್ಟೆ. ಅಂದು ನಾನು ಈ ಮಾತನ್ನು ಹೇಳಿದ್ದ[illegible] ನಾನು ನಿನಗೆ ಮಾತುಕೊಟ್ಟಿದ್ದೇನೆಂಬ ಕಾರಣಕ್ಕಾದರೂ ನಿನ್ನನ್ನು ಮದುವೆಯಾ[illegible] ಈಗ [illegible] ಉಂಟಾಗುತ್ತಿ[illegible] ಅದೆಲ್ಲಾ ಆಗೋದು ಆಗಿಹೋಯ್ತು. ಅದನ್ನೇ ಹೇಳ್ಲಿಕ್ಕಂತ ಇಲ್ಲಿಗೆ ಬಂದದ್ದು. ನಾನು ನಿನ್ನನ್ನು ಮದುವೆದ್ದೇನೆ. ಯಾಗಬೇಕೆಂದಿದ್ದೇನೆ. ಇದಕ್ಕೆ ನಿನ್ನ ಒಪ್ಪಿಗೆಯಾ...?" ಎಂದು ಕೇಳಿ ಅವಳನ್ನೇ ನೋಡತೊಡಗಿದ.

ನಫೀಸ ಅವನ ಮಾತನ್ನೇ ಕೇಳುತ್ತಿದ್ದವಳು ಮರಳು ನೆಲದ ಮೇಲೆ ಬೆರಳಾಡಿಸತೊಡಗಿದಳು. ಅವಳು ಮೌನವಾಗಿದ್ದಷ್ಟು ಸಲೀಮ್ ಆತಂಕಗೊಳ್ಳುತ್ತಿದ್ದ.

ಬದುಕಿನ ಬಗ್ಗೆ ಸಂಪೂರ್ಣ ಜಿಗುಪ್ಸೆಗೊಂಡಿದ್ದ ನಫೀಸಳಿಗೆ ಸಲೀಮನ ಮಾತುಗಳು ಸ್ವಲ್ಪ ಸಾಂತ್ವನ ನೀಡಿದ್ದವು. ತನ್ನ ಬಾಳೆಂದರೆ ಬರೀ ದುರಂತ

ಗಳ ಸರಮಾಲೆಯೇನೋ ಎಂದುಕೊಂಡಿದ್ದವಳಿಗೆ ದೂರದಲ್ಲೊಂದು ಆಶಾ ಕಿರಣ ಗೋಚರಿಸಿದಂತಾಯಿತು. ಆದರೂ ನಫೀಸ ಸಲೀಮನನ್ನು ಪೂರ್ಣ ವಾಗಿ ನಂಬುವ ಸ್ಥಿತಿಯಲ್ಲಿರಲಿಲ್ಲ. ಅವನ ಬದುಕಿನಲ್ಲಿ ಬಂದ ಮೂರನೇ ಹೆಣ್ಣು ತಾನಾಗುತ್ತಿದ್ದೇನೆ. ತನ್ನಂತಹ ಹೆಣ್ಣುಗಳೆರಡು ಈಗಾಗಲೇ ಇವ ನಿಂದ ವಂಚಿತವಾಗಿವೆ. ಈಗ ತನ್ನ ಸರದಿ. ಹಿಂದೆ ತಾನು ಪುಕ್ಕಲು ಮನಸ್ಸಿನವನಾಗಿದ್ದೆ. ಈಗ ತನಗೆ ಧೈರ್ಯ ಬಂದಿದೆ ಎನ್ನಲು ಪ್ರಯತ್ನ ಪಡುತ್ತಿದ್ದಾನೆ ಸಲೀಮ್. ಆದರೆ ನಂಬುವುದು ಹೇಗೆ? ಮಮ್ಮುಟ್ಟಿ ಯೊಂದಿಗೆ ಅಮ್ಮ ಹೇಳಿದ ಮಾತುಗಳು ನಫೀಸಳಿಗೆ ನೆನಪಾದವು. "ಕೂಲಿ ಯವನಾದ್ರೂ ಪರವಾಗಿಲ್ಲ ಮಮ್ಮುಟ್ಟಿ, ಮಾನವಾಗಿ ಬದುಕುವವನಾದ್ರೆ ಸಾಕು. ಈ ಕೇರಿಯಿಂದ ಒಂದು ದಿಬ್ಬಣ ಹೊರಡಿಸಲೇ ಬೇಕು. ಈ ಕೇರಿಯ ಗಂಡು ಮಕ್ಕಳು ಆಗುವವರಿಗೆ ಹೆಣ್ಣು ಮಕ್ಕಳೇಕೆ ಬೇಡ, ನೋಡಬೇಕು..."

ಅಮ್ಮನ ಆಸೆಯ ಮಾತುಗಳು ಮತ್ತೆ ಮತ್ತೆ ಕಿವಿಯಲ್ಲಿ ಮೊಳಗಿದವು. ಜೊತೆಗೆ ತಾನು ಕಾಣುತ್ತಿದ್ದ ಸುಂದರ ಸ್ವಪ್ನಗಳು ಕಣ್ಣ ಮುಂದೆ ನಿಂತವು. ಅವುಗಳನ್ನು ಸವಿಯುತ್ತಿರುವಾಗಲೇ ಹೋಟೇಲಿನ ಮುಂದೆ ಅರಬ ನಿಕಾಹ ಕ್ಕಾಗಿ ಕಾದು ನಿಂತಿರುವ ತನ್ನ ಗುಡಿಸಲುಗೇರಿಯ ಹೆಣ್ಣು ಮಕ್ಕಳ ಕಳೆಗುಂದಿದ ಮುಖಗಳ ಸಾಲು ನೆನಪಿಗೆ ಬಂದು ಕಂಗೆಡಿಸಿದವು. ಇದು ನಿಲ್ಲಬೇಕು. ಈ ಹೆಣ್ಣು ಮಕ್ಕಳನ್ನು ಊರ ಹುಡುಗರು ಮದುವೆಯಾಗಲು ಮುಂದೆ ಬರ ಬೇಕು. ಈ ಹೆಣ್ಣು ಮಕ್ಕಳಿಗೆ ಧೈರ್ಯ ತುಂಬಬೇಕು. ಇದು ಸಾಧ್ಯವಾಗ ಬೇಕಾದರೆ ಈ ಗುಡಿಸಲುಗೇರಿಯ ಹೆಣ್ಣೊಂದು ಕುಟ್ಟಿಚಿರಾದ ಜನರೆಲ್ಲ ನೋಡುವಂತೆ ದಿಬ್ಬಣದಲ್ಲಿ ಗಂಡನ ಜೊತೆ ಹೋಗಬೇಕು...

ಕೈತುಂಬ ಮದರಂಗಿ ಇಟ್ಟು, ತಲೆತುಂಬ ಮಲ್ಲಿಗೆ ಮುಡಿದು ಕೆಂಪು ಪೀತಾಂಬರ ಸೀರೆಯುಟ್ಟು, ಕೆನ್ನೆಸರಪಳಿ, ಜಡೆಬಿಲ್ಲೆ, ಕಿವಿ ತುಂಬ ಅಲಿ ಕಾತ್ತುಗಳನ್ನು ಹಾಕಿಕೊಂಡು ಸಲೀಮನ ಹಿಂದೆ ನಡೆದಂತೆ ಕ್ಷಣ ನಫೀಸಾ ಕನಸು ಕಂಡಳು. ಅಣ್ಣ ಅಕ್ಕಂದಿರು, ಅಮ್ಮ ಕಣ್ಣೀರು ಸುರಿಸುತ್ತ ತನ್ನನ್ನು ಬೀಳ್ಕೊಡುತ್ತಿರುವಂತೆ ತಾನು ಭಾರವಾದ ಹೆಜ್ಜೆಯಿಡುತ್ತ ಸಲೀಮನನ್ನು ಹಿಂಬಾಲಿಸಿದಂತೆ ಸೈದುಕೋಯ, ಷರೀಫಮ್ಮ, ಜುಬೇದ ತನ್ನನ್ನು ಆದರ ದಿಂದ ಬರ ಮಾಡಿಕೊಂಡಂತೆ ಕಲ್ಪಿಸಿಕೊಂಡು ರೋಮಾಂಚನಗೊಂಡಳು.

ನಫೀಸಳ ಮೌನ ಸಲೀಮನನ್ನು ಇರಿಯತೊಡಗಿತ್ತು. "ನಫೀಸಾ...

ನೀನು ಏನಾದರೊಂದು ಹೇಳು, ನೀನು ಮಾತಾಡಬೇಕು... ಇಲ್ಲವಾದರೆ ಹೇಗೆ ?" ಎಂದ.

ತನ್ನ ಕನಸುಗಳಿಂದ ಎಚ್ಚೆತ್ತ ನಫೀಸ ಎದುರಲ್ಲಿ ಬಿಳಿ ನೊರೆಗಳನ್ನು ಹೊತ್ತು ಎದ್ದೆದ್ದು ಬೀಳುವ ಕಡಲ ತೆರೆಗಳು, ಅವುಗಳು ಬಡಿದ ರಭಸಕ್ಕೆ ಕರಗುವ, ಮತ್ತೆ ಗಟ್ಟಿಯಾಗುವ ಮರಳು ನೆಲವನ್ನು ನೋಡುತ್ತ ಕೂತಳು. ಕ್ಷಣ ಸುಮ್ಮನಿದ್ದ ಅವಳು ಮತ್ತೆ ಮಾತಾಡಿದಳು. "ಸಲೀಮ್... ನಿಮ್ಮನ್ನು ಮದುವೆಯಾಗುವುದು ಖಂಡಿತವಾಗಿಯೂ ನನ್ನ ಭಾಗ್ಯ. ಆದರೆ ನನ್ನದೊಂದು ಆಸೆಯಿದೆ, ಅದನ್ನು ನೀವು ಈಡೇರಿಸಿಕೊಡುವಿರಾ ? ಅದೇನೆಂದರೆ ನೀವು ನನ್ನನ್ನು ಮದುವೆಯಾಗುವುದಾದರೆ ಕದ್ದು ಮುಚ್ಚಿ ಗುಟ್ಟಿನಲ್ಲಿ ಆಗಕೂಡದು. ಬಹಿರಂಗವಾಗಿ ಎಲ್ಲ ಸಾಮಾನ್ಯ ಮದುವೆಗಳು ನಡೆಯುವಂತೆಯೇ ನಡೆಯಬೇಕು. ಎಲ್ಲರೂ ನೋಡಬೇಕು. ಗುಡಿಸಲುಗೇರಿಯ ಹೆಣ್ಣು ನಾನು ಎಲ್ಲ ಗೌರವದೊಂದಿಗೆ ನಿಮ್ಮೊಂದಿಗೆ ನಿಕಾಹ್ ಆಗಿ ಬರಬೇಕು. ಇದನ್ನು ನೀವು ನಡೆಸಿಕೊಡುವುದಾದರೆ ನಿಮ್ಮೊಂದಿಗೆ ತುಂಬ ಸಂತೋಷದಿಂದ ನಿಕಾಹ ಆಗೂದಕ್ಕೆ ಒಪ್ಪಿಗೆ ನೀಡುತ್ತೇನೆ" ಎಂದು ಅವನ ಮುಖವನ್ನೇ ನೋಡತೊಡಗಿದಳು.

ಸಲೀಮ್ ನಫೀಸಳ ಮಾತುಗಳನ್ನೇ ಮೆಲುಕು ಹಾಕತೊಡಗಿದ. ಸಮುದ್ರ ಎಂದಿನಂತೆ ಭೋರ್ಗರೆಯುತ್ತ ತೆರೆಗಳನ್ನು ಎತ್ತಿ ಎತ್ತಿ ದಡದತ್ತ ರಾಚುತ್ತಿತ್ತು. ಸಲೀಮನ ಎದೆಯೊಳಗಿನ ಬಡಿತ ಕ್ಷಣ ಕ್ಷಣಕ್ಕೂ ಹೆಚ್ಚಾದಂತೆ ಕಂಡಿತು. ಬರಬರುತ್ತಾ ಸಮುದ್ರ ಇಡಿಯಾಗಿ ತನ್ನತ್ತಲೇ ಬಂದಂತೆ... ತೆರೆಗಳನ್ನು ಎತ್ತೆತ್ತಿ ತನ್ನತ್ತ ರಾಚಿದಂತೆ... ತಾನು ಮರಳು ನೆಲದಲ್ಲಿ ಗಟ್ಟಿಯಾಗಿ ನಿಲ್ಲಲು ಹೆಣಗಾಡುವಂತೆ ಭಾಸವಾಯಿತು...! ಈ ಕರಗುವ ಮರಳು ನೆಲದ ಮೇಲೆ ತಾನು ಗಟ್ಟಿಯಾಗಿ ನಿಲ್ಲಬಲ್ಲೆನೇ ಎನ್ನುವ ಅನುಮಾನ ಮೂಡತೊಡಗಿತು...

HAMZA MALAR
MALAR ARASTANA
"NUSRATUL ISLAM" MANZIL
P.O. PAVOO -574 1?2.
MANGALORE.

ಜಗತ್ತಿನ ಮನುಷ್ಯರೆಲ್ಲರೂ ಮುಗ್ಧರಾಗಿರುತ್ತಿದ್ದರೆ ಆಗ ಅವರಿಗೆ ಕಾನೂನು, ಪೋಲೀಸು, ನ್ಯಾಯ ಸ್ಥಾನ—ಇವು ಯಾವುದರ ಅಗತ್ಯವೂ ಇರಲಾರದು. ಜನರು ಬುದ್ಧಿವಂತರಾದಂತೆಯೇ ತಮ್ಮೊಳಗೆ 'ವ್ಯವಸ್ಥೆ'ಯೊಂದನ್ನು ರೂಪಿಸಿಕೊಂಡು, ಬಳಿಕ ಅದರೊಳಗೇ ಸಿಲುಕಿ ಚಡಪಡಿಸುತ್ತಾರೆ. ಈ ನಡುವೆ ಬಲಿಷ್ಠರಾದವರು ತಮಗನುಕೂಲವಾಗುವಂತೆ ನ್ಯಾಯ-ಅನ್ಯಾಯಗಳ ಪಟ್ಟಿ ಸಿದ್ಧಪಡಿಸಿ ಸಾರ್ವಜನಿಕರಿಗಾಗಿ ಬಿಡುಗಡೆಗೊಳಿಸುತ್ತಾರೆ. ಕುಟ್ಟಿಚ್ಚಿರಾದಲ್ಲಿ ಆದದ್ದೂ ಇದುವೇ. ತಮ್ಮ ಮರಬಿದಿರಿನ ವ್ಯಾಪಾರದಲ್ಲಿ ಅರಬ್‌ಸ್ಥಾನದ ಬಂಗಾರ ಬೇಟೆ ಆರಂಭಿಸಿದ್ದ ಸಾಹುಕಾರರು ಒಂದು ಕಡೆಯಾದರೆ, ತಮ್ಮ ಹೊಟ್ಟೆಪಾಡಿಗಾಗಿ ಸಾಹುಕಾರರುಗಳ ಎದುರು ಹಲ್ಲು ಗಿಂಜುತ್ತಾ, ಅವರ ಅರಬ ಗಿರಾಕಿಗಳ ಸಲುವಾಗಿ ಹೆಣ್ಣು ಪೂರೈಸುವ ದಲ್ಲಾಳಿಗಳು ಮತ್ತೊಂದು ಕಡೆ. ತಮ್ಮ ನಾಡಿನಲ್ಲಿ 'ಮಹರ್' ನೀಡಲಾಗದೆ ಮದುವೆಗಾಗಿ ಕಾತರಿಸುವ ಅರಬಿ ಗಂಡುಗಳು ಒಂದು ಕಡೆಯಾದರೆ, ಇಲ್ಲಿ ವರದಕ್ಷಿಣೆ ಕಾಟದಿಂದಾಗಿ ಮದುವೆ ಬಗ್ಗೆ ಕನವರಿಸಲೂ ಭಯ ಪಡುವ ಹೆಣ್ಣುಗಳು ಇನ್ನೊಂದು ಕಡೆ—ಈ ಹೋರಾಟದಲ್ಲಿ ಯಾರು ಗೆದ್ದರು, ಯಾರು ಸೋತರು ಎಂಬುದಾಗಲೀ, ಯಾರು ಸರಿ ಯಾರು ತಪ್ಪು ಎಂಬುದಾಗಲೀ ಮುಖ್ಯವಲ್ಲ. ತಾವೇ ರೂಪಿಸಿದ 'ವ್ಯವಸ್ಥೆ'ಯ ಸೂತ್ರದಲ್ಲಿ ತಾವೇ ಬಂಧಿಯಾದವರು ಈ ಎಲ್ಲರೂ. ಗೆಳೆಯ ಕಟ್ಪಾಡಿಯವರು ತಮ್ಮ 'ಸರಕುಗಳು' ಕಾದಂಬರಿಯಲ್ಲಿ ಶೋಧಿಸಹೊರಟಿದ್ದು ಈ ಸಿಕ್ಕುಗಟ್ಟಿದ ಸೂತ್ರವನ್ನೇ.

—ಬೊಳುವಾರು ಮಹಮದ್ ಕುಂಞಿ